ಶ್ರೀ ವೇದಗರ್ಭ ಅನಂತಪದ್ಮನಾಭಸೂರಿ ವಿರಚಿತಃ

# ಮಧ್ವಸಿದ್ಧಾಂತಸಾರಃ

## ಪದಾರ್ಥಸಂಗ್ರಹ ಸಮೇತ

ಭಾಗ–೨

ಅನುವಾದಕರು :

ಪಂಡಿತರತ್ನ ಆ. ಭೀಮಸೇನಾಚಾರ್ಯ

ಸಂತೇಬಿದನೂರು

ಪ್ರಕಾಶಕರು :

ಶ್ರೀಮಾಧ್ವ ಗ್ರಂಥ ಪ್ರಕಾಶನ

ಬಳ್ಳಾರಿ

1996

ಶ್ರೀ ವೇದಗರ್ಭ ಅನಂತಪದ್ಮನಾಭಸೂರಿ ವಿರಚಿತಃ

# ಮಧ್ವಸಿದ್ಧಾಂತಸಾರಃ

ಪದಾರ್ಥಸಂಗ್ರಹ ಸಮೇತ

55096

ಭಾಗ-೨

ಅನುವಾದಕರು :
ಪಂಡಿತರತ್ನ ಆ. ಭೀಮಸೇನಾಚಾರ್ಯ
ಸಂತೇಬಿದನೂರು

30/-

ಪ್ರಕಾಶಕರು :
ಶ್ರೀ ಮಾಧ್ವ ಗ್ರಂಥ ಪ್ರಕಾಶನ
ಬಳ್ಳಾರಿ
1996

MADHVASIDDHANTASARA (Including Padarthasangraha) original text and translation in Knnada by A.S. BHEEMASENA CHARYA.

---

© A. S. BHEEMASENACHARYA

THIS BOOK IS PUBLISHED WITH FINANCIAL ASSISTANCE OF TRUMALATIRUPATHI DEVASTANAM UNDR SCEHEME "AID TO PUBLISH BOOKS."

SRI MADHWAGRANTHA PRAKASHANA
L.N. Temple Gold Smith Street.
BELLARY-583101.

Pinted by:
NAYAK PRINTERS
NO. 4, Neelipotaiah Lane,
O.T.C. Road Cross,
BANGALORE-565030.
Publishers:

# ಮುನ್ನುಡಿ

ಶ್ರೀಮದಾನಂದತೀರ್ಥರ ಸಮಗ್ರಂಥಗಳ ಪ್ರತಿಕೃತಿಯಾಗಿ ಅನ್ವರ್ಥಕ ಹೆಸರಿನಿಂದಲೂ ಶೋಭಿಸುವ ಈ ಮಧ್ವಸಿದ್ಧಾಂತಸಾರವೆಂಬ ಗ್ರಂಥವು ತನ್ನ ಹೆಸರಿನ ಮಾತ್ರದಿಂದಲೇ ಮಾಧ್ವಜನಾಂಗದಲ್ಲಿ ನಿಜಕ್ಕೂ ಹರ್ಷಉದ್ದೀಪಕವಾಗಿದೆ. ಇಷ್ಟೇ ಹಸ್ತಭೂಷಣ ಮಾತ್ರವಲ್ಲದೇ ಅಧ್ಯಯನ ವಿಮರ್ಶಾಎಗಳಿಂದ ಹೃದಯಂಗಮವಾಗಿ ಪರಮಪುರುಷಾರ್ಥ ಪಾಥೇಯವೇ ಆಗಿದೆ.

ಈ ಗ್ರಂಥರತ್ನವು ಹದಿನೆಂಟನೆಯ ಶತಮಾನದಲ್ಲಿ ಸೂರಿವರೇಣ್ಯರಾದ ವೇದಗರ್ಭವಂಶಜರಾದ ಪದ್ಮನಾಭಾಚಾರ್ಯರೆಂಬ ಜ್ಞಾನಿಗಳಿಂದ ಪದಾರ್ಥ ಸಂಗ್ರಹ ವೆಂಬ ಗ್ರಂಥವು ರಚಿತವಾಗಿ ಈ ಕೃತಿಯ ಸಮಗ್ರಹಾರ್ದವನ್ನು ಸ್ಪಷ್ಟೀಕರಿಸಿ ಅರುಹಲು ತಮದೇ ಆದ ವ್ಯಾಖ್ಯಾನರೂಪವಾದ ಮಧ್ವಸಿದ್ಧಾಂತಸಾರವೆಂಬ ಗ್ರಂಥವನ್ನು ರಚಿಸಿರುವುದು ಪ್ರಸಿದ್ಧಿಯು.

ಮಾಧ್ವವಾಙ್ಮಯದಲ್ಲಿ ಯಾವುದೇ ವಿಷಯಕ ಪ್ರಬಂಧವನ್ನು ಯಾರೇ ರಚಿಸಿದರೂ, ಶ್ರೀಮದಾಚಾರ್ಯಮಧ್ವರ ಸರ್ವಮೂಲಗ್ರಂಥಗಳ ಆಧಾರವಿದ್ದಲ್ಲಿಯೇ ಪ್ರಮಾಣ್ಯತೆಯು ಸರ್ವಶೋಭೆಯು, ಅಂತೆಯೇ ಪ್ರಕರಣಾದಿ ಸರ್ವಮೂಲ ಗ್ರಂಥಗಳ ಅಸಮಗ್ರ ಟೀಕಾಟಿಪ್ಪಣಿಗಳ ಸಮಾಖ್ಯಗಳನ್ನು ಸಮಗ್ರವಾಗಿ, ಪ್ರತ್ಯೇಕ ಪ್ರತ್ಯೇಕವಾಗಿ ಉದಾಹರಿಸಿವುದರಿಂದ ಈ ಕೃತಿಯು ಶ್ರೀಮಧ್ವಸಿದ್ಧಾಂತ ಕೈಪಿಡಿಯಾಗಿ ಜ್ಞಾನಿಗಳಿಗೆ ಆದರಣೀಯವೇ ಆಗಿದೆ.

ಶ್ರೀಮದಾನಂದತೀರ್ಥರು ತತ್ವಸಂಖ್ಯಾನ ತತ್ವವಿವೇಕಾದಿ ಗ್ರಂಥಗಳಲ್ಲಿ ಪದಾರ್ಥಗಳನ್ನು ನಿರೂಪಿಸಿದ್ದರೂ ಶ್ರೀಹರಿಯೇ ಸರ್ವನಿಯಾಮಕನು ಸರ್ವಕರ್ತನು ಸರ್ವೋತ್ತಮನು ಎಂಬ ದೃಷ್ಟಿಕೋಣದಿಂದಲೇ ನಿರೂಪಿಸಿರುವುದರಿಂದ ಆಗ್ರಂಥಗಳಲ್ಲಿ ಪದಾರ್ಥಗಳ ಸಂಖ್ಯೆ ಅದರಲ್ಲಿ ಅಂತರ್ಭೂತ ದ್ರವ್ಯಗುಣಾದಿಗಳ ವಿಭಾಗದೊಂದಿಗೆ ಅವುಗಳ ಸಂಖ್ಯೆ, ಚೇತನಾದಿಗಳ ಅಂತರ್ಭಾವ ಇತ್ಯಾದಿಗಳ ತಿಳಿಯುವುದು ದುಸ್ಸಾಧ್ಯವೇ ಆಗಿರುತ್ತದೆ. ಆದುದರಿಂದಲೇ ಆ ಗ್ರಂಥಗಳಲ್ಲಿ ವಿಕ್ಷಿಪ್ತವಾಗಿ ಸಂಕ್ಷೇಪವಾಗಿಯೂ ಹೇಳುವುದನ್ನೂ ವಿಶದಪಡಿಸಿ ಮಧ್ವರ್ಧಾಂತರ ದರ್ಪಣವನ್ನಾಗಿಸಿರುತ್ತಾರೆಂದು ದ್ವೈತವೇದಾಂತಿಗಳಿಗೆ ಅತ್ಯಾವಶ್ಯಕವೇ ಆಗಿರುತ್ತದೆ.

ಈ ಕೃತಿರತ್ನವು 73 ಪ್ರಕರಣಗಳನ್ನೊಳಗೊಂಡಿದೆ. ಪದಾರ್ಥಗಳಲ್ಲಿ ದ್ರವ್ಯ ಗುಣಕರ್ಮ ಸಾಮಾನ್ಯಾದಿಗಳ ಲಕ್ಷಣವಿಭಾಗಗಳೊಂದಿಗೆ ವಿಶೇಷ ಪ್ರಮೇಯಗಳನ್ನು ಅರುಹುತ್ತಾ ದ್ವೈತವೇದಾಂತದ ಅತ್ಯಂತ ಪ್ರಾಮಾಣ್ಯತೆಯು ಸ್ಪಷ್ಟೀಕೃತವಾಗಿದೆ ಹಾಗೂ ನ್ಯಾಯಾದಿ ಶಾಸ್ತ್ರಗಳಲ್ಲಿ ಹೇಳಿದ ಸಮವಾಯಾದಿ ಪದಾರ್ಥಗಳ ಅಪ್ರಾಮಾಣ್ಯತೆಯನ್ನು ಪ್ರಾಸಂಗಿಕವಾಗಿ ತಿಳಿಸುವುದಾಗಿದೆ. ಹೇಗೆ ಶ್ರೇಷ್ಠ ಪ್ರಮಾಣ ಗ್ರಂಥವು ಅತ್ಯಂತ ಪ್ರಮೇಯ ಗ್ರಂಥವು ಆಗಿರುತ್ತದೆ.

ಪ್ರತಿಪ್ರಕರಣಗಳ ವಿವೇಚನೆಯೊಂದಿಗೆ ಇದರ ಅಂತರಾಳವನ್ನು ಅರುಹುವುದು ಅಗಾಧವೇ ಆಗಿರುತ್ತದೆ. ಇಂತಹ ಗ್ರಂಥವು ಶಾಸ್ತ್ರಾಧ್ಯಯನ ಮಾಡುವವರಿಗೆ ಅನುಗ್ರಹವು. ಶಾಸ್ತ್ರಶ್ರವಣಮಾತ್ರ ಅಧಿಕಾರಿಗೂ ಯಥಾಯೋಗ್ಯವಾಗಿ ತಿಳಿಯಲು ಕನ್ನಡದಲ್ಲಿ ಯಥಾಮತಿ ಅನುವಾದಿಸಿರುತ್ತೇನೆ. ಇದರಲ್ಲಿಯ ಗುಣಗಳು ನಮ್ಮ ಪೂಜ್ಯ ಗುರುಗಳಾದ ಜಾಲಿಹಾಳಾಚಾರ್ಯರದ್ದೇ ಆಗಿರುತ್ತದೆ. ಸಜ್ಜನರು ಇದನ್ನು ಸದುಪಯೋಗಿಸಿಕೊಂಡಲ್ಲಿ ನನ್ನ ಶ್ರಮವು ಸಾರ್ಥಕವು.

ಸಜ್ಜನ ವಿಧೇಯ,

ಬಳ್ಳಾರಿ ಎ.ಎಸ್.ಭೀಮಸೇನಾಚಾರ್ಯ

ಯುವನಾಮ ಸಂವತ್ಸರ

ಮಧ್ವನವಮಿ

# ವಿಷಯಾನುಕ್ರಮಣಿಕೆ


ಮುನ್ನುಡಿ

ದ್ವಿತೀಯ ಭಾಗ

ವಿಷಯಾನುಕ್ರಮಣಿಕಾ

| ಪ್ರಸಂ. | ವಿಷಯ | ಪ್ರ.ಸಂ; | ವಿಷಯ |
|---|---|---|---|
| 24. | ಮಾತ್ರಾ ಪ್ರಕರಣ | 25. | ಪಂಚಭೂತಪ್ರಕರಣ |
| 26. | ಅವಿದ್ಯಾ ಪ್ರಕರಣ | 27. | ಬ್ರಹ್ಮಾಂಡ ಪ್ರಕರಣ |
| 28. | ಅಂಧಕಾರ ಪ್ರಕರಣ | 29. | ವರ್ಣ ಪ್ರಕರಣ |
| 30. | ಕಾಲ ಪ್ರಕರಣ | 31. | ವಾಸನಾ ಪ್ರಕರಣ |
| 32. | ರೂಪ ಪ್ರಕರಣ | 33. | ಪ್ರತಿಬಿಂಬ ಪ್ರಕರಣ |
| 34. | ಗಂಧ ಪ್ರಕರಣ | 35. | ರಸ ಪ್ರಕರಣ |
| 36. | ಸಂಖ್ಯಾ ಪ್ರಕರಣ | 37. | ಸ್ಪರ್ಶ ಪ್ರಕರಣ |
| 38. | ಸಂಯೋಗ ಪ್ರಕರಣ | 39. | ಪರಿಮಾಣ ಪ್ರಕರಣ |
| 40. | ಪರತ್ವಾಪರತ್ವ ಪ್ರಕರಣ | 41. | ವಿಭಾಗ ಪ್ರಕರಣ |
| 42. | ಗುರುತ್ವ ಪ್ರಕರಣ | 43. | ದ್ರವತ್ವ ಪ್ರಕರಣ |
| 44. | ಮೃದುತ್ವ ಪ್ರಕರಣ | 45. | ಲಘುತ್ವ ಪ್ರಕರಣ |
| 46. | ಕಾಠಿಣ್ಯ ಪ್ರಕರಣ | 48. | ಸ್ನೇಹ ಪ್ರಕರಣ |

॥ ಶ್ರೀಗುರುಭ್ಯೋ ನಮಃ ಹರಿಃ ಓಂ ॥

# ೨೩. ಪಂಚತನ್ಮಾತ್ರಾ ಪ್ರಕರಣ

ಇದಾನೀಂ ಮಾತ್ರಾರೂಪ ದ್ರವ್ಯಂ ನಿರೂಪಯತಿ ।

ಪ.ಸಂ.—ಮೀಯಂತ ಇತಿ ಮಾತ್ರಾಃ ಶಬ್ದ, ಸ್ಪರ್ಶ, ರೂಪ, ರಸ, ಗಂಧಾಃ ಪಂಚ ವಿಷಯಾಃ ।

ಮೀಯಂತೇ ಇಂದ್ರಿಯೈಃ ಜ್ಞಾಯಂತೇ ಇತ್ಯರ್ಥಃ । ತದುಕ್ತಂ ಗೀತಾಭಾಷ್ಯೇ । ಮೀಯಂತ ಇತಿ ಮಾತ್ರಾಃ ವಿಷಯಾಃ ಇತಿ । ತೇಷಾಂ ಪಂಚಭೂತೋಪಾದಾನತಯಾ ತದ್ರವಣ ದ್ರವ್ಯತ್ವಮಿತಿ ಭಾವಃ । ತದ್ವಿಭಾಗಮಾಹ ।

ಪ.ಸಂ.—ತಾ ದ್ವಿವಿಧಾಃ । ತತ್ವರೂಪಾಃ ತದ್ಭಿನ್ನಾಶ್ಚೇತಿ । ತತ್ವರೂಪಾಸ್ತಾಮಸಾಹಂಕಾರಜನ್ಯಾಃ । ಪಂಚತನ್ಮಾತ್ರಾ ಇತ್ಯುಚ್ಯಂತೇ । ತತ್ವಭಿನ್ನಾಃ ಮಾತ್ರಾಃ ಗುಣಾಃ । ತತ್ಪ್ರಕರಣೇ ನಿರೂಪ್ಯಂತೇ ॥

ತತ್ರಭೂತಾನಾಂ ಮಾತ್ರಾಣಾಂ ಉಪಾದಾನಮಾಹ । ತಾಮಸೇತಿ । ತದುಕ್ತಂ ತೃತೀಯ ಸ್ಕಂಧ ಭಾಗವತೇ । ತಾಮಸಾಚ್ಚ ವಿಕುರ್ವಾಣಾದ್ಭಗವದ್ವೀರ್ಯಚೋದಿತಾತ್ । ಶಬ್ದಮಾತ್ರಮಭೂತ್ತಸ್ಮಾನ್ನಭಃ ಶ್ರೋತ್ರಂ ತು ಶಬ್ದಗಮಿತ್ಯಾದಿ ।

ಈಗ ಮಾತ್ರಾರೂಪ ದ್ರವ್ಯವನ್ನು ನಿರೂಪಿಸುತ್ತಾರೆ. ಮೀಯಂತ ಇತಿ ಮಾತ್ರಾಃ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಹೀಗೆ ಐದು ವಿಧಗಳಾಗಿರುತ್ತವೆ. ಇಂದ್ರಿಯಗಳಿಂದ ತಿಳಿಯತಕ್ಕವುಗಳೆಂದರ್ಥ. ಗೀತಾಭಾಷ್ಯದಲ್ಲಿ ಹೀಗೆ ಹೇಳಿರುತ್ತಾರೆ. ಇಂದ್ರಿಯಗಳಿಂದ ತಿಳಿಯಲ್ಪಡುವವು ವಿಷಯವಾದವುಗಳು ಅಂತೆಯೇ ವಿಷಯಗಳು ಎಂದು, ಅವುಗಳು ಐದು ಭೂತಗಳಿಗೆ ಉಪಾದಾನ(ವಿಕಾರ ಕಾರಣ)ವಾಗಿ ದ್ರವಣತೆ (ಹರಿಯುವಿಕೆ) ಇರುವುದರಿಂದ ದ್ರವ್ಯವೆನ್ನುತ್ತಾರೆ. ಅವುಗಳ ವಿಭಾಗವನ್ನು ಹೇಳುತ್ತಾರೆ. ಅವು ಎರಡು ವಿಧಗಳಾಗಿರುತ್ತವೆ. ತತ್ವರೂಪಗಳು ಹಾಗೂ ತತ್ವಭಿನ್ನಗಳೆಂದು, ತತ್ವರೂಪಗಳಿಂದ ಮಾತ್ರಾಗಳು ತಾಮಸ ಅಹಂಕಾರದಿಂದ ಹುಟ್ಟಿದವು ಐದು ತನ್ಮಾತ್ರಗಳೆನಿಸುತ್ತವೆ. ತತ್ವಭಿನ್ನವಾದ ಮಾತ್ರಾಗಳು ಗುಣಗಳೆನಿಸುತ್ತವೆ. ಅವುಗಳನ್ನು ಗುಣ ನಿರೂಪಣೆಯಲ್ಲಿ ತಿಳಿಯಬಹುದು. ಇದನ್ನು ತೃತೀಯಸ್ಕಂಧ

ಭಾಗವತದಲ್ಲಿ ಹೇಳಿರುತ್ತದೆ. ಭಗವಂತನ ಇಚ್ಛೆಯಿಂದ ಅವನ ಶಕ್ತಿಯಿಂದ ತಾಮಸಾಹಂಕಾರ ತತ್ವವನ್ನು ಕಡೆಯಲು, ಅದರಿಂದ ಶಬ್ದವೆಂಬ ಮಾತ್ರಾ ಹುಟ್ಟಿತು. ಅದರಿಂದ ಶಬ್ದಾಶ್ರಯವಾದ ಆಕಾಶವು ಹುಟ್ಟಿತು. ಶಬ್ದಾಶ್ರಯವಾದ ಆಕಾಶವೇ ಶ್ರೋತ್ರೇಂದ್ರಿಯವೆನಿಸುತ್ತದೆ.

**ನನು ಪುರಾಣಾದೌ ಪಂಚ ತನ್ಮಾತ್ರಾಣಾಮೇವ ತಾಮಸಾಹಂಕಾರ ಜನ್ಯತ್ವಮುಚ್ಯತೇ । ತತ್ಕಥಮೇತದಿತ್ಯತ ಆಹ । ಪಂಚ ತನ್ಮಾತ್ರಾ ೭೦ । ಗುಣಾ ಇತಿ । ಆಕಾಶಾದೀನಾಮಿತಿ ಶೇಷಃ । ತದಭಿಮಾನಿನ ಆಹ । ಉಮೇತಿ ।**

ಪ.ಸಂ.—ಉಮಾಸುಪರ್ಣೀವಾರುಣ್ಯೋ ಬೃಹಸ್ಪತ್ಯಾದ್ಯಾಶ್ಚ ತದಭಿಮಾನಿನಃ ।

**ಉಮೈಕಸ್ಯೈವಾಭಿಮಾನಿನೀ । ಸೌಪರ್ಣೀ ವಾರುಣ್ಯೌತುದ್ವಯೋರ್ದ್ವಯೋರಿತಿವಿವೇಕಃ । ತದುಕ್ತಂ ಕಾಠಕಭಾಷ್ಯೇ । ಸೌಪರ್ಣೀ ವಾರುಣೀ ತಥಾ । ಉಮೇತಿಚಾರ್ಥಮಾನಿನ್ಯಸ್ತಿಸ್ರೋ ದ್ವಿದ್ವ್ಯೇಕ ದೇವತಾ ಇತಿ ।**

ಪುರಾಣಾದಿಗಳಲ್ಲಿ ಪಂಚತನ್ಮಾತ್ರಾಗಳಿಗೆ ಮಾತ್ರವೇ ತಾಮಸಾಹಂಕಾರದಿಂದ ಹುಟ್ಟುವಿಕೆ ಹೇಳಿದೆ. ನೀವು ಮಾತ್ರಾಸಾಮಾನ್ಯಕ್ಕೆ ತಾಮಸಾಹಂಕಾರ ಜನ್ಯತೆ ಹೇಗೆ ಹೇಳುವಿರಿ ಎಂದರೆ, ನಾವು ತತ್ವಾತ್ಮಕ ಪಂಚತನ್ಮಾತ್ರಾಗಳಿಗೆ ತಾಮಸಾಹಂಕಾರ ಜನ್ಯತೆ ಹೇಳಿರುತ್ತದೆ. ತತ್ವಭಿನ್ನವಾದ ಗುಣರೂಪಗಳಾದಿ ತನ್ಮಾತ್ರಾಗಳನ್ನು ಗುಣನಿರೂಪಣದಲ್ಲಿ ಹೇಳುತ್ತೇವೆ. ಆಕಾಶಾದಿಗಳಿಗೂ ಹೇಳುತ್ತೇವೆ ಎಂದು ತಿಳಿಯಬೇಕು. ಮಾತ್ರಾಗಳ ಅಭಿಮಾನಿಗಳನ್ನು ಹೇಳುತ್ತಾರೆ. ಉಮಾ, ಸುಪರ್ಣೀ ವಾರುಣೀ, ಬೃಹಸ್ಪತಿ ಇವರುಗಳೇ ಮೊದಲಾದವರು ಮಾತ್ರಾಭಿಮಾನಿಗಳು. ಉಮಾ(ಪಾರ್ವತಿ) ಗಂಧಕ್ಕೆ ಅಭಿಮಾನಿಯು, ಸುಪರ್ಣೀ (ಗರುಡಭಾರ್ಯೆ) ದೇವಿಯು ಶಬ್ದಸ್ಪರ್ಶಗಳಿಗೆ, ವಾರುಣೀ(ಶೇಷಪತ್ನಿ) ದೇವಿಯು ರೂಪರಸಗಳಿಗೆ ಹೀಗೆ ಸುಪರ್ಣೀ, ವಾರುಣಿಯರು ಎರಡೆರಡು ಮಾತ್ರಾ(ವಿಷಯ)ಗಳಿಗೆ ಅಭಿಮಾನಿಗಳು. ಹೀಗೆ ತಿಳಿಯಬೇಕು. ಕಾಠಕಭಾಷ್ಯದಲ್ಲಿ ಸೌಪರ್ಣೀವಾರುಣಿಯರು ಎರಡೆರಡು ವಿಷಯಗಳಿಗೆ, ಪಾರ್ವತಿ ಒಂದು ವಿಷಯಕ್ಕೆ ಮೂರೂ ದೇವತೆಗಳೂ ಐದು ಮಾತ್ರಾ(ವಿಷಯ)ಗಳಿಗೆ ಅಭಿಮಾನಿದೇವತೆಗಳೆಂದು ಹೇಳಿರುತ್ತದೆ. ಮತ್ತೂ ಬೃಹಸ್ಪತಿಯು, ಮುಖ್ಯಪ್ರಾಣನ ಪುತ್ರರುಗಳಾದ ಪ್ರಾಣಾದಿಗಳೂ ಮಾತ್ರಾಭಿಮಾನಿಗಳು. ಬೃಹಸ್ಪತಿಯು ಪ್ರಾಣನು ಶಬ್ದಾಭಿಮಾನಿಗಳು. ಅಪಾನನು ಸ್ಪರ್ಶಾಭಿಮಾನಿಯು, ವ್ಯಾನನು ರೂಪಾಭಿಮಾನಿಯು, ಉದಾನನು ರಸಾಭಿಮಾನಿಯು, ಸಮಾನನು ಗಂಧಾಭಿಮಾನಿಯು, ತಾರತಮ್ಯದಂತೇ ಸ್ತೋತ್ರಮರೊಂದಿಗೆ ಅವರರೂ ಅಭಿಮಾನಿಗಳಾಗಿರುತ್ತಾರೆ.

ತದ್ವ್ಯಾಖ್ಯಾನೇವ್ಯಾಸತೀರ್ಥೀಯೇಽಪ್ಯೇವಮೇವ ವ್ಯಾಖ್ಯಾನಮಸ್ತೀತಿ ದ್ರಷ್ಟವ್ಯಂ । ಆದಿ ಶಬ್ದೇನ ಅಪಾನವ್ಯಾನೋದಾನ ಸಮಾನಾಗೃಹ್ಯಂತೇ । ತೇಽಚತ್ವಾರೋ ಬೃಹಸ್ಪತಿನಾಸಹ ಶಬ್ದಾದಿ ಪಂಚಾನಾಂ ಕ್ರಮೇಣ ಅಭಿಮಾನಿನ ಇತ್ಯರ್ಥಃ । ತದುಕ್ತಂತಂತ್ರಸಾರೇ । ಶಬ್ದನಾಮಾ ಬೃಹಸ್ಪತಿಃ ಅನ್ಯೇಽಚಸೂನವೋ ವಾಯೋರಿತಿ । ಇದಮುಪಲಕ್ಷಣಂ । ಸರ್ವೇಽಸರ್ವಾಭಿಮಾನಿನಃ ಇತಿ ಪ್ರಮಾಣಬಲೇನೋತ್ತಮಾದೇವಬ್ರಹ್ಮಾದ್ಯಾ ಅಪಿಶಬ್ದಾದ್ಯಭಿಮಾನಿನ ಇತಿ ದ್ರಷ್ಟವ್ಯಮ್ ।

ಇತಿ ಪಂಚತನ್ಮಾತ್ರಾ ಪ್ರಕರಣಂ ।

ಕಾಠಕಭಾಷ್ಯ ವ್ಯಾಖ್ಯಾನದಲ್ಲೂ ವ್ಯಾಸತೀರ್ಥರೂ ಹೀಗೆ ಹೇಳಿರುತ್ತಾರೆ. ಆದಿ ಶಬ್ದದಿಂದ ಅಪಾನ, ವ್ಯಾನ, ಉದಾನ, ಸಮಾನರುಗಳನ್ನು ಗ್ರಹಿಸಬೇಕು. ಈ ನಾಲ್ವರು ಬೃಹಸ್ಪತಿಯೊಂದಿಗೆ ಐವರು ಐದು ಶಬ್ದಾದಿ ಮಾತ್ರಾ(ವಿಷಯ)ಗಳಿಗೆ ಅಭಿಮಾನಿಗಳು. ತಂತ್ರಸಾರದಲ್ಲಿಯೂ ಶಬ್ದನಾಮಕನು ಬೃಹಸ್ಪತಿಯು ಅಪಾನಾದಿ ನಾಲ್ವರೂ ಮುಖ್ಯ ಪ್ರಾಣರ ಪುತ್ರರು, ಹೀಗೆ ಐವರೂ ಶಬ್ದಾದಿಗಳ ಅಭಿಮಾನಿಗಳು ಎಂದು ಹೇಳಿರುತ್ತದೆ. ವಿಶೇಷವಾಗಿ ಎಲ್ಲಾ ದೇವತೆಗಳೂ ಎಲ್ಲಾ ಪದಾರ್ಥಗಳಿಗೂ ಅಭಿಮಾನಿಗಳೇ ಎಂಬ ಪ್ರಮಾಣದಿಂದ ಸೋತ್ತಮ ದೇವತೆಗಳು ಮುಖ್ಯಾಭಿಮಾನಿಗಳು ಸ್ಥಾವರದೇವಗಳು ಅವರಿಗಿಂತಲೂ ಅಮುಖ್ಯಾಭಿಮಾನಿಗಳೆಂದು ತಿಳಿಯಬೇಕು.

ಹೀಗೆ ದ್ರವ್ಯದಲ್ಲಿ ಹತ್ತೊಂಬತ್ತನೆಯದಾದ ಪಂಚತನ್ಮಾತ್ರಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

---

ಆನಂದತೀರ್ಥಸ್ಯಯೋ ಭಾಷ್ಯಭಾವಂ
ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ ।
ಸುರಾದ್ಯಾ ನರಾಂತಾ ಮುಕುಂದ ಪ್ರಸಾದಾತ್
ಇಮಂ ಭಕ್ತಿನೋತೇ ಭಜಂತೇ ಸದೇತಿ ॥

—ಸುಮಧ್ವವಿಜಯಃ

## ೨೫. ಪಂಚಮಹಾಭೂತ ಪ್ರಕರಣ

**ಉಪಾದಾನೋಕ್ತಿಪೂರ್ವಕಂ ಭೂತಾನಿ ನಿರೂಪಯತಿ । ತದ್ದ್ವಾರೇತಿ ।**

ಪ.ಸಂ.—ತದ್ದ್ವಾರಾ ತಾಮಸಾಹಂಕಾರಜನ್ಯಾನಿ ಪಂಚಮಹಾಭೂತಾನಿ । ಆಕಾಶ ವಾಯುತೇಜೋಽಪ್ಪೃಥಿವ್ಯಃ ।

**ಶಬ್ದಾದಿ ತನ್ಮಾತ್ರಾದ್ವಾರೇತ್ಯರ್ಥಃ । ತದ್ವಿಭಜತಿ ।**

ಪ.ಸಂ.— ತಾನಿದ್ವಿವಿಧಾನಿ । ತತ್ತ್ವರೂಪಾಣೀ ತದ್ಭಿನ್ನಾನಿಚೇತಿ ।

**ಶಬ್ದಾದಿದ್ವಾರಾತಾಮಸಾಹಂಕಾರೋಪಾದಾನಕಾನಿ ಪಂಚಮಹಾಭೂತಾನೀತ್ಯುಕ್ತಂ । ತತ್ರ ಆಕಾಶಸ್ಯ ಸಾಕ್ಷಾದುಪಾದಾನಮಾಹ ।**

ಪ.ಸಂ.—ತತ್ರ ಶಬ್ದಾತ್ ಆಕಾಶೋತ್ಪತ್ತಿಃ । ತದಭಿಮಾನೀ ವಿನಾಯಕಃ ।

**ಶಬ್ದಮಾತ್ರಮಭೂತ್ತಸ್ಮಾನ್ನಭಃ ಶ್ರೋತ್ರಂತು ಶಬ್ದಗಂ ಇತಿ ಭಾಗವತಮತ್ರ ಪ್ರಮಾಣಮಿತಿ ಭಾವಃ । ವಿನಾಯಕ ಇತಿ । ತದುಕ್ತಂ ಷಟ್ಪ್ರಶ್ನಭಾಷ್ಯೇ । ಆಕಾಶದೇವತಾವಿಘ್ನಃ ಇತಿ । ತಂತ್ರಸಾರೇಽಪಿ । ಅನ್ಯೇಽಪಿಸೂನವೋ ವಾಯೋಃ ರುದ್ರಸ್ಯಾಪಿ ಪ್ರಕೀರ್ತಿತಃ ಇತಿ ಬೃಹದ್ಭಾಷ್ಯೇಽಪಿ ।**

ಉಪಾದಾನ(ವಿಕಾರಿ)ಕಾರಣದೊಂದಿಗೆ ಪಂಚಭೂತಗಳನ್ನು ನಿರೂಪಿಸುತ್ತಾರೆ. ಶಬ್ದಾದಿದ್ವಾರಾ ತಮಸಾಹಂಕಾರದಿಂದ ಹುಟ್ಟಿದವುಗಳೇ, ಐದು ಆಕಾಶಾದಿ ಮಹಾಭೂತಗಳು. ಆಕಾಶ, ವಾಯು, ತೇಜಸ್ಸು, ಉದಕ, ಪೃಥವಿ. ಅವುಗಳ ವಿಭಾಗವನ್ನೂ ಹೇಳುತ್ತಾರೆ. ಐದು ಭೂತಗಳು ತತ್ತ್ವರೂಪಗಳೆಂದೂ, ತತ್ತ್ವಭಿನ್ನಗಳೆಂದೂ ಎರಡು ವಿಧಗಳಾಗಿರುತ್ತವೆ. ತಾಮಸಾಹಂಕಾರದಿಂದಲೇ ಮಾತ್ರಾಗಳ ದ್ವಾರ ಭೂತಗಳು ಹುಟ್ಟಿದವೆಂದು ಹೇಳಿ ಪ್ರತ್ಯೇಕವಾಗಿ ತಿಳಿಸುತ್ತಾರೆ. ಪಂಚಮಹಾಭೂತಗಳಲ್ಲಿ ಶಬ್ದದಿಂದ ಆಕಾಶವು ಹುಟ್ಟಿತು. ಶಬ್ದವೆಂಬ ಮಾತ್ರಾ ಹುಟ್ಟುತ್ತಿರಲು ಆದರಿಂದಲೇ ಆಕಾಶವು ಹುಟ್ಟಿತು, ಶ್ರೋತ್ರೇಂದ್ರಿಯವು ಶಬ್ದಗ್ರಾಹಕವಾದುದು ಎಂಬ ಭಾಗವತವೇ ಈ ವಿಷಯದಲ್ಲಿ ಪ್ರಮಾಣವು. ಆಕಾಶಕ್ಕೆ ವಿನಾಯಕನು ಅಭಿಮಾನಿಯು. ಷಟ್‌ಪ್ರಶ್ನ ಭಾಷ್ಯದಲ್ಲಿ ಆಕಾಶಾಭಿಮಾನಿ ದೇವತೆಯು ವಿಘ್ನೇಶನೆಂದು ಹೇಳಿದೆ. ತಂತ್ರಸಾರದಲ್ಲಿಯೂ, ಇನ್ನೂ ವಾಯು ಪುತ್ರರು ಅಭಿಮಾನಿಗಳಿರುತ್ತಾರೆ. ರುದ್ರದೇವರಿಗೆ ವಿಶೇಷಾಭಿಮಾನಿತ್ವವೆಂದು ಹೇಳಿದೆ. ಅಲ್ಲದೇ ಬೃಹದ್ಭಾಷ್ಯದಲ್ಲಿಯೂ.

**ನಭೋಽಭಿಮಾನೀ ವಿಘ್ನೇಶೋ ವಿಷ್ಣೋರ್ಮಾಂಸಾಶ್ರಿತಃಸದಾ । ಅಂತರಿಕ್ಷಾಭಿಮಾನೀ ಚ ತತ್ಸೂನುರುದರೇ ಸ್ಥಿತಃ ಇತಿ । ಭೂತಾಕಾಶಸ್ಯ ಪರಿಮಾಣಮಾಹ ।**

ಪ.ಸಂ.—ಅಹಂಕಾರತತ್ತ್ವಾದ್ದಶಗುಣ ನ್ಯೂನಮಾಕಾಶಮ್ ।

**ಅತ್ರ ಅಬಗ್ನೀರನಭೋಽಹಂಕೃನ್ಮಹತ್ತತ್ವಗುಣತ್ರಯೈಃ । ಕ್ರಮಾದ್ದಶೋತ್ತರೈರೇತದಿತಿ ತತ್ವನಿರ್ಣಯೋಕ್ತಿರ್ಮಾನಂ । ನನು ಬುದ್ಧಿತತ್ವಮಾರಭ್ಯ ಪಂಚತನ್ಮಾತ್ರಾ ಪರ್ಯಂತಂ ಮೂಲೇ ಕಿಮಿತಿ ಪರಿಮಾಣಂ ನೋಕ್ತಂ । ನಚ ತೇಷಾಂ ಪರಿಮಾಣಾಭಾವಾದೇವನೋಕ್ತಮಿತಿ ವಾಚ್ಯಂ। ತರ್ಹಿದ್ರವ್ಯತ್ವಾಭಾವ ಪ್ರಸಂಗಾತ್ ।**

ಆಕಾಶಕ್ಕೆ ಅಭಿಮಾನಿಯಾದ ವಿಘ್ನೇಶನು ವಿಷ್ಣುವಿನ ಮಾಂಸವನ್ನು ಆಶ್ರಯಿಸಿರುತ್ತಾನೆ ಅಂತರಿಕ್ಷಾಭಿಮಾನಿ ವಿನಾಯಕ ಪುತ್ರ. ಅವನು ವಿಷ್ಣುವಿನ ಉದರವನ್ನು ಆಶ್ರಯಿಸಿರುತ್ತಾನೆ ಭೂತಾಕಾಶವು ಶರೀರ ಇಂದ್ರಿಯ ವಿಷಯವೆಂದು ಮೂರು ಪ್ರಕಾರವು. ಶರೀರವೆಂದರೆ ಸುಖದುಃಖಾದಿಗಳಿಗೆ ಆಶ್ರಯವಾದುದು. ಇಂದ್ರಿಯವೆಂದರೆ ವಿಷಯಗಳನ್ನು ಗ್ರಹಿಸುವುದು, ವಿಷಯವೆಂದರೆ ಸುಖದುಃಖಾದಿಗಳ ಅನುಭವಕ್ಕೆ ಕಾರಣವಾದುದು, ಆಕಾಶಶರೀರವು ಅಂತರಿಕ್ಷದಲ್ಲಿ ಯಕ್ಷಾದಿಗಳದ್ದು ಆಕಾಶದ ಇಂದ್ರಿಯ ಶ್ರೋತ್ರ(ಕಿವಿ) ಘಟ ಮಂದ್ಯಾಕಾಶ ವಿಷಯ ಭೂತಾಕಾಶದ ಪರಿಮಿತಿಯನ್ನು ಹೇಳುತ್ತಾರೆ. ಅಹಂಕಾರತತ್ವಕ್ಕಿಂತಲೂ ಹತ್ತನೇ ಒಂದು ಭಾಗ ಕಡಿಮೆ ಪರಿಮಿತವಾದುದು ಆಕಾಶ ತತ್ವವು. ಈ ವಿಷಯದಲ್ಲಿ ಉದಕ, ಅಗ್ನಿ, ಆಕಾಶ, ಅಹಂಕಾರತತ್ವ ಮಹತ್ತತ್ವ ಗುಣತ್ರಯಗಳು. ಇವುಗಳು ಕ್ರಮವಾಗಿ ಹತ್ತು ಹತ್ತು ಭಾಗಮಿತಿಗಳಿಂದ ಕಡಿಮೆಗಳಾದವುಗಳು. ಹೀಗೆ ನಿರ್ಣಯವೇ ಪ್ರಮಾಣವು. ಬುದ್ಧಿತತ್ವವನ್ನಾರಂಭಿಸಿ ಪಂಚತನ್ಮಾತ್ರಾಪರ್ಯಂತವಾಗಿಯೂ ಆದರಲ್ಲಿ ಪರಿಮಿತಿಯನ್ನು ಎಕೆ ಹೇಳಲ್ಲಿಲ್ಲ? ಅವುಗಳಿಗೆ ಪರಿಮಿತಿಯೇ ಇಲ್ಲವೆನ್ನೋಣವೆಂದರೆ, ಹಾಗೆನ್ನಬಾರದು ದ್ರವ್ಯತೆಯೇ ಇಲ್ಲವಾಗಲಿ ಎಂದು ಆಕ್ಷೇಪ ಬರುತ್ತದೆ. ಏಕೆಂದರೆ ಎಲ್ಲಿ ದ್ರವ್ಯತೆ ಇದೆಯೋ ಅಲ್ಲಿ ಪರಿಮಿತಿಯು, ಎಲ್ಲಿ ಪರಿಮಿತಿಯೋ ಅಲ್ಲಿ ದ್ರವ್ಯತೆ ಹೀಗೆ ದ್ರವ್ಯ ಪರಿಮಿತಿಗಳಿಗೆ ಪರಸ್ಪರ ವ್ಯಾಪ್ತಿ ಇರುವುದರಿಂದ ಪರಿಮಿತಿ ಇಲ್ಲವಾದರೆ ದ್ರವ್ಯತೆಯೇ ಇಲ್ಲವಾಗಲಿಯೆಂಬ ಪ್ರಸಂಗವು ಬರುತ್ತದೆ. ಹೀಗೆನ್ನಬಾರದು.

**ಪರಿಮಾಣಸ್ಯ ದ್ರವ್ಯತ್ವೇ ವ್ಯಾಪಕತ್ವೇನ ತದಭಾವೇ ದ್ರವ್ಯತ್ವಸ್ಯ ಅಭಾವಾದಿತಿ ಚೇನ್ನ । ತೇಷಾಮಪಿ ಪರಿಮಾಣಸ್ಯ ಸಂಭವಾತ್ । ನ ಚಾಬಗ್ನೀರನಭೋಽಹಂಕೃದಿತ ಪರಿಮಾಣ ಪ್ರಕರಣೇ ತರ್ಹಿಕುತೋಽನುಕ್ತಿರಿತಿ ವಾಚ್ಯಂ । ನಿರ್ಣಯೇ ಆಚಾರ್ಯೈಃ ದಶೋತ್ತರ ಪರಿಮಾಣವದ್ದ್ರವ್ಯಸ್ಯ**

**ವ್ರೋಕ್ತತ್ವೇನ ಪಂಚಭೂತಾಹಂಕಾರ ಮಧ್ಯ ಪತಿತಾನಾಂ ದಶೋತ್ತರತ್ವಾಭಾವಾದನುಕ್ತಿ ಸಂಭವಾತ್ । ನ ಚ ತೇಷಾಂ ಪರಿಮಾಣಸ್ಯ ಕ್ವಾಪ್ಯನುಕ್ತತ್ವಾದಿತಿ ವಾಚ್ಯಂ । ಜ್ಞಾನಸಪಾದೀಯ ಸನ್ನ್ಯಾಯರತ್ನಾವಲ್ಯಾಮುಕ್ತೇಃ ತಥಾಹಿ । ವ್ಯಾಪ್ತಾಪರೋಕ್ಷ ಪ್ರಕರಣೇತದ್ವಾಕ್ಯಾನಿ ।**

ಅವುಗಳಿಗೂ ಪರಿಮಿತಿಯಿರುವುದರಿಂದ, ಹಾಗಾದರೆ ನಿರ್ಣಯದಲ್ಲಿ ಅಪ್ (ಉದಕ), ಅಗ್ನಿ, ಆಕಾಶ, ಅಹಂಕಾರತತ್ವ ಹೀಗೆ ಆರಂಭಿಸಿದ ಪರಿಮಾಣ ಪ್ರಕರಣದಲ್ಲಿ ಏಕೆ ಹೇಳಲಿಲ್ಲಾ ? ಹಾಗೆನ್ನಬಾರದು. ಆಚಾರ್ಯರು ಅಲ್ಲಿ ಹತ್ತು ಹತ್ತು ಅಂಶಗಳಿಂದ ಕಡಿಮೆಯಾದ ಪರಿಮಿತಿಯುಳ್ಳ ದ್ರವ್ಯಗಳನ್ನೇ ಅಲ್ಲಿ ಹೇಳಿರುವುದರಿಂದ ಪಂಚಭೂತಗಳು ಅಹಂಕಾರ ತತ್ವ ಇವುಗಳ ಮಧ್ಯದಲ್ಲಿರುವವುಗಳಿಗೆ ದಂಶಾಂಶತೆ (ಹತ್ತು ಅಂಶನ್ಯೂನತೆ) ಇಲ್ಲವಾದ್ದರಿಂದ ಅನುಕ್ತಪ್ರಾಯವೇ, ಅವುಗಳ ಪರಿಮಿತಿಗಳನ್ನು ಎಲ್ಲಿಯೂ ಹೇಳಲಿಲ್ಲ ಎನ್ನೋಣವೇ ಆದರೆ ಹಾಗೆನ್ನಬಾರದು. ಜ್ಞಾನಪಾದೀಯ ಸನ್ನ್ಯಾಯರತ್ನಾವಲಿಯಲ್ಲಿ ಹೇಳಲ್ಪಟ್ಟಿದೆ. ವ್ಯಾಪ್ತಾಪರೋಕ್ಷ ಪ್ರಕರಣದಲ್ಲಿ ವಾಕ್ಯಗಳು ಈ ತೆರಗಳಾಗಿರುತ್ತವೆ.

**ಮನುಬೃಹಸ್ಪತ್ಯಾದಯಸ್ತ್ವಹಂಕಾರಾತ್ಪರಿಮಾಣತೋ ಹೀನೇನ ಬುದ್ಧಿತತ್ವೇನ ಸ್ವೋಚಿತ ಪರಿಮಾಣೇನ ಪರಿಮಿತದೇಶ ಪರ್ಯಂತಮವಸ್ಥಿತಂ ವಿಷ್ಣುಂ ಪಶ್ಯಂತಿ । ಸೋಮಸೂರ್ಯೌತು ಬುದ್ಧಿತತ್ವಾತ್ಪರಿಮಾಣತೋಹೀನೇನ ಮನಸ್ತತ್ವೇನ ಪರಿಮಿತ ದೇಶ ಪರ್ಯಂತಂ ಅವಸ್ಥಿತಂ ವಿಷ್ಣುಂ ಪಶ್ಯತಃ । ವರುಣಾದಯಸ್ತ್ವಾಕಾಶವಾಯ್ವಾದಿ ಭೂತೈಃ ಕ್ರಮೇಣ ಪರಿಮಾಣತೋ ದಶಹೀನೈಃ ಪರಿಮಿತ ದೇಶ ಪರ್ಯಂತಮೇವಸ್ಥಿತಂ ವಿಷ್ಣುಂ ಯೋಗ್ಯತಾನುಸಾರೇಣ ಪಶ್ಯಂತೀತಿ ।**

ಮನುಬೃಹಸ್ಪತ್ಯಾದಿಗಳಾದರೋ, ಅಹಂಕಾರತತ್ವದ ಮಿತಿಗಿಂತಲೂ ಕಡಿಮೆಯಾದ ಬುದ್ಧಿತತ್ವದಿಂದ ತಮಗೆ ಉಚಿತವಾದ ಸ್ಥಾನಪರ್ಯಂತ ವ್ಯಾಪ್ತನಾದ ಪರಮಾತ್ಮನನ್ನು ಕಾಣುತ್ತಾರೆ. ಚಂದ್ರಸೂರ್ಯರು ಬುದ್ಧಿತತ್ವದ ಮಿತಿಯಿಂದ ಕಡಿಮೆಯಾದ ಮನಸ್ತತ್ವದಿಂದ ಪರಿಮಿತ ಸ್ಥಾನ ಪರ್ಯಂತ ಸ್ಥಿತವಾದ ವಿಷ್ಣುವನ್ನು ನೋಡುತ್ತಾರೆ. ವರುಣಾದಿಗಳು ಆಕಾಶ ವಾಯು ಮೊದಲಾದ ಭೂತಗಳಿಂದ ಕ್ರಮವಾಗಿ ಹತ್ತು ಅಂಶಗಳಿಂದ ಕಡಿಮೆಗಳಾದ ಪರಿಮಿತದೇಶಗಳಲ್ಲಿರುವ ವಿಷ್ಣುವನ್ನು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಕಾಣುತ್ತಾರೆ. ಹೀಗೆ ತತ್ವಗಳ ಪರಿಮಿತಿಯನ್ನು ಹೇಳಿರುತ್ತಾರೆ.

**ವಾಯು ತತ್ವಂ ನಿರೂಪಯಿತುಂ ತದ್ವಿಭಾಗಮಾಹ ।**

ಪ.ಸಂ —ವಾಯುರ್ದ್ವಿವಿಧಃ । ಪ್ರಾಣಾಪಾನಾದಿ ರೂಪಸ್ತದ್ಭಿನ್ನಶ್ಚೇತಿ । ಪುನರ್ದ್ವಿವಿಧಃ । ನಿತ್ಯೋಽನಿತ್ಯಶ್ಚ । ನಿತ್ಯಃ ಪ್ರಾಣಾದಿರೀಶಲಕ್ಷ್ಮ್ಯೋರ್ಮುಕ್ತಾನಾಂಚ ಸ್ವರೂಪಭೂತಃ । ಅನಿತ್ಯಃ ತತ್ಸಭಿನ್ನಃ ಸಂಸಾರಿಣಾಮ್ ।

**ತದ್ಭಿನ್ನ ಇತಿ । ಯೋಽಯಂ ವಾಯುರ್ವಾತಿಬಹಿಃ ಸ ಇತ್ಯರ್ಥಃ । ಈಶಲಕ್ಷ್ಮ್ಯೋರಿತಿ । ಅತ್ರ ಮಾನಂತು ಪ್ರಾಣಾದ್ವಾಯುರಜಾಯತೇತಿ ಶ್ರುತಿಃ । ವಾಚೋಬಭೂವುರುಶತೀಃ ಸ್ವಸತೋಽಸ್ಯನಸ್ತ ಇತಿ ದ್ವಿತೀಯ ಸ್ಕಂಧ ಭಾಗವತಂ । ಹಯಗ್ರೀವಾದಿಮಾವಿದ್ಯಾಃ ಸ್ವಸಿತತ್ವೇನ ನಿಃ ಸೃತಾಃ ಇತಿ ಋಗ್ಭಾಷ್ಯಂ । ತಥೈತರೇಯ ಭಾಷ್ಯಮಪಿ । ವಿಷ್ಣೋರ್ವಿಮುಕ್ತ ವಾಯೋಶ್ಚ ಲೋಮಾದ್ಯಂತು ಚಿದಾತ್ಮಕಂ । ಲೋಮಪ್ರಾಣಾದಿಭೇದಶ್ಚ ನೈವ ಕಶ್ಚಿಚ್ಚಿದಾತ್ಮನಿ ।**

ವಾಯು ತತ್ವವನ್ನು ನಿರೂಪಿಸಲು ವಾಯುವಿಭಾಗವನ್ನೂ ಹೇಳುತ್ತಾರೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಹೀಗೆ ಐದು ವಿಧ. ವಾಯು ಒಂದು ಇದರಿಂದ ಭಿನ್ನವಾಯು ಎರಡನೆಯದು. ಈ ಎರಡು ವಿಧ ವಾಯುವಿನಲ್ಲಿಯೂ ಪುನಃ ನಿತ್ಯ ಅನಿತ್ಯವೆಂದು ಎರಡು ವಿಧ ನಿತ್ಯವಾದ ಪ್ರಾಣಾದಿಪಂಚದಿವಾಯುಗಳು ಶ್ರೀಶಲಕ್ಷ್ಮೀ ಮುಕ್ತರ ಸ್ವರೂಪವಾದುದು ಅನಿತ್ಯವಾಯು ಸಂಸಾರಿ ಜೀವರಲ್ಲಿ ಜನ್ಮ ಪ್ರವರ್ತಕ, ಇವರಿಂದ ಭಿನ್ನವಾಯು ಬೀಸುವ ವಾಯು ಪ್ರಾಣನಿಂದ ವಾಯು ಹುಟ್ಟಿದನು ಎಂಬ ವೇದವೇ ಈ ವಿಷಯದಲ್ಲಿ ಪ್ರಮಾಣವು. ಭಾಗವತ ದ್ವಿತೀಯ ಸ್ಕಂಧದಲ್ಲಿ ಪರಮಾತ್ಮನಶ್ವಾಸೋಚ್ಛ್ವಾಸಗಳಿಂದಲೇ ವಾಕ್‌ಗಳು ಹೊರಬಿದ್ದವೆಂದು ಹೇಳಿರುತ್ತದೆ. ಋಗ್ಭಾಷ್ಯದಲ್ಲಿಯೂ ಹಯಗ್ರೀವರೂಪಿ ಪರಮಾತ್ಮನ ಶ್ವಾಸದಿಂದಲೇ ಈ ಎಲ್ಲಾ ವಿದ್ಯಾಗಳು ಹೊರಹೊಮ್ಮಿದವು ಎಂದು ಹೇಳಿದೆ. ಹಾಗೆ ಐತರೇಯ ಭಾಷ್ಯದಲ್ಲಿಯೂ ವಿಷ್ಣುವಿಗೂ ಮುಕ್ತವಾಯುವಿಗೂ ರೋಮವೇ ಮೊದಲಾಗಿ ಜ್ಞಾನಾನಂದಾತ್ಮಕವೇ ಆಗಿರುತ್ತದೆ. ಜ್ಞಾನಾನಂದ ಸ್ವರೂಪದಲ್ಲಿ ರೋಮ ಪ್ರಾಣಾದಿಗಳಿಗೆ ಎಷ್ಟೂ ಭೇದವಿರುವುದಿಲ್ಲ.

**ಪ್ರಾಣಾದಿಭ್ಯಶ್ಚ ವಾಯ್ವಾದ್ಯಾ ಏವಂ ವಿಷ್ಣೋಃ ಪ್ರಜಜ್ಞಿರೇ । ಏವಂ ಹಿ ಸರ್ವದೇವಾಹಿ ವಿಷ್ಣ್ವಂಗೇಭ್ಯಃ ಪ್ರಜಜ್ಞಿರ ಇತಿ । ಪ್ರಾಣೇನ ಸೃಷ್ಟ್ವಾ ವಂತರಿಕ್ಷಂ ಚ ವಾಯುಶ್ಚೇತ್ಯೈತರೇಯೋಪನಿಷತ್ । ತಥಾ ಬೃಹದ್ಭಾಷ್ಯ ಮಪಿ ।**

ವಿಷ್ಣುವಿನ ಪ್ರಾಣಾದಿಗಳಿಂದ ವಾಯುವಾದಿಗಳು ಹುಟ್ಟಿದರು. ಹೀಗೆ ಸರ್ವ ದೇವತೆಗಳು ಪರಮಾತ್ಮನ ಅಂಗದಿಂದಲೇ ಹುಟ್ಟಿದರು. ಸೃಷ್ಟಿಯ ಆದಿಯಲ್ಲಿ

ಪ್ರಾಣನಿಂದ ಅಂತರಿಕ್ಷ ವಾಯುಗಳು ಹುಟ್ಟಿದರೆಂದು ಐತರೇಯೋಪನಿಷತ್‌ನಲ್ಲಿ ಹೇಳಿರುತ್ತದೆ. ಹೀಗೆ ಬೃಹದ್ಭಾಷ್ಯದಲ್ಲಿಯೂ ಉಕ್ತವಾಗಿದೆ.

**ಮನೋವಾಕ್ ಪ್ರಾಣರೂಪೋಸೌ ಭಗವಾನ್ ಪುರುಷೋತ್ತಮಃ । ಮನೋ ವಾಕ್ಪ್ರಾಣತಸ್ತಸ್ಯ ಜಾತಾ ಅನ್ಯೇಭಿಮಾನಿನಃ ಇತಿ। ದ್ವಿತೀಯಸ್ಕಂಧ ಭಾಗವತಮಪಿ । ಅನ್ನಂ ಚ ವೀರ್ಯಂ ಶ್ವಸಿತಂಮಾತರಿಶ್ವಾಗತಿರ್ವಯಃ ಕರ್ಮ ಗುಣ ಪ್ರವಾಹಃ ಇತಿ । ತಥಾ । ವಾಮಬಾಹುಕೃತ ವಾಮಕ ಪೋಲಲೋವಲ್ಗಿತ ಭ್ರೂರಧರಾರ್ಪಿತವೇಣುಃ । ಕೋಮಲಾಂಗುಲಿಭಿರಾ ಸ್ತ್ರೃತಮಾರ್ಗಂ ಗೋಪ್ಯಈರಯತಿ ಯತ್ರಮುಕುಂದಃ । ತನ್ಮಾಧವೋ ವೇಣುಮುದೀರಯನ್ಸ್ವೃತೋಗೋಪ್ಯೈರ್ಗೃಣದ್ಭಿಃ ಸ್ವಯಶೋಬಲಾನ್ವಿತ ಇತಿದಶಮಭಾಗವತಂ ।**

ಮನಸ್ಸು, ವಾಕ್, ಪ್ರಾಣ, ರೂಪನಾದ ಪರಮಾತ್ಮನ ತನ್ನರೂಪಗಳಿಂದಲೇ ಮನಸ್ಸು, ವಾಕ್, ಪ್ರಾಣನಾಮಕರಾದ ಮನಾದಿ ಅಭಿಮಾನಿದೇವತೆಗಳನ್ನು ಸೃಷ್ಟಿ ಮಾಡಿದನು. ಹೀಗೆ ಹೇಳಿದೆ, ದ್ವಿತೀಯಸ್ಕಂಧ ಭಾಗವತದಲ್ಲಿ ಅನ್ನವನ್ನು ವೀರ್ಯ ವನ್ನು ಶ್ವಾಸೋಶ್ವಾಸವನ್ನು ವಾಯುವಿನನ್ನೂ ಇವುಗಳ ಗತಿಯನ್ನೂ ವಯಸ್ಸು ಕರ್ಮ ಗುಣ ಪ್ರವಾಹಗಳನ್ನು ಸೃಜಿಸಿದನೆಂದು ಹೇಳಿದೆ. ಹಾಗೂ ಭಾಗವತದ ದಶಮಸ್ಕಂಧದಲ್ಲಿ ಶ್ರೀಕೃಷ್ಣ ಪರಮಾತ್ಮನು ಎಡಕೆನ್ನೆಯ ಮೇಲೆ ಎಡಗೈಯಿಂದ ಕೊಳಲನ್ನು ತುಟಿ ಮೇಲಿರಿಸಿ ಹುಬ್ಬುಗಳನ್ನು ಚಲಿಸುತ್ತಾ ತನ್ನ ಕೋಮಲ ಬೆರಳು ಗಳಿಂದ ಕೊಳಲಿನ ರಂಧ್ರಗಳನ್ನಾಡಿಸುತ್ತಾ ಧ್ವನಿಗೆರೆದು ಗೋಪಿಕಾ ಸ್ತ್ರೀಯರನ್ನು ಪ್ರೇರಿಸುತ್ತಾ ಮೋಕ್ಷ ಸುಖವನ್ನು ಕೊಡುತ್ತಿದ್ದನೆಂದು ಹೇಳಿದೆ. ಆದ್ದರಿಂದ ಶ್ರೀಹರಿಗೆ ಸ್ವರೂಪಾತ್ಮಕವಾದ ಶ್ವಾಸೋಶ್ವಾಸಗಳುಂಟೆಂದು ತಿಳಿಯುತ್ತದೆ.

**ಮಾಧವಃ ಪಾಂಡವಶ್ಚೈವ ದಿವ್ಯೌಶಂಖೌಪ್ರದಧ್ಮತುಃ ।**

**ಪಾಂಚಜನ್ಯಂ ಹೃಷೀಕೇಶಃ ದೇವದತ್ತಂ ಧನಂಜಯಃ । ಇತಿ ಶಂಖ ಧ್ವನಿ ಜನಕ ಶ್ವಾಸೋಗೀತಾಯಾಮುಕ್ತಃ । ಸಟಾವಧೂತಾಜಲದಾಃ ಪರಾಪತನ್ಗ್ರಹಾಶ್ಚ ತದ್ದೃಷ್ಟಿ ವಿಮುಷ್ಟರೋಚಿಷಃ । ಅಂಭೋಧಯಃ ಶ್ವಾಸಹತಾವಿಚುಕ್ಷುಭುಃ ನಿರ್ಹ್ರಾದ ಭೀತಾದಿಗಿಭಾಶ್ಚತುರ್ದಶ ಇತಿಸಪ್ತಮ ಭಾಗವತೇ ನೃಸಿಂಹಸ್ಯ ಶ್ವಾಸೋಕ್ತಿಃ ।**

ಮತ್ತೂ ಗೀತೆಯಲ್ಲಿ ಮಾಧವ ಅರ್ಜುನರು ಪಾಂಚಜನ್ಯ ಹಾಗೂ ದೇವದತ್ತ ಶಂಖಗಳನ್ನು ಊದಿದರೆಂದು ಹೇಳಿದೆ. ಆದುದರಿಂದ ಪರಮಾತ್ಮನಿಗೆ ಸ್ವರೂಪವಾದ ಚಿದಾನಂದಾತ್ಮಕ ಪ್ರಾಣಾದಿಗಳುಂಟೆಂದು ಸಿದ್ಧವಾಗುತ್ತದೆ. ಮತ್ತೂ ನರಸಿಂಹ ರೂಪದಿಂದ ಹುಂಕರಿಸಿದಾಗಿ ಮೋಡಗಳು ಅಲ್ಲೋಲಕಲ್ಲೋಲಗಳಾದವು.

ನಕ್ಷತ್ರಗಳು ಬಿದ್ದವು. ಗ್ರಹಗಳ ಪ್ರಕಾಶವು ಕ್ಷೀಣಗೊಂಡಿತು, ಸಮುದ್ರಾದಿಗಳು ಉಕ್ಕಿದವು. ನಾಲ್ಕು ದಿಕ್ಕಿನಲ್ಲಿ ಅತಿ ಪ್ರಕಾಶದಿಂದ ಕತ್ತಲೆ ಕವಿದವೆಂದು ಸಪ್ತಮ ಭಾಗವತದಲ್ಲಿ ಶ್ರೀಶನಿಗೆ ಶ್ವಾಸೋಚ್ಛ್ವಾಸವನ್ನು ಹೇಳಿರುತ್ತದೆ.

**ಏವಂ ಲಕ್ಷ್ಮ್ಯಾಃ ಅಪಿ ಸ್ವರೂಪಭೂತೋ ವಾಯುರಸ್ತ್ಯೇವ । ಯತ್ರ ವಾಯೂಪದಪದ್ಮಾದಿರೂಪೇಣ ಪ್ರಕೃತಿಃ ಸ್ಥಿತೇತಿ ಷಷ್ಟಸ್ಕಂಧ ತಾತ್ಪರ್ಯೋಕ್ತೇಃ। ಮುಕ್ತಾನಾಮಪಿ ಸ್ವರೂಪಭೂತ ವಾಯುರಸ್ತ್ಯೇವ। ಶಂಖವೇಣುಗಾನಾದಿಧ್ವನಿಕರ್ತೃತ್ವಾತ್ । ವಾಯುತತ್ವಸ್ಯ ಉಪಾದಾನ ಮಾಹ ।**

ಪ.ಸಂ.—ತತ್ವರೂಪೋ ವಾಯುಃ ಸ್ಪರ್ಶಜನ್ಯಃ। ವಾಯ್ವಾದ್ಯಾದಿ ದೇವತಾಃ ತದ ಭಿಮಾನಿನಃ। ಆಕಾಶಾದ್ದಶಗುಣನ್ಯೂನಃ ।

ಹೀಗೆ ಲಕ್ಷ್ಮೀದೇವಿಗೂ ಸ್ವರೂಪಭೂತನಾದ ಪ್ರಾಣವಾಯು ಇರುತ್ತದೆ. ಷಷ್ಟಸ್ಕಂಧತಾತ್ಪರ್ಯದಲ್ಲಿ ಲಕ್ಷ್ಮೀದೇವಿಯು ಶ್ರೀಭಾಗದಲ್ಲಿ ಪ್ರಾಣಪದಪದ್ಮಾದಿ ಅನಂತರೂಪಗಳಿಂದ ಸೇವಿಸುತ್ತಾಳೆ ಎಂದು ಹೇಳಿರುತ್ತದೆ. ಮುಕ್ತರಿಗೂ ಸ್ವರೂಪವೇ ಆದ ವಾಯು ಇದೇ ನಿತ್ಯತತ್ವಾತ್ಮಕ ಪಂಚ ಪ್ರಾಣಾದಿರೂಪಗಳಾದವುಗಳು ಇರುತ್ತದೆ. ಶಂಖ, ವೇಣು ಗಾನಾದಿ ಧ್ವನಿ ಮಾಡುತ್ತಾರೆಂದು ಹೇಳಿರುವುದರಿಂದ ವಾಯುತತ್ವದ ಉಪಾದಾನ ದೇವತೆ ಅಳತೆಗಳನ್ನು ಹೇಳುತ್ತಾರೆ. ತತ್ವರೂಪವಾದ ವಾಯುವು ಅಹಂಕಾರತತ್ವದಿಂದ ಹುಟ್ಟಿದ ಸ್ಪರ್ಶದಿಂದ ಹುಟ್ಟಿತು. ತತ್ವಾತ್ಮಕ ವಾಯುವಿಗೆ ಮುಖ್ಯಪ್ರಾಣಾದಿಗಳು ಅಭಿಮಾನಿಗಳು, ಆಕಾಶ ತತ್ವಕ್ಕಿಂತಲೂ ಹತ್ತರಲ್ಲಿ ಒಂದು ಭಾಗ ನ್ಯೂನವಾದುದು. ಅನ್ಯ ವಾಯುವಿಗೆ ಶರೀರ, ಇಂದ್ರಿಯ ವಿಷಯಗಳೆಂದು ಮೂರು ವಿಧವು (ಶರೀರ ಇಂದ್ರಿಯ ವಿಷಯಗಳೆಂದರೇನೆನ್ನುವುದನ್ನು ಹಿಂದೆ ಹೇಳಿರುತ್ತದೆ.) ಶರೀರ ಪಿಶಾಚಿಗಳದು, ಸ್ಪರ್ಶಗ್ರಾಹಕವಾದತ್ವಗಿಂದ್ರಿಯವು. ಸರ್ವತ್ರ ಹರಿದಾಡುವ ಗಾಳಿ ವಿಷಯವು. ವಾಯುಪಾದಾನ ವಿಷಯದಲ್ಲಿ ಪ್ರಮಾಣಗಳು.

**ತದುಕ್ತಂ ತೃತೀಯ ಸ್ಕಂಧೇ । ನಭಸಃ ಶಬ್ದತನ್ಮಾತ್ರಾತ್ಕಾಲಗತ್ಯಾ ವಿಕುರ್ವತಃ । ಸ್ಪರ್ಶೋಭವತ್ತತೋ ವಾಯುಃ ತ್ವಕ್ಸ್ಪರ್ಶಸ್ಯ ಚ ಸಂಗ್ರಹಃ ಇತಿ। ತಾಮಸಾನುಸೃತಂ ಸ್ಪರ್ಶಂ ವಿಕುರ್ವನ್ನಿರ್ಮಮೇನಿಲಮಿತಿಚ । ದ್ವಿತೀಯಸ್ಕಂಧೇಪಿ । ನಭಸೋಥವಿಕುರ್ವಾಣಾದಭೂಸ್ಪರ್ಶ ಗುಣೋನಿಲ ಇತಿ । ತತ್ವಾತತ್ವರೂಪ ವಾಯ್ವಭಿಮಾನಿನ ಆಹ । ವಾಯ್ವಾದಯ ಇತಿ । ಪ್ರಧಾನವಾಯೋಃ ಸರ್ವಾಭಿಮಾನಿತ್ವಂ । ಸಾವಾ ಏಷಾದೇವತಾ ನಾಧಿಯೋರ್ಯಂ ಪವತ ಇತ್ಯಾದಿ ಶ್ರುತಿ ಸಿದ್ಧಂ। ತತ್ಪೂನುಃ ಪ್ರವಹೋ ವಾಯ್ವಭಿಮಾನೀ ।**

ತೃತೀಯಸ್ಕಂಧ ಭಾಗವತದಲ್ಲಿ ಭಗವದಿಚ್ಛೆಯಂತೆ ವಿಕಾರಗೊಳ್ಳುವ ಶಬ್ದ ಮಾತ್ರ ವಿಶಿಷ್ಟ ಆಕಾಶದಿಂದ ಸ್ಪರ್ಶ ಹುಟ್ಟಿತು. ಆ ಸ್ಪರ್ಶದಿಂದ ವಾಯು ಹುಟ್ಟಿತು ಸ್ಪರ್ಶವನ್ನು ಸಂಗ್ರಹಿಸುವುದು ತ್ವಕ್ ಇಂದ್ರಿಯವು ಹೀಗೆ ಹೇಳಿದೆ. ದ್ವಿತೀಯ ಸ್ಕಂಧದಲ್ಲಿಯೂ, ತಾಮಸಾಹಂಕಾರದಿಂದ ಸ್ಪರ್ಶವು ಅದರಿಂದ ಅನಿಲವು (ವಾಯುವು) ಹುಟ್ಟಿತೆಂದು ಹೇಳಿದೆ. ತತ್ವಾತ್ಮಕ ಅತತ್ವಾತ್ಮಕ ವಾಯುವಿಗೆ ಮುಖ್ಯಪ್ರಾಣನೇ ಪ್ರಧಾನಾಭಿಮಾನಿಯು.

ಅನಾದಿಕಾಲದಿಂದ ಸರ್ವವನ್ನೂ ಯಾವನೇ ಧರಿಸಿದ್ದಾನೆಯೋ ಅವನೇ ಮುಖ್ಯವಾಯುವು. ಸರ್ವದಾ ವಾಯ್ವಭಿಮಾನಿಯು ಎಂದು ಹೇಳಿದೆ. ಶ್ರುತಿಯೇ ಪ್ರಮಾಣವು. ವಾಯುಪುತ್ರ ಪ್ರವಹನೂ ಅಭಿಮಾನಿಯೇ.

**ಅನ್ಯೇತುಸೂನವೋ ವಾಯೋರಿತಿ ತಂತ್ರಸಾರೋಕ್ತೇಃ। ಪ್ರಾಣಾಪಾನಾದಿ ವಾಯೂನಾಂ ಚಾಭಿಮಾನಿನಸ್ತು ಬೃಹದ್ಭಾಷ್ಯೋಕ್ತಾಗ್ರಾಹ್ಯಾಃ ತದುಕ್ತಂ। ಶಿವಸ್ಯ ಚ ತಥೋಮಾಯಾಃ ಪ್ರಾಣಾತ್ಮಾ ಶೇಷ ಆಶ್ರಯಃ। ಶೇಷಸ್ಯಾಪಾನ ರೂಪಾಸಾ ಭಾರತ್ಯೇವ ವ್ಯಪಾಶ್ರಯಃ। ತಸ್ಯಾ ವ್ಯಾನಾಭಿಧೋವಾಯುಃ ವಿಶಿಷ್ಟಾತೋಯತೋಹಿಸ ಇತಿ। ಛಾಂದೋಗ್ಯಭಾಷ್ಯೇಪಿ। ಪ್ರಾಣಾಭಿಮಾನೀ ಚಕ್ಷುಶ್ಚಸೂರ್ಯ ಏವ ಪ್ರಕೀರ್ತಿತಃ। ದಕ್ಷಿಣಾಧಿಪತಿಃ ಸೋಮೋ ವ್ಯಾನಃ ಶ್ರೋತ್ರಾಭಿಮಾನವಾನ್। ವಾಗಪಾನಾತ್ಮಕೋವಹ್ನಿರಿತ್ಯಾದಿ। ವಾಯುತತ್ವ ಪರಿಮಾಣಮಾಹ ಆಕಾಶಾದಿತಿ। ಅತ್ರ ಅಬಗ್ನೀರನಭೋಹಂಕೃದಿತಿ ನಿರ್ಣಯೋಕ್ತೇಃ ಪ್ರಮಾಣಂ।**

ಇನ್ನೂ ವಾಯುಪುತ್ರರು ಅಭಿಮಾನಿಗಳೆಂದು ತಂತ್ರಸಾರದಲ್ಲಿ ಹೇಳಿದೆ. ಅದೇ ಪ್ರವಹಾದಿವಾಯು ಪುತ್ರರು ಅಭಿಮಾನಿಗಳು ಎಂಬಲ್ಲಿ ಮತ್ತೂ ಇನ್ನೂ ಪ್ರಾಣಾಪಾನಾದಿಗಳಿಗೆ ಅಭಿಮಾನಿಗಳನ್ನು ಬೃಹದ್ಭಾಷ್ಯದಲ್ಲಿ ಹೇಳಿರುವಂತೆ ತಿಳಿಯಬೇಕು. ಮಹೇಶಗೂ ಹಾಗೆ ಪಾರ್ವತಿಗೂ ಪ್ರಾಣ, ಶೇಷಶರಾಶ್ರಯರು. ಶೇಷಶನಿಗೆ ಅಪಾನ ರೂಪನಾದ ಮುಖ್ಯಪ್ರಾಣನು ಭಾರತೀದೇವಿಯರು ಅತ್ಯಂತಾಶ್ರಯರು. ಆ ಭಾರತೀ ದೇವಿಗೆ ವ್ಯಾನನಾಮಕ ವಾಯು ವಿಶಿಷ್ಟನೇ ಆಗಿರುವುದರಿಂದ ಅತ್ಯಂತಾಶ್ರಯನು. ಚಕ್ಷುರಿಂದ್ರಿಯಕ್ಕೆ ಪ್ರಾಣಾಶ್ರಿತನಾದ ಸೂರ್ಯನು, ಬಲಗಣ್ಣಿಗೆ ವ್ಯಾನಾಶ್ರಿತನಾದ ಚಂದ್ರನು, ವಾಕ್‌ಗೆ ಅಪಾನಾಶ್ರಿತನಾದ ವಹ್ನಿ ಹೀಗೆ ಅಭಿಮಾನಿಗಳನ್ನು ತಿಳಿಸಿರುತ್ತದೆ. ನಿರ್ಣಯದಲ್ಲಿ ಹೇಳಿದೆ. ಉದಕ, ಅಗ್ನಿ ಆಕಾಶಾದಿಗಳೆಲ್ಲಾ ಸೋಪಾದಾನಗಳಿಂದ ಹತ್ತರಲ್ಲೊಂದಂಶ ನ್ಯೂನರು ಎಂದು ಹೇಳಿದಂತೇ ವಾಯು ಪರಿಮಿತಿಯಲ್ಲಿ ಆಕಾಶದಿಂದ ಹತ್ತಂಶದಿಂದ ಕಡಿಮೆಯಾದುದು.

**ತೇಜಸ್ತತ್ವಂ ನಿರೂಪಯಿತುಂ ತದ್ವಿಭಾಗಮಾಹ ।**

ಪ.ಸಂ.—ತೇಜೋದ್ವಿವಿಧಮ್ । ತತ್ವರೂಪಂ ತದ್ಭಿನ್ನಂ ಚೇತಿ । ನಿತ್ಯಾನಿತ್ಯ ಭೇದೇನ ಪುನರ್ದ್ವಿವಿಧಮ್ । ನಿತ್ಯಂತೇಜಃ ಈಶಲಕ್ಷ್ಮ್ಯೋಃ ಮುಕ್ತಾನಾಂ ಚ ಸ್ವರೂಪಭೂತಮ್ ।

**ನಿತ್ಯಂತೇಜಃ ಈಶಲಕ್ಷ್ಮ್ಯೋರಿತಿ । ತತ್ರ ಪ್ರಮಾಣಂತು । ಅಹಂ ವೈಶ್ವಾನರೋಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ । ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ಇತಿ ಗೀತಾ ।**

**ಅಯಮಗ್ನಿಃ ವೈಶ್ವಾನರ ಇತಿ ಭಾಷ್ಯಂ । ವೈಶ್ವಾನರ ಮೃತ ಅಜಾತ ಮಗ್ನಿಂ ಇತಿ ಶ್ರುತಿಃ । ನಿರ್ಣಯೇಽಪಿ । ಸ್ಕಂದ ಪ್ರಸಾದಕವಚಃ ಸಮುಂಪೇ ಚಕಾರ ಗೋವಿಂದಮಗ್ನಿವದನುಂಪ್ರದಹಂತಮುಚ್ಚೈಃ । ಚಚ್ಛೇದ- ತುಂಡ ಶಿರಸೈವನಿಹಂತುಮೇನಮಾಂಯಾಂತಮೀಕ್ಷ್ಯಜಗೃಹೇಸ್ಯ ಸತುಂಡ ಮೀಶ ಇತಿ ।**

ತೇಜಸ್ತತ್ವವನ್ನು ನಿರೂಪಿಸುವ ಮೊದಲು ಅದರ ವಿಭಾಗವನ್ನು ಹೇಳುತ್ತಾರೆ. ತೇಜಸ್ಸು ಎರಡು ವಿಧವಾದುದು. ತತ್ವರೂಪವೆಂದು ತದ್ಭಿನ್ನವೆಂದು, ಪುನಃ ನಿತ್ಯಾ ನಿತ್ಯವೆಂದು ಎರಡು ವಿಧವು. ನಿತ್ಯವಾದ ತೇಜಸ್ಸು ಶ್ರೀಹರಿ ಲಕ್ಷ್ಮೀ ಮುಕ್ತಜೀವರ ಸ್ವರೂಪವಾದುದು. ಈ ವಿಷಯದಲ್ಲಿ ಪ್ರಮಾಣವೆಂದರೆ ಗೀತೆಯಲ್ಲಿ ಶ್ರೀಕೃಷ್ಣನು ನಾನೇ ಸರ್ವ ಜೀವರ ದೇಹದಲ್ಲಿ ವೈಶ್ವಾನರರೂಪದಿಂದ ಇದ್ದು ಅವರಿಂದ ಭುಕ್ತವಾದ ನಾಲ್ಕು ವಿಧ ಅನ್ನವನ್ನು ಪಚನ ಮಾಡುತ್ತೇನೆ ಎಂದಿರುತ್ತಾನೆ. ಈ ಪರಮಾತ್ಮನೇ ವೈಶ್ವಾನರಾಗ್ನಿಯು ಎಂದು ಭಾಷ್ಯವು ಹೇಳಿದೆ. ನಾಶವಿಲ್ಲದ, ಹುಟ್ಟಿಲ್ಲದ ವೈಶ್ವಾನರ ನೆಂಬಗ್ನಿಯನ್ನು ಮುಕ್ತರು ಸೇವಿಸುತ್ತಾರೆಂದು ಶೃತಿಯು ನಿರ್ಣಯದಲ್ಲಿಯೂ, ಬಕಪಕ್ಷಿ ರೂಪವನ್ನು ತಾಳಿದ ದೈತ್ಯನು ಸ್ಕಂದನ ವರವೆಂಬ ಕವಚವನ್ನು ಧರಿಸಿ ಬೆಂಕಿ ಹೇಗೆ ಸುಡುವುದೋ ಹಾಗೆ ಶ್ರೀಕೃಷ್ಣನನ್ನು ಸುಡುವಂತೆ ಕೊಕ್ಕಿನಿಂದ ಕಿಡಿಯನ್ನು ಕಾರುತ್ತ, ನುಂಗಿದನು ಗಂಟಲು ಸುಡುವುದನ್ನು ತಡೆಯಲಾರದೆ ಉಗಳಿ ಕೊಕ್ಕಿನಿಂದ ಕೊಲ್ಲಲು ಪ್ರಯತ್ನಿಸಿದನು. ಶ್ರೀ ಕೃಷ್ಣನು ಕೊಕ್ಕನ್ನೇ ಸೀಳಿ ಬಿಸುಟನು ಹೀಗೆ ಅಗ್ನಿಗೆ ಪ್ರತಿ ಅಗ್ನಿ ಆದನೆಂದು ಹೇಳಿದೆ.

**ಯದ್ರೋಷೋತ್ಕರ ದಕ್ಷನೇತ್ರ ಕುಟಿಲ ಪ್ರಾಂತೋತ್ಥಿತಾಗ್ನಿಸ್ಫುರತ್ಖ ದ್ಯೋತೋಪಮವಿಸ್ಫುಲಿಂಗ ಭಸಿತಾ ಬ್ರಹ್ಮೇಶ ಶಕ್ರೋತ್ಕರಾಃ । ಇತಿ ನರಸಿಂಹನಖಸ್ತುತಿಃ । ತಥಾ ಸಪ್ತಮಸ್ಕಂಧೇ ನರಸಿಂಹಂಪ್ರತಿ ಪ್ರಹ್ಲಾದ ವಾಕ್ಯಂ । ನಾಹಂ ಬಿಭ್ಯೇಮ್ಯಜಿತತೇಽತಿಭಯಾನಕಸ್ಯಜಿಹ್ವಾಗ್ನಿನೇತ್ರ ಭ್ರುಕುಟೀರಭಸೋಗ್ರದಂಷ್ಟ್ರಾದಿತಿ ।**

ಶ್ರೀ ನರಸಿಂಹ ನಖಸ್ತುತಿಯಲ್ಲಿ ಯಾವನ ರೋಷದಿಂದ ಹುಟ್ಟಿ, ಕಡೆಗಣ್ಣಿನ ಕಿಡಿ ಮಾತ್ರಕ್ಕೆ ಬ್ರಹ್ಮರುದ್ರಇಂದ್ರಾದಿಗಳು ಮಿಣಕಬೂಚಿಗಳಾದರೆಂದು ಹೇಳಿದೆ. ಭಾಗವತ ಸಪ್ತಮ ಸ್ಕಂಧದಲ್ಲಿ ಪ್ರಹಲ್ಲಾದರು ಸ್ತೋತ್ರ ಮಾಡುತ್ತಾ ಸ್ವಾಮಿ ನಿನ್ನ ಭಯಂಕರವಾದ ಬೆಂಕಿಸುರಿಸುತ್ತಾ ಗಂಟು ಹಾಕಿದ ಹುಬ್ಬುಗಳುಳ್ಳ ಬೆಂಕಿಯ ಕಣ್ಣನ್ನು ನೋಡಿ, ಕೋರೇಹಲ್ಲುಗಳನ್ನು ನೋಡಿ ಭಯವಿಲ್ಲಾ ಎಂದಿರುತ್ತಾರೆ.

**ನಿರ್ಣಯೇಽಪಿ । ರಾತ್ರಿತ್ರಯೇಽಪ್ಯನುಪಗಾಮಿನಮೀಕ್ಷ್ಯಸೋಽಬ್ಧಿಂ ಚುಕ್ರೋಧರಕ್ತ ನಯನಾಂತಮಯುಂಜದಬ್ಧೌ । ಸಕ್ರೋಧ ದೀಪ್ತ ನಯನಾಂತ ಹತಃ ಪರಸ್ಯ ಶೋಷಂಕ್ಷಣಾದುಪಗತೋಽದನುಜಾದಿಸತ್ವೈರಿತಿ ವಿಶ್ವರೂಪಾಧ್ಯಾಯೇಽಪಿ । ಪಸ್ಯಾಮಿತ್ವಾದೀಪ್ತ ಹುತಾಶ ವಕ್ತ್ರಂ ಸ್ವ ತೇಜ ಸಾವಿಶ್ವಮಿದಂತಪಂತಂ ಇತಿ । ಐತರೇಯ ಭಾಷ್ಯೇಽಪಿ.**

ನಿರ್ಣಯದಲ್ಲಿಯೂ ರಾಮಾವತಾರ ಕಥೆಯಲ್ಲಿ ಮೂರು ರಾತ್ರಿಗಳು ನಿರೀಕ್ಷಿಸಿದರೂ ಶರಣಾಗತನಾಗದ ಸಮುದ್ರರಾಜನನ್ನು ನೋಡಿ ಶ್ರೀರಾಮನು ತನ್ನ ಕ್ರೋಧದಿಂದ ಅತಿ ಕೆಂಪಾದ ಕಣ್ಣಿನ ಕಡೆನೋಟವನ್ನು ಸಮುದ್ರದಲ್ಲಿ ಬಿಟ್ಟನು. ಕ್ಷಣ ಮಾತ್ರದಲ್ಲೇ ತಿಮಿಂಗಲಾದಿ ಪ್ರಾಣಿಗಳೊಂದಿಗೆ ಸಮೂಲಾಗ್ರಬತ್ತಿದನು, ಬತ್ತಿ ಹೋದನು ಎಂದಿದೆ. ವಿಶ್ವರೂಪದರ್ಶನ ಸಂದರ್ಭದಲ್ಲಿ ಅರ್ಜುನನು, ಸ್ವಾಮಿನಿನ್ನ ಅತಿ ಪ್ರಕಾಶ ಅಗ್ನಿಮುಖವು ತನ್ನ ತೇಜಸ್ಸಿನಿಂದ ಜಗತ್ತೇ ತಪಿಸುವುದನ್ನೂ ನೋಡುತ್ತಿದ್ದೇನೆ ಎಂದಿರುತ್ತಾನೆ. ಐತರೇಯ ಭಾಷ್ಯದಲ್ಲಿಯೂ,

**ತಾಪಿನೀ ಪಾಚಿಕಾ ಚೈವ ಶೋಷಣೀ ಚ ಪ್ರಕಾಶಿನೀ । ನೈವರಾಜನ್ರವೇಃ ಶಕ್ತಿಃ ಶಕ್ತಿರ್ನಾರಾಯಣಸ್ಯಸೇತಿ । ಲಕ್ಷ್ಮ್ಯಾಸ್ತು ಪ್ರಳಯಕಾಲೀನಾಗ್ನಿರೂಪದುರ್ಗಾ ಸ್ವರೂಪತ್ವಾತ್। ನಹಿ ಪ್ರಸಿದ್ಧಾಗ್ನೇಃ ಬ್ರಹ್ಮಾಂಡಾದಿ ಸರ್ವದಾಹಕತ್ವ ಶಕ್ತಿಃ ಯುಕ್ತಾ । ಏವಂ ಮುಕ್ತಾನಾಮಪಿ ತೇಜೋರೂಪತ್ವಂ । ತದುಕ್ತಂ ಬೃಹದ್ಭಾಷ್ಯೇ । ಅಲ್ಪ ತೇಜಸ್ತ್ವಥೈವಾಲ್ಪಂಜೀವ ರೂಪಂ ಹಿ ಸಂಸೃತೌ । ತಥೈವ ಸುಮಹತ್ತೇಜಃ ಕರೋತಿ ಭಗವಾನ್ಮಹದಿತಿ।**

ಹೇ ರಾಜನೇ ಈ ಅತಿತಾಪಗೊಳಿಸುವ ಜಗತ್ತನ್ನೇ ಬೇಯಿಸುವ ಜಗತ್ತನ್ನೊಣಗಿಸುವ ಅತ್ಯಂತ ಪ್ರಕಾಶಿಸುವ ಈ ಶಕ್ತಿಯು ಸೂರ್ಯನದಲ್ಲ ನಾರಾಯಣನದ್ದೇ ಆಗಿರುತ್ತದೆ ಎಂದಿದೆ. ಲಕ್ಷ್ಮೀದೇವಿಗೂ ಪ್ರಳಯಕಾಲಕವಾದ ದುರ್ಗಾರೂಪವು ಅಗ್ನಿರೂಪವೇ ಎಂದಿದೆ. ಪ್ರಸಿದ್ಧಾಗ್ನಿಗೆ ಬ್ರಹ್ಮಾಂಡದಾಹಕ ಶಕ್ತಿಯು ಯುಕ್ತವಾಗವುದಿಲ್ಲವು, ಹೀಗೆ ಮುಕ್ತರಿಗೂ ತೇಜೋರೂಪತೆ ಬೃಹದ್ಭಾಷ್ಯದಲ್ಲಿ ಹೇಳಿದೆ. ಅಲ್ಪವಾದ ತೇಜಸ್ಸು ಹಾಗೆ, ಅಲ್ಪವಾದ ಜೀವರೂಪ ಸಂಸಾರದಲ್ಲಿ ಆದರೆ ಭಗವಂತನು ಮುಕ್ತಿಯಲ್ಲಿ ಮಹತ್ತರವಾದ ತೇಜಸ್ಸಾಗಿ ಮಾಡುತ್ತಾನೆ. ಹೀಗೆಂದು ಹೇಳಿದೆ.

ತತ್ವರೂಪತೇಜಸಃ ಉಪಾದಾನ ಮಾಹ ।

ಪ.ಸಂ.—ತತ್ವರೂಪಂ ತೇಜೋರೂಪಂ ತನ್ಮಾತ್ರಾಜನ್ಯಂ ಅನಿತ್ಯಂ ಚ ।

ತದುಕ್ತಂ ತೃತೀಯ ಭಾಗವತೇ । ವಾಯೋಶ್ಚ ಸ್ಪರ್ಶ ತನ್ಮಾತ್ರಾದ್ರೂಪಂ ದೈವೇರಿತಾದಭೂತ್ । ಸಮುತ್ಥಿತಂ ತತಸ್ತೇಜಶ್ಚಕ್ಷೂರೂಪೋಪಲಂಭನಮಿತಿ । ದ್ವಿತೀಯಸ್ಕಂಧ ಭಾಗವತೇಪಿ । ವಾಯೋರಪಿ ವಿಕುರ್ವಾಣಾತ್ಕಾಲಕರ್ಮ ಸ್ವಭಾವತಃ । ಉದಪದ್ಯತ ತೇಜೋವೈರೂಪವತ್ಸ್ಪರ್ಶ ಶಬ್ದವದಿತಿ । ತೇಜಸ್ತತ್ವಸ್ಯ ಪರಿಮಾಣಮಾಹ ।

ಪ.ಸಂ.—ವಾಯುತತ್ವಾದ್ದಶಗುಣನ್ಯೂನಮ್ ।

ಅಬಗ್ನೀರನಭೊಹಂಕೃದಿತಿ ನಿರ್ಣಯೋಕ್ತೇರಿತಿ ಭಾವಃ । ತದಭಿಮಾನಿನಮಾಹ ।

ಪ.ಸಂ.—ಬ್ರಹ್ಮಾದಯೋ ದೇವತಾಸ್ತದಭಿಮಾನಿನಃ ॥

ಸರ್ವೇಸರ್ವಾಭಿಮಾನಿನ ಇತ್ಯುಕ್ತೇಃ । ಅಗ್ನಿಸ್ತು ತೇಜೋಭಿಮಾನೀತಿ ಪ್ರಸಿದ್ಧಃ ।

ತತ್ವರೂಪ ತೇಜಸ್ಸಿನ ಉಪಾದಾನವನ್ನು ಮಿತಿಯನ್ನು ಅಭಿಮಾನಿಯನ್ನೂ ಹೇಳುತ್ತಾರೆ. ತೇಜಸ್ಸು(ಅಗ್ನಿಯು) ತನ್ನ ಮಾತ್ರಾ (ತನ್ನ ವಿಷಯವಾದ) ರೂಪದಿಂದ ಹುಟ್ಟಿದುದು.

ಅನಿತ್ಯವಾದ ತೇಜಸ್ಸು(ಅಗ್ನಿಯು) ಶರೀರ, ಇಂದ್ರಿಯ, ವಿಷಯ ಭೇದದಿಂದ ಮೂರು ವಿಧವು. ತೇಜೋಮಯವಾದ ಸ್ವರ್ಗಾದಿಗಳಲ್ಲಿರುವ ದೇವತೆಗಳ ದೇಹವು. ಇಂದ್ರಿಯ ರೂಪವನ್ನು ಗ್ರಹಿಸುವ ಕಣ್ಣು. ಬೆಂಕಿ ಮಿಂಚೇ ಮೊದಲಾದವುಗಳು ವಿಷಯ. ಅಗ್ನಿ ಉಪಾದಾನವು ರೂಪವೆಂದು ಹೇಳಿ ಆ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ. ತೃತೀಯ ಭಾಗವತದಲ್ಲಿ ಸ್ಪರ್ಶ ವಿಶಿಷ್ಟ ವಾಯುವನ್ನು ವಿಕಾರಗೊಳಿಸುತ್ತಿರಲು (ಹಿಂಡುತ್ತಿರಲು) ದೈವೇಚ್ಛೆಯಿಂದ ರೂಪ ಹುಟ್ಟಿತು. ಆರೂಪದಿಂದ ತೇಜಸ್ಸು ಹುಟ್ಟಿತೆಂದು, ಆ ತೇಜಸ್ಸಿನಿಂದ ಚಕ್ಷುಸ್ಸಿಂದ್ರಿಯ(ಕಣ್ಣು) ಹುಟ್ಟಿತೆಂದು ಹೇಳಿರುತ್ತದೆ. ದ್ವಿತೀಯ ಭಾಗವತದಲ್ಲಿ, ವಾಯುವನ್ನು ಕಡೆಯುತ್ತಿರಲು ಕಾಲಕರ್ಮ ಸಂಯೋಗದಿಂದ, ರೂಪ, ಸ್ಪರ್ಶ, ಶಬ್ದವುಳ್ಳ ತೇಜಸ್ಸು (ಅಗ್ನಿ) ಹುಟ್ಟಿತೆಂದು ತೇಜಸ್ತತ್ವವು ವಾಯು ತತ್ವಕ್ಕಿಂತಲು ಹುತ್ತು ಅಂಶ ಕಡಿಮೆ ಆದುದು. ನೀರು ಅಗ್ನಿ ಆಕಾಶಾದಿಗಳೆಲ್ಲವೂ ಕ್ರಮವಾಗಿ ಹತ್ತು ಹತ್ತು ಅಂಶಗಳಿಂದ ಕಡಿಮೆ ಎಂದು ಹೇಳಿದ ನಿರ್ಣಯೋಕ್ತಿಯಂತೇ ತೇಜಸ್ಸಿನ ಅಭಿಮಾನಿಗಳೂ ಬ್ರಹ್ಮಾದಿಗಳು ಎಲ್ಲಾ ದೇವತೆಗಳೂ ಅಭಿಮಾನಿಗಳೇ ಪ್ರಧಾನಾಪ್ರಧಾನದಿಂದ ತೇಜಸ್ಸಿಗೆ ಅಗ್ನಿಯೇ ಅಭಿಮಾನಿಯು.

ಅಪ್ತತ್ವಂ ನಿರೂಪಯಿತುಂ ತದ್ವಿಭಾಗಮಾಹ ।

ಪ.ಸಂ.—ಅಪೋದ್ವಿವಿಧಾಃ । ಅಪ್ತತ್ವಸ್ಯೋಪಾದಾನಮಾಹ ॥

ಪ.ಸಂ.—ತತ್ವಭೂತಾಃ ತದ್ಭಿನ್ನಾಶ್ಚೇತಿ । ಪುನದ್ವಿವಿಧಾನಿತ್ಯಾsನಿತ್ಯಾಶ್ಚ ।
ತತ್ವಭೂತಾ ಅಪೋರಸಜನ್ಯಾಃ । ತತ್ವಭಿನ್ನಾ ಅಪಃ ನಿತ್ಯಾಃ ।

ತದುಕ್ತಂ ತೃತೀಯಸ್ಕಂಧ ಭಾಗವತೇ । ರೂಪಮಾತ್ರಾದ್ವಿಕುರ್ವಾಣಾತ್ತೇಜಸೋ ದೈವ ಚೋದಿತಾತ್ । ರಸಮಾತ್ರಮಭೂತ್ತಸ್ಮಾದಂಭೋ ಜಿಹ್ವಾರಸಗ್ರಹಃ ಇತಿ । ದ್ವಿತೀಯಸ್ಕಂಧೇಪಿ । ತೇಜಸಸ್ತು ವಿಕುರ್ವಾಣಾದಾಸೀದಂಭೋರಸಾತ್ಮಕಮಿತಿ ।

ಪ.ಸಂ.—ಈಶಲಕ್ಷ್ಮೀಮುಕ್ತ ಸ್ವರೂಪಭೂತಾಃ ।

ತತ್ರ ಪ್ರಮಾಣಾನಿತು । ಸ ಏವ ದ್ರವರೂಪೇಣ ಗಂಗಾಂಭೋನಾತ್ರ ಸಂಶಯಃ ಇತ್ಯಾದಿ ಪುರಾಣ ವಾಕ್ಯಾನಿ । ಲಕ್ಷ್ಮ್ಯಾಸ್ತೂದಕಾತ್ಮಕತ್ವಂ ಯತ್ರನಾಯೂದ ಪದ್ಮಾದಿರೂಪೇಣ ಪ್ರಕೃತಿಃ ಸ್ಥಿತೇತಿಷಷ್ಠತಾತ್ಪರ್ಯ ಸಿದ್ಧಂ । ತಥಾ । ಆರಂಭಣಾಧಿಕರಣ ಟೀಕಾಯಾಮಪಿ ।

ಅಪ್ತತ್ವ(ನೀರನ್ನು)ವನ್ನು ವಿಭಾಗಿಸುತ್ತಾರೆ. ನಿರೂಪಿಸುವದಕ್ಕಾಗಿ ತತ್ವರೂಪವಾದುದು, ತತ್ವಭಿನ್ನವಾದುದು ಎಂದು ಎರಡು ವಿಧವಾಗಿ ವಿಭಾಗಿಸುತ್ತಾರೆ. ನಿತ್ಯಗಳೂ ಅನಿತ್ಯಗಳೆಂದು ಪುನಃ ಎರಡು ವಿಧವು ತತ್ವರೂಪ ಅಪ್ತತ್ವವು(ಉದಕವು) ನಿತ್ಯವಾದುದು. ಈಶ ಲಕ್ಷ್ಮೀ ಮುಕ್ತಸ್ವರೂಪವಾದದ್ದು. ಉದಕಕ್ಕೆ ತೇಜಸ್ಸಿನಿಂದ ಹುಟ್ಟು ಎಂಬಲ್ಲಿ ಪ್ರಮಾಣ, ಪರಮಾತ್ಮನೇ ದ್ರವ(ನೀರು)ರೂಪವಾಗಿ ಗಂಗೋದಕನಾಗಿದ್ದಾನೆ. ಸಂಶಯವಿಲ್ಲ ಎಂಬ ಪುರಾಣೋಕ್ತಿಯು ಲಕ್ಷ್ಮೀದೇವಿಯೂ ಉದಕರೂಪಳಾಗಿದ್ದಾಳೆ ಎಂಬಲ್ಲಿ,ಷಷ್ಠಸ್ಕಂಧ ಭಾಗವತತಾತ್ಪರ್ಯದಲ್ಲಿ ಲಕ್ಷ್ಮೀದೇವಿಯು ಶ್ರೀಭಾಗದಲ್ಲಿ ತಾನೇ ಗಾಳಿ, ನೀರು, ಪದ್ಮಾದಿರೂಪಗಳಿಂದ ಸೇವಿಸುವಳೆಂದು ಸಿದ್ಧವು. ಆರಂಭಣಾಧಿಕರಣ ಟೀಕೆಯಲ್ಲೂ,

ಯಚ್ಚೇತನ ಪ್ರಕೃತಿರೂಪಮಂಭಸ್ತದಪ್ಯಾಸೀತ್ಕಿಮಿತ್ಯುಕ್ತಂ । ತಥಾ ಅರಶ್ಚಹವೈಣ್ಯಶ್ಚಾರ್ಣವೌ ಬ್ರಹ್ಮಲೋಕೇ । ಅರಶ್ಚವೈಣ್ಯಶ್ಚ ಸುಧಾಸಮುದ್ರೌತತ್ರೈವ ಸರ್ವಾಭಿಮತ ಪ್ರದೌದ್ವಾ ಇತಿ ಪ್ರಮಾಣಾದ್ವಿಷ್ಣುಲೋಕೇ ಅರಣ್ಯಾಖ್ಯ ಸುಧಾಸಮುದ್ರೌಸ್ತಃ । ಪ್ರಧಾನ ಪರಮವ್ಯೋಮ್ನೋರಂತರಾ ವಿರಜಾನದೀತಿ ಪುರಾಣವಾಕ್ಯಾಚ್ಚ ವಿರಜಾನದೀ ಚಾಸ್ತಿ ।

ಯಾವ ಚೇತನ ಸ್ವಭಾವ ಉಳ್ಳ ಉದಕವೂ ಇದ್ದಿತು. ಅಂತ ಹೇಳಿದೆ ಹಾಗೆ ಬ್ರಹ್ಮಲೋಕದಲ್ಲಿ ಆರವೈಣ್ಯಗಳೆಂಬ ನದಿಗಳು ಬ್ರಹ್ಮಲೋಕದಲ್ಲಿ ವಿಷ್ಣು ಲೋಕದಲ್ಲಿ ಸರ್ವಾಭೀಷ್ಟಪ್ರದಗಳಾಗಿ ಅರವೈಣ್ಯಗಳೆಂಬ ಸುಧಾ ಸಮುದ್ರಗಳಿವೆ ಎಂದು.

ಅವ್ಯಾಕೃತಾಕಾಶ ವೈಕುಂಠದ ಮಧ್ಯದಲ್ಲಿ ವಿರಜಾನದಿಯಿದೆ ಎಂಬ ಪುರಾಣ ವಾಕ್ಯದಿಂದ ವಿರಜಾನದಿಯಿದೆ. ಛಾಂದೋಗ್ಯ ಭಾಷ್ಯದಲ್ಲಿ ಹೇಳಿರುವಂತೆ.

**ತತ್ರ ಮಧ್ಯಂ ಸರೋವರಮಿತಿ ಛಾಂದೋಗ್ಯ ಭಾಷ್ಯಾಚ್ಚ ತತ್ರ ಮಧ್ಯ ಸರೋವರಂ ಚಾಸ್ತಿ । ವೈಕುಂಠ ಪರಿಘಾಕಾರಾ ವಿರಜಾನದೀ ಚಾಸ್ತಿ । ತೇ ಸರ್ವೇಽಪಿ ಲಕ್ಷ್ಮ್ಯಾತ್ಮಕಾಃ । ಪ್ರಳಯಕಾಲೇಽಪಿ ವಿನಾಶಾಭಾವಾತ್ । ತದುಕ್ತಂ ಛಾಂದೋಗ್ಯಭಾಷ್ಯೇ । ಪರಸ್ಯ ಬ್ರಹ್ಮಣೋಲೋಕೇ(ಶ್ವೇತ ದ್ವೀಪಾಭಿಧೇಪರೇ । ಅರಣ್ಯಾಖ್ಯಾರ್ಣವಾವ್ದಿವ್ಯೌ ಚಿದಾನಂದರಸಾತ್ಮಕಾ । ಯಾವಾನುಚ್ಚಃ ಸ್ವರ್ಗಲೋಕಃ ತಾವಾನುಚ್ಚತಯಾ ಸಚ । ಶ್ವೇತದ್ವೀಪೋ ದಿವಿಷ್ಠೋತಸ್ತತ್ರ ಮಧ್ಯಂ ಸರೋವರಂ ।**

ಅಲ್ಲಿ ಮಧ್ಯದಲ್ಲಿ ಸರೋವರವಿದೆ ವೈಕುಂಠದ ಸುತ್ತಲೂ ವಿರಜಾನದಿ ಇದೆ. ಇವುಗಳೆಲ್ಲವೂ ಲಕ್ಷ್ಮೀರೂಪಗಳಾದವುಗಳೇ ಪ್ರಳಯಕಾಲದಲ್ಲೂ ನಾಶವಿಲ್ಲವಾದ್ದರಿಂದ ಛಾಂದೋಗ್ಯಭಾಷ್ಯದಲ್ಲಿ ಇದನ್ನು ಹೇಳಿದೆ ಶ್ವೇತದ್ವೀಪವೆಂದು ಹೆಸರುಳ್ಳ ಪರಬ್ರಹ್ಮನ ಲೋಕದಲ್ಲಿ ದಿವ್ಯವಾದ ಚಿದಾನಂದಾತ್ಮಕವಾದ ಅರಣ್ಯವೆಂಬ ದಿವ್ಯ ಸಮುದ್ರಗಳು ಎಷ್ಟು ಪರಿಮಿತಿಯಿಂದ ಸ್ವರ್ಗವೋ ಅಷ್ಟು ಉಚ್ಚತೆಯಿಂದ ತೇಜಸ್ಸಿನಲ್ಲಿ ಶ್ವೇತ ದ್ವೀಪವು. ಅಲ್ಲಿ ಮಧ್ಯದಲ್ಲಿ ಸರೋವರವು.

**ಸರ್ವ ಭೋಜ್ಯಾತ್ಮಕಂ ದಿವ್ಯಂತತ್ರಾಶ್ವತ್ಥಃ ಸುಧಾಶ್ರವಾಃ । ತತ್ರ ವಿಷ್ಣೋಃ ಪರಂ ದಿವ್ಯಂ ಅಪರಾಜಿತ ನಾಮಕಂ । ವಿಮಿತಾಖ್ಯಂಚ ಪರ್ಯಂಕಂ ವಿಷ್ಣೋರ್ವರ್ಣನೇನ ಸಂಮಿತಂ । ಚಿತ್ಸುವರ್ಣಮಯಂ ದಿವ್ಯಂ ಲಕ್ಷ್ಮೀ ಸತ್ತತ್ಸ್ವರೂಪಿಣೀತಿ । ಮುಕ್ತಾನಾಂ ಕಾಮರೂಪತ್ವಾದುದಕಾತ್ಮಕತ್ವಂ ಯುಕ್ತಂ । ನದ್ಯಾದ್ಯಭಿಮಾನಿನಾಂಚ ವೈಕುಂಠೇ ನದೀರೂಪತ್ವಂಚ ತದುಕ್ತಮೈತರೇಯ ಭಾಷ್ಯೋದಾಹೃತಶ್ರುತೌ ।**

ಸರ್ವಭೋಜ್ಯಾತ್ಮಕವಾದುದು, ಅತಿ ತೇಜೋಮಯವಾದುದು ಅದರ ದಂಡೆಯಲ್ಲಿ ಸುಧಾರಸವನ್ನು ಸುರಿಸುವ ಅಶ್ವತ್ಥ ವೃಕ್ಷವಿದೆ. ಅಲ್ಲಿಯೇ ಇರುವ ಶ್ರೇಷ್ಟವಾದ ವಿಷ್ಣುವಿಗೆ ಅರ್ಹವಾದ ಅಪರಾಜಿತವೆಂದು ಅಮಿತವೆಂದು ಹೆಸರುಳ್ಳ ಪರ್ಯಂಕ (ಹಾಸಿಗೆ) ಸುವರ್ಣಾತ್ಮಕವು ಜ್ಞಾನಾನಂದಾತ್ಮಕವೂ ಲಕ್ಷ್ಮೀ ಸ್ವರೂಪವೂ ಆದುದು· ಮುಕ್ತರಿಗೆ ಸ್ವೇಚ್ಛಾರೂಪಗಳು ಇರುವುದರಿಂದ ಉದಕ ರೂಪತೆಯೂ ಯುಕ್ತವೇ ಆಗಿರುತ್ತದೆ. ನದ್ಯಾದ್ಯಭಿಮಾನಿದೇವತೆಗಳಿಗೆ ವೈಕುಂಠದಲ್ಲಿ ನದೀರೂಪರಾಗಿ ಇರುತ್ತಾರೆ. ಐತರೇಯ ಭಾಷ್ಯದಲ್ಲಿ 'ಉದಾಹೃತ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವು.

**ಯತ್ರಾವಮೂರ್ಯಹ್ವತೀರಾಪಸ್ತತ್ರ ಮಾವುವ್ಯತಂಕೃಧೀಂದ್ರಾಯೇಂ ದೋಪರಿಶ್ರವೇತಿ । ಅಬಭಿಮಾನಿನಮಾಹ**

ಪ.ಸಂ,...ಬ್ರಹ್ಮಾದಯೋ ದೇವಾಃ ಅಭಿಮಾನಿನಃ । ತೇಜಸೋ ದಶಗುಣನ್ಯೂನಾಃ :

**ತದುಕ್ತಂ ಐತರೇಯಭಾಷ್ಯೇ । ಬ್ರಹ್ಮ ಶೇಷ ಸುಪರ್ಣೇಂದ್ರಶಿವಾದ್ಯಾ ಅಪ ಈರಿತಾಃ । ತೇವಿಷ್ಣೋರ್ವನಸೇಜಾತಾಃ । ಸರ್ವೇ ಚಾಬಭಿಮಾನಿನಃ ಇತಿ । ಛಾಂದೋಗ್ಯ ಭಾಷ್ಯೇಪಿ । ವಾಯುರ್ಭೂತಾತ್ಮಕೋವರಃ ।**

ಅಪಭಿಮಾನಿಗಳು ಬ್ರಹ್ಮಾದಿ ದೇವತೆಗಳು ಐತರೇಯ ಭಾಷ್ಯದಲ್ಲಿ ಬ್ರಹ್ಮ, ಶೇಷ, ಗರುಡ, ಶಿವ, ಇವರೇ ಮೊದಲಾದವರುಗಳು ಅಪಭಿಮಾನಿಗಳು. ಇವರುಗಳೆಲ್ಲಾ ವಿಷ್ಣುವಿನ ಮನಸ್ಸಿನಿಂದ ಹುಟ್ಟಿದವರು. ಛಾಂದೋಗ್ಯ ಭಾಷ್ಯದಲ್ಲಿ ಭೂತಾಭಿಮಾನಿವಾಯು ಅವರನ್ನು ಹಾಗೆ ಪ್ರಧಾನಾಖ್ಯ ಮುಖ್ಯವಾಯುವೂ ಅಪ್ಪಿಗೆ ದೇವತೇ(ಅಭಿಮಾನಿ) ಎಂದೇ ವಿವರಿಸಿದೆ.

**ತಥಾ ವಿಶಿಷ್ಟ ಪ್ರಾಣಾಖ್ಯೋವಾಯುಃ ಸೋಪಾಂಚ ದೇವತಾ । ಅವ್ಯೋಮಾದೇಹಸಂವ್ಯಾಪ್ತೇಃ ತಥಾ ತಸ್ಮಾತ್ಪುರಂದರಃ । ತೇಜೋಭಿಮಾನೀತನ್ನಾಮಾತೇಜೋಹ್ಯೋಜಉದೀರ್ಯತೇ । ತಥಾತಸ್ಮಾದುಮಾಚೈವ ಸಾಚಾಕಾಶಾಭಿಮಾನೀತಿ । ತದುಕ್ತಂ ಕಾಠಕಭಾಷ್ಯೇ । ಸೋಮವಿತ್ತಪ ಸೂರ್ಯಾದ್ಯಾ ಇತಿ । ಪರಿಮಾಣಮಾಹ । ತೇಜಸ ಇತಿ । ಅತ್ರ ಅತ್ರಾಬಗ್ನೀರನಭೋಹಂ ಕೃದಿತಿ ನಿರ್ಣಯೋಕ್ತಿರ್ಮಾನಂ ।**

ದೇಹದಿಂದ ವ್ಯಾಪ್ತನಾದ್ದರಿಂದ ವಾಯುವಿಗೂ ಅಪ್ ಎಂಬ ಹೆಸರಿದೆ ಹಾಗೆ ಇಂದ್ರನು ತೇಜೋಭಿಮಾನಿಯು, ಇಂದ್ರ ಅವನಿಗೆ ತೇಜಸ್ಸೆಂದು ಹೆಸರು. ತೇಜಸ್ಸೆಂದರೂ, ಓಜಸ್ಸೆಂದರೂ ಒಂದೇ ಪರ್ಯಾಯವು. ಹಾಗೆ ಉಮಾ ಆಕಾಶಾಭಿಮಾನಿಯು, ವರುಣನು ಅಪ್ ಅಭಿಮಾನಿ ಎಂದು ಕಾಠಕದಲ್ಲಿ ಹೇಳಿದೆ. ಚಂದ್ರ ಕುಬೇರ, ಸೂರ್ಯ ಇವರೇ ಮೊದಲಾದವರು ಅಪ್ ಅಭಿಮಾನಿಗಳೆಂದು, ಪರಿಮಿತಿ ತೇಜಸ್ತತ್ವದಕ್ಕಿಂತಲೂ ಹತ್ತುಅಂಶ ಕಡಿಮೆಯಾದದು ನಿರ್ಣಯದಲ್ಲಿ ಉದಕ,ಅಗ್ನಿ, ಆಕಾಶಾದಿಗಳಿಗೆ ಹತ್ತು ಹತ್ತು ಅಂಶನ್ಯೂನತೆ ಎಂದು ಹೇಳಿರುವುದೇ ಪ್ರಮಾಣವು. ಅನಿತ್ಯವಾದ ಅಪ್‌ಗೂ ಶರೀರ ಇಂದ್ರಿಯ ವಿಷಯುಕಗಳೆಂದು ಮೂರು ಪ್ರಕಾರತ್ಯೆ ಮತ್ಸ್ಯಾದಿ ಜಲಚರ ಪ್ರಾಣಿಗಳ ಶರೀರವೇ ಅಪ್ ಶರೀರವು. ರಸಗ್ರಾಹಕ ಜಿಹ್ವೆ (ನಾಲಿಗೆ) ಇಂದ್ರಿಯವು. ಸಮುದ್ರ, ನದೀ ಮುಂತಾದ ಉದಕವೇ ವಿಷಯವು. ಹೀಗೆ ಅಪ್ತತ್ವ ನಿರೂಪಣೆಯು.

**ಪೃಥವೀ ತತ್ವವನ್ನು ನಿರೂಪಿಸಲು ವಿಭಾಗವನ್ನು ಹೇಳುತ್ತಾರೆ.**

ಪ.ಸಂ,...ಪೃಥಿವೀ ದ್ವಿವಿಧಾ ತತ್ವಾತತ್ವ ಭೇದಾತ್। ಪುನರ್ದ್ವಿವಿಧಾ ನಿತ್ಯಾನಿತ್ಯಾಚೇತಿ ।

**ತತ್ರೈವ ಪೃಥಿವ್ಯಾಃ ಉಪಾದಾನಮಾಹ**

**ಪ.ಸಂ. ಅನಿತ್ಯಾ ತತ್ವರೂಪಾ ಪೃಥಿವೀ ಗಂಧಜನ್ಯಾ ನಿತ್ಯಾ ತತ್ವಭಿನ್ನಾ ಈಶ ಲಕ್ಷ್ಮೀಮುಕ್ತಸ್ವರೂಪಭೂತಾ ।**

**ತದುಕ್ತಂ ತೃತೀಯಸ್ಕಂಧಭಾಗವತೇ ।**

ಪೃಥಿವೀ ತತ್ವವನ್ನು ನಿರೂಪಿಸಲು ವಿಭಜಿಸುತ್ತಾರೆ. ಪೃಥಿವೀತ್ಯಾದಿಗಳಿಂದ ತತ್ವರೂಪವೆಂದೂ ತತ್ವಭಿನ್ನಗಳೆಂದು ಪೃಥಿವೀ ಎರಡು ವಿಧಗಳಾದುದು ಪುನಃ ನಿತ್ಯಾಽನಿತ್ಯಗಳೆಂದೂ ಎರಡು ವಿಧವಾದುದು. ಅನಿತ್ಯ ಪೃಥಿವಿಯು ಗಂಧ, (ಮಾತ್ರಾ) ದಿಂದ ಹುಟ್ಟಿದುದು. ಇದನ್ನು ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿದೆ.

**ಜ್ಯೋತಿಷಾಂಭೋನುಸಂಸೃಷ್ಟ್ಯಂ ವಿಕುರ್ವದ್ಬ್ರಹ್ಮ ವೀಕ್ಷಿತಂ । ಮಹೀಂಗಂಧ ಗುಣಾಮಾಧಾತ್ ಕಾಲಮಾಯಾಂಶಯೋಗತಃ ಇತಿ । ರಸಮಾತ್ರಾದ್ವಿಕುರ್ವಾಣಾದಂಭಸೋದೈವ ಚೋದಿತಾತ್ । ಗಂಧಮಾತ್ರಮಭೂತ್ತಸ್ಮಾತ್ಪೃಥ್ವೀ ಘ್ರಾಣಸ್ತುಗಂಧಗಃ ಇತಿ ಚ । ದ್ವಿತೀಯಸ್ಕಂಧೇಪಿ । ವಿಶೇಷಸ್ತು ವಿಕುರ್ವಾಣಾದಂಭಸೋ ಗಂಧವಾನಭೂದಿತಿ । ವಿಶೇಷಃ ಪೃಥಿವೀತಿ ತತ್ತಾತ್ಪರ್ಯಂ ।**

ಅಗ್ನಿಯಿಂದ ಮತ್ತು ಉದಕದಿಂದ ಸಮ್ಮಿತವಾದುದು ಪರಮಾತ್ಮನ ದೃಷ್ಟಿಯಿಂದ ವಿಕೃತವಾಗಿ ಗಂಧಗುಣ ಯುಕ್ತವಾದ ಭೂಮಿಯು ಹುಟ್ಟಿತು. ಲಕ್ಷ್ಮೀನಾರಾಯಣರ ಸಂಪರ್ಕದಿಂದ ಗಂಧ ವಿಶಿಷ್ಟ ಭೂಮಿಯಿಂದ ಗಂಧ ಗ್ರಾಹಕವಾದ ಘ್ರಾಣ (ಮೂಗು) ಇಂದ್ರಿಯ ಹುಟ್ಟಿತು. ಮತ್ತು ದ್ವಿತೀಯ ಸ್ಕಂಧ ಭಾಗವತದಲ್ಲಿ, ಉದಕದ ವಿಕಾರದಿಂದ (ವಿಶೇಷ) ಗಂಧಯುಕ್ತ ಪೃಥವೀ ಹುಟ್ಟಿತು ಹೀಗೆ ಹೇಳಿದೆ.

**ನಿತ್ಯ ಪೃಥಿವೀ ಸ್ವರೂಪಮಾಹ । ನಿತ್ಯೇತ್ಯಾದಿನಾ । ಅತ್ರ ಪ್ರಮಾಣಂತು ವೈಕುಂಠಾದೌ ಭಗವಲ್ಲೋಕೇತಾವತ್ ಪೃಥವೀವರ್ತತೇ । ಅನ್ಯಥಾ ತತ್ರ ಗೃಹಾರ ಮಾದೇಃ ಸಂಚಾರಾದೇಶ್ಚ ಅನುಪಪತ್ತೇಃ । ಸಾಚ ಪೃಥಿವೀ ಲಕ್ಷ್ಮ್ಯಾ ಕೈವ । ಲಕ್ಷ್ಮೀಃ ತತ್ತದ್ವಿಶ್ವರೂಪಿಣೀತಿ ಛಾಂದೋಗ್ಯಭಾಷ್ಯೋಕ್ತೇಃ। ಸುಮಧ್ವ ವಿಜಯೇ ಏಕಾದಶಃಸರ್ಗೇ । ಸಮತೀತ ವಿದ್ರುಮ ಭುವಾಂ ಸುಪ್ರಶಾ ಪವಪಲ್ಲ ವಾಗ್ರ್ಯ ನಖರಕ್ತರುಚೇಃ। ಪರಭಾಗತಃ ಸ್ಫಟಿಕ ಕುಟ್ಟಿಮಭೂಃ ಪ್ರಕಟೀ**

**ಕರೋತಿಸಪುನರಾ ಪ್ರಕಟೇತ್ಯಾದಿ ।**

ನಿತ್ಯವಾದ ತತ್ವಭಿನ್ನವಾದ ಪೃಥಿವೀಯು ಈಶ ಲಕ್ಷ್ಮೀ ಮುಕ್ತ ಸ್ವರೂಪವಾದುದು. ಹಾಗಿಲ್ಲವಾದರೆ ವೈಕುಂಠಾದಿ ಭಗವಂತನ ಲೋಕಗಳಲ್ಲಿ ಪೃಥವೀ ಇದೇ, ಇಲ್ಲವಾದರೆ ಅಲ್ಲಿ ಮನೆ, ತೋಟ, ಸಂಚಾರಾದಿಗಳೇ ಇಲ್ಲವಾಗಲೆಂಬ ಪ್ರಸಂಗ ಬರುತ್ತದೆ. ಅಲ್ಲಿರುವ ಪೃಥವೀ ಲಕ್ಷ್ಮೀ ಸ್ವರೂಪವಾದುದೇ. ಲಕ್ಷ್ಮೀದೇವಿಯು, ಆಯಾ ಸ್ವರೂಪಗಳಾಗಿರುತ್ತಾಳೆ ಎಂದು ಛಾಂದೋಗ್ಯ ಭಾಷ್ಯದಲ್ಲಿ ಹೇಳಿರುತ್ತದೆ. ಸುಮಧ್ವವಿಜಯದ ಹನ್ನೊಂದನೇ ಸರ್ಗದಲ್ಲಿ, ವೈಕುಂಠದಲ್ಲಿ ಚಲನ ಮಾಡುವ ಸುಂದರೀಯರ, ಕೆಂಪಾದ ಅಂಗಾಲಿನ, ಉಗುರುಗಳ ಕಾಂತಿಯು ಸ್ಪಟಿಕಮಯವಾದ ಭೂಪ್ರದೇಶಗಳನ್ನು ತಮ್ಮ ಕಾಲಿನ ಕೆಂದಿಮೆಯಿಂದ, ಹವಳದ ಭೂಮಿಯನ್ನಾಗಿ ತೋರಿಸುತ್ತಿದ್ದವೆಂದು ವರ್ಣಿಸಿರುತ್ತಾರೆ.

**ತಥಾ ಮುಕ್ತಧರಾದೇವ್ಯಾ ವೈಕುಂಠಾದೌ ಪೃಥಿವ್ಯಾತ್ಮಕತ್ವಂ । ಮುಕ್ತಾನಾಂ ಕಾಮರೂಪತ್ವಾತ್ ಪೃಥಿವ್ಯಾತ್ಮಕತ್ವಂ ಯುಕ್ತಂ । ಪರಾತ್ಮನಸ್ತು ಮಹಾ ಸಾಮರ್ಥ್ಯೋಪೇತತ್ವಾತ್ ಪೃಥಿವ್ಯಾತ್ಮಕತ್ವಂ ಯುಕ್ತಮೇವ । ಪೃಥಿವ್ಯಭಿಮಾನಿನಮಾಹ ।**

**ತ ಸಂ. ಬ್ರಹ್ಮಾದಯೋಧರಾಚ ತದಭಿಮಾನಿನಃ ।**

**ತದುಕ್ತಮೈತರೇಯಭಾಷ್ಯೇ । ಅತ ಏವ ಪೃಥಿವ್ಯಾದಿ ಸ್ವರೂಪಾಃ ಸನಾದಯಃ ।**

ಧರಾದೇವಿಯು ಮೋಕ್ಷದಲ್ಲಿ ಪೃಥ್ವಿರೂಪಳಾಗಿ ಇರುತ್ತಾಳೆ. ಮುಕ್ತರಿಗೆ ಸ್ವೇಚ್ಛಾರೂಪತೆ ಇದ್ದ ಪ್ರಯುಕ್ತ ಪೃಥಿವೀ ಮೊದಲಾದವುಗಳಾಗಿರುವಿಕೆ ಯುಕ್ತವೇ ಆಗಿರುತ್ತದೆ. ಪರಮಾತ್ಮನಿಗೆ ಮಹಾಸಾಮರ್ಥ್ಯವಿರುವುದರಿಂದ ಪೃಥಿವಿಆದಿ ಅನೇಕಾತ್ಮಕತೇ ಯುಕ್ತವೇ ಆಗಿರುತ್ತದೆ. ಪೃಥಿವಿಗೆ ಅಭಿಮಾನಿಗಳು ಬ್ರಹ್ಮಾದಿಗಳು ಐತರೇಯ ಭಾಷ್ಯದಲ್ಲಿ, ಪೃಥಿವ್ಯಾದಿ ಸ್ವರೂಪಗಳು ಅನಾದಿಗಳೇ ಆಗಿರುತ್ತವೆ ಎಂದು ಹೇಳಿರುತ್ತದೆ.

**ದೇವಾಃ ಪ್ರಾಣಾಶ್ರಿತಾನಿತ್ಯಂ ಗಚ್ಛಂತಿ ಪ್ರಾಣಮನ್ವಪಿ ಪೃಥಿವೀಮಯಂ ಮನಸ್ತತ್ರ ಶೇಷವೀಂದ್ರ ವಿಶೇಷಕಾ ಇತಿ । ಛಾಂದೋಗ್ಯಭಾಷ್ಯೇಪಿ । ತೇಜೋಭಿಮಾನಿನೀಲಕ್ಷ್ಮೀಃ ಪ್ರಾಣ ಸ್ತದಭಿಮಾನವಾನ್। ಅನ್ನಾಭಿಮಾನೀ ರುದ್ರಶ್ಚತಿಸ್ರಸ್ತಾದೇವತಾಃ ಪುರಾ । ತೇಜ ಸಂಸ್ಥಾತು ಸಾದೇವೀ**

**ಪ್ರಾಣೋಪ್ಯುಸ್ಥಿತ ಯೇವ ಚ । ತತಸ್ತೇಜ ಸಯೇವಾಪೋ ಜಾಯಂತೇಽನ್ನ ಸ್ಥಿತೋಹರಃ ।**

ಎಲ್ಲಾ ರುದ್ರಾದಿದೇವತೆಗಳು ಪ್ರಾಣನನ್ನೇ ಆಶ್ರಯಿಸಿರುತ್ತಾರೆ. ಪ್ರಾಣನನ್ನು ಅನುಸರಿಸಿಯೇ ಹೋಗುತ್ತಾರೆ. ಮನಸ್ಸು ಪೃಥಿವೀಮಯವಾದುದು. ಶೇಷಗರುಡರೇ ಅಲ್ಲಿ ವಿಶಿಷ್ಟರಾದವರು. ಇನ್ನೂ ಛಾಂದೋಗ್ಯಭಾಷ್ಯದಲ್ಲಿ ಲಕ್ಷ್ಮೀದೇವಿಯು ತೇಜೋಭಿಮಾನಿಯು ಪ್ರಾಣನು ಅಪ್ ಅಭಿಮಾನಿಯು, ರುದ್ರನು ಅನ್ನಾಭಿಮಾನಿಯು. ಹೀಗೆ ಮೊದಲು ಮೂರು ದೇವತೆಗಳು. ಲಕ್ಷ್ಮೀದೇವಿಯು ತೇಜಸ್ಸಿನಲ್ಲಿ ಸ್ಥಿತಳು ಪ್ರಾಣನು ಅಪ್‌ನಲ್ಲಿ ಆದ್ದರಿಂದಲೇ ತೇಜಸ್ಸಿನಿಂದ ಅಪ್ ಹುಟ್ಟಿತು ಅಪ್‌ನಿಂದ ಅನ್ನವು ಅನ್ನದಲ್ಲಿ ಹರನು.

**ಜಾಯತೇತೊದ್ಭ್ಯ ಏವಾನ್ನಂ ಪೃಥಿವೀತ್ಯನ್ನರೂಪಿಣೀತಿ । ಧರಾಚೇತಿ । ತದುಕ್ತಂ ನಿರ್ಣಯೇ । ಪಂಚಭೂತಾವರಾಯಾ । ತಸ್ಯಾಂ ಜಜ್ಞೇ ನರಕಃ ಶ್ರೀವರಾಹಾದಿತಿ ।**

ಉದಕದಿಂದ ಅನ್ನ ಹುಟ್ಟಿತು ಪೃಥಿವಿಯೇ ಅನ್ನರೂಪಳು (ಅಭಿಮಾನಿ) ಇವಳಿಗೆ ಧರಾ ಎನ್ನುತ್ತಾರೆ. ಇವಳಲ್ಲಿ ಶ್ರೀವರಾಹ ಪರಮಾತ್ಮನಿಂದ ನರಕನು ಹುಟ್ಟುವವನಾದನು.

**ಪ.ಸಂ. ಅದ್ಭಿರ್ದಶಾಂಶನ್ಯೂನಾ । ಬ್ರಹ್ಮಾಂಡಾದ್ದ್ವಿಗುಣಪರಮಾಣಾ ।**

**ಅಬಗ್ನಿರನಭೋಹಂಕೃದಿತಿ ನಿರ್ಣಯೋಕ್ತೇಃ । ಅಂಡಾತ್ತು ದ್ವಿಗುಣಾ ಪೃಥ್ವೀತಿ ಪ್ರಮಾಣಾಚ್ಚೇತ್ಯರ್ಥಃ । ತೃತೀಯ ಸ್ಕಂಧತಾತ್ಪರ್ಯೇಽಪಿ । ಪೃಥಿವೀಂ ವಿಶೇಷ ಇತ್ಯಾಹುಃ ಶಬ್ದಾದೀನಾಂ ಬಹುತ್ವತಃ । ಸಾಸೂಕ್ಷ್ಮತ್ವಾವೃಣೋದಂಡಂ ದ್ವಿಗುಣಾತ್ತುದಶೋತ್ತರಾಃ । ಅಬಾದಯಃ ಪ್ರಕೃತ್ಯಂತಾ ಇತಿ ।**

ಪೃಥಿವಿಯ ಪರಿಮಿತಿಯನ್ನು ಹೇಳುತ್ತಾರೆ. ಪೃಥಿವಿಯು ಬ್ರಹ್ಮಾಂಡದಿಂದ ದ್ವಿಗುಣ ಪರಿಮಿತಿಯಾದುದು. ನಿರ್ಣಯದಲ್ಲಿ ನೀರು, ಬೆಂಕಿ, ಆಕಾಶ ಅಹಂಕಾರಾದಿಗಳು ಹತ್ತು ಹತ್ತು ಅಂಶದಿಂದ ಕಡಿಮೆಯಾದುದು ಮೇಲಿನಿಂದ ಎಂದು ಹೇಳಿರುವ ಪ್ರಮಾಣದಂತೆಯೇ, ಪೃಥ್ವಿಗೆ ವಿಶೇಷವೆಂದೂ ಪರ್ಯಾಯವುಂಟು. ಶಬ್ದಾದಿಗಳು ಬಹುವಾಗಿ ಸೂಕ್ಷ್ಮಗಳಾದ್ದರಿಂದ ಬ್ರಹ್ಮಾಂಡವನ್ನು ಆವರಿಸಿಕೊಂಡಿದೆ. ಪೃಥ್ವಿ ಆರಂಭಿಸಿ ಪ್ರಕೃತಿ ಪರ್ಯಂತವಾಗಿ ಒಂದರಕ್ಕಿಂತಲೂ ಒಂದೊಂದು ಹತ್ತು ಅಂಶ ಅಧಿಕವಾದ್ದರಿಂದ ಎಲ್ಲಾ ತತ್ವಗಳೂ ಬ್ರಹ್ಮಾಂಡವನ್ನು ಸುತ್ತು ಸುತ್ತಾಗಿ ಆವರಿಸಿಕೊಂಡಿರುವವುಗಳಾಗಿವೆ. ಅನಿತ್ಯ ಪೃಥ್ವಿಗೂ ಶರೀರ ಇಂದ್ರಿಯ ವಿಷಯಗಳೆಂಬ ಮೂರು ಭಾಗಗಳುಂಟು. ಮಾನವಾದಿ

ಭೂಸಂಚರಿಸುವ ದೇಹಗಳು ಯೋನಿಜ, ಅಂಡಜ, ಶ್ವೇತಜ, ಉದ್ಭಿಜ ಇತ್ಯಾದಿಗಳು. ನಾಸಿಕೇಂದ್ರಿಯ ಜಡಪದಾರ್ಥಗಳೆಲ್ಲವೂ ವಿಷಯಗಳೇ ಆಗಿವೆ.

**ಇದಾನೀಂ ತತ್ತ್ವಾನಾಂ ತದ್ಭಿನ್ನಾನಾಂಚ ಸ್ವರೂಪಂ ಸ್ಥಿತಿಂಚ ಸಂಗೃಹ್ಯ ಆಹ ।**

**ಪ.ಸಂ. ಅವ್ಯಕ್ತ ಮಾರಭ್ಯಪೃಥ್ವಿತತ್ವಪರ್ಯಂತಾನಿ**
**ಬ್ರಹ್ಮಾಂಡಾದ್ಬಾಹ್ಯಾನಿತದಾವರಣಾನಿ ।**

**ಗುಣತ್ರಯಮಾರಭ್ಯೇತ್ಯರ್ಥಃ । ಬ್ರಹ್ಮಾಂಡಾದ್ಬಾಹ್ಯಾನೀತಿ । ತದುಕ್ತಂ ತೃತೀಯ ಸ್ಕಂಧ ಭಾಗವತೇ । ಏತ ದಂಡಂ ವಿಶೇಷಾಖ್ಯಂ ಕ್ರಮವೃಂಧ್ವೈರ್ದಶೋತ್ತರೈಃ ತೋಯಾದಿಭಿಃ ಪರಿವೃತಂ ಪ್ರಧಾನೇನಾ-ವೃತಂಬಹಿರಿತಿ ನಿರ್ಣಯೇಪಿ । ಅಬಗ್ನೀರನಭೋ ಹಂಕೃನ್ಮಹತ್ತತ್ತ್ವ ಗುಣತ್ರಯೈಃ । ಕ್ರಮಾದ್ದಶೋತ್ತರೈರೇತದಾವೃತಂ ಪರತಸ್ತಥೇತಿ ।**

ಹೀಗೆ ತತ್ವಗಳ ತತ್ವಭಿನ್ನಗಳ ಸ್ವರೂಪನ್ನೂ, ಸ್ಥಿತಿಯನ್ನೂ ಹೇಳುತ್ತಾರೆ. ಗುಣತ್ರಯ ಅವ್ಯಕ್ತತತ್ವವನ್ನಾರಂಭಿಸಿ ಪೃಥ್ವೀತತ್ವಪರ್ಯಂತ ತತ್ವಗಳು ಬ್ರಹ್ಮಾಂಡದ ಹೊರಗಿರುವವುಗಳು ಹಾಗೂ ಆವರಣಗಳಾದವುಗಳು ವಿಶೇಷ ಸಂಜ್ಞಿತವಾದ ಬ್ರಹ್ಮಾಂಡವು ಕ್ರಮವಾಗಿ ಹತ್ತು ಭಾಗ ಅಧಿಕಗಳಾದ ಉದಕಾದಿಗಳಿಂದ ಪ್ರಧಾನ ಪರ್ಯಂತ ಹೊರಗೆ ಸುತ್ತು ಆವರಣಗಳಿರುತ್ತವೆ.

ಹೀಗೆ ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿರುತ್ತದೆ. ನಿರ್ಣಯದಲ್ಲಿಯೂ ಉದಕ, ಅಗ್ನಿ, ಆಕಾಶ, ಅಹಂಕಾರ ತತ್ತ್ವ ಮಹತ್ತತ್ವ, ಗುಣತ್ರಯಗಳು ಕ್ರಮವಾಗಿ ಹತ್ತು ಭಾಗ ಅಧಿಕ ಪರಿಮಿತಿಗಳುಳ್ಳವುಗಳಾಗಿ ಬ್ರಹ್ಮಾಂಡವನ್ನು ಆವರಣರೂಪವಾಗಿ ಸುತ್ತು ಕಟ್ಟಿಕೊಂಡಿರುತ್ತವೆ ಎಂದು ಹೇಳಿದೆ.

**ತತ್ವಭಿನ್ನಾನಾಂ ಪಂಚಭೂತಾನಾಂ ಕರ್ತಾರಂ ಸ್ಥಾನಂ ಚಾಹ ।**

**ಪ.ಸಂ. ತತ್ವಭಿನ್ನಾನಿ ಆಕಾಶಾದಿ ಪಂಚಭೂತಾನಿ**
**ಬ್ರಹ್ಮಾಂಡಾಂತರ್ಗತಾನಿ ಪರಮಾತ್ಮಜನ್ಯಾನಿ ।**

**ಆತ್ಮನ ಆಕಾಶ ಸಂಭೂತಃ ಇತ್ಯಾದಿಶ್ರುತೇಃ ಪರಮಾತ್ಮಾಕರ್ತಾ । ಸ್ಥಾನಂ ಪ್ರತ್ಯಕ್ಷಾದಿ ಪ್ರಮಾಣಸಿದ್ಧಮಿತಿಭಾವಃ । ನನು ಗುಣತ್ರಯ ಮಾರಭ್ಯಪಂಚತನ್ಮಾತ್ರಾಪರ್ಯಂತಾನಾಂ ತತ್ವಾನಾಂವ್ಯೆಯರ್ಥ್ಯಂ । ತದನಂಗೀಕಾರೇ ಬಾಧಕಾಭಾವಾತ್ ।**

ತತ್ವಭಿನ್ನಗಳಾದ ಪಂಚಮಹಾಭೂತಗಳ ಕರ್ತೃ(ಹುಟ್ಟಿಸುವವನು)ನನ್ನೂ, ಅವುಗಳ ಸ್ಥಾನವನ್ನೂ ಹೇಳುತ್ತಾರೆ. ತತ್ವಭಿನ್ನ ಆಕಾಶಾದಿ ಐದು ಭೂತಗಳೂ ಬ್ರಹ್ಮಾಂಡದ ಒಳಗಿರುವವುಗಳು ಪರಮಾತ್ಮನಿಂದ ಹುಟ್ಟಿದವುಗಳು. ಆತ್ಮನಿಂದಲೇ ಆಕಾಶಾದಿ ಐದು ಭೂತಗಳು ಹುಟ್ಟಿದವು ಎಂದು ಸುಸ್ಪಷ್ಟ ಹೇಳುವ ಶ್ರುತಿಗಳೇ ಪ್ರಮಾಣವು. ಸ್ಥಾನವಾದರೋ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾದುದು ಎಂದು ಆಕ್ಷೇಪಿಸುತ್ತಾರೆ. ಸತ್ವಾದಿ ಗುಣಗಳನ್ನಾರಂಭಿಸಿ ಪೃಥ್ವೀಪರ್ಯಂತ ಪಂಚಭೂತಗಳು, ತನ್ಮಾತ್ರಾಗಳು ಎಲ್ಲಾ ತತ್ವಗಳು (ತದಭಿಮಾನಿದೇವತೆಗಳು) ವ್ಯರ್ಥವಾದವುಗಳೇ. ಈ ತತ್ವಗಳನ್ನಂಗೀಕರಿಸದ ಪಕ್ಷದಲ್ಲಿ ಬಾಧಕವಿರುವುದಿಲ್ಲ.

**ಅಂಗೀಕಾರೇಚ ಸಾಧಕಾಭಾವಾತ್ । ನಚ ಬ್ರಹ್ಮಾಂಡೋತ್ಪತ್ತ್ಯರ್ಥಮೇವ ತತ್ಸ್ವೀಕ್ರಿಯತ ಇತಿ ವಾಚ್ಯಂ । ಪಂಚ ಭೂತೈರೇವತದುತ್ಪತ್ತಿ ಸಂಭವಾತ್। ನಚ ಪಂಚಭೂತೋಪಾದಾನತಯಾ ತತ್ಸ್ವೀಕಾರ ಇತಿ ವಾಚ್ಯಂ । ಮೂಲ ಪ್ರಕೃತೇರೇವ ತದುಪಾದಾನತ್ವೋಪಪತ್ತೇಃ । ಇತ್ಯಾಶಂಕ್ಯ ತದಸಂಗೀಕಾರೇ ಬಾಧಕಮಾಹ ।**

**ಪ.ಸಂ. ಮಹದಾದ್ಯನಂಗೀಕಾರೇ ಬ್ರಹ್ಮಾಂಡೋತ್ಪತ್ತಿರ್ನಸ್ಯಾತ್ ।**

ಅಂಗೀಕರಿಸಿದರೆ ಸಾಧಕವೂ ಇಲ್ಲ ಬ್ರಹ್ಮಾಂಡದ ಉತ್ಪತ್ತಿಗಾಗಿ ತತ್ವಗಳನ್ನು ಒಪ್ಪಬೇಕು ಎಂದರೆ, ಹಾಗೆನ್ನಬಾರದು. ಪಂಚಭೂತಗಳಿಂದಲೇ ಬ್ರಹ್ಮಾಂಡ ಉತ್ಪತ್ತಿ ಕೂಡುತ್ತದೆ. ಪಂಚಭೂತಗಳ ಉಪಾದಾನಾರ್ಥವಾಗಿ ತತ್ವಗಳೂ ಎಂತಲೂ ಎನಬಾರದು. ಮೂಲ ಪ್ರಕೃತಿಯಿಂದಲೇ ಭೂತೋಪಾದಾನತ್ವವು ಯುಕ್ತವಾಗಲು ಮಹತ್ತತ್ವಾದಿಗಳು ವ್ಯರ್ಥವು.

ಹೀಗೆ ಆಕ್ಷೇಪಿಸಿ ಮಹತ್ತತ್ವಾದಿಗಳನ್ನು ಒಪ್ಪದ ಪಕ್ಷದಲ್ಲಿ ಬಾಧಕವನ್ನು ಹೇಳುತ್ತಾರೆ. ಮಹತ್ತತ್ವಾದಿಗಳನ್ನು ಒಪ್ಪದ ಪಕ್ಷದಲ್ಲಿ ಬ್ರಹ್ಮಾಂಡೋತ್ಪತ್ತಿಯೇ ಆಗುವುದಿಲ್ಲವು.

**ನಚ ಪಂಚ ಭೂತೈರೇವ ಬ್ರಹ್ಮಾಂಡೋತ್ಪತ್ತಿ ರಸ್ತ್ವಿತಿವಾಚ್ಯಂ। ಚತುರ್ವಿಂಶತಿ ತತ್ವಾಂಶೈರೇವ ಬ್ರಹ್ಮಾಂಡೋತ್ಪತ್ತೇಃ ಅನುಪದಮೇವ ವಕ್ಷ್ಯಮಾಣತ್ವಾತ್। ದೂಷಣಾಂತರಮಾಹ ।**

**ಪ.ಸಂ. ತತ್ತ್ವದ್ದೇವಾನಾಂ ಅಂಶಿನಾಂ ಅವಸ್ಥಾನಾನಿ ನಸ್ಯುಃ ।**

**ನಚ ಬ್ರಹ್ಮಾಂಡಾಂತರ್ಗತ ಬ್ರಹ್ಮಾದಿ ದೇವೇಭ್ಯಃ ವ್ಯತಿರಿಕ್ತಾಸ್ತತ್ತದಂಶಿನಃ ಏವನ ಸಂತೀತಿವಾಚ್ಯಂ । ಪ್ರಥ**

**ಮಸ್ಕಂಧ ತಾತ್ಪರ್ಯ ವಿರೋಧ ಪ್ರಸಂಗಾತ್। ತಥಾಹಿ ತತ್ರೋಕ್ತಂ । ನ ದೇವಾನಾಂ ನ ದೇವೀನಾಂ ಸಾಮಸ್ತ್ಯೇನ ಜನಿರ್ಭುವಿ। ಅಂಶಾಂಶೇನೈವ ಜಾಯಂತೇ ಸರ್ವೇತ್ವಾಜಾನಜಾದಯಃ ಇತಿ ।**

ಪಂಚ ಭೂತಗಳಿಂದಲೇ ಬ್ರಹ್ಮಾಂಡ ಉತ್ಪತ್ತಿ ಎಂದು ಎನಕೂಡದು. ಇಪ್ಪತ್ನಾಲ್ಕು ತತ್ವಗಳಿಂದಲೇ ಬ್ರಹ್ಮಾಂಡ ಉತ್ಪತ್ತಿ ಎಂದು ತ್ವರಿತದಲ್ಲಿಯೇ ಸಾಧಿಸುವರಿದ್ದೇವೆ. ದೂಷಣಾಂತರವನ್ನೂ ಹೇಳುತ್ತಾರೆ. ಆಯಾ ತತ್ವಾಭಿಮಾನಿ ದೇವತೆ ಅಂಶಿಗಳಿಗೆ ಸ್ಥಾನವೇ ಇಲ್ಲವಾಗಬೇಕಾದೀತು. ಬ್ರಹ್ಮಾಂಡದ ಒಳಗೆ ಬ್ರಹ್ಮಾದಿದೇವತೆಗಳಿಂದ ವ್ಯತಿರಿಕ್ತ ದೇವತೆಗಳಿಲ್ಲವೆಂದರೆ ಪ್ರಥಮಸ್ಕಂಧ ತಾತ್ಪರ್ಯ ವಿರೋಧ ಬರುತ್ತದೆ. ಅಲ್ಲಿ ಹೀಗೆ ಹೇಳಿದೆ. ಗಂಡು ದೇವತೆಗಳಾಗಲಿ ಹೆಣ್ಣು ದೇವತೆಗಳಾಗಲಿ ಭೂಲೋಕದಲ್ಲಿ ಒಂದೇ ಸರಿ ಜನ್ಮವಿಲ್ಲ. ಅಂಶಾಂಶಗಳಿಂದಲೇ ಅವರುಗಳ ಅವತಾರವು ಅವರೇ "ಅಜಾನಜ" ದೇವತೆಗಳು ಎಂದು ಹೇಳಿದೆ.

**ಅತ್ರ ಬ್ರಹ್ಮಾಂಡಾದ್ಬಹಿರ್ಯೇ ಅಂಶಿನಃ ತೇಷಾಂ ಯೇ ಅಂಶಾಃ ಬ್ರಹ್ಮಾಂಡಾಂತರ್ಗತಾಃ ತದಂಶೇನ ದೇವಾಜಾಯಂತೇ ಇತಿ ಹಿ ತದರ್ಥಃ । ನಚ ಬ್ರಹ್ಮಾಂಡಾಂತರ್ಗತಾಃ ಯೇ ಅಂಶಿನಃ ಇಂದ್ರಾದಯಃ ತದಂಶೇನ ಅರ್ಜುನಾದಯೋ ಜಾಯಂತ ಇತ್ಯರ್ಥಃ ಕಿಂನಸ್ಯಾತ್ ಇತಿ ವಾಚ್ಯಂ । ದೇವಾನಾಮಿತ್ಯಸ್ಯ ಅನನ್ವಯಾಪತ್ತೇಃ ।**

ಬ್ರಹ್ಮಾಂಡದ ಹೊರಗೆ ಯಾವ ದೇವತೆಗಳ ಅಂಶಗಳಿವೆಯೋ ಆ ದೇವತೆಗಳ ಅಂಶವೇ ಬ್ರಹ್ಮಾಂಡದ ಒಳಗೆ ಆ ಅಂಶಗಳೇ ಆಯಾ ತತ್ವಾಭಿಮಾನಿಗಳಾಗಿ ಹುಟ್ಟುತ್ತಾರೆ ಎಂದು ಅಭಿಪ್ರಾಯವು ಅಂದರೆ, ಆ ಪ್ರಮಾಣಕ್ಕೆ ಹೀಗೂ ಏಕೆ ಅರ್ಥ ಮಾಡಬಾರದು? ಬ್ರಹ್ಮಾಂಡದ ಒಳಗೆ ಇಂದ್ರಾದಿ ಅಂಶಗಳಿದ್ದಾರೆ ಅವರ ಅಂಶಗಳಾದ ಅರ್ಜುನಾದಿಗಳು ಹುಟ್ಟುತ್ತಾರೆಂದು, ಹಾಗೆ ಅರ್ಥಮಾಡಬಾರದು, ಏಕೆಂದರೆ ದೇವ ಪದಕ್ಕೆ ಅರ್ಥ ಅನನ್ವಿತವಾಗುತ್ತದೆ.

**ನಹಿ ಬ್ರಹ್ಮಾಂಡಾತರ್ಗತಾನಾಂ ಇಂದ್ರಾದಿದೇವಾನಾಂ ಅಂಶಾಂಶಾಃ ಅರ್ಜುನಾದಯಃ।ಅತೋ ಬ್ರಹ್ಮಾಂಡಾದ್ಬಹಿರೇವ ದೇವಾನಾಂ ಅಂಶಿನ ಸಂತಿ। ತೇಷಾಮವಸ್ಥಾನಾರ್ಥಂ ಮಹದಾದೀನಾಂ ಅಂಗೀಕರ್ತವ್ಯತ್ವಾತ್ ।**

ಬ್ರಹ್ಮಾಂಡದ ಒಳಗಿರುವ ಇಂದ್ರಾದಿದೇವತೆಗಳ ಅಂಶಾಂಶಗಳೇ ಅರ್ಜುನಾದಿಗಳು. ಅವರಿಗೆ ಮನುಷ್ಯತೆಯಾಗಲಿ ದೇವತೆಯಾಗಲಿ

ಇರುವುದಿಲ್ಲವಾದ್ದರಿಂದ ದೇವತೆಗಳ ಅಂಶವೆಂದರೆ ಅಂಶಾಂಶವೇ ಬೇರೆ ಬ್ರಹ್ಮಾಂಡದಲ್ಲಿರುವ ತತ್ವಾಭಿಮಾನಿ ದೇವತೆಗಳೆಲ್ಲರೂ ಅಂಶಗಳೇ. ಇವರ ಅಂಶಿಯೇ ಬ್ರಹ್ಮಾಂಡದ ಹೊರ ಆವರಣ ತತ್ವಗಳಲ್ಲಿರುವವುಗಳಾದ್ದರಿಂದ ಅಜಾನಜಾದಿ ದೇವತೆಗಳ ಸ್ಥಿತಿಗಾಗಿ ಮಹತ್ತತ್ವಾದಿಗಳನ್ನು ಅಂಗೀಕಾರ ಮಾಡಬೇಕು.

**ನಚ ತೇಷಾಂ ಏಕಸ್ಮಿನ್ನೇವ ತತ್ತ್ವೇ ಅವಸ್ಥಾನಮಸ್ತ್ವಿತಿ ವಾಚ್ಯಂ । ಉತ್ತಮಾನಾಂ ರಾಜಾಧಿರಾಜಾನಾಂ ದೇವನಾಮಧಮಾಭಿಮನ್ಯಮಾನೇ ಅಲ್ಪೇಗೇಹೇ ವಸ್ಥಾನಸ್ಯ ಅಧಮಾನಾಂ ಉತ್ತಮಾಭಿಮನ್ಯಮಾನೇ ಮಹತಿಗೇಹೇ ಮಹಾರಾಜವೈಭವಯುಕ್ತೇ ಅವಸ್ಥಾನಸ್ಯ ಚಲೋಕದೃಷ್ಟ್ಯನನುಕೂಲತ್ವಾತ್ । ದೂಷಣಾಂತರಮಾಹ ।**

**ಪ.ಸಂ. ತತ್ತತ್ತತ್ವ ಪರ್ಯಂತ ವ್ಯಾಪ್ತ ಭಗವದ್ರೂಪಾಪರೋಕ್ಷ ಜ್ಞಾನಂಚ ದೇವಾನಾಂ ನಸ್ಯಾತ್ ।**

**ಏತಚ್ಚ ದೇವಾನಾಂ ವ್ಯಾಪ್ತರೂಪಾಪರೋಕ್ಷಜ್ಞಾನಪ್ರಕರಣೇ ಸಮ್ಯಗುಪಪಾದ ಇಷ್ಯಾಮಃ । ದೂಷಣಾಂತರಂ ಚಾಹ ।**

**ಪ.ಸಂ. ತತ್ತತ್ಪ್ರತಿಪಾದಕ ಪ್ರಮಾಣ ವಿರೋಧಶ್ಚ ಸ್ಯಾತ್ ।**

**ಪ್ರಮಾಣಾನಿತು ಪೂರ್ವೋದಾಹೃತಾನಿ ಭಾಗವತಾದೀನಿ ಬೋದ್ಧವ್ಯಾನಿ।**

## ॥ ಇತಿ ಪಂಚಭೂತ ಪ್ರಕರಣಂ ಸಮಾಪ್ತಂ ॥

ಆದರೂ ಬ್ರಹ್ಮಾಂಡದ ಹೊರಗೆ ಒಂದೇ ತತ್ವದಿಂದಲೇ ಎಲ್ಲಾ ದೇವತೆಗಳ ಅಂಶಿಗಳಿಗೂ ಸ್ಥಿತಿಯನ್ನು ಹೇಳೋಣ, ಮಹದಾದಿ ಅನೇಕ ತತ್ವಗಳನ್ನು ಏಕೆ ಒಪ್ಪಬೇಕು, ಎನಬಾರದು, ಏಕೆಂದರೆ ಹೇಗೆ ರಾಜಾಧಿರಾಜರಿಗೆ ಅಲ್ಪ ಭೋಗವುಳ್ಳ ಅಲ್ಪ ಸ್ಥಾನದಲ್ಲಿರುವಿಕೆ ಅಧಮ ಸಾಮಾನ್ಯ ಜನರಿಗೆ ಅತಿಭೋಗಯುಕ್ತ ವಿಶಾಲ ಸ್ಥಾನದಲ್ಲಿರುವಿಕೆ ಹೇಗೆ ಲೋಕ ದೃಷ್ಟಿಯಿಂದಲೂ ಅನಾನುಕೂಲವೋ, ಅಯುಕ್ತವೋ ಹಾಗೆ ಎಲ್ಲಾ ದೇವತಾಂಶಿಗಳಿಗೆ ಬ್ರಹ್ಮಾಂಡದ ಹೊರಗೆ ಒಂದೇ ತತ್ವದಲ್ಲಿರುವಿಕೆ ಅಯುಕ್ತವಾದ್ದರಿಂದ ಮಹತ್ತತ್ವಾದಿ ಅನೇಕ ತತ್ವಗಳನ್ನು ತದಭಿಮಾನಿ ಅಂಶಿಗಳನ್ನು ಮಹತ್ತತ್ತ್ವಾದಿಗಳ ಬ್ರಹ್ಮಾದಿ ಅಂಶಗಳ ಸ್ಥಾನಗಳನ್ನೂ ಒಪ್ಪಲೇಬೇಕು. ಒಪ್ಪದ ಪಕ್ಷದಲ್ಲಿ ದೂಷಣಾಂತರವನ್ನೂ ಹೇಳುತ್ತಾರೆ. ಗುಣತ್ರಯಾ ಆರಂಭಿಸಿ ಆವರಣಗಳಾಗಿರುವ ಮಹದಾದಿ ತತ್ವಗಳ ತದಭಿಮಾನಿ ದೇವತೆಗಳನ್ನು ಹೇಳುವ ಪ್ರಮಾಣಗಳ ವಿರೋಧವೂ ಬರುತ್ತದೆ. ಪ್ರಮಾಣಗಳಾದರೂ ಪೂರ್ವದಲ್ಲಿಯು ಮುಂದೂ ಉದಾಹರಿಸುವ ಭಾಗವತಾದಿ

ಅನೇಕ ಪ್ರಮಾಣಗಳು ಎಂದು ತಿಳಿಯಬೇಕು.

ಹೀಗೆ ದ್ರವ್ಯದಲ್ಲಿ ಹದಿಮೂರನೆಯದಾದ ಪಂಚಮಹಾಭೂತ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೧೪. ಬ್ರಹ್ಮಾಂಡ ಪ್ರಕರಣ

**ಇದಾನೀಂ ಬ್ರಹ್ಮಾಂಡ ನಿರ್ಮಾಣ ಪ್ರಕಾರಮಾಹ ।**

**ಪ.ಸಂ. ವಿಶ್ವೈಸ್ತತ್ತ್ವೈರ್ವಿಷ್ಣುಃವೀರ್ಯಾತ್ಮನಾ ಪರಿಣಾಮ್ಯ ಬ್ರಹ್ಮಾಂಡಮಸೃಜತ್ ।**

**ನನು ಬ್ರಹ್ಮಾಂಡಸ್ಯ ಪೂರ್ವೋಕ್ತ ತತ್ತ್ವೋಪಾದಾನಕತ್ವೇನ ಪೃಥಕ್ ದ್ರವ್ಯತ್ವೇನ ಪರಿಗಣನಂ ನಸ್ಯಾತ್। ಅನ್ಯಥಾ ಬ್ರಹ್ಮಾಂಡಾಂತರ್ಗತ ಘಟ ಪಟಾದೀನಾಮಪಿ ಪೃಥಕ್ ದ್ರವ್ಯತ್ವೇನ ಪರಿಗಣನಾಪತ್ತೇಃ । ಇತಿ ಚೇನ್ನ। ಮಹದಾದೀನಾಮಸಂಸೃಷ್ಟತ್ವೇನ ಬ್ರಹ್ಮಾಂಡಸ್ಯ ಚ ಸಂಸೃಷ್ಟತ್ವೇನ ಚ ಉಭಯೋರ್ಭಿನ್ನ ಪ್ರಕಾರತ್ವಾತ್ । ತದುಕ್ತಂ ತತ್ತ್ವಸಂಖ್ಯಾನೇ । ಅಸಂಸೃಷ್ಟಂ ಮಹಾನಹಂ । ಬುದ್ಧಿರ್ಮನಃ ಖಾನಿ ದಶಮಾತ್ರಾಭೂತಾನಿ ಪಂಚಚ । ಸಂಸೃಷ್ಟಮಂಡಂ ತದ್ಗಂಚ ಸಮಸ್ತಂ ಸಂಪ್ರಕೀರ್ತಿತಂ ಇತಿ ।**

ಈ ಪ್ರಕರಣದಲ್ಲಿ ಬ್ರಹ್ಮಾಂಡದ ನಿರ್ಮಾಣ (ತಯಾರಿಕೆ) ಪ್ರಕಾರ (ಕ್ರಮ)ವನ್ನು ಹೇಳುತ್ತಾರೆ. ಶ್ರೀಮನ್ನಾರಾಯಣನು ಹಿಂದೆ ಹೇಳಿದ ಇಪ್ಪತ್ನಾಲ್ಕು ತತ್ತ್ವಗಳನ್ನು ತನ್ನ ವೀರ್ಯವಾಗಿ ಪರಿಣಾಮ(ವಿಕಾರ)ಗೊಳಿಸಿ ಲಕ್ಷ್ಮೀದ್ವಾರ ಬ್ರಹ್ಮಾಂಡವಾಗಿ ಸೃಷ್ಟಿಮಾಡಿದನು ಎಂದು ಆಕ್ಷೇಪಿಸುತ್ತಾರೆ. ಬ್ರಹ್ಮಾಂಡವು ಹಿಂದೆ ಹೇಳಿದ ತತ್ತ್ವಗಳಿಂದಲೇ ಪರಿಣಾಮವಾಗಿ ಹುಟ್ಟಿದ್ದಾದರೆ, ಪ್ರತ್ಯೇಕ ದ್ರವ್ಯ ಪದಾರ್ಥವೆಂದು ಏಕೆ ಪರಿಗಣಿಸಬೇಕು. ಹಾಗೆ ಪ್ರತ್ಯೇಕ ದ್ರವ್ಯಾದಿಗಳಾಗಿ ಪರಿಗಣನೆ ಮಾಡುವುದಾದರೆ, ಪ್ರತಿ ಘಟ ಪಟಾದಿಗಳಿಗೂ ಪ್ರತ್ಯೇಕ ದ್ರವ್ಯಾದಿಗಳಾಗಿ ಎಣಿಕೆ ಬರಬೇಕಾದೀತು. ಅಂದರೆ ಹಾಗೆನಬಾರದು. ಬ್ರಹ್ಮಾಂಡದ ಹೊರಗಿನ ಮಹತ್ತತ್ತ್ವಾದಿಗಳಿಗೆ ಅಸಂಸೃಷ್ಟವೆಂದೂ (ಶುದ್ಧವೆಂದೂ), ಬ್ರಹ್ಮಾಂಡಕ್ಕೆ ಸಂಸೃಷ್ಟ (ಮಿಶ್ರ)ಗಳೆಂದೂ ಎರಡಕ್ಕೂ ಪ್ರಕಾರಗಳು ಬೇರೆ ಆಗಿರುವುದರಿಂದ ಇದನ್ನು

ತತ್ತ್ವಸಂಖ್ಯಾನದಲ್ಲಿ ಹೊರ ಮಹತ್ತತ್ತ್ವವು ಅಸಂಸೃಷ್ಟವು (ಅಮಿಶ್ರಿತವು) ಬ್ರಹ್ಮಾಂಡವಾದರೋ ಬುದ್ಧಿ, ಮನಸ್ಸು, ಹತ್ತು ಇಂದ್ರಿಯಗಳು, ಮಾತ್ರಾಗಳು, ಪಂಚಭೂತಗಳು ಇವುಗಳಿಂದ ಸಂಸೃಷ್ಟವಾದುದು ಬ್ರಹ್ಮಾಂಡದ ಒಳಗಿರುವವುಗಳೆಲ್ಲವು ಪ್ರತ್ಯೇಕ ಮಿಶ್ರಿತ (ಸಂಸೃಷ್ಟ)ಗಳಾದವುಗಳೇ ಎಂದು ಹೇಳಿರುತ್ತದೆ.

**ಯದ್ವಾ । ಮಹದಾದ್ಯಾರಭ್ಯ ಪೃಥವೀ ಪರ್ಯಂತಂ ಪ್ರಾಕೃತಂ । ಅಂಡಂತು ವಿಕೃತಂ । ಅತೋ ಭೇದಾದಂಡಸ್ಯ ಪೃಥಗುಕ್ತೇಃ । ತದುಕ್ತಂ ತೃತೀಯ ಸ್ಕಂಧ ತಾತ್ಪರ್ಯೇ । ಅವ್ಯಕ್ತಾದ್ಯಾಃ ಪೃಥಿವ್ಯಂತಾಃ । ಸರ್ವಾಃ ಪ್ರಕೃತಯಸ್ಮೃತಾಃ। ತದುಪಾದಾನಕಃ ಸರ್ಗಃ ಪ್ರಾಕೃತ್ಯಪರಿಪಠ್ಯತೇ । ಅಂಡಂತು ವಿಕೃತಂ ಜ್ಞೇಯಂ ತಜ್ಞಂ ವೈಕೃತಮುಚ್ಯತ ಇತಿ ।**

ಅಥವಾ ಮಹತ್ತತ್ತ್ವಾರಂಭಿಸಿ ಪೃಥವೀತತ್ವಪರ್ಯಂತವು ಪ್ರಾಕೃತವು, ಬ್ರಹ್ಮಾಂಡವಾದರೋ ವಿಕೃತವು ಹೀಗೆ ಭೇದವಿರುವುದರಿಂದ ಪ್ರತ್ಯೇಕತೆ ಯುಕ್ತವೇ ಆಗಿರುತ್ತದೆ. ಇದನ್ನೂ ತೃತೀಯಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ. ಅವ್ಯಕ್ತ ತತ್ವವನ್ನಾರಂಭಿಸಿ ಪೃಥಿವೀ ತತ್ವದ ತನಕ ಎಲ್ಲವು ಪ್ರಕೃತಿಗಳೆಂದು, ಅವುಗಳೇ ಉಪಾದಾನ ಕಾರಣಗಳಾಗಿ ಉತ್ಪನ್ನವಾದವುಗಳೆಲ್ಲವು ಪ್ರಾಕೃತಗಳೆಂದು ಹೇಳಿಸಿಕೊಳ್ಳುತ್ತವೆ. ಬ್ರಹ್ಮಾಂಡವನ್ನು ವಿಕೃತವೆಂದೂ ಅದರಿಂದ ಹುಟ್ಟಿದ ಬ್ರಹ್ಮಾಂಡಾಂತಸ್ಥವಾದವುಗಳನ್ನು ವಿಕೃತವೆಂದು ತಿಳಿಯಬೇಕು. ಹೀಗೆ ಹೇಳಿದೆ.

**ಅಥವಾ ಮಹದಾದೀನಿ ಏಕೈಕೋಪಾದಾನಕಾನಿ ಬ್ರಹ್ಮಾಂಡಂತು ಚತುರ್ವಿಂಶತಿತತ್ವೋಪಾದಾನಕಂ । ಅತೋ ಭೇದ ಇತ್ಯಭಿಪ್ರಾಯೋಽಸೋಕ್ತಮೇತ್ಯೈಸ್ತತ್ತ್ವೈರಿತಿ । ನನ್ವೇವಂ ಮಹದಾದ್ಯಾರಭ್ಯ ಪೃಥವೀ ಪರ್ಯಂತಸ್ಯಾಸಂಸೃಷ್ಟತ್ವೇ ಪ್ರಾಕೃತತ್ವಯೋರವಿಶೇಷಾದ್ಭೇದೇನ ಪರಿಗಣನಂ ನಸ್ಯಾದಿತಿ ಚೇತ್ಸತ್ಯಂ । ಮಹದಾದ್ಯಾರಭ್ಯ ಪೃಥಿವೀಪರ್ಯಂತಂ ಸೂಕ್ಷ್ಮರೂಪಾಣಿ ಸಂತಿ । ತತ್ರ ಪೂರ್ವಪೂರ್ವತತ್ತ್ವೈರುತ್ತರೋತ್ತರಸ್ಯ ಉಪಚಯಃ। ಅತೋ ವಿಶೇಷಾದ್ಭೇದಃ। ತದುಕ್ತಂ ತತ್ವಸಂಖ್ಯಾನಟೀಕಾಯಾಂ।**

ಅಥವ ಮಹತ್ತತ್ತ್ವಾದಿಗಳು, ಒಂದೊಂದು ಉಪಾದಾನಕ (ವಿಕಾರದಿಂದ ಹುಟ್ಟಿದ್ದು) ಬ್ರಹ್ಮಾಂಡ, ಇಪ್ಪತ್ನಾಲ್ಕು ತತ್ತ್ವೋಪಾದಾನ (ವಿಕಾರದಿಂದ ಹುಟ್ಟಿದ್ದು) ಆದ್ದರಿಂದ ಭೇದ ಎಂಬ ಅಭಿಪ್ರಾಯದಿಂದಲೇ ಹೇಳಿರುವುದು ಈ ತತ್ವಗಳಿಂದ ಹುಟ್ಟಿದ್ದೆಂದು, ಸರಿಯೇ ಮಹದಾದಿ ಪೃಥವೀ ಪರ್ಯಂತ ತತ್ವಗಳಿಗೆ ಸಂಸೃಷ್ಟತೆ

ಪ್ರಾಕೃತತೇ ಇರುವುದರಿಂದ ಅವುಗಳಿಗೆ ವಿಶೇಷವೇನೂ ಇಲ್ಲದಿರುವುದರಿಂದ, ಭೇದ ಪರಿಗಣನೆ ಏಕೆ ಮಾಡಬೇಕು ಎಂದರೆ ನಿಜವೇ, ಆದರೆ ಮಹತ್ತತ್ವಾರಂಭಿಸಿ ಪೃಥವೀ ತತ್ವ ಪರ್ಯಂತ ಸೂಕ್ಷ್ಮ ರೂಪಗಳಿವೆ. ಅಲ್ಲಿ ಮೊದಲು ಮೊದಲು ತತ್ವಗಳಿಂದ ಮುಂದು ಮುಂದಿನ ತತ್ವಗಳಿಗೆ ಉಪಚಯ (ತತ್ವಗಳಲ್ಲಿ) ಇದೆ. ಆದ್ದರಿಂದ ಒಂದು ವಿಶೇಷವಿರುವುದರಿಂದ ಭೇದ ವ್ಯವಹಾರವು. ಇದನ್ನು ತತ್ವಸಂಖ್ಯಾನ ಟೀಕೆಯಲ್ಲಿ ಹೇಳಿರುತ್ತದೆ.

**ಸೂಕ್ಷ್ಮರೂಪೇಣ ನಿತ್ಯಾನಾಂ ಮಹದಾದೀನಾಂ ಪ್ರಕೃತ್ಯಾದ್ಯಂಶೈಃ ಉಪಚಯಮಾತ್ರಂ ಕ್ರಿಯತ ಇತಿ ತಾನ್ಯಸಂಸೃಷ್ಟಾನೀತಿ । ತತ್ವವಿವೇಕೇಪಿ। ಭೂತೇಂದ್ರಿಯ ಪ್ರಾಣಗುಣಸೂಕ್ಷ್ಮರೂಪಂಚ ನಿತ್ಯಕಂ ಇತಿ । ಉಪಲಕ್ಷಣಂ ಚೈತತ್ । ಮಹದಹಂಕಾರಾದ್ಯಪಿಗ್ರಾಹ್ಯಮಿತಿ ತಟ್ಟೀಕೋಕ್ತೇಶ್ಚೇತಿ । ಅತ್ರ ಬ್ರಹ್ಮಾಂಡ ನಿರ್ಮಾಣಾರ್ಥಂ ತತ್ವದೇವೈಃ ಸ್ತುತೇನ ಭಗವತಾ ಯುಗಪತ್ತತ್ವಾನಿ ಪ್ರವಿಶ್ಯೋದ್ಧೃತೈಃ ತತ್ತದಂಶೈರಿತಿ ಬೋಧ್ಯಂ । ತದುಕ್ತಂ ತೃತೀಯಸ್ಕಂಧ ಭಾಗವತೇ । ಏತೇ ದೇವಾಃ ಕಲಾ ವಿಷ್ಣೋಃ ಕಾಲಮಾಯಾಂಶಲಿಂಗಿನಃ ।**

ಸೂಕ್ಷ್ಮರೂಪದಿಂದ ನಿತ್ಯಗಳಾದ ಮಹದಾದಿಗಳಿಗೆ ಪ್ರಕೃತಿ ಅಂಶಗಳಿಂದ ಉಪಚಯ (ಕುಗ್ಗುವಿಕೆ) ಇರುವುದರಿಂದ ಅವುಗಳು ಅಸಂಸೃಷ್ಟಗಳೆನಿಸಿಕೊಳ್ಳುತ್ತವೆ. ತತ್ತ್ವವಿವೇಕದಲ್ಲಿಯೂ ಭೂತಗಳು, ಮಾತ್ರಾಗಳು, ಇಂದ್ರಿಯಗಳು, ಗುಣಗಳು, ಸೂಕ್ಷ್ಮರೂಪದಲ್ಲಿ ನಿತ್ಯವಾದವುಗಳು ಎಂದಿರುತ್ತದೆ. ಹಾಗೆ ಮಹತ್ತತ್ವ ಅಹಂಕಾರ ತತ್ವ ಇವುಗಳೂ ಸೂಕ್ಷ್ಮರೂಪದಲ್ಲಿ ನಿತ್ಯಗಳೇ ಎಂದು ಉಪಲಕ್ಷಣವಾಗಿ ತಿಳಿಯಬೇಕೆಂದು ತತ್ವವಿವೇಕ ಟೀಕೆಯಲ್ಲಿ ಹೇಳಿರುತ್ತದೆ. ಇಲ್ಲಿ ಇನ್ನೂ ವಿಶೇಷವಾಗಿ, ಬ್ರಹ್ಮಾಂಡ ನಿರ್ಮಾಣಾರ್ಥವಾಗಿ ತತ್ವದೇವತೆಗಳಿಂದ ಪ್ರಾರ್ಥಿತನಾದ ಪರಮಾತ್ಮನು ಎಲ್ಲಾ ತತ್ವಗಳಲ್ಲಿ ಏಕಕಾಲದಲ್ಲಿ ಪ್ರವೇಶಿಸಿ ಆಯಾ ಅಂಶಗಳನ್ನು ಉದ್ಧರಿಸುವವನಾದನು ಎಂದು ತಿಳಿಯಬೇಕು. .ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿದೆ. ಈ ತತ್ವಾಭಿಮಾನಿಗಳಾದ ಅಜಾನಜಾದಿ ದೇವತೆಗಳೆಲ್ಲರೂ ವಿಷ್ಣುವಿನ ಕಲಾಗಳು (ಭಿನ್ನಾಂಶರು) ಕಾಲಮಾಯಾಂಶ ಚಿನ್ಹೆಗಳೆಂದು.

**ನಾನಾತ್ವಾತ್ಸ್ವಕ್ರಿಯಾನೀಶಾಃ ಪ್ರೋಚುಃ ಪ್ರಾಂಜಲಯೋಹರಿಂ । ಇತಿ ತಾಸಾಂಸ್ವಶಕ್ತೀನಾಂ ಅಸತೀನಾಂಸಮೇತ್ಯಸಃ । ಪ್ರಸುಪ್ತ ಲೋಕ ತಂತ್ರಾಣಾಂ ನಿಶಾಮ್ಯಗಿರಮೀಶ್ವರಃ । ತ್ರಯೋವಿಂಶತಿ ತತ್ವಾನಾಂ ಗಣಂ**

**ಯುಗಪದಾವಿಶತ್। ಸೋನುಪ್ರವಿಷ್ಟೋಭಗವಾಂಶ್ಚೇಷ್ಟಾರೂಪೇಣ ತಂಗಣಂ । ಭಿನ್ನಂಸಂಯೋಜಯಾಮಾಸ ಸುಪ್ತಂ ಕರ್ಮ ಪ್ರಬೋಧಯನ್। ಪ್ರವೃದ್ಧಕರ್ಮಾದೇವೇನ ತ್ರಯೋವಿಂಶತಿಕೋಗಣಃ । ಪ್ರೇರಿತೋ ಜನಯತ್ಸ್ವಾಭಿಃ ಮಾತ್ರಾಭಿರಧಿ ಪೂರುಷಂ ಇತಿ। ತಥಾ ಕಾಪಿಲೇಯೇ ತತ್ರೈವ। ಏತಾನ್ಯಸಂಹತ್ಯಯ ದಾಮಹದಾದೀನಿ ಸಪ್ತವೈ । ನಶೇಕುಃ ಪುರುಷಂ ಸ್ರಷ್ಟುಂ ಭೋಗಾಯತನಮಂಜಸಾ ।**

ಬೇರೆಬೇರೆಗಳಾದ ತತ್ವದೇವತೆಗಳು ಅಸಮರ್ಥರಾಗಿ ಕೈಗಳನ್ನು ಜೋಡಿಸಿ ಮೇಲೆತ್ತಿ ಪರಮಾತ್ಮನನ್ನು ಸ್ತೋತ್ರ ಮಾಡುವವರಾದರು. ಪರಮಾತ್ಮನು ತಮ್ಮ ತಮ್ಮ ಶಕ್ತಿ ಹೊರಗೆಡುಹಲು ಅಸಮರ್ಥರಾದ ಸುಪ್ತ (ತತ್ಕಾಲಾಸಮರ್ಥ) ಶಕ್ತಿ ಉಳ್ಳ ದೇವತೆಗಳ ಸ್ತೋತ್ರವನ್ನು ಕೇಳಿ, ಇಪ್ಪತ್ಮೂರು ತತ್ವಗಳ ಸಮೂಹವನ್ನು ಒಟ್ಟಿಗೆ ಒಮ್ಮೇಲೆ ಪ್ರವೇಶಿಸಿದರು. ಪ್ರವರ್ತಿಸುವ ರೂಪದಿಂದ ಆ ಗಣವನ್ನು ಪ್ರವೇಶಿಸುತ್ತಿರಲು ಸುಪ್ತಪ್ರಾಯವಾದ ಶಕ್ತಿಯು ಅಭಿವ್ಯಕ್ತವಾಯಿತು. ಇಪ್ಪತ್ಮೂರು ಸಂಖ್ಯಾತವಾದ ಗಣವು ಪರಮಾತ್ಮನಿಂದ ಪ್ರೇರಿತವಾಗಿ ತ‌ಮ್ಮ ಮಾತ್ರಾದಿಗಳಿಂದ ಕಲೆತು (ಪುರುಷಂ,) ಬ್ರಹ್ಮಾಂಡವನ್ನು ಉತ್ಪಾದಿಸಿದರು ಮತ್ತು ಅದೇ ಕಾಪಿಲೇಯದಲ್ಲಿ ಹೇಳಿದೆ. ಮಹದಾದಿ ಏಳು ತತ್ವಗಳು ಸಕಲ ಜೀವರಾಶಿಗೆ ಭೋಗಸಾಧನವಾದ ಬ್ರಹ್ಮಾಂಡ (ಪುರುಷ ಸಂಜ್ಞಕ) ಸೃಜಿಸಲು ಶಕ್ತರಾಗಲಿಲ್ಲ, ಆಗ

**ಕಾಲಕರ್ಮಗುಣೋಪೇತೋ ಜಗದಾದಿರುಪಾವಿಶತ್ । ತತಸ್ತೇನಾನು ವಿದ್ಧೇಭ್ಯಸ್ತತ್ವೇಭ್ಯೋಂಡಮಚೇತನಂ । ಉತ್ಥಿತಂ ಪುರುಷೋ ಯಸ್ಮಾದುದತಿಷ್ಠದಸೌವಿರಾಡಿತಿ । ತಥಾ ದ್ವಿತೀಯ ಸ್ಕಂಧೇಪಿ । ಯ ಏತೇ ಸಂಹಿತಾಭಾವಾ ಭೂತೇಂದ್ರಿಯ ಮನೋಗುಣಾಃ । ಯದಾಯತನ ನಿರ್ಮಾಣೇನಶೇಕುರ್ಬ್ರಹ್ಮವಿತ್ತಮ । ತದಾ ಸಂಹೃತ್ಯ ಚಾನ್ಯೋನ್ಯಂ ಭಗವಚ್ಛಕ್ತಿಚೋದಿತಾಃ ಸದಸತ್ವಮುಪಾದಾಯ ಚೋಭಯಂ ಸಸೃಜತ್ಯ್ಹದಃ । ವರ್ಷಪೂಗ ಸಹಸ್ರಾಂತೇ ತದಂಡಮುದಕೇಶಯಮಿತಿ । ಸಂಗ್ರಹ ರಾಮಾಯಣೇ ।**

ಜಗತ್ತಿಗೆ ಆದಿ ಪ್ರಧಾನನಾದ ಶ್ರೀಮನ್ನಾರಾಯಣನು ಕಾಲ, ಕರ್ಮ, ಗುಣಗಳಿಂದ ಕೂಡಿ ಪ್ರವೇಶಿಸಿದನು ಪರಮಾತ್ಮನಿಂದ ಯುಕ್ತವಾದ ತತ್ವಗಳಿಂದ ಅಚೇತನವಾದ ಬ್ರಹ್ಮಾಂಡವು ಎದ್ದಿತು. ಅದೇ ಭಗವಂತನ

ಪ್ರತಿಮಾಸ್ಥಾನೀಯವಾದ ವಿರಾಟ್ ಸಂಜ್ಞಿಕವಾಗಿ ನಿಂತಿತು. ಇದೇ ಅರ್ಥವೇ ದ್ವಿತೀಯ ಸ್ಕಂಧ ಭಾಗವತದಲ್ಲೂ ಹೇಳಿದೆ. ಭೂತಗಳು, ಇಂದ್ರಿಯಗಳು, ಮನಸ್ಸು, ಗುಣಗಳು, ಇವೆಲ್ಲವೂ ಕಲೆತು ಭಗವಂತನ ಆಶ್ರಯ ಅಂಡ ನಿರ್ಮಾಣದಲ್ಲಿ ಅಸಮರ್ಥಗಳಾದವು. ಆ ಭಗವಂತನ ಶಕ್ತಿಯಿಂದ ಪ್ರೇರಿತರಾಗಿ ಪರಸ್ಪರ ಕಲೆತು ಭಾವಾಭಾವ ಪದಾರ್ಥಗಳಿಂದ ಪ್ರಸಿದ್ಧವಾದ ಅಂಡವನ್ನು ನಿರ್ಮಾಣ ಮಾಡಿದರು. ಆ ಅಂಡವು ಸಹಸ್ರಾರು ವರ್ಷಗಳ ಪರ್ಯಂತ ಘನೋದಕದಲ್ಲಿ ಬಿದ್ದಿತು ಎಂದು ಸಂಗ್ರಹ ರಾಮಾಯಣದಲ್ಲಿ ಹೇಳಿದೆ.

**ಅಂಡಸೃಷ್ಟಾವಪಾಂಡಿತ್ಯಾತ್ ಶಾರ್ಙ್ಗಿಣಂ ಶರಣಂಯಯುಃ ಇತ್ಯಾದಿ । ಛಾಂದೋಗ್ಯಭಾಷ್ಯೇಪಿ । ಇತಿ ತತ್ವಾನಾಂ ಪ್ರಾರ್ಥನಾನಂತರಂ ಭಗವತ ಏವ ತೇಷು ಪ್ರವೇಶೋಕ್ತೇಃ ಭಾಗವತ ಇತಿ । ವೀರ್ಯಾತ್ಮನಾ ಪರಿಣಾಮ್ಯೇತಿ। ತದುಕ್ತಂ ಭಾಷ್ಯೇ । ಅಪ ಏವ ಸಸರ್ಜಾದೌತಾಸುವೀರ್ಯಮವಾಸೃಜತ್। ತದಂಡಮಭವ ದ್ಧೈಮಂ ಸಹಸ್ರಾಂಶು ಸಮಪ್ರಭಂ ಇತಿ । ನಿರ್ಣಯೇಪಿ। ಏತೇಹಿ ದೇವಾಃ ಪುನರಂಡಸೃಷ್ಟಾ ವಶಕ್ನುವಂತಃ ಹರಿಮೇತ್ಯತುಷ್ಟುವುಃ । ತ್ವನ್ನೋ ಜಗಚ್ಚಿತ್ರ ವಿಚಿತ್ರ ಸರ್ಗನಿಸ್ಸೀಮಶಕ್ತಿಃ ಕುರುಸನ್ನಿಕೇತನಂ । ಇತಿ ಸ್ತುತಸ್ತೈಃ ಪುರುಷೋತ್ತಮೋಸೌ ಸವಿಷ್ಣುನಾಮಾಶ್ರಿಯಮಾರ ಸೃಷ್ಟಯೇ । ಸುಷಾವಸೈಷಾಂಡಮಧೋಕ್ಷಜಸ್ಯ ಶುಷ್ಮಂ ಹಿರಣ್ಯಾತ್ಮಕ ಮಂಬುಮಧ್ಯೇ । ಇತಿ । ಬ್ರಹ್ಮಾಂಡಾಂತಃ ಪರಿಮಾಣ ಮಾಹ ।**

**ಪ.ಸಂ. ತಚ್ಚ ಪಂಚಾಶತ್ ಕೋಟಿ ವಿಸ್ತೀರ್ಣಂ ।**

ಬ್ರಹ್ಮಾಂಡ ಸೃಷ್ಟಿ ವಿಷಯದಲ್ಲಿ ಅನೇಕ ಪ್ರಮಾಣಗಳನ್ನು ತಿಳಿಸುತ್ತಾರೆ. ಅಂಡ ನಿರ್ಮಾಣದಲ್ಲಿ ಅಶಕ್ತರಾದ ತತ್ವಾಭಿಮಾನಿ ದೇವತೆಗಳು ಶಾಂರ್ಙ್ಗಪಾಣಿಯಾದ ವಿಷ್ಣುವನ್ನು ಮೊರೆಹೊಕ್ಕರು ಹೀಗೆಂದು ಛಾಂದೋಗ್ಯಭಾಷ್ಯದಲ್ಲಿ ದೇವತೆಗಳ ಪ್ರಾರ್ಥನಾ ನಂತರವೇ ತತ್ವಗಳಲ್ಲಿ ಪರಮಾತ್ಮನ ಪ್ರವೇಶವು. ಹೀಗೆ ಭಾಗವತದಲ್ಲಿ ಎಂದಿದೆ. ಭಾಷ್ಯದಲ್ಲಿಯೂ ಪರಮಾತ್ಮ ಮೊದಲು ಘನೋದಕವನ್ನು ಸೃಜಿಸಿದನು. ಅವುಗಳಲ್ಲಿ ತನ್ನ ವೀರ್ಯವನ್ನು ಬಿಟ್ಟನು. ಅದೇ ಸಹಸ್ರ ಸೂರ್ಯ ಪ್ರಕಾಶವುಳ್ಳ ಬಂಗಾರಮಯವಾದ ಅಂಡವಾಯಿತು. ಎಂತೆಂದಿದೆ ಮತ್ತೂ ನಿರ್ಣಯದಲ್ಲಿ ಈ ದೇವತೆಗಳೆಲ್ಲಾ ಪುನಃ ಅಂಡ ನಿರ್ಮಿಸುವುದರಲ್ಲಿ ಅಶಕ್ತರಾಗಿ ಶ್ರೀಹರಿಯನ್ನೆ ಸ್ತುತಿಸಿದರು. ಹೇ ದೇವ ನಿನ್ನಿಂದಲೇ ಚಿತ್ರ ವಿಚಿತ್ರವಾದ ಜಗನ್ನಿರ್ಮಾಣವು ನಿನ್ನ ವಿನಃ ಗತಿ ಇಲ್ಲವೆಂದು ನೀನೇ ನಿಸ್ಸೀಮಶಕ್ತಿ ಪೂರ್ಣನು ಸರ್ವಾಶ್ರಯನು

(ಅಂಡವನ್ನು) ಸೃಜಿಸು. ಹೀಗೆ ಅವರಿಂದ ಸ್ತುತ್ಯನಾದ ಪರಮಾತ್ಮನು ಸೃಜಿಸಲು ಮನ ಮಾಡಿ ಲಕ್ಷ್ಮೀದೇವಿಯಿಂದ ಯುಕ್ತನಾದನು. ಆಗ ಲಕ್ಷ್ಮೀದೇವಿಯು ಪರಮಾತ್ಮನ ಆಶ್ರಯಪೂರ್ಣವಾದ ಸುವರ್ಣಮಯವಾದ ಅಂಡವನ್ನು (ಪ್ರಸವಿಸಿದಳು) ನಿರ್ಮಿಸಿದಳು. ಘನೋಧಕದಲ್ಲಿ ಹೀಗೆ ಪರಮಾತ್ಮನಿಂದಲೇ (ಅಂಡ) ಸೃಷ್ಟಿಯು ಎಂಬಲ್ಲಿ ಅನೇಕ ಪ್ರಮಾಣಗಳನ್ನು ತಿಳಿಸಿ, ಅಂಡದ ಪರಿಮಿತಿಯನ್ನು ತಿಳಿಸುತ್ತಾರೆ. ಬ್ರಹ್ಮಾಂಡವು ಐವತ್ತು ಕೋಟಿ ಯೋಜನ ಉಳ್ಳದ್ದು ಬಂಗಾರ ಆವರಣವಾದುದು ಅಂಡದ ಒಳಗೆ ಮಧ್ಯದಿಂದ ಹತ್ತೂ ದಿಕ್ಕಿನಲ್ಲೂ ಇಪ್ಪತ್ತೈದು ಕೋಟಿ ವಿಸ್ತೀರ್ಣವಾದುದು. ಇದೇ ಏಕಾರ್ಥದಲ್ಲಿ ಅನೇಕ ಪ್ರಮಾಣಗಳನ್ನು ತಿಳಿಸುತ್ತಾರೆ.

**ತದುಕ್ತಂ ತೃತೀಯ ಸ್ಕಂಧಭಾಗವತೇ । ವಿಕಾರೈಃ ಷೋಡಶೈರ್ಯುಕ್ತೋ ವಿಶೇಷಾದಿಭಿರಾವೃತಃ । ಅಂಡಕೋಶೋ ಬಹಿರಯಂ ಪಂಚಾಶತ್ ಕೋಟಿವಿಸ್ತರಃ ಇತಿ । ನಿರ್ಣಯೇಪಿ । ಪಂಚಾಶತ್ ಕೋಟಿ ವಿಸ್ತಾರೋ ಯೋಜನಾನಾಂ ಸಮಸ್ತಶಃ । ತಥಾ । ಯೋಜನಾನಾಂ ಪಂಚವಿಂಶತ್ ಕೋಟಿಯೋಮೇರುಪರ್ವತಾತ್ । ಚತಸೃಷ್ವಪಿದಿಕ್ಷೂರ್ಧ್ವಮಧ ಶ್ಚಾಂಡಂ ಪ್ರಕೀರ್ತಿತಂ ಇತಿ । ಅತ್ರ ಮೇರುಪರ್ವತಮಾರಭ್ಯ ಊರ್ಧ್ವಭಾಗೇ ಅಧೋಭಾಗೇ ದಕ್ಷಿಣಾದಿಭಾಗೇಷುಚ ಪಂಚವಿಂಶತಿ ಕೋಟಿಯೋಜನೋಕ್ತ್ಯಾ ಅಧೋಭಾಗಸ್ಥ ಬ್ರಹ್ಮಾಂಡ ಖರ್ಪರಮಾರಭ್ಯ ಊರ್ಧ್ವಭಾಗ ಖರ್ಪರಪರ್ಯಂತಂ ಪಂಚಾಶತ್ ಕೋಟಿ ಯೋಜನ ವಿಸ್ತೀರ್ಣತ್ವಂ ಲಭ್ಯತೇ ।**

ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿದೆ. ವಿಶೇಷಯುಕ್ತವಾಗಿ ಹದಿನಾರು ವಿಕಾರ ಪಾತ್ರವಾದ ಈ ಅಂಡವು ಹೊರಳತಿಯಲ್ಲಿ ಐವತ್ತು ಯೋಜನ ವಿಸ್ತೀರ್ಣವಾಗಿದೆ ಎಂದು. ನಿರ್ಣಯದಲ್ಲಿಯೂ, ಬ್ರಹ್ಮಾಂಡವು ಮೇರು ಪರ್ವತದಿಂದ ದಕ್ಷಿಣಾದಿ ಹತ್ತು ದಿಕ್ಕುಗಳಲ್ಲೂ ಇಪ್ಪತ್ತೈದು ಇಪ್ಪತ್ತೈದು ಯೋಜನ ವಿಸ್ತೀರ್ಣತೆ ಉಳ್ಳದ್ದು ಎಂದು. ಹೀಗೆ ಹೇಳುವುದರಿಂದ ಬ್ರಹ್ಮಾಂಡದ ಕೆಳ ಖರ್ಪರದಿಂದ ಮೇಲಿನ ಖರ್ಪರದವರೆಗೂ ಐವತ್ತು ಕೋಟಿ ಯೋಜನೆಗಳು ಬಲ ಖರ್ಪರದಿಂದ ಎಡ ಖರ್ಪರ ಪರ್ಯಂತ ಐವತ್ತು ಕೋಟಿ ಯೋಜನವೆಂದು ಸಿದ್ಧವಾಗುತ್ತದೆ.

**ತಥಾ ದಕ್ಷಿಣಭಾಗಸ್ಥ ಬ್ರಹ್ಮಾಂಡ ಖರ್ಪರಮಾರಭ್ಯ ಉತ್ತರಭಾಗಸ್ಥ**

**ಬ್ರಹ್ಮಾಂಡ ಖರ್ಪರ ಪರ್ಯಂತಂ ಪಂಚಾಶತ್ ಕೋಟಿಯೋಜನ ವಿಸ್ತೀರ್ಣತ್ವಂ ಲಭ್ಯತೇ । ಏವಂ ಪೂರ್ವ ಪಶ್ಚಿಮ ಭಾಗಯೋರಪಿ ಪಂಚಾಶತ್ ಕೋಟಿ ಯೋಜನತ್ವಂ ಲಭ್ಯತೇ । ಬೃಹದ್ಭಾಷ್ಯೇಽಪಿ । ಪಂಚಾಶತ್ ಕೋಟಿ ವಿಸ್ತಾರಮೇವಮಂಡಾಂತ ಇಷ್ಯತ ಇತಿ । ತದಂಡಂಕತೀತ್ಯಾಕಾಂಕ್ಷಾಯಾಂ ಆಹ।**

**ಪ.ಸಂ. ಏಕಮೇವ ಕಪಾಲದ್ವಯಂ । ಉಪರಿತನಂಕಪಾಲಂ ಸುವರ್ಣಂ । ಅಧಸ್ತನಂ ರಜತಂ ।**

ಒಟ್ಟಿನಲ್ಲಿ ಪೂರ್ವದಿಂದ ಪಶ್ಚಿಮದಕೊನೆ ದಕ್ಷಿಣದಿಂದ ಉತ್ತರದಕೊನೆ ಕೆಳಗಿನಿಂದ ಮೇಲತುದಿಯ ಕೊನೇ ಎಲ್ಲಾಡೆಗಳಲ್ಲೂ ಐವತ್ತುಕೋಟಿ ಯೋಜನ ವಿಸ್ತೀರ್ಣವೆಂದು ಸಿದ್ಧವು. ಇಂತಹ ಬ್ರಹ್ಮಾಂಡಗಳೆಷ್ಟೆಂದರೆ ಒಂದೇ, ಎರಡು ಬೊಪ್ಪೆಗಳುಳ್ಳದ್ದು, ಕೆಳಬೊಪ್ಪೆ ಬೆಳ್ಳಿಯದು, ಬಂಗಾರ ಮೇಲ್ಬೊಪ್ಪೆ.

**ನನು ತೃತೀಯಸ್ಕಂಧ ಭಾಗವತೇ ದಶೋತ್ತರಾಧಿಕ್ಯೈರ್ಯತ್ರ ಪ್ರವಿಷ್ಟಂ ಪರಮಾಣುವತ್ । ಲಕ್ಷ್ಯತೇಂತರ್ಗತಾಶ್ಚಾನ್ಯೇ ಕೋಟಿಶೋಹ್ಯಂಡರಾಶಯಃ ಇತಿ ಬ್ರಹ್ಮಾಂಡಸ್ಯ ಬಹುಕೋಟಿ ಸಂಖ್ಯಾಕತ್ವೋಕ್ತೇಃ ಕಥಮೇವೇತ್ಯವಧಾರಣಂ ಇತಿ ಚೇದುಚ್ಯತೇ । ಏಕಮೇವ ಬ್ರಹ್ಮಾಂಡಂ ಪರಮಮಾತ್ಮನಾ ಸೃಷ್ಟಂ । ತಚ್ಚ ಪರಮಾತ್ಮನಾಧೃತಂ । ತಸ್ಯ ಬಹವೋ ರೋಮ ಕೂಪಾಃ ತೇಷಾಂ ಪರಮಾತ್ಮನಾಸಹಾಭೇದಾತ್ ಬಹುತ್ವೇನ ದೃಶ್ಯತೇ । ನತ್ವನೇಕಾನಿ ಬ್ರಹ್ಮಂಡಾನಿ ಭಗವತಾ ಸೃಷ್ಟಾನಿ । ಅತೋನ ವಿರೋಧಃ । ತದುಕ್ತಂ ತೃತೀಯಸ್ಕಂಧ ತಾತ್ಪರ್ಯೇ ।**

ತೃತೀಯ ಸ್ಕಂಧ ಭಾಗವತದಲ್ಲಿ ಹತ್ತು ಭಾಗ ಅಧಿಕವಾಗಿ ಉಳ್ಳ ತತ್ವಗಳ ರಾಶಿಯನ್ನು ಪ್ರವೇಶಿಸಿ ಪರಮಾಣು ಪ್ರಾಯವಾದ ತತ್ವರಾಶಿಯಿಂದ ಕೋಟಿ ಕೋಟಿ ಬ್ರಹ್ಮಾಂಡಗಳನ್ನು ಸೃಜಿಸಿದನೆಂದು ಹೇಳಿದೆ. ಒಂದೇ ಬ್ರಹ್ಮಾಂಡವೆಂದು ಹೇಗೆ ಹೇಳುವಿರಿ ಎಂದರೆ ಸತ್ಯವೇ ಹೇಳುತ್ತೇವೆ. ಪರಮಾತ್ಮನು ಒಂದೇ ಬ್ರಹ್ಮಾಂಡವನ್ನು ಸೃಜಿಸಿದನು ಅದನ್ನು ಪರಮಾತ್ಮ ತನ್ನ ರೋಮ ಕೂಪದಲ್ಲಿ ಧರಿಸಿದನು. ಅವನಿಗೆ ಅನಂತ 'ರೋಮಕೂಪಗಳು ಅವನಿಗೂ ಅವನ ರೋಮಕೂಪಗಳಿಗೂ ಏನೂ ಭೇಧವಿಲ್ಲ ಆದ್ದರಿಂದ ಅನೇಕ ಬ್ರಹ್ಮಾಂಡಗಳಾಗಿ ತೋರುತ್ತದೆ. ಅಷ್ಟೇ ಆದ್ದರಿಂದ ಒಂದೇ ಎಂಬುದು ವಿರುದ್ಧವಲ್ಲವು. ಇದನ್ನೇ ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ.

**ಏಕಮಂಡಂ ಬಹುತ್ವೇನ ಪ್ರತ್ಯೇಕಂ ರೋಮಕೂಪಗಂ ।**

**ಬ್ರಹ್ಮಾಪಶ್ಯತ್ತಥಾತ್ಮಾನಂ ಹರೇಸ್ತೇಷು ಪೃಥಕ್ ಪೃಥಕ್ ।**
**ವಿಷ್ಣುಸಾಮರ್ಥ್ಯತೋಂಡಾನಾಂ ಬಹುತ್ವಾನ್ನಾನ್ಯಥಾ ಭವೇತ್ ಇತಿ ।**
**ನನ್ವೇವಂ ಚತುರ್ಮುಖಸ್ಯೈಕ ಬ್ರಹ್ಮಾಂಡೇನೇಕತ್ವದರ್ಶನೇ ಮಿಥ್ಯಾಜ್ಞಾನಿತ್ವಂ ಸ್ಯಾದಿತಿ ಚೇನ್ನ । ಏಕಸ್ಮಿನ್ನೇವಾಂಡೇ ಪರಮಾತ್ಮಸಾಮರ್ಥ್ಯೇನ ಅನೇಕತ್ವಸ್ಯಾಪಿ ಸೃಷ್ಟತ್ವೇನ ತದ್ವಿಷಯಕಜ್ಞಾನಂನಮಿಥ್ಯಾ । ವಿದ್ಯಮಾನ ವಿಷಯತ್ವಾತ್। ನಚೈಕತ್ವಾನೇಕತ್ವಯೋರೇಕತ್ರ ವಿರೋಧ ಇತಿ ವಾಚ್ಯಂ । ಈಶ ಸಾಮರ್ಥ್ಯೇನ ಸೃಷ್ಟೇ ಪದಾರ್ಥೇ ವಿರೋಧಶಂಕಾಯಾ ಏವ ಅಯೋಗಾತ್ । ಅತ ಏವಗುಹಾಧಿಕರಣ ಅನುವ್ಯಾಖ್ಯಾನೇ ದ್ವಿತ್ವಂಚೈಕಸ್ಯ ಯುಜ್ಯತ ಇತ್ಯೇಕತ್ವಾನೇಕತ್ವಯೋಃ ಅವಿರೋಧ ಏವ ಉಕ್ತಃ ।**

ಒಂದೇ ಅಂಡವು ಪರಮಾತ್ಮನ ರೋಮಕೂಪದಲ್ಲಿದ್ದುದನ್ನು ಬಹುವಾಗಿ ಪ್ರತ್ಯೇಕ ರೋಮಕೂಪಗಳಿಂದ ಬ್ರಹ್ಮ ನೋಡಿದನು ಹಾಗೆ ತನ್ನನ್ನೂ ಪ್ರತ್ಯೇಕವಾಗಿ ನೋಡಿದನು. ವಿಷ್ಣು ಸ್ವಸಾಮರ್ಥ್ಯದಿಂದ ಬ್ರಹ್ಮಾಂಡಗಳು ಬಹವೇ ಆದ್ದರಿಂದ ವಿರೋಧವು ಇಲ್ಲವು. ಚತುರ್ಮುಖಿಗೆ ಒಂದೇ ಬ್ರಹ್ಮಾಂಡದಲ್ಲಿ ಅನೇಕ ತೋರಿತು ಅಂದರೆ ಭ್ರಮ ಉಂಟು ಎಂದಾಯಿತು. ಇಲ್ಲಾ ಒಂದೇ ಬ್ರಹ್ಮಾಂಡದಲ್ಲಿ ಪರಮಾತ್ಮನು ಸ್ವಸಾಮರ್ಥ್ಯದಿಂದ ಅನೇಕ ಸೃಷ್ಟಿ ಯಥಾರ್ಥವಾಗಿ ತೋರುವ ಶಕ್ತಿ ಉಳ್ಳವನಾದ್ದರಿಂದ ಭ್ರಾಂತಿ ಬ್ರಹ್ಮದೇವರಿಗೆ ಇರುವುದಿಲ್ಲ, ವಿದ್ಯಮಾನ (ಯಥಾರ್ಥ) ವಿಷಯವೇ ಆಗಿರುವುದರಿಂದ, ತಾತ್ಪರ್ಯವೇನೆಂದರೆ ಒಬ್ಬ ಬ್ರಹ್ಮನ ಸೃಷ್ಟಿಕಾಲದಲ್ಲಿ ಒಂದೇ ಬ್ರಹ್ಮಾಂಡ, ಅನೇಕ ಬ್ರಹ್ಮರ ಕಾಲಾನುಸಾರ ಅನೇಕ ಬ್ರಹ್ಮಾಂಡಗಳು. ಆದರೆ ಪರಮಾತ್ಮ ಸ್ವೇಚ್ಛಾಸ್ವಶಕ್ತಿಯಿಂದ ಅನೇಕ ಬ್ರಹ್ಮಾಂಡಗಳನ್ನು ಒಂದೇ ಬ್ರಹ್ಮಾಂಡದಲ್ಲಿ ತೋರಿಸಬಲ್ಲನಾದ್ದರಿಂದ ಅದನ್ನು ಕಂಡ ಬ್ರಹ್ಮನಿಗೆ ಭ್ರಮವಿರುವುದಿಲ್ಲ. ಆದರೆ ಒಂದರಲ್ಲಿ ಎರಡು ವಿರೋಧವಲ್ಲವೇ ಎಂದರೆ ಇಲ್ಲ, ಪರಮಾತ್ಮನ ಪದಾರ್ಥ ಸೃಷ್ಟಿಯಲ್ಲಿ ಪರಸ್ಪರ ವಿರೋಧಾ ಶಂಕೆಯೇ ಇರುವುದಿಲ್ಲ. ಆದ್ದರಿಂದಲೇ ಗುಹಾಧಿಕರಣ ಅನುವ್ಯಾಖ್ಯಾನ ಸುಧೆಯಲ್ಲಿ ಭಗವತ್ ಸೃಷ್ಟಿಯಲ್ಲಿ ಒಂದರಲ್ಲಿ ಅನೇಕತೆ, ಅನೇಕತೆಯಲ್ಲಿ ಏಕತೆ ವಿರೋಧವಿಲ್ಲ ಎಂದಿರುತ್ತಾರೆ.

**ಖಗ್ರಾಪ್ಯೇಷಿ । ದ್ವಿರೂಪತ್ವಾದ್ಬಹುತ್ವಂಚ ವಿಶೇಷಾದೇವ ಕೇವಲಂ । ಏಕಸ್ಯೈವ ಹರೇರ್ನಾತ್ರ ಭೇದಃ ಶಂಕ್ಯಃ ಕಥಂಚನೇತಿ । ಅತ ಏವ ಸೀತಾಭರಣಾನ್ಯೇಕ ವಿಧಾನ್ಯೇವ ದ್ವಿರೂಪಾಣ್ಯಾಸನ್ ಸೀತಾಯಾಃ ಪ್ರತಿಕೃತಾನಿ ಸರ್ವೈರ್ಮು-**

**ಶ್ಯಂತೇ । ತದುಕ್ತಂ ನಿರ್ಣಯೇ । ಸೀತಾಯಾ ಯಾನಿ ಚೈವಾಸನ್ನಾಕೃತೇಸ್ತಾನಿ ಸರ್ವಶಃ । ಭೂಷಣಾನಿ ದ್ವಿಧಾಭೂತ್ವಾತಾನ್ಯೇವಾಸಂಸ್ತಥೈವಚ । ಅಥ ಚೂಡಾಮಣಿಂ ದಿವ್ಯಂದಾತುಂ ರಾಮಾಯ ಸಾದದೌ ಇತಿ ।**

ಋಗ್ಭಾಷ್ಯದಲ್ಲಿಯೂ ಪರಮಾತ್ಮನ ಒಂದು ರೂಪದಲ್ಲೇ ಎರಡು ರೂಪಗಳು ಬಹುರೂಪಗಳು. ವಿಶೇಷ ಧರ್ಮದಿಂದ ಚಿಂತಿಸಬಹುದು. ಇಲ್ಲಿ ವಿರೋಧವು ಬರುವುದಿಲ್ಲ ಎಂದು ಹೇಳಿದೆ. ಆದ್ದರಿಂದಲೇ ನಿರ್ಣಯದಲ್ಲಿ ಸೀತಾದೇವಿಯ ಆಕೃತಿಯಲ್ಲಿ ಆಭರಣಗಳಿದ್ದವು. ಅವು ಎರಡು ವಿಭಾಗ (ವಿಧಗಳು) ಆಗಿ ಒಂದು ಋಷ್ಯಮೂಕದಲ್ಲಿ ಒಗೆದದ್ದು ಇನ್ನೊಂದು ತನ್ನಲ್ಲೇ ಇದ್ದಿತು. ಅದರಲ್ಲಿ ಒಂದಾದ ಚೂಡಾಮಣಿಯನ್ನು ಶ್ರೀರಾಮನಿಗೆ ಕೊಡಲು ಹನುಮಂತನಕೈಗೆ ಕೊಟ್ಟಳು. ಹೀಗೆ ಹೇಳಿರುತ್ತದೆ.

**ಅತ ಏವ ಋಗ್ಭಾಷ್ಯೇ । ಏಕಸ್ಯೈವ ಚಮಸಪಾತ್ರಸ್ಯ ಋಭುಸಾಮರ್ಥ್ಯೇನ ಚತುರ್ಧಾದರ್ಶನಮುಕ್ತಂ । ಏಕಂ ಚಮಸಂ ಚತರಃ ಕುರುತೇತ್ಯಾಹತಾನ್ಪುರಾ। ತ್ವಷ್ಟಾಗ್ನಿಶ್ಚೈಷಿವ ದೇವಾನಾಂ ವಾಕ್ಯಾತ್ತದಪಿತೈಃ ಕೃತಂ । ದ್ವ್ಯಾದಿಸ್ತ್ವೋಕ್ತಂ ಪರಿತ್ಯಜ್ಯತ್ವಷ್ಟುಃ ಶುಶ್ರೂಷಣಂ ಕೃತಂ । ತಂ ಪೂರ್ವಕೃತ ಮೇವೈಕಂ ಚಮ ಸಂಚತುರೋ ಕ್ರತೇತಿ । ಏವಂ ಗೋಮಂತ ಪರ್ವತೇ ಕೃಷ್ಣ ಶಿರಸಿಗರುಡೇನ ನಿಕ್ಷಿಪ್ತ ಮೂಲರೂಪ ಕಿರೀಟಸ್ಯ ಕೃಷ್ಣಕರಚಕ್ರಸ್ಯ ರಾಮಕರಗತ ಶಾರ್ಙ್ಗ ಧನುಷೋ ಅರ್ಜುನೇನ ಧೃತಗಾಂಡೀವಧನುಷಶ್ಚ ನಿರ್ಣಯೋಕ್ತಮನೇಕತ್ವಂ ಏತನ್ನ್ಯಾಯೇನೈವ ದ್ರಷ್ಟವ್ಯಂ । ಯದ್ವಾ ।**

ಆದುದರಿಂದಲೇ ಋಗ್ಭಾಷ್ಯದಲ್ಲಿ ಋಭು ಋಷಿಗಳ ಸಾಮರ್ಥ್ಯದಿಂದ ಒಂದೇ ಚಮಸ ಪಾತ್ರೆಗೆ ನಾಕು ರೀತಿಯಾಗಿ ಕಾಣುವಿಕೆ ಹೇಳಿದೆ ನಿರ್ಣಯದಲ್ಲಿ ಗೋಮಂತ ಪರ್ವತದಲ್ಲಿ ಗರುಡನು ಮೂಲರೂಪಿ ಪರಮಾತ್ಮನ ಕಿರೀಟವನ್ನು ಶ್ರೀಕೃಷ್ಣನ ಶಿರಸ್ಸಿನಲ್ಲಿರಿಸಿದ್ದ ಕಿರೀಟಕ್ಕೆ, ಶ್ರೀರಾಮಚಂದ್ರನ ಕೈಲಿದ್ದ ಶಾರ್ಙ್ಗಧನಸ್ಸಿಗೆ, ಶ್ರೀ ಕೃಷ್ಣನ ಕೈಲಿದ್ದ ಚಕ್ರಕ್ಕೆ, ಅರ್ಜುನನ ಗಾಂಡೀವ ಧನಸ್ಸಿಗೆ ಅನೇಕತೆ ಹೇಳಿದೆ. ಆ ವಿರೋಧವನ್ನು ಹಿಂದಿನ ನಿಯಮದಿಂದ ಪರಿಹಾರ ಅವಿರೋಧತೆ ತಿಳಿಯಬೇಕು ಅಥವಾ.

**ಭಾಗವತೇಽನೇಕಾಂಡ ಕಥನಂ ಅತೀತಾನಾಗತವರ್ತಮಾನ ಕಾಲಾಪೇಕ್ಷಯೈವ ನತ್ವೇಕ ಬ್ರಹ್ಮಕಲ್ಪಾಪೇಕ್ಷಯಾ । ತದುಕ್ತಂ ತೃತೀಯ ತಾತ್ಪರ್ಯೇ । ಶರೀರಾಣಾಂ ಬಹುತ್ವೇನ ಅತೀತಾನಾಗತೈಸ್ತಥಾ । ಅಸ್ಯೈವ ದೇವಕಾರ್ಯೇಷು**

**ಪ್ರತಿ ಪ್ರತಿ ಚ ದರ್ಶನಾದಿತಿ । ಬ್ರಹ್ಮಾಂಡೇ ವಿಶೇಷ ಮಾಹ ।**

ಭಾಗವತದಲ್ಲಿ ಅನೇಕ ಬ್ರಹ್ಮಾಂಡ ಕಥನವು. ಹಿಂದಾದ ಮುಂದಾಗುವ ಈಗಿರುವ ಕಾಲ ದೃಷ್ಟಿಯಿಂದಲೇ ಆಗಲಿ ಒಂದು ಬ್ರಹ್ಮಕಲ್ಪ ದೃಷ್ಟಿಯಿಂದ ಹೇಳಿರುವುದಿಲ್ಲ, ಒಬ್ಬ ಬ್ರಹ್ಮರ ಕಲ್ಪದಲ್ಲಿ ಒಂದೇ ಬ್ರಹ್ಮಾಂಡವು. ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಅತೀತ, ಅನಾಗತ, ವರ್ತಮಾನ ದೃಷ್ಟಿಯಿಂದ ಶರೀರಗಳು ಅನಂತವಾದ್ದರಿಂದ ಬಹು ಎಂದು ಹೇಳಿರುತ್ತದೆ. ಬ್ರಹ್ಮಾಂಡ ಒಂದೇ ಆದರೂ ದೇವಕಾರ್ಯಗಳಲ್ಲಿ ಪ್ರತಿ ಪ್ರತಿಯಾಗಿ ದರ್ಶಿಸಿರುವುದರಿಂದ ಅನೇಕವೆಂದು ಹೇಳಿರುವಿಕೆಯು ಒಂದು ಬ್ರಹ್ಮ ಕಲ್ಪದಲ್ಲಿ ಒಂದೇ ಬ್ರಹ್ಮಾಂಡವೆಂದು ಹೇಳಿ ಅಲ್ಲಿ ವಿಶೇಷವನ್ನು ಹೇಳುತ್ತಾರೆ.

**ಕಪಾಲದ್ವಯ ರೂಪಮಿತ್ಯಾದಿನಾ । ತದುಕ್ತಂ ಛಾಂದೋಗ್ಯೋಪನಿಷದಿ। ತೇ ಅಂಡಕಪಾಲೇ ರಜತಂ ಸುವರ್ಣಂ ಚಾಭವತಾಂ । ಯದ್ರಜತಂ ಸೇಯಂಪೃಥಿವೀ । ಯತ್ಸುವರ್ಣಂ ಸಾದ್ಯೌರಿತಿ । ನನು ಸರ್ವಸ್ಯಾಪಿ ಬ್ರಹ್ಮಾಂಡಸ್ಯ ಸುವರ್ಣತ್ವ ಪ್ರತಿಪಾದಕ ಪೂರ್ವೋದಾಹೃತ ಪ್ರಮಾಣವಿರೋಧ ಇತಿ ಚೇನ್ನ। ನಿರವಕಾಶ ಛಾಂದೋಗ್ಯ ಶ್ರುತಿ ಬಲೇನ ತೇಷಾಮುಪರಿತನಕಪಾಲವಿಷಯಕತ್ವಾತ್ । ಉದಕೇ ವಿದ್ಯಮಾನಸ್ಯ ಬ್ರಹ್ಮಾಂಡಸ್ಯ ಕಥಂ ಸ್ಥಿತಿರಿತ್ಯಾಹ ।**

**ತ.ಸಂ. ಕೂರ್ಮ ರೂಪೇಣ ಹರಿಣಾ ವಾಯುನಾಚ ಧೃತಂ ।**

ಬ್ರಹ್ಮಾಂಡಕ್ಕೆ ಎರಡು ಕಪಾಲಗಳು (ಬೊಪ್ಪೆಗಳು) ಕೆಳ ಕಪಾಲ ಬೆಳ್ಳಿಯದು, ಮೇಲ್ಕಪಾಲ ಬಂಗಾರದ್ದು, ಬೆಳ್ಳಿಯ ಕಾಪಾಲವೇ ಭೂ ಭಾಗವು, ಮೇಲಿನ ಸುವರ್ಣ ಕಪಾಲವೇ ದ್ಯೌ (ಸ್ವರ್ಗ) ಭಾಗವು. ಬ್ರಹ್ಮಾಂಡ ಸಂಪೂರ್ಣವು ಬಂಗಾರವೆಂದು ಹಿಂದೆ ಹೇಳಿದ ಪ್ರಮಾಣ ವಿರೋಧ ಬರೋಲ್ಲವೇ ಎಂದರೆ ನಿರವಕಾಶವಾದ ಛಾಂದೋಗ್ಯ ಶೃತಿ ಬಲದಿಂದ ಎಲ್ಲಾ ಬಂಗಾರವೆಂದು ಹೇಳಿದೆ. ಪ್ರಮಾಣವು ಕೇವಲ ಮೇಲಿನ ಭಾಗವೊಂದನ್ನೇ ಹೇಳುವುದರಿಂದ ವಿರೋಧವಿಲ್ಲ. ನೀರಿನಲ್ಲಿ ಬಿದ್ದ ಅಂಡಕ್ಕೆ ಸ್ಥಿತಿ ನಿಲ್ಲುವಿಕೆ ಹೇಗೆ ಎಂದರೆ ಹೇಳುತ್ತಾರೆ. ವಾಯು ದೇವರು ಕೂರ್ಮವಾಗಿ ಅಂಡವನ್ನು ಧರಿಸಿದ್ದಾನೆ,

**ತದುಕ್ತಂ ಬೃಹದ್ಭಾಷ್ಯೇ । ಭಿಭರ್ತಿ ಅಂಡಂ ಹರಿಃ ಕೂರ್ಮಸ್ತ್ವಂಡೇ ಚಾಪ್ಯುದಕಂಮಹತ್ । ಉದಕೇ ಕೂರ್ಮರೂಪಸ್ಯ ವಾಯುಃ ಪುಚ್ಛಂಸಮಾಶ್ರಿತಃ । ವಾಯೋಃ ಪುಚ್ಛಂ ಸಮಾಶ್ರಿತ್ಯ ಶೇಷಸ್ತು**

**ಪೃಥಿವೀಮಿಮಾಂ । ಬಿಭರ್ತಿತಸ್ಯಾಂಚ ಜಗದಿದಂ ಸರ್ವಂ ಪ್ರತಿಷ್ಠಿತಮಿತಿ ವಾಯುನಾಚೇತಿ । ತದುಕ್ತಂ ಬೃಹದ್ಭಾಷ್ಯೇ । ಸ ಏಷ ಕೂರ್ಮರೂಪೇಣ ವಾಯುರಂಡೋದಕೇ ಸ್ಥಿತಃ । ವಿಷ್ಣುನಾ ಕೂರ್ಮರೂಪೇಣ ಧಾರಿತೋಽನಂತ ಧಾರಕಃ ।**

ಬೃಹದ್ಭಾಷ್ಯದಲ್ಲಿ ಹೇಳಿದೆ. ಶ್ರೀಹರಿಯು ಘನೋಽಕದದಲ್ಲಿ ಕೂರ್ಮರೂಪದಿಂದ ಬ್ರಹ್ಮಾಂಡವನ್ನು ಧರಿಸಿದ್ದಾನೆ. ವಾಯು ದೇವರು, ಹರಿ ಕೂರ್ಮ ಪುಚ್ಛವನ್ನು ಕೂರ್ಮರೂಪದಿಂದ ಆಶ್ರಯಿಸಿದ್ದಾರೆ. ಶೇಷ ದೇವರು ವಾಯು ಕೂರ್ಮದ ಪುಚ್ಛ(ಬಾಲ)ವನ್ನಾಶ್ರಯಿಸಿ ಭುವಾದಿ ಲೋಕಗಳನ್ನು ಧರಿಸಿದ್ದಾನೆ. ಶೇಷನ ಶಿರಸ್ಸಿನಲ್ಲಿ ಸಮಸ್ತಜಗತ್ತು ಆಶ್ರಯಿಸಿಕೊಂಡಿದೆ (ಪ್ರತಿಷ್ಠಿತವಾಗಿದೆ). ಬೃಹದ್ಭಾಷ್ಯದಲ್ಲೂ ಇದನ್ನೇ ಹೇಳಿರುತ್ತಾರೆ. ಈ ಪ್ರಸಿದ್ಧ ವಾಯುವೇ ಕೂರ್ಮರೂಪದಿಂದ ತನ್ನ ಪುಚ್ಛದಲ್ಲಿ ಶೇಷನನ್ನು ಧರಿಸಿ ತಾನು ಕೂರ್ಮರೂಪಿ ಶ್ರೀಹರಿಯ ಪುಚ್ಛವನ್ನು ಆಶ್ರಯಿಸಿರುತ್ತಾನೆ. ಹೀಗೆ ಹೇಳಿದೆ.

**ಅಸ್ಯಪಾದಾಹಿ ಚತ್ವಾರಃ ಅಂಡಕೋಣೇಚ ಸಂಸ್ಥಿತಾಃ । ಉರಶ್ಚ ಭೂಮಿಸಂಶ್ಲಿಷ್ಟಂ ಅತಿರಿಚ್ಯ ಭುವಂ ಪುನಃ । ಪಾರ್ಶ್ವತಃ ಪುಚ್ಛೌ ತಶ್ಚೈವ ಶಿರಶ್ಚೋದಕ ಸಂಸ್ಥಿತಂ । ಆಕಾಶಮುದರೇತಸ್ಯ ದ್ಯೌಃ ಪೃಷ್ಠೇ ಸಂಸ್ಥಿತಾ ವಿಭೋಃ । ಸಪ್ತಮಸ್ಕಂಧಗತಾಲ್ಲೋಕಾನ್ಯೋಽಬಿಭರ್ತಿ ಮಹಾಬಲಃ ಇತಿ । ಬ್ರಹ್ಮಾಂಡಸ್ಯ ಪ್ರಯೋಜನಮಾಹ । ಸರ್ವ ಪ್ರಾಣಿನಾಮಿತಿ ।**

**೫೦.ಸಂ. ಸರ್ವಪ್ರಾಣಿನಾಂ ಚತುರ್ದಶ ಲೋಕಾನಾಂ ಚ ಆವಾಸಸ್ಥಾನಂ ।**

**ತದುಕ್ತಂ ನಿರ್ಣಯೇ । ತಸ್ಮಿನ್ನವಿಷ್ಣ್ವಾಹರಿಣೈವಸಾರ್ಧಂ ಸರ್ವೇಸುರಾಸ್ತಸ್ಯ ಬಭೂವನಾಭೇರಿತ್ಯಾದಿ । ಚತುರ್ದಶಲೋಕ ಸೃಷ್ಟಿಶ್ಚ ಪದ್ಮಸೃಷ್ಟಿ ಪ್ರಕರಣೇ ವಕ್ಷ್ಯತೇ । ಪುನಃ ಬ್ರಹ್ಮಾಂಡೇ ವಿಶೇಷಣ ಮಾಹ । ತದುಕ್ತಂ ಬೃಹದ್ಭಾಷ್ಯೇ ।**

**೫೧.ಸಂ. ಸಂಧಿದೇಶೇ ಕ್ಷುರಧಾರೋಪಮಸುಷಿರಯುಕ್ತಂ । ತದಭಿಮಾನೀ ಚತುರ್ಮುಖಃ ।**

ಕೂರ್ಮರೂಪಿ ಹರಿಗೆ ನಾಲ್ಕು ಪಾದಗಳು, ಅಂಡೋದಕದ ಮೂಲೆಗಳಲ್ಲಿವೆ. ಎದೆಗೆ ಭೂಮಿಯು ಆನಕೊಂಡಿದೆ. ಪುನಃ ಭೂಮಿಯ ಒಂದು ಭಾಗದಿಂದ ಪ್ರತ್ಯೇಕವು ಅದೆ ಪಾರ್ಶ್ವ (ಪಕ್ಕೆ)ಗಳು ಪುಚ್ಛ(ಬಾಲ), ಶಿರಸ್ಸು ಅಂಡೋದಕದಲ್ಲಿದೆ.

ಉದರ (ಹೊಟ್ಟೆಯಲ್ಲಿ) ಆಕಾಶ, ಬೆನ್ನಿನಲ್ಲಿ ಸ್ವರ್ಗ ಸಂಸ್ಥಿತವಾಗಿದೆ ಭುಜಗಳಲ್ಲಿ ಏಳು ಲೋಕಗಳನ್ನು ಪ್ರಭುವಾದ ಮಹಾಬಲನಾದ ಸ್ವಾಮಿ ಧರಿಸಿರುವವನಾಗಿದ್ದಾನೆ. ಇಂತಹ ಬ್ರಹ್ಮಾಂಡ ಪ್ರಯೋಜನವನ್ನು ಹೇಳುತ್ತಾರೆ. ಈ ಬ್ರಹ್ಮಾಂಡವು ಹದಿನಾಲ್ಕು ಲೋಕಗಳಿಗೂ ಸರ್ವ ಜೀವರಾಶಿಗಳಿಗೂ ಆವಾಸ ಸ್ಥಾನವಾಗಿದೆ. ಇದನ್ನು ನಿರ್ಣಯದಲ್ಲಿ ಹೇಳಿರುತ್ತಾರೆ. ಶ್ರೀ ಹರಿಯೊಂದಿಗೆ ಆ ಬ್ರಹ್ಮಾಂಡದಲ್ಲಿ ಎಲ್ಲಾ ದೇವತೆಗಳೂ ಪ್ರವೇಶಮಾಡಿ ಅಲ್ಲಿ ಪುನಃ ಪರಮಾತ್ಮನ ನಾಭಿಯಿಂದ ಹುಟ್ಟಿದರು. ಇವೇ ಮೊದಲಾಗಿ ಹೇಳಿರುತ್ತಾರೆ. ಹದಿನಾಲ್ಕು ಲೋಕಗಳ ಸೃಷ್ಟಿಯ ವೈಶಿಷ್ಟ್ಯವನ್ನು ಪದ್ಮ ಸೃಷ್ಟಿಯ ಪ್ರಕರಣದ್ದಲ್ಲಿ ಹೇಳಲ್ಪಡುತ್ತದೆ. ಪುನಃ ಬ್ರಹ್ಮಾಂಡದಲ್ಲಿ ವಿಶೇಷವನ್ನು ಹೇಳುತ್ತಾರೆ. ಬ್ರಹ್ಮಾಂಡದ ಎರಡು ಕಪಾಲಗಳ ಮಧ್ಯದಲ್ಲಿ ಕತ್ತಿಯ ತುದಿಯಂತೆ (ಮೊನೆ) ಸಂದು ಇದೆ ಅದಕ್ಕೆ ಅಭಿಮಾನಿ ಚತುರ್ಮುಖ ಬ್ರಹ್ಮದೇವರು, ಬೃಹದ್ಭಾಷ್ಯದಲ್ಲಿ ಹೇಳಿದೆ.

**ಪಂಚಾಶತ್ಕೋಟಿ ವಿಸ್ತೀರ್ಣಂ ಏವಮಂಡಾಂತ ಇಷ್ಯತೇ । ತತಸ್ತ್ವಂಡಂಚ ಸೌವರ್ಣಂ ತದ್ಭಿನ್ನಂ ಹರಿಣಾ ಪುರಾ । ಸುಷಿರಂ ಸರ್ವತೋ ದಿಕ್ಷುಕ್ಷುರಧಾರೋಪಮಂತತಃ । ಸುಪರ್ಣೋ ವಾಯುವೇ ತೇನ ಮುಕ್ತಾನ್ ಕಾಮಾನ್ಪ್ರಯಚ್ಛತೀತಿ । ಬ್ರಹ್ಮಾಂಡಸ್ಯ ಅಭಿಮಾನಿನ ಮಾಹ । ತದಭಿಮಾನೀತಿ । ತದುಕ್ತಂ ತೃತೀಯ ತಾತ್ಪರ್ಯೇ । ಅಚೇತನಾದ್ಯತಸ್ತ್ವಂಡಾದ್ಬ್ರಹ್ಮಾ ಸಮಜನಿಸ್ಫುಟಂ । ಅತೋ ಬ್ರಹ್ಮಾಂಡಮಿತ್ಯಾಹುಃ ವಿರಾಟ್‌ಬ್ರಹ್ಮಾ ಪ್ರಕಾಶನಾದಿತಿ । ಮಣಿಮಂಜರ್ಯಾಮಪಿ ।**

ಹಿಂದೆ ಹೇಳಿದಂತೆ ಒಟ್ಟು ಐವತ್ತು ಕೋಟಿ ವಿಸ್ತೀರ್ಣವಾದದ್ದಾಯಿತು. ಮೊದಲು ಶ್ರೀ ಹರಿಯಿಂದ ಸುವರ್ಣಮಯವಾದ ಆ ಅಂಡವು ಒಡೆಯಲ್ಪಟ್ಟಿತು. ಅದರಿಂದ ಸುತ್ತಲೂ ಸೀಳಾಯಿತು ಕತ್ತಿಯ ತುದಿಯಂತೇ ಅಲ್ಲಿ ಪರಮಾತ್ಮನು ಪೂರ್ವ ವಾಯುವಿಗೆ ಮನೋಭೀಷ್ಟವನ್ನು ಪೂರ್ಣ ಮಾಡುವವನಾಗುತ್ತಾನೆ. ಬ್ರಹ್ಮಾಂಡದ ಅಭಿಮಾನಿಯನ್ನು ಹೇಳುತ್ತಾರೆ. ಬ್ರಹ್ಮಾಂಡಾಭಿಮಾನಿಯು ಚತುರ್ಮುಖ ಬ್ರಹ್ಮದೇವರು ಇದನ್ನು ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಅಚೇತನವಾದ ಅಂಡದಿಂದ ಚತುರ್ಮುಖ ಬ್ರಹ್ಮದೇವರು, ಆ ಅಂಡದಿಂದ ಬ್ರಹ್ಮ ಹುಟ್ಟಿದ್ದರಿಂದಲೇ ಅದಕ್ಕೆ ಬ್ರಹ್ಮಾಂಡವೆಂದು ಹೆಸರಾಯಿತು. ಮಣಿಮಂಜರಿಯಲ್ಲಿ ಹೇಳಿದೆ.

**ತತಃ ಕೂಟಸ್ಥಮಸೃಜತ್ ವಿಧಿಂ ಬ್ರಹ್ಮಾಂಡ ವಿಗ್ರಹಂ ಇತಿ । ಚತುರ್ಮುಖ ಇತ್ಯುಪಲಕ್ಷಣಂ । ಶಕ್ರಾದಯೋಪೀತಿ ದ್ರಷ್ಟವ್ಯಂ । ತದುಕ್ತಂ ತೃತೀಯ**

**ತಾತ್ಪರ್ಯೇ । ಇದಮಂಡಂ ಜಗತ್ಸರ್ವಂ ಶಕ್ರ ದೇಹಂ ವಿದುರ್ಬುಧಾ: ಇತಿ । ಶೇಷ ಸುಪರ್ಣಾದೀನಾಮಪಿ ಸ್ವಸ್ವಾಭಿಮನ್ಯಮಾನತತ್ವಾಂಶದ್ವಾರಾ ಬ್ರಹ್ಮಾಂಡಾಭಿಮಾನಿತ್ವಂ ಜ್ಞೇಯಂ । ಇದಾನೀಂ ಅವಿದ್ಯಾಂ ನಿರೂಪಯಿತುಂ ತಸ್ಯಾ ಬ್ರಹ್ಮಾಡಾಂತಃ ಬ್ರಹ್ಮಣಾ ಸೃಷ್ಟತ್ವಮಭಿಪ್ರೇತ್ಯಾಂತಃ । ಸೃಷ್ಟಿಮಾಹ ।**

**ಪ.ಸಂ. ತತೋ ಭಗವಾನ್ ಮಹದಾದಿ ತತ್ವಾಂಶಾನ್ ಸ್ವೋದರೇ ನಿಕ್ಷಿಪ್ಯ ಬ್ರಹ್ಮಾಂಡಾಂತಃ ಪ್ರವಿವೇಶ ।**

ಅನಂತರ ಬ್ರಹ್ಮಾಂಡವೇ ದೇಹವಾಗಿವುಳ್ಳ ನಿರ್ವಿಕಾರನಾದ ಬ್ರಹ್ಮದೇವರನ್ನು ಹುಟ್ಟಿಸಿದನು, ಚತುರ್ಮುಖನನ್ನೆಂದು ತಿಳಿಯಬೇಕು. ಇಂದ್ರಾದಿಗಳೂ ಅಂಡಾಭಿಮಾನಿಗಳೆಂದು ತಿಳಿಯಬೇಕು. ಇದನ್ನೂ ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಈ ಸರ್ವ ಜಗದಾತ್ಮಕವಾದ ಅಂಡವನ್ನು ಇಂದ್ರನ ದೇಹವಾಗಿಯೂ ತಿಳಿಯುತ್ತಾರೆ ಜ್ಞಾನಿಗಳು ಎಂದು, ಮತ್ತು ಶೇಷ, ಗರುಡನೇ ಮೊದಲಾದ ದೇವತೆಗಳು ತಮ್ಮ ತಮ್ಮ ಅಭಿಮನ್ಯತತ್ವಾಂಶಗಳಿಂದ ಬ್ರಹ್ಮಾಂಡಾಭಿಮಾನಿಗಳೇ ಆಗಿರುತ್ತಾರೆ. ಮುಂದೆ ಅವಿದ್ಯಾವನ್ನು ನಿರೂಪಿಸಲು ಬ್ರಹ್ಮಾಂಡದ ಒಳಗೆ ಬ್ರಹ್ಮದೇವರಿಂದ ಆದ ಅವಿದ್ಯಾ ಆರಂಭಿಸಿ ಅಂತಃ ಸೃಷ್ಟಿಯನ್ನು ಹೇಳುತ್ತಾರೆ. ನಂತರ ಭಗವಂತನು ಮಹದಾದಿ ತತ್ವಾಂಶಗಳನ್ನು ತನ್ನ ಉದರದಲ್ಲಿರಿಸಿಕೊಂಡು ಬ್ರಹ್ಮಾಂಡದ ಒಳಗೆ ಪ್ರವೇಶ ಮಾಡಿದನು.

**ತದುಕ್ತಂ ಪ್ರಥಮಸ್ಕಂಧ ಭಾಗವತೇ । ಜಗೃಹೇ ಪೌರುಷಂ ರೂಪಂ ಭಗವಾನ್ಮಹದಾದಿಭಿಃ । ಸಂಭೂತಂ ಷೋಡಶಕಲಂ ಆದೌ ಲೋಕ ಸಿಸೃಕ್ಷಯೇತಿ। ತತ್ತಾತ್ಪರ್ಯಂ ಚ । ಅಂತರ್ಗತ ಮಹದಾದೀತಿ । ಬ್ರಹ್ಮಾಂಡಾತಃ ಪ್ರವಿವೇಶೇತಿ । ತದುಕ್ತಂ ತೃತೀಯಸ್ಕಂಧಭಾಗವತೇ । ಹಿರಣ್ಮಯಾದಂಡಕೋಶಾದುತ್ಥಾಯ ಸಲಿಲೇಶಯಾತ್ । ಸಮಾವಿಶ್ಯ ಮಹಾದೇವೋ ಬಹುಧಾನಿರ್ಬಿಭೇದಖಂ ಇತಿ ।**

ಪ್ರಥಮಸ್ಕಂಧ ಭಾಗವತದಲ್ಲಿ ಇದನ್ನು ಹೇಳಿದೆ. ಪರಮಾತ್ಮನು ಮೊದಲು ಷೋಡಶಕಲ್ಯಾಗಳಿಂದ ಕೂಡಿದ ಲೋಕವನ್ನು ಸೃಜಿಸಲು ಮನಮಾಡಿ, ಮಹದಾದಿಗಳಿಂದ ಕೂಡಿ ಪುರುಷ ಸಂಬಂಧಿ ರೂಪವನ್ನು ತಾಳಿದನು. ಬ್ರಹ್ಮಾಂಡಾಂತಃ ಪ್ರವಿಷ್ಟನಾದನು. ಇದನ್ನೂ ತೃತೀಯಸ್ಕಂಧ ಭಾಗವತದಲ್ಲಿ ಹೇಳಿದೆ. ನೀರಿನಲ್ಲಿದ್ದ ಅಂಡವನ್ನು ಬಹು ರೀತಿಯಾಗಿ ವಿಭಾಗಗೊಳಿಸಿದನು

ಆಕಾಶವನ್ನೂ ವಿಂಗಡಿಸಿದನು.

**ಇದಾನೀಂ ನಾಭಿಕಮಲ ಸೃಷ್ಟಿಮಾಹ । ತದೋದಕೇತಿ ।**

**ಪ.ಸಂ. ತದೋದಕೇ ಶಯಾನಸ್ಯ ಭಗವತೋನಾಭೇ ಪದ್ಮಮಭೂತ್ ಪದ್ಮೇ ಚ ಚತುರ್ಮುಖೋಽಜನಿ ।**

**ತದುಕ್ತಂ ತೃತೀಯಸ್ಕಂಧೇ । ಚತುರ್ಯುಗಾನಾಂಚ ಸಹಸ್ರಮಪ್ಸುಸ್ವಪಂಸ್ತ್ವಯೋದೀರಿತಯಾತ್ಮಶಕ್ತ್ಯಾ । ಕಾಲಾಖ್ಯಯಾಸಾದಿತ ಕರ್ಮತಂತ್ರೋ ಲೋಕಾನಪೀಮಾನ್ದದೃಶೇಸ್ವದೇಹೇ ತಸ್ಯಾತ್ಮಸೂಕ್ಷ್ಮಾಭಿಃ ನಿವಿಷ್ಟದೃಷ್ಟೇರಂತರ್ಗತೋಽರ್ಥೋರಜಸಾ ತನೀಯಾನ್ । ಗುಣೇನ ಕಾಲಾನುಗತೇನ ವಿದ್ಧಃ ಶುಷ್ಯಂತದಾಭಿದ್ಯತ ನಾಭಿದೇಶಾತ್ । ಸಪದ್ಮಕೋಶಃ ಸಹಸೋದದತಿಷ್ಠತ್ಕಾಲೇನ ಕರ್ಮ ಪ್ರತಿಬೋಧಿತೇನ । ಸ್ವರೋಚಿಷಾ ತತ್ಸಲಿಲಂ ವಿಶಾಲಂ ವಿದ್ಯೋತಯನ್ನರ್ಕ ಇವಾತ್ಮಯೋನಿಃ । ತಲ್ಲೋಕಪದ್ಮಂ ಸಉ ಏವವಿಷ್ಣುಃ ಪ್ರಾವೀವಿಶತ್ಸರ್ವ ಗುಣಾವಭಾಸಂ ಇತಿ ತಥಾ ।**

ಮುಂದೆ ಪದ್ಮನಾಭ ರೂಪ ಪರಮಾತ್ಮನ ನಾಭಿಯಿಂದ ಸೃಷ್ಟಿಯನ್ನು ಹೇಳುತ್ತಾರೆ. ಬ್ರಹ್ಮಾಂಡದ ಒಳಗೆ ಘನೋದಕದಲ್ಲಿ ಮಲಗಿರುವ ಪರಮಾತ್ಮನ ನಾಭಿಯಲ್ಲಿ ಪದ್ಮವಾಯಿತು. ಆ ಪದ್ಮದಲ್ಲಿ ಚತುರ್ಮುಖ ಬ್ರಹ್ಮದೇವರು ಹುಟ್ಟಿದರು. ಇದನ್ನು ತೃತೀಯ ಸ್ಕಂಧ ಭಾಗವತದಲ್ಲಿ ನಾಲ್ಕು ಯುಗಗಳ ಸಹಸ್ರ ಕಾಲ ಪರ್ಯಂತ ನೀರಿನಲ್ಲಿ ಮಲಗಿದ್ದು ತನ್ನ ಶಕ್ತಿಯಿಂದ ಪ್ರೇರಿತನಾಗಿ ಕಾಲಾನುಸಾರವಾದ ಕರ್ಮತಂತ್ರ ಉಳ್ಳವನಾಗಿ ತನ್ನ ದೇಹದಲ್ಲಿ ಲೋಕಗಳನ್ನು ನೋಡುವವನಾದನು. ಸೂಕ್ಷ್ಮವಾಗಿ ನಿವೇಶ ದೃಷ್ಟಿಯುಳ್ಳ ಪರಮಾತ್ಮನ ಒಳಗಿದ್ದ ಪದಾರ್ಥಗಳೆಲ್ಲವೂ ರಜೋಗುಣದಿಂದ ಯುಕ್ತವಾಗಿ ಕಾಲಾನುಸಾರವಾಗಿ ವಿದ್ಧವಾಗಿ ನಾಭಿ ದೇಶದಿಂದ ಒಂದು ರಂಧ್ರವು ಒಡೆಯಿತು. ಆ ರಂಧ್ರದಿಂದ ತಕ್ಷಣದಲ್ಲೇ ಚತುರ್ಮುಖ ಕಾರಣವಾದ ಪದ್ಮಕೋಶವು ಎದ್ದು ಬಂದಿತು. ಕಾಲ ಕರ್ಮಗಳಿಗನುಗುಣವಾಗಿ, ಆ ಪದ್ಮವು ಅಗಾಧವಾದ ಉದಕದಲ್ಲಿ ಪ್ರತಿ ಸೂರ್ಯನಂತೆ ಪ್ರಕಾಶಿಸಿತು. ವಿಷ್ಣುವು * ಚತುರ್ಮುಖಬ್ರಹ್ಮಗೆ ಆಶ್ರಯವಾದ ಹದಿನಾಲ್ಕು ಲೋಕಾತ್ಮಕವಾದ ಸಕಲಗುಣ ಪ್ರಕಾಶಕವಾದ ಪದ್ಮವನ್ನು ಪ್ರವೇಶ ಮಾಡುವವನಾದನು ಹಾಗೆ.

**ಯನ್ನಾಭಿಪದ್ಮಭವನಾದಹಮಾವಿರಾಸಂ ಲೋಕತ್ರಯೋಪಕರಣೋ ಯದನುಗ್ರಹೇಣೇತಿ । ನಾಭಿ ಹ್ರದಾದಿಹ ಸತೋಂಭಸಿ ಯಸ್ಯ ಪುಂಸಃ ವಿಜ್ಞಾನಶಕ್ತಿರಿಹ ಮಾಸಮನಂತ ಶಕ್ತೇರಿತಿ । ಭಾಷ್ಯೇಽಪಿ । ಅಜಸ್ಯನಾಭಾವಿತಿ**

**ಯಸ್ಯ ನಾಭೇರಭೂತ ಶ್ರುತೇಃ ಪುಷ್ಕರಂ ಲೋಕಸಾರಮಿತಿ । ವಿಶ್ವಕರ್ಮಸೂಕ್ತೇಪಿ ಅಜಸ್ಯನಾಭಾವದ್ಧ್ಯೇಕಮರ್ಪಿತಂ ಯಸ್ಮಿನ್ ವಿಶ್ವಾನಿ ಭುವನಾನಿತಸ್ಥುರಿತಿ ।**

ಚತುರ್ಮುಖ ಬ್ರಹ್ಮದೇವರು ನಾನು ಯಾವನ ನಾಭಿಕಮಲವನ್ನೇ ಭವನವಾಗಿ ಬದುಕಿದ್ದೇನೆಯೋ, ಯಾವನಿಂದಲೇ ಹುಟ್ಟಿದೆನೋ, ಯಾವನು ಗ್ರಹದಿಂದಲೇ ಲೋಕೋಪಕಾರಕನಾಗಿದ್ದೇನೆಯೋ, ಎಂದು ಸ್ತುತಿಸಿರುತ್ತಾರೆ. ಮತ್ತೂ ಯಾವ ಅನಂತ ಶಕ್ತಿ ಪೂರ್ಣನಾದವನ ನಾಭಿಯಿಂದಲೇ ಅಗಾಧವಾದ ಉದಕದದಲ್ಲಿ ಸ್ಥಿತಿಗೊಂಡಿದ್ದೇನೆಯೋ, ಯಾವ ಪುರುಷರೂಪಿ ಪರಮಾತ್ಮನ ಅನುಗ್ರಹದಿಂದಲೇ ವಿಜ್ಞಾನ ಭಾಗಿ ಆಗಿದ್ದೇನೆಯೋ ಹೀಗೆ ಸ್ತುತಿಸಿರುತ್ತಾರೆ. ಭಾಷ್ಯದಲ್ಲಿಯೂ ಲೋಕಸಾರವಾದ ಕಮಲವು ಹುಟ್ಟಿತು ಎಂದು, ವಿಶ್ವಕರ್ಮ ಸೂಕ್ತದಲ್ಲೂ ಅಜನ ನಾಭಿಯಲ್ಲಿ ಪದ್ಮವಾಯಿತು. ಅದನ್ನಾಶ್ರಯಿಸಿಯೇ ಹದಿನಾಲ್ಕು ಲೋಕಗಳು ಸ್ಥಿತಗೊಂಡವು ಎಂದು.

**ನನು ನಾಭಿಪದ್ಮಸ್ಯೋಪಾದಾನಂ ನ ಪರಮಾತ್ಮಾ । ತಸ್ಯ ನಿರ್ವಿಕಾರತ್ವಾತ್। ನಾಪಿ ಪಂಚಭೂತಾನಿ ಪದ್ಮಾತ್ಪೂರ್ವಮನುತ್ಪತ್ತೇಃ ಇತಿ ಚೇನ್ನ । ಭಗವದುದರಾಂತರ್ಗತಗರ್ಭೋದಕಸ್ಯೈವ ಪದ್ಮೋಪಾದಾನತ್ವಾತ್ । ತದುಕ್ತಂ ತೃತೀಯಸ್ಕಂಧ ತಾತ್ಪರ್ಯೇ । ಉದಕಂ ವಾಯುನಾಶುಷ್ಕಂಭಿನ್ನಂಪದ್ಮಮಭೂತ್ ಹರೇರಿತಿ । ಅತ ಏವಾಂತರ್ಗತೋಽರ್ಥೋರಜಸಾತನೀಯಾನಿತ್ಯಾದಿ ತೃತೀಯ ಭಾಗವತ ಏವೋಕ್ತಮಿತಿ ।**

**ಪ.ಸಂ. ತಸ್ಮಾತ್ಪುನರ್ದೇವಾದಯೋ ಮನ ಆದೀನಿ ಜಾತಾನಿ ।**

ನಾಭಿಯಲ್ಲಿ ಪದ್ಮವನ್ನು ಹೇಳಿತು. ಆ ಪದ್ಮಕ್ಕೆ ಉಪಾದಾನ ಕಾರಣ ಯಾವುದು? ಪರಮಾತ್ಮನಂತೂ ಅಲ್ಲ ನಿರ್ವಿಕಾರಿ ಆದ್ದರಿಂದ, ಪಂಚಭೂತಗಳೂ ಅಲ್ಲ ಭೂತಗಳ ಸೃಷ್ಟಿಗಿಂತಲೂ ಮೊದಲೇ ಇರುವುದರಿಂದ, ಉಪಾದನವಿಲ್ಲ ಎನಬಾರದು. ಭಗವಂತನ ಉದರದಲ್ಲಿದ್ದ ಗರ್ಭೋದಕಕ್ಕೆ ಉಪಾದಾನತೆಯು. ಇದನ್ನೂ ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿದೆ ಪರಮಾತ್ಮನ ನಾಭಿಯಲ್ಲಿ ವಾಯುವಿನಿಂದ ಶುಷ್ಕವಾದ ಉದಕವೇ ಪದ್ಮವಾಯಿತು. ಎಂದು. ಆದ್ದರಿಂದಲೇ ದ್ವಿತೀಯ ಭಾಗವತದಲ್ಲಿ ಭಗವದಂತರ್ಗತವಾದ ಉದಕವೇ ರಜೋಗುಣದಿಂದ ವ್ಯಾಪ್ತವಾಗಿ ಪದ್ಮವಾಯಿತು ಎಂದಿರುತ್ತದೆ. ಆದ್ದರಿಂದಲೇ ಪುನಃ ದೇವಾದಿಗಳು

ಮನ ಆದಿಗಳು ಹುಟ್ಟಿದವು.

**ಬ್ರಹ್ಮಾಂಡಾದ್ಬಹಿರ್ಜಾತತ್ವಾತ್ತದಪೇಕ್ಷಯಾ ಪುನರಿತಿ । ಸ್ವಸ್ವಾಂಶೈರಿತಿ ಶೇಷಃ । ತದುಕ್ತಂ ನಿರ್ಣಯೇ । ಲೋಕಾತ್ಮಕಂ ಪದ್ಮಮಮುಷ್ಯ ಮಧ್ಯೇ ಪುನರ್ವಿರಿಂಚೋಜನಿಸದ್ಗುಣಾತ್ಮಾ । ತಸ್ಮಾತ್ಪುನಃ ಸರ್ವಸುರಾಃ ಪ್ರಸೂತಾಃ । ತತೋವಿರಿಂಚೋ ಭುವನಾನಿ ಸಪ್ತಸಪ್ತಕಾನ್ಯಾಶು ಚಕಾರಸೋಬ್ಜಾತ್ । ತಸ್ಮಾಚ್ಚ ದೇವಾ ಋಷಯಃ ಪುನಶ್ಚವೈಕಾರಿಕಾದ್ಯಾಃ ಸಶಿವಾಬಭೂವುಃ ।**

ಬ್ರಹ್ಮಾಂಡದ ಹೊರಗೆ ಹುಟ್ಟಿದ ದೃಷ್ಟಿಯಿಂದ ಪುನಃ ಎಂದು ಹೇಳಿದೆ. ಎಲ್ಲಾ ದೇವತೆಗಳೆಂದು ತಿಳಿಯಬೇಕು. ಇದನ್ನು ನಿರ್ಣಯದಲ್ಲಿ ಪರಮಾತ್ಮನ ನಾಭಿಯಿಂದ ಲೋಕಾತ್ಮಕವಾದ ಪದ್ಮ ಹುಟ್ಟಿತು. ಅಲ್ಲಿ ಪುನಃ ಸದ್ಗುಣ ಸ್ವರೂಪನಾದ ಚತುರ್ಮುಖನು ಪುನಃ ಹುಟ್ಟಿದನು ನಂತರ ಚತುರ್ಮುಖನಿಂದ ಎಲ್ಲಾ ದೇವತೆಗಳು ಹುಟ್ಟಿದರು ನಂತರ ಚತುರ್ಮುಖನಿಂದ ಕಮಲದಲ್ಲಿ ಹದಿನಾಲ್ಕು ಲೋಕಗಳು ವಿಂಗಡಿಸಲಾಯಿತು. ಅಲ್ಲಿ ಶಿವನಿಂದ ವಿಶಿಷ್ಟರಾದ ವೈಕಾರಿಕದೇವತೆಗಳು ಹುಟ್ಟಿದರು. ಮೊದಲು ಅಹಂಕಾರ ತತ್ವಾಭಿಮಾನಿ ಶಿವನು ನಂತರ ಬುದ್ಧ್ಯಭಿಮಾನಿ ವಾಯುವು, ಮನಸ್ಸಿನಿಂದ ಇಂದ್ರಾದಿಗಳು ಹಾಗೆ.

**ಅಗ್ರೇ ಶಿವೋಹಂ ಭವ ಏವ ಬುದ್ಧೇಃ ಉಮಾ ಮನೋಜೌ ಸಹಶಕ್ರಕಾಮೌ। ಗುರುರ್ಮನುರ್ದಕ್ಷ ಉತಾನಿರುದ್ಧಾಃ ಸಹೈವ ಶಚ್ಯಾ ಮನಸಃ ಪ್ರಸೂತಾಃ । ಚಕ್ಷುಃ ಶ್ರುತಿಭ್ಯಾಂ ಸ್ಪರ್ಶಾತ್ಸಹೈವ ರವಿಃ ಶಶೀಧರ್ಮ ಇಮೇ ಪ್ರಸೂತಾಃ । ಜಿಹ್ವಾಭವೋ ವಾರಿಪತಿರ್ನಸೋಶ್ಚ ನಾಸತ್ಯದಸ್ರೌ ಕ್ರಮಶಃ ಪ್ರಸೂತಾಃ । ತತಸ್ಸನಾದ್ಯಾಶ್ಚ ಮರೀಚಿ ಮುಖ್ಯಾಃ ದೇವಾಶ್ಚ ಸರ್ವೇ ಕ್ರಮಶಃ ಪ್ರಸೂತಾಃ ।**

ಗುರು (ಬೃಹಸ್ಪತಿ) ಮನು, ದಕ್ಷ, ಅನಿರುದ್ಧ ಇವರೆಲ್ಲರೂ ಏಕಕಾಲದಲ್ಲಿ ಶಚಿಯೊಂದಿಗೆ ಮನಸ್ಸಿನಿಂದ ಹುಟ್ಟಿದರು.

ಚಕ್ಷುಸು, ಶ್ರವಣ, ಸ್ಪರ್ಶ ಇವುಗಳಿಂದ ಸೂರ್ಯ, ಚಂದ್ರ, ಧರ್ಮ ಇವರುಗಳು ಹುಟ್ಟಿದರು. ವರುಣನು ನಾಲಿಗೆಯಿಂದ ಹುಟ್ಟಿದನು. ನಾಸತ್ಯದಸ್ರರು (ಅಶ್ವಿನೀದೇವತೆಗಳು) ಕ್ರಮವಾಗಿ ಹುಟ್ಟಿದರು. ನಂತರ ಸನಕಾದಿಗಳು, ಮರೀಚ್ಯಾದಿಗಳು. ಮಿಕ್ಕದೇವತೆಗಳು ಕ್ರಮವಾಗಿ ಹುಟ್ಟಿದರು.

**ತತಃ [illegible] ಋಷಯೋ ಮನುಷ್ಯಾಃ ಜಗದ್ವಿಚಿತ್ರಂ**

**ಸವಿರಿಂಚತೋಭೂತ್ । ಐತರೇಯ ಭಾಷ್ಯೇಪಿ । ಸಐಚ್ಛದ್ಭಗವಾನ್ವಿಷ್ಣುಃ ಸ್ರಷ್ಟುಂ ಲೋಕಾಭಿಮಾನಿನಃ । ಲೋಕಾಭಿಮಾನವದ್ದೇವಾಃ ಜಡಲೋಕಾಂಶ್ಚಶಾಶ್ವತಃ ಸಲೋಕೇಭ್ಯಃ ಪೂರ್ವತನಾನ ಬ್ರಾಹ್ಮ್ಯಾನ್ಮಹದಾದಿಕಾನ್ । ಬ್ರಹ್ಮಶರ್ವಾದಿಕಾನ್ಸೃಷ್ಟ್ವಾಜಡೈಃ ಸಹ ಜನಾರ್ದನಃ ದಿವಮಾಕಾಶಮುರ್ವೀಂಚ ಸಸೃಜೇಚ ದ್ವಿಸಪ್ತಕಾನ್ । ಇತಿ ಸೃಷ್ಟ್ವಾಸಲೋಕಾಂಸ್ತು ಪುನಸ್ಸ್ರಾನೇವ ಲೋಕಪಾನ್ ।**

ನಂತರ ದೇವತೆಗಳು ಋಷಿಗಳು ಮನುಷ್ಯರು ಹೀಗೆ ಚತುರ್ಮುಖನಿಂದ ವಿಚಿತ್ರ ಜಗತ್ತಾಯಿತು. ಐತರೇಯ ಭಾಷ್ಯದಲ್ಲಿಯೂ, ಸರ್ವ ಸಮರ್ಥನಾದ ಪರಮಾತ್ಮನು ಲೋಕಾಭಿಮಾನಿಗಳನ್ನು ಸೃಜಿಸಲು ಅಪೇಕ್ಷೆ ಪಟ್ಟವನಾಗಿ ಲೋಕಾಭಿಮಾನವುಳ್ಳ ಲೋಕಕ್ಕಿಂತಲು ಪೂರ್ವರಾದ ಬ್ರಹ್ಮಶರ್ವಾದಿಗಳನ್ನು, ಜಡಗಳಿಂದ ಸ್ವರ್ಗಲೋಕವನ್ನು ಆಕಾಶವನ್ನು ಭೂಮಿಯನ್ನೂ ಹದಿನಾಲ್ಕು ಲೋಕಗಳನ್ನೂ ಈ ರೀತಿ ಸೃಜಿಸಿದನು. ಪುನಃ ಆಯಾ ಲೋಕಪಾಲಕರನ್ನು ಬ್ರಹ್ಮಾಂಡದ ಒಳಗೆ ಸೃಜಿಸಲು ಅಪೇಕ್ಷಿಸಿದನು. ಅವರಿಗೆ ಪೂಜ್ಯತೆ ಸಿದ್ಧಿಗಾಗಿ ಅವರ ಮೇಲೆ ದೃಷ್ಟಿಬೀರಿದನು.

**ಅಂಡಾಂತಃ ಸ್ರಷ್ಟುಮೈಚ್ಛತ್ತ ತೇಷಾಂ ಪೂಜ್ಯತ್ವ ಸಿದ್ಧಯೇ । ಅಮ್ಮಾನಕೇಭ್ಯಸ್ತೇಭ್ಯಃಸಪೂರ್ವಸೃಷ್ಟೇಭ್ಯ ಏವತು।ಸರ್ವಜೀವಾಧಿಕತ್ವಾತ್ತು ಬ್ರಹ್ಮಾಣಂ ಪುರುಷಾಭಿಧಂ । ಅಂಶೇನೋದ್ಧೃತ್ಯ ರುದ್ರಾದ್ಯೈಃ ಸಹಜೈಸಮಯೋಜಯತ್ । ತಥೈವಾಚೇತನಾನಾಂ ಭಾಗಾನುದ್ಧೃತ್ಯ ಪಿಂಡವತ್ । ಚೇತನಾಚೇತನಂ ರಾಶಿಮೇಕಸ್ಥಂ ವಿದಧೇ ಪ್ರಭುಃ ।**

ಸರ್ವ ಜೀವೋತ್ತಮನಾದ್ದರಿಂದ ಪುರುಷ ಸಂಜ್ಞಕನಾದ ಬ್ರಹ್ಮದೇವರನ್ನು ಒಂದು ಅಂಶದಿಂದ ಉದ್ಧರಿಸಿ ರುದ್ರಾದಿಗಳಿಂದ ಪೂರ್ವದಲ್ಲಿ ಸೃಷ್ಟರಾಗಿದ್ದ ಅಬ್ಮಾಮಕ ದೇವತೆಗಳಿಂದಲೂ ಹಾಗೆ ಅಚೇತನ ಭಾಗವನ್ನೂ ಎತ್ತಿ ಹಿಡಿದು ಚೇತನಾಚೇತನರಾಶಿಯನ್ನು ಏಕತ್ರದಲ್ಲಿ ಮಾಡಿದನು. ಸರ್ವ ಪ್ರಭುವಾದ ಜಗನ್ನಾಥನು ಚೇತನಾಚೇತನಾತ್ಮಕ ಆ ಮುದ್ದೆಗೆ ಅಂಗಗಳನ್ನು ಬಯಸಿದನು.

**ಪುನರೈಚ್ಛತ್ ಜಗನ್ನಾಥಃ ತಸ್ಯಾಂಗೋತ್ಪತ್ತಿಮಚ್ಯುತಃ । ಅಂಡವನ್ಮುಖಮಸ್ಯಾಸೀತ್ ಪ್ರಥಮಂತು ಶಿರೋಭಿಧಂ । ಭಿನ್ನಮಾಸ್ಯಂ ಪುನಸ್ತಸ್ಯ ವಿಷ್ಣೋರೇವೇಚ್ಛಯಾ ವಿಭೋಃ । ತತ್ರವಾಙ್ನಾಮಕಂ ರೂಪಂ ವಹ್ನೇರಾಸೀತ್ಪುರಾತನಂ । ತಸ್ಮೈವಾಥದ್ವಿತೀಯಂ ಚ ಯದಗ್ನಿರಿತಿಗೀಯತೇ।**

**ತಥೈವ ನಾಸಿಕಾತೋಃ ಭೂಮ್ನುಖ್ಯ ವಾಯೋಃಸುತೋಮರುತ್ । ಪ್ರಾಣೋವಾಯುರಿತಿ ದ್ವೌ ಚ ಚಕ್ಷುಷಾಭೂತ್ತಥಾರವಿ: । ದ್ವಿರೂಪ ಏವ ಕರ್ಣಾಭ್ಯಾಂ ಮಿತ್ರ ಧರ್ಮಾಪ್ಯವಿತ್ತಪಾ: । ದಿಗ್ದೇವತಾ ದ್ವಿರೂಪೇಣ ಬಭೂವುಸ್ಸರ್ವ ಏವಚ । ಹೃದಯಾದ್ಗರುಡಾನಂತ ಶಿವಶಕ್ರಾ: ಪೃಥಕ್ ಪೃಥಕ್ । ಮನೋ ಬುದ್ಧ್ಯಾಭಿಮಾನಾಸ್ತೇತನ್ನಾಮಾನಶ್ಚ ಜಜ್ಞಿರೇ। ತ್ವಚಶ್ಚರೋಮನಾಮನೋ ವೃಕ್ಷನಾಮಾನ ಏವ ಚ । ದ್ವಿವಿಧಾ: ಪಾರಿಜಾತಾದ್ಯಾ: ಬಭೂವು: ಬ್ರಹ್ಮದೇಹತ: । ಹಸ್ತಾಭ್ಯಾಂ ದ್ವಿವಿಧ ಶಕ್ರ: ಪದ್ಭ್ಯಾಂ ತತ್ಸೂನುರೇವ ಚ । ಯಜ್ಞಸ್ತ್ವಜನಿಪಾಯೋಶ್ಚ ಯಮೋನಿಋತಿರೇವಚ । ರೇತೋಮ್ನಾಮಾದ ರೂಪಸ್ತು ಶಿವ ಏವತು ಗುಹ್ಯತ: । ಅಪಾನೋಮೃತ್ಯುರಿತಿ ಚಮುಖ್ಯೋಃನಾಭೇಶ್ಚ ಮಾರುತ: ಇತಿ ।**

ಆಗ ಆ ಅಂಡಕ್ಕೆ ಮುಖ ಹುಟ್ಟಿತು. ನಂತರ ಮೊದಲು ಶಿರಸ್ಸು ಉತ್ಪನ್ನವಾಯಿತು. ಪುನಃ ವಿಷ್ಣುವಿನ ಇಚ್ಛೆಯಿಂದ ಅಲ್ಲಿ ಅಗ್ನಿನಾಮಕರೂಪವು ವಾಙ್ನಾಮಕವಾಗಿ ಎರಡನೆಯದಾಗಿ ಹುಟ್ಟಿತು. ಹಾ । ನಾಸಿಕ (ಮೂಗು) ಮುಖ್ಯವಾಯು ಅವನ ದೆಸೆಯಿಂದ ಮರುತ್ ಆದನು ನಂತರ ಚಕ್ಷುಸ್ಸಾಯಿತು ಆದರಿಂದ ಪ್ರಾಣ, ವಾಯುವೆಂದು ಇಬ್ಬರಾದರು. ನಂತರ ಸೂರ್ಯ ಹುಟ್ಟಿದನು. ಕಿವಿಗಳಾದವು. ಆ ಕಿವಿಗಳಿಂದ ಮಿತ್ರ, ಧರ್ಮ, ವರುಣ, ಕುಬೇರರು ಹುಟ್ಟಿದರು. ದಿಗ್ ದೇವತೆಗಳು ಎರಡು ರೂಪದಿಂದ ಹಾಗೂ ಎಲ್ಲಾ ದೇವತೆಗಳು ಆದರು. ಹೃದಯದಿಂದ ಗರುಡು ಅನಂತ ಶೇಷ, ಶಿವ, ಶಕ್ರ, ಇವರುಗಳು ಪ್ರತ್ಯೇಕ ಪ್ರತ್ಯೇಕರಾಗಿ ಹುಟ್ಟಿದರು. ಮನಸ್ಸು, ಬುದ್ಧಿ, ಇವುಗಳಭಿಮಾನಿಗಳು ಆ ಹೆಸರುಗಳಿಂದಲೇ ಹುಟ್ಟಿದರು. ರೋಮದಿಂದ ವೃಕ್ಷಗಳು ಹುಟ್ಟಿದವು. ತ್ವಕ್‌ನಿಂದ ತನ್ನಾಮಕ ದೇವತೆಗಳು ಹುಟ್ಟಿದರು. ಆ ಬ್ರಹ್ಮನ ದೇಹದಿಂದ ಎರಡು ವಿಧವಾದ ಪಾರಿಜಾತಾದಿಗಳು ಹುಟ್ಟಿದವು. ಎರಡು ಹಸ್ತಗಳಿಂದ ಎರಡು ಶಕ್ತಿಗಳು ಹುಟ್ಟಿದವು. ಕಾಲುಗಳಿಂದ ಅವರ ಮಕ್ಕಳು ಹುಟ್ಟಿದರು. ಯಜ್ಞಗಳು ಹುಟ್ಟಿದವು. ಪಾಯುವಿನಿಂದ ಯಮ ನಿರುರುತಿಗಳು ಹುಟ್ಟಿದರು. ರೇತಸ್ಸಿನಿಂದ ಅಮ್ನಾಮಾದಿ ರೂಪಗಳು, ಗುಹ್ಯದಿಂದ ಶಿವನು, ಅಪಾನದಿಂದ ಮೃತ್ಯುವು ಮತ್ತು ನಾಭಿಯಿಂದ ಮುಖ್ಯವಾಯುವಾದ ಮರುತನು ಹೀಗೆ.

**ಏವಂ ದ್ವಿತೀಯ ತೃತೀಯ ಭಾಗವತೇಪಿ ಚತುರ್ಮುಖ ದೇಹಾತ್ ತ್ಸರ್ವದೇವಾನಾಂ ಉತ್ಪತ್ತಿ: ಪ್ರತಿಪಾದಿತಾ ದ್ರಷ್ಟವ್ಯಾ । ಏವಂ ಸರ್ವೇದೇವಾ:**

**ಕಶ್ಯಪಾದದಿತ್ಯಾಂ ದಿತ್ಯಾದಿಷು, ದೈತ್ಯಾದಯೋಜಾತಾಃ । ಏತದುಕ್ತಂನಿರ್ಣಯೇ ।**

ಹೀಗೆ ದ್ವಿತೀಯ ತೃತೀಯ ಭಾಗವತದಲ್ಲಿ ಚತುರ್ಮುಖ ಬ್ರಹ್ಮನ ದೇಹದಿಂದಾ ಉತ್ಪತ್ತಿ ಹೇಳಿರುವುದನ್ನು ತಿಳಿಯಬೇಕು. ಹಾಗೆ ಹಿಂದೆ ಹೇಳಿದಂತೆ ಹುಟ್ಟಿದ ದೇವತೆಗಳೆಲ್ಲರೂ ಪುನಃ ಕಶ್ಯಪರಿಂದ ಅದಿತಿಯಲ್ಲಿ ಎಲ್ಲಾ ದೇವತೆಗಳು, ದಿತಿಯಲ್ಲಿ ದೈತ್ಯರೂ ಹುಟ್ಟಿದರು. ಇದನ್ನು ನಿರ್ಣಯದಲ್ಲಿ ಹೇಳಿದೆ.

**ಪುನಶ್ಚಮಾರೀಚತಯೇವ ದೇವಾಃ ಜಾತಾ ಅದಿತ್ಯಾಂ ಅಸುರಾಶ್ಚ-ದಿತ್ಯಾಂ । ಗಾವೋಮೃಗಾಃ ಪಕ್ಷುರಗಾಶ್ಚ ಸತ್ವಾದಾಕ್ಷಾಯಣೇಷ್ವೇವ ಸಮಸ್ತ ಶೋಹೀತಿ । ಮಣಿಮಂಜರ್ಯಾಮಪಿ । ಕಶ್ಯಪಸ್ಯ ಮಹಾತ್ಮನಃ । ದಿತ್ಯಾಂತತೋ ಭವನ್ ದೈತ್ಯಾಃ ಅದಿತ್ಯಾಂ ಚ ಸುರಾಪುನಃ । ದನೌತು ದಾನವಾಃ ಕದ್ರೌನಾಗಾನಾನಾ ವಿಷೋಲ್ಬಣಾಃ । ಕೀಕಸಾಯಾಂ ಯಾತುಧಾನಾಃ ವಿನತಾಯಾಂತು ಪಕ್ಷಿಣಃ ಇತಿ । ಕಾಠಕ ಭಾಷ್ಯೇSಪಿ ।**

ಹೀಗೆ ಬ್ರಹ್ಮದೇಹದಿಂದ ಹುಟ್ಟಿದ ದೇವತೆಗಳೆಲ್ಲಾ ಮರೀಚಿ ಮಕ್ಕಳಾದ ಕಶ್ಯಪರಿಂದ ದಿತಿಯಲ್ಲಿ ದೈತ್ಯರು ಅದಿತಿಯಲ್ಲಿ ದೇವತೆಗಳು ದಕ್ಷ ಪುತ್ರಿಯರಿಂದ ಮಿಕ್ಕ ಪತ್ನಿಯರುಗಳಲ್ಲಿ ಗೋವುಗಳು, ಮೃಗಗಳು, ಪಕ್ಷಿಗಳೇ ಮೊದಲಾದವುಗಳು ಹುಟ್ಟಿದವು. ಮಣಿಮಂಜರಿಯಲ್ಲೂ ಇದೇ ಹೇಳಿದೆ. ಮರೀಚಿ ಪುತ್ರರಾದ ಕಶ್ಯಪರು ಅನೇಕ ಪ್ರಜರುಗಳನ್ನು ಪಡೆದು ಜಗತ್ತನ್ನು ವಿಶದಪಡಿಸಲು ಮನಮಾಡಿ ದಕ್ಷ ಪುತ್ರಿಯರಾದ ಹದಿಮೂರು ಹೆಣ್ಣುಮಕ್ಕಳನ್ನು ಪಡೆದು ದಿತಿಯಲ್ಲಿ ದೈತ್ಯರನ್ನು ಅದಿತಿಯಲ್ಲಿ ದೇವತೆಗಳನ್ನು, ದನುವಿನಲ್ಲಿ ದಾನವರುಗಳನ್ನು, ಕದ್ರುವಿನಲ್ಲಿ ಸರ್ಪಗಳನ್ನು, ವಿನಿತಾನಲ್ಲಿ ಪಕ್ಷಿಗಳನ್ನು ಹೀಗೆ ಪಡೆದರೆಂದು ಹೇಳಿದೆ. ಕಾಠಕ ಭಾಷ್ಯದಲ್ಲಿಯೂ.

**ಯಥಾ ಮುಖಾದಿಂದ್ರಶ್ಚಾಗ್ನಿಶ್ಚೇತ್ಯಾದಿನಾ ಜ್ಞಾತಾಯೇವೇಂದ್ರಾದಯಃ ಕಶ್ಯಪಾತ್ಪುನರ್ಜಾಯಂತೇ ನತಥಾ ಭಗವತೋ ಬ್ರಹ್ಮೇತಿ । ಮನ ಆದೀನೀತಿ । ಏತಸ್ಮಾಜ್ಜಾಯತೇ ಪ್ರಾಣೋಮನಃ ಸರ್ವೇಂದ್ರಿಯಾಣಿಚ । ಖಂ ವಾಯು ಜ್ಯೋತಿರಾಪಃ ಪೃಥಿವೀವಿಶ್ವಸ್ಯಧಾರಿಣೀತಿಶ್ರುತೇಃ । ಸೂತ್ರ ಭಾಷ್ಯೇಚ । ಓಂ ತಥಾಪ್ರಾಣಾಃ ಓಂ । ಯಥಾ ಆಕಾಶಾದಯಃ ಪರಮಾತ್ಮನಾ ಜಾಯಂತೇ ತಥಾ ಪ್ರಾಣಾ ಅಪಿ । ಓಂ ತತ್ಪ್ರಾಕ್‌ಶ್ರುತೇಶ್ಚ ಓಂ । ಪೂರ್ವಂ ಮನಃ ಸಮುತ್ಪನ್ನಂ ತತೋನ್ಯೇಷಾಂ ಸಮುದ್ಭವಃ । ತದನುತ್ಪತ್ತಿವಚನ**

**ಮಹೋಪಚಯಕಾರಣಾದಿತಿ । ಆತ್ಮನ ಆಕಾಶಃ ಸಂಭೂತಃ ಆಕಾಶದ್ವಾಯುಃ ವಾಯೋರಗ್ನಿಃ ಅಗ್ನೇರಾಪಃ ಅದ್ಭ್ಯಃ ಪೃಥಿವೀ ಪೃಥಿವ್ಯಾ ಓಷಧಯಃ ಇತಿ ಶ್ರುತಿಃ ।**

## ॥ ಇತಿ ಬ್ರಹ್ಮಾಂಡ ಪ್ರಕಾರಣಂ ॥

ಮುಖದಿಂದ ಇಂದ್ರ, ಅಗ್ನಿ, ಪ್ರಾಣದಿಂದ ವಾಯ ಹೀಗೆ ಮೊದಲು ಹುಟ್ಟಿದ ದೇವತೆಗಳೆಲ್ಲಾ ಪುನಃ ಕಶ್ಯಪರಿಂದ ಪುನಃ ಹುಟ್ಟುತ್ತಾರೆ. ಆದರೆ ಭಗವಂತನಿಗೆ ಬ್ರಹ್ಮದೇವರಿಗೆ ಹಾಗೆ ಪುನಃ ಜನ್ಮವಿರುವುದಿಲ್ಲಾ ಇದರಿಂದಲೇ ಪ್ರಾಣನು ಮನಸ್ಸು ಸರ್ವೇಂದ್ರಿಯಗಳು ಆಕಾಶವು ವಾಯುವು ಜ್ಯೋತಿಯು, ಉದಕವು, ಧಾರಕಳಾದ ಧರಿಣಿಯೂ ಹೀಗೆ ಶೃತಿ ಹೇಳುತ್ತದೆ. ಸೂತ್ರ ಭಾಷ್ಯದಲ್ಲಿಯೂ, "ಓಂ ತಥಾ ಪ್ರಾಣಾದಯಃ ಓಂ" ಎಂಬ ಸೂತ್ರಾಧಿಕರಣದಲ್ಲಿ ಪರಮಾತ್ಮನಿಂದ ಆಕಾಶಾದಿಗಳೋ ಹಾಗೆ ಪ್ರಾಣಾದಿಗಳು ಎಂದು ಹೇಳಿದೆ. ಮತ್ತೂ "ಓಂ ತತ್ಪ್ರಾಕ್ ಶ್ರುತೇಶ್ಚ ಓಂ" ಎಂಬ ಸೂತ್ರಾಧಿಕರಣದಲ್ಲಿ ಮನಸ್ಸು ಮೊದಲು ಹುಟ್ಟಿತು ನಂತರ ಮಿಕ್ಕೆಲ್ಲವುಗಳ ಉತ್ಪತ್ತಿ ಎಂದು ಹೇಳಿದೆ. ಅಲ್ಲಿ ಅನುತ್ಪತ್ತಿ ವಚನವು ಅಲ್ಪ ಉಪಚಯ. ಕಾರಣವಾಗಿರುತ್ತದೆ. ಆತ್ಮನಿಂದ ಆಕಾಶವು ಹುಟ್ಟಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಉದಕ, ಉದಕದಿಂದ ಪೃಥಿವೀ, ಪೃಥಿವಿಯಿಂದ ಔಷಧಿಗಳು, ಔಷಧಿಗಳಿಂದ ಅನ್ನ ಹೀಗೆ ಶೃತಿಯೂ ಆಗಿರುತ್ತದೆ.

ಹೀಗೆ ದ್ರವ್ಯದಲ್ಲಿ ಹದಿನಾಲ್ಕನೆಯದಾದ ಬ್ರಹ್ಮಾಂಡ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೧೭. ಅವಿದ್ಯಾ ಪ್ರಕರಣ

**ಇದಾನೀಂ ಅವಿದ್ಯೋತ್ಪತ್ತಿಮಾಹ ।**

**ಪ.ಸಂ. ತತೋ ಅವಿದ್ಯೋತ್ಪನ್ನಾ । ಸಾ ಚ ಪಾಂಚಪರ್ವಣೀ ।**

**ತತಃ ಪಂಚಭೂತ ಸೃಷ್ಟ್ಯನಂತರಂ ತತಃ ಚತುರ್ಮುಖಾದವಿದ್ಯೋತ್ಪನ್ನಾ ಇತ್ಯರ್ಥಃ। ನನು ಅನಾದಿಮಾಯಯಾ ಸುಪ್ತಃ ಇತ್ಯಾದಿ ಶ್ರುತಿಭಿರನಾದ್ಯವಿದ್ಯಾಕಾಮಕರ್ಮೇತ್ಯಾದಿಟೀಕಾಕೃದುಕ್ತಿಭಿಶ್ಚ ಅವಿದ್ಯಾಯಾ**

**ಅನಾದಿತ್ವಾತ್ ಕಥಮುತ್ಪತ್ತಿರಿತಿ ಚೇನ್ನ । ಸೂಕ್ಷ್ಮರೂಪೇಣ ಅನಾದಿ ಭೂತಾಯಾ ಏವ ಸೃಷ್ಟಿಕಾಲೇ ಸ್ಥೂಲರೂಪೇಣ ಉತ್ಪತ್ತ್ಯಂಗೀಕಾರಾತ್ । ಅನ್ಯಥಾ ಉತ್ಪತ್ತಿಪ್ರತಿಪಾದಕ ವಕ್ಷ್ಯಮಾಣ ಬಹು ಪ್ರಮಾಣ ವಿರೋಧ ಪ್ರಸಂಗಾತ್ ॥**

ಪಂಚಮಹಾಭೂತಗಳ ಸೃಷ್ಟ್ಯನಂತರ ಚತುರ್ಮುಖಬ್ರಹ್ಮನಿಂದ ಅವಿದ್ಯಾ ಹುಟ್ಟಿತು. ಅದು ಐದು ಪ್ರಕಾರವಾದುದು. ಅನಾದಿ ಮಾಯೆಯಿಂದ ಸುಪ್ತರು ಎಂಬ ಶ್ರುತಿಯು ಅವಿದ್ಯೆಗೆ ಅನಾದಿತ್ವ ಹೇಳುತ್ತಿರಲು ಅದು ಹುಟ್ಟಿತು ಎಂಬುದು ಹೇಗೆ ? ಮತ್ತು ಅನಾದಿ ಅವಿದ್ಯಾ ಕಾಮಕರ್ಮಾದಿ ಎಂಬ ಟೀಕೋಕ್ತಿ ಇಂದಲೂ ಅವಿದ್ಯೆಗೆ ಅನಾದಿತ್ವ ಹೇಳಿದೆ ಅಂದರೆ ತಪ್ಪಾಗುತ್ತದೆ. ಅನೇಕ ಸ್ಥಳಗಳಲ್ಲಿ ಅವಿದ್ಯೆಗೆ ಉತ್ಪತ್ತಿ ಹೇಳಿರುವುದರಿಂದ, ಸೂಕ್ಷ್ಮರೂಪದಿಂದ ಅನಾದಿ ಆದರೂ ಸ್ಥೂಲರೂಪದದಿಂದ ಉತ್ಪತ್ತಿಯನ್ನು ಒಪ್ಪಲೇಬೇಕು. ಹಾಗಿಲ್ಲವಾದರೆ ಅವಿದ್ಯೆಗೆ ಉತ್ಪತ್ತಿ ಹೇಳುವ ಬಹುಪ್ರಮಾಣಗಳಿಗೆ ಪರಸ್ಪರ ವಿರೋಧ ಬರುತ್ತದೆ.

**ನನ್ವೇವಮಪಿ ಪರಮಾತ್ಮನೈವ ಬ್ರಹ್ಮಾಂಡಾದ್ಬಹಿಃ ಅವಿದ್ಯಾ ಸೃಷ್ಟಿರುಕ್ತಾ ತೃತೀಯಸ್ಕಂಧ ಭಾಗವತೇ । ಆದ್ಯಸ್ತು ಮಹತಃ ಸರ್ಗೋ ಗುಣವೈಷಮ್ಯ ನಾಮಕ ಇತ್ಯಾದಿನಾ ಮಹದಹಂಕಾರಾದಿ ಸೃಷ್ಟಿಮಭಿಧಾಯ ಷಷ್ಠಸ್ತು ತಮಸಃ ಸರ್ಗೋಯಸ್ತ್ವಬುದ್ಧಿ ಕೃತಃ ಪ್ರಭೋಃ । ಷಡಿಮೇ ಪ್ರಾಕೃತಾಃ ಸರ್ಗಾ ವ್ಯಾಕೃತಾನ್ಯಪಿಮೇ ಶೃಣು ಇತಿ ।ತತ್ಕಥಂ ಅಂಡಾಂತರ್ಬ್ರಹ್ಮ ಸೃಷ್ಟ್ಯಾಽವಿದ್ಯೇತ್ಯುಚ್ಯತ ಇತಿ ಚೇತ್ । ಉಚ್ಯತೇ ॥**

ಅವಿದ್ಯೆಗೆ ಉತ್ಪತ್ತಿ ಒಪ್ಪಿದರೂ ಪರಮಾತ್ಮನಿಂದಲೇ ಬ್ರಹ್ಮಾಂಡದ ಹೊರಗೆ ಅವಿದ್ಯೆಯ ಸೃಷ್ಟಿ ಹೇಳಿತು. ತೃತೀಯ ಭಾಗವತದಲ್ಲಿ, ಮೊದಲನೆಯದೇ ಮಹತ್ತತ್ವದ ಸೃಷ್ಟಿಯು, ಗುಣವೈಷಮ್ಯ ನಾಮಕವಾದುದು. ಹೀಗೆ ಆರಂಭಿಸಿ ಮಹತ್ತತ್ವದದಿಂದ ಅಹಂಕಾರ ತತ್ವದ ಸೃಷ್ಟಿಯು ಹೇಳಿತು. ನಂತರ ಆರನೆಯದೇ ತಮಸ್ಸಿನ ಸರ್ಗವು. ಅದು ಪರಮಾತ್ಮನ ಬುದ್ಧಿ ಕೃತವಾದುದು. ಈ ಆರು ಸೃಷ್ಟಿಗಳೂ ಪ್ರಾಕೃತ ಸೃಷ್ಟಿಯು ವೈಕೃತ ಸೃಷ್ಟಿಯನ್ನು ಕೇಳು - ಪರಮಾತ್ಮನಿಂದಲೇ ಅಂಡದ ಹೊರಗೆ ಅವಿದ್ಯೆಯ ಸೃಷ್ಟಿ ಹೇಳಿ, ಅಂಡದ ಒಳಗೆ ಸೃಷ್ಟಿ ಹೇಳಿತು, ಎಂದರೆ ಹೇಳುತ್ತೇವೆ,

**ಸತ್ಯಮೇವ ಅಂಡಾದ್ಬಹಿರವಿದ್ಯೋತ್ಪನ್ನಾ ಇತಿ । ತಥಾಪಿ ಸೈವಾವಿದ್ಯಾ ಪರಮಾತ್ಮನಾ ಚತುರ್ಮುಖೇ ಪ್ರಕ್ಷಿಪ್ತಾ ತತ್ಸೃಷ್ಟತ್ವಖ್ಯಾಪನಾಯ । ತತೋ**

**ಬ್ರಹ್ಮ ಶರೀರಾತ್ ಸೃಷ್ಟಿಕಾಲೇ ಬಹಿರ್ನಿಸ್ಸೃತಾ । ತದಭಿಪ್ರಾಯೇಣೈವ ಬ್ರಹ್ಮಣಾ ಸೃಷ್ಟಾ ಅವಿದ್ಯಾ ಇತ್ಯುಕ್ತಮಿತಿ ನ ವಿರೋಧಃ । ತದುಕ್ತಂ ತೃತೀಯ ತಾತ್ಪರ್ಯೇ । ಪಂಚ ಪರ್ವಾತ್ಮವಿದ್ಯಾತು ಭೂತೇಭ್ಯೋ ಹರಿಣಾ ಪುರಾ। ಉದ್ಧೃತ್ಯ ಬ್ರಹ್ಮಣಿ ಕ್ಷಿಪ್ತಾ ಸಾಪುನಸ್ತೇನ ನಿಃಸೃತಾ । ತತ್ಸೃಷ್ಟತ್ವ ಖ್ಯಾಪನಾಯ ತಸ್ಮಾತ್ ಸಾ ಪ್ರಾಕೃತಾ ಮತಾ । ಅಬುದ್ಧಿಪೂರ್ವಮಿವತು ಬ್ರಹ್ಮಣೋ ಹರಿಬುದ್ಧಿತಃ । ಅವಿದ್ಯಾ ಪಂಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನ ಇತಿ । ನಚಾವಿದ್ಯೋಪಾದಾನಂ ಕಿಮಿತಿ ವಾಚ್ಯಂ ।**

ಬ್ರಹ್ಮಾಂಡದ ಹೊರಗೆ ಪರಮಾತ್ಮನಿಂದಲೇ ಅವಿದ್ಯಾ ಹುಟ್ಟಿತೆಂಬುದು ಸತ್ಯವೇ ಆದರೂ ಪರಮಾತ್ಮನು ಅವಿದ್ಯೆಯನ್ನು ಬ್ರಹ್ಮನ ಶರೀರದಲ್ಲಿಟ್ಟಿದ್ದನು. ಬ್ರಹ್ಮನಿಂದ ಸೃಷ್ಟಿ ತಿಳಿಸುವುದಕ್ಕೋಸ್ಕರ ಬ್ರಹ್ಮ ಶರೀರದಿಂದ ಸೃಷ್ಟಿಕಾಲದಲ್ಲಿ ಅವಿದ್ಯೆ ಹೊರಗೆ ಬಂದಿತು. ಈ ಅಭಿಪ್ರಾಯದಿಂದಲೇ ಬ್ರಹ್ಮನಿಂದ ಅವಿದ್ಯಾ ಹುಟ್ಟಿತೆಂದು ಹೇಳಿರುವುದರಿಂದ ವಿರೋಧವಿರುವುದಿಲ್ಲ. ಇದನ್ನೇ ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಪರಮಾತ್ಮನಿಂದ ಪಂಚ ಪರ್ವಾತ್ಮಕವಾದ ಅವಿದ್ಯೆ ಭೂತಗಳೊಂದಿಗೆ ಬ್ರಹ್ಮನ ದೇಹದಲ್ಲಿಡಲ್ಪಟ್ಟಿತು. ಅದು ಬ್ರಹ್ಮದೇಹದಿಂದ ಹೊರಹೊರಟಿತು. ಬ್ರಹ್ಮದೇವರಿಂದ ಹುಟ್ಟಿತೆಂದು ಪ್ರಸಿದ್ಧಿಗಾಗಿಯೇ ಹರಿಯು ಹಾಗೆ ಮಾಡಿದನು. ಆದರಂತೆಯೇ ಅದಕ್ಕೆ ಪ್ರಾಕೃತ ಸೃಷ್ಟಿಯೆಂದು ಹೆಸರಾಯಿತು. ಬ್ರಹ್ಮನಿಂದ ಅವಿದ್ಯಾ ಸೃಷ್ಟಿಯಾದರೂ ಚತುರ್ಮುಖನ ಬುದ್ಧಿ ಪೂರ್ವಕವಲ್ಲ. ಮಹಾತ್ಮನಾದ ಶ್ರೀಹರಿ ಬುದ್ಧಿಪೂರ್ವಕವಾಗಿ ಪಂಚ ಪರ್ವ (ಐದು ವಿಭಾಗ)ದ ಅವಿದ್ಯೋತ್ಪತ್ತಿಯು ಅವಿದ್ಯೆಗೆ ಉಪಾದಾನ ಯಾವುದೆಂದು ಆಕ್ಷೇಪಿಸಬಾರದು.

**ಪಂಚಭೂತಗತತಮೋಗುಣಾನಾಮೇವೋಪಾದಾನತ್ವಾತ್ । ತದುಕ್ತಂ ತೃತೀಯ ತಾತ್ಪರ್ಯೇ । ತಾಮಸಾನಾಂ ತು ಭೂತಾನಾಂ ಸಹಸ್ರಂ ಸತ್ತ್ವಭಾಗಿನಾಂ । ಶತಾಂಶರಜಸಾಮೇಕ ತಮಸಾಸರ್ವವೇದಿನಾಂ । ಕೇವಲ ಸ್ತಮಸೋಯೋಂಶಃ ಸಾವಿದ್ಯಾ ಪಂಚಪರ್ವಿಕಾ । ಜಾತಾತಿಕೃಷ್ಣಾತದ್ದೇಹಾದ್ದೈತ್ಯರಕ್ಷಃ ಪಿಶಾಚಕಾ ಇತಿ । ಅತ ಏವ ಪರಿಣಾಮಿತ್ವಾದ್ರ ವಣಪ್ರಾಕೃತ್ವಾಚ್ಚದ್ರವ್ಯತ್ವಂ ದ್ರಷ್ಟವ್ಯಂ । ಪಂಚಪರ್ವಾಣ್ಯಾಹ ।**

**ಪ.ಸಂ. ಪಂಚಪರ್ವಾಣಿತು ಮೋಹೋಮಹಾಮೋಹಸ್ತಾಮಿ-<br>ಸ್ರೋಂಧತಾಮಿಸ್ರ ಇತಮಶ್ಚೇತಿ ।**

ಪಂಚ ಭೂತಗಳಿಗೆ ತಮೋಗುಣವೇ ಉಪಾದಾನವಾಗಿರುತ್ತದೆ. ತೃತೀಯ ತಾತ್ಪರ್ಯದಲ್ಲಿ ಸಹಸ್ರಾಂಶ ತಾಮಸಾಹಂಕಾರ ನೂರನೇ ಒಂದಂಶ ಸತ್ವಗುಣ, ರಜಸ್ಸು ಒಂದಂಶ ತಾಮಸ ಭೂತಗಳು ಇವೆಲ್ಲಾ ಕಲೆತರೆ ಒಂದು ತಾಮಸಾಂಶವು. ಇದಕ್ಕೆ ಪಂಚ ಪರ್ವಾತ್ಮಕ ಅವಿದ್ಯೆ ಅನ್ನುತ್ತಾರೆ ಎಂದು ಹೇಳಿದೆ. ಇದು ಅತಿ ಕಪ್ಪಾಗಿ ಬ್ರಹ್ಮನ ದೇಹದಿಂದ ಹುಟ್ಟಿತು. ಅದೇ ಉಪಾದಾನ ದೇಹಗಳಾದ ದೈತ್ಯರು, ರಾಕ್ಷಸರು, ಪಿಶಾಚಿಗಳು ಹುಟ್ಟಿದರು - ಹೀಗೆ ಪರಿಣಾಮ ಉಳ್ಳದ್ದಾಗಿ (ದ್ರವಣ) ಧಾವನೆಗೆ ಹೊಂದಲರ್ಹವಾದ್ದರಿಂದಲೇ ಇದಕ್ಕೆ ದ್ರವ್ಯತ್ವವು (ದ್ರವ್ಯಾಂತರ್ಭಾವವು)- ಪಂಚಪರ್ವಗಳನ್ನು ಹೇಳುತ್ತಾರೆ. ಇದು ಅವಿದ್ಯೆ ವಿಭಾಗವೆಂದರೆ ಮೋಹ' ಮಹಾಮೋಹ, ತಾಮಿಶ್ರ, ಅಂಧತಾಮಿಶ್ರ, ತಮ ಹೀಗೆ ಇದು ವಿಧವಾಗಿರುತ್ತದೆ.

**ತದುಕ್ತಂ ತೃತೀಯ ತಾತ್ಪರ್ಯೇ । ತಮಸ್ತು ಶಾರ್ವರಂ ಪ್ರೋಕ್ತಂ ಮೋಹಶ್ಚೈವ ವಿಪರ್ಯಯಃ । ತದಾಗ್ರಹೋ ಮಹಾಮೋಹಃ ತಾಮಿಸ್ರಃ ಕ್ರೋಧ ಉಚ್ಯತೇ । ಮರಣಂತ್ಯಂಧತಾಮಿಸ್ರಮವಿದ್ಯಾ ಪಂಚ ಪರ್ವಿಕೇತಿ । ತೃತೀಯ ಸ್ಕಂಧ ಭಾಗವತೇಪಿ। ಸಸರ್ಜಾಗ್ರೇಂಧತಾಮಿಸ್ರಮಥತಾಮಿಸ್ರಮಾದಿಕೃತ್ । ವ ುಹಾವೆ ೋಹ ಂ ಚ ವ ೋಹಂ ಚ ತಮಶ್ಚಾಜ್ಞಾನವೃತ್ತಯ ಇತಿ । ಅವಿದ್ಯಾ ವಿಭಾಗ ಮಾಹ ।**

**ಪ.ಸಂ. ಪುನರ್ಜೀವಾಚ್ಛಾದಿಕಾ, ಪರಮಾಚ್ಛಾದಿಕಾ ಶೈವಲಾಮಾಯಾ ಚೇತು ಚತುರ್ವಿಧಾ ।**

ತೃತೀಯ ತಾತ್ಪರ್ಯದಲ್ಲಿ, ಅಜ್ಞಾನಕ್ಕೆ ತಮಸ್ಸೆಂದು ವಿಪರೀತ ಜ್ಞಾನಕ್ಕೆ ಮೋಹವೆಂದು, ಆಗ್ರಹಕ್ಕೆ ಮಹಾಮೋಹವೆಂದು, ಕ್ರೋದಕ್ಕೆ ತಾಮಿಶ್ರವೆಂದು, ಮರಣಕ್ಕೆ ಅಂಧತಾಮಿಶ್ರವೆಂದು ಹೀಗೆ ಅವಿದ್ಯೆಯೇ ಐದು ವಿಧವಾದುದು. ತೃತೀಯ ಭಾಗವತದಲ್ಲಿ ಸೃಷ್ಟಿಗೆ ಮೊದಲು ತಾಮಿಶ್ರವನ್ನು, ಅನಂತರ ಅಂಧತಾಮಿಶ್ರವನ್ನು, ಮೋಹವನ್ನು, ಮಹಾಮೋಹವನ್ನು, ತಮಸ್ಸನ್ನು ' ಇವು ಅಜ್ಞಾನ ಸ್ವರೂಪಗಳೇ ಆದವುಗಳನ್ನು ಸೃಜಿಸಿದನು ಎಂದು ಹೇಳಿದೆ. ಆ ಅವಿದ್ಯೆಯ ಪುನರ್ವಿಭಾಗವನ್ನು ತಿಳಿಸುತ್ತಾರೆ. ಜೀವಾಚ್ಛಾದಿಕ, ಪರಮಾಚ್ಛಾದಿಕ, ಶೈವಲ, ಮಾಯಾ ಹೀಗೆ ನಾಲ್ಕು ವಿಧಗಳಾಗಿವೆ.

**ಜೀವಾಚ್ಛಾದಿಕಾ ಪರಮಾಚ್ಛಾದಿಕಾ ಚ ದಶಮಸ್ಕಂಧ ತಾತ್ಪರ್ಯೋಕ್ತಾ । ಜಹಿದೋಷ್ಮೈರ್ಯಯಾ ಸರ್ವಗುಣಾ ಜೀವಸ್ಯ ಸಂವೃತಾಃ । ಅಥಾನ್ಯೇ ಪ್ರಕೃತೀ ದುಷ್ಟೇನ್ಯಪುಪ್ರಾತಿಷ್ಟಿಕಂಸ್ಥಿತೇ । ಸ್ವಗುಣಾಚ್ಛಾದಿಕಾಚೈಕಾಪರ-**

**ಮಾಚ್ಛಾದಿಕಾಪರಾ । ಸ್ವಗುಣಾಚ್ಛಾದಿಕಾಂಹತ್ವಾಪರಮಾಚ್ಛಾದಿಕಾಂ ಪರಾಂ । ವ್ಯಾಘಾಟ್ಯ ಮೋಕ್ಷ ಪದವೀಂ ದದಾತಿ ಪುರುಷೋತ್ತಮಃ । ಅಜೇದ್ವೇ ಅಪಿತೇ ಪ್ರೋಕ್ತೇಅನಂತಾಚ್ಛಾದಿನೀ ಹರೇಃ । ನ ವಿಷ್ಣುಂ ಛಾದಯತ್ಯೇಷಾ ತಜ್ಞಾನಂ ಛಾದಯೇತ್ಪರಂ । ಜೀವಸ್ಯೈವ ನ ತತ್ರಾಪಿ ಬ್ರಹ್ಮಾದೇರಸ್ತಿ ಸಾ ಕ್ವಚಿದಿತಿ ।**

ದಶಮಸ್ಕಂಧ ತಾತ್ಪರ್ಯದಲ್ಲಿ ಶ್ರೀಶನ ಗುಣಗಳು ತಿಳಿಸದಂತೆ ಮರೆಮಾಡುವುದು ಪರಮಾಚ್ಛಾದಿಕಾ, ಜೀವನ ಗುಣಗಳನ್ನು (ಸ್ವರೂಪ) ಮರೆಮಾಡುವುದು ಜೀವಾಚ್ಛಾದಿಕಾ - ಇವೆರಡನ್ನೂ ಜಹಿ ನಾಶಮಾಡು ಎಂದು ಹೇಳಿದೆ. ಮತ್ತೂ ಶ್ರೀಶನ ಪ್ರಾರ್ಥನಾ ಸಂದರ್ಭದಲ್ಲಿ ಅತಿದುಷ್ಟವಾದ, ಪ್ರಕೃತ್ಯಾತ್ಮಕವಾದ ಎರಡು ಜೀವಾಚ್ಛಾದಿಕಾ, ಪರಮಾಚ್ಛಾದಿಕಾ ಜೀವನ ಗುಣಗಳು. ಯೋಗ್ಯತೆ ಮರೆಮಾಡುವ ಜೀವಾಚ್ಛಾದಿಕೆಯನ್ನು ನಾಶಮಾಡು. ಭಗವಂತನ ಗುಣಜ್ಞಾನ ಪ್ರತಿಬಂಧಕವಾದ ಪರಮಾಚ್ಛಾದಿಕೆಯನ್ನನುಸರಿಸಿ. ಮೋಕ್ಷಮಾರ್ಗವನ್ನು ಪುರುಷೋತ್ತಮನು ಕೊಡುತ್ತಾನೆ ಎಂದು ಹೇಳಿದೆ. ಪ್ರಕೃತ್ಯಾತ್ಮಕವಾದ ಎರಡು ದುಷ್ಟ ಅವಿದ್ಯೆಗಳು ಬಂದು ಅನಂತನಾದ ಶ್ರೀಹರಿಯ ಗುಣಗಳು ಜೀವನಿನಾಗದಂತೇ (ತಿಳಿಯದಂತೆ) ಮಾಡುತ್ತದೆ. ಆದರೆ ಶ್ರೀಹರಿ ಗುಣಗಳಿಗೆ ಆಚ್ಛಾದಕವಾಗುತ್ತದೆ. ಶ್ರೀಹರಿಗೆ ಆಚ್ಛಾದಕವಲ್ಲ. ಎಲ್ಲಾ ಮಾನವಾದಿ ಜೀವರಲ್ಲಿಯೂ ಅನಾದಿ ನಿತ್ಯವಾದುದು ಬ್ರಹ್ಮಾದಿಗಳಲ್ಲೂ ಅತಿ ಸ್ವಲ್ಪ ಸ್ವಲ್ಪವಿದ್ದೇ ಇರುತ್ತದೆ.

**ಪ್ರಕೃತ್ಯಭಿಮಾನವತ್ವಾದವಿದ್ಯಾಯಾಃ ಪ್ರಕೃತಿಶಬ್ದೇನಾಅಪಿ ವ್ಯವಹಾರಃ । ತದುಕ್ತಂ ತತ್ರೈವ । ಪ್ರೇರಕಾಸ್ತು ಉಭಯೋರ್ದೇವ್ಯಃ । ಇಂದಿರಾದ್ಯಾಃ ಸುಖಾತ್ಮಿಕಾ ಇತಿ । ಮಾಯಾತು ಪಂಚಪರ್ವಿಕಾಪೂರ್ವೋಕ್ತಾ ಮಿಥ್ಯಾಜ್ಞಾನ ಮಮತಾ ಅಹಂಭಾವಾದಿ ಜನನ ದ್ವಾರಾ ಸಂಸಾರ ಹೇತುಃ । ತದುಕ್ತಂ ದ್ವಿತೀಯಸ್ಕಂಧಭಾಗವತೇ । ಪರಿಭ್ರಮಂಸ್ತತ್ರ ನ ವಿಂದತೇಽರ್ಥಾನ್ಮಾಯಾಮಯೇ ವಾಸನಯಾ ಶಯಾನ ಇತಿ । ತೇವೈ ವಿದಂತ್ಯತಿ ಪರಂತಿಚ ದೇವ ಮಾಯಾಂ ನೈಷಾಂ ಮಮಾಹ ಮಿತಿಧೀಃ ಶ್ವಸೃಗಾಲ ಭಕ್ಷ್ಯ ಇತಿ ಚ । ದಶಮಸ್ಕಂಧೇಪಿ । ಗುಣಪ್ರವಾಹೋಯಮವಿದ್ಯಯಾ ಯತಃ ಪ್ರವರ್ತತೇ ಯೇನ ನೃತಿರ್ಯಗಾತ್ಮಸು ।**

ಅವಿದ್ಯೆಗೂ ಪ್ರಕೃತಿಗೂ ಅಭಿಮಾನಿ ಒಬ್ಬಳೇ ಆದುದರಿಂದ ಅವಿದ್ಯೆಗೂ ಪ್ರಕೃತಿಯೆಂದೇ ಹೆಸರಾಗಿದೆ. ಅದನ್ನು ಅಲ್ಲಿಯೇ ಹೇಳಿದೆ. ಅವಿದ್ಯೆಗೂ ಪ್ರಕೃತಿಗೂ

ನಿತ್ಯಮುಕ್ತಳಾಗಿ ಸುಖಾತ್ಮಳೇ ಆದ ಲಕ್ಷ್ಮೀದೇವಿಯು ಇಂದಿರಾದಿ ರೂಪಗಳಿಂದ ಅಭಿಮಾನಿನಿಯು. ಪಂಚಪರ್ವಾತ್ಮಕವಾದ ಅವಿದ್ಯಾ ಹಿಂದೆ ಹೇಳಿದಂತೆ ಮಿಥ್ಯಾಜ್ಞಾನ ಮಮತಾ, ಅಹಂಭಾವ, ಅಹಂಕಾರಾದಿ ದ್ವಾರಾ ಸಂಸಾರ (ಪುನಃ ಪುನಃ ಜನನ ಮರಣ)ಕ್ಕೆ ಕಾರಣವಾಗುತ್ತದೆ. ದ್ವಿತೀಯ ಸ್ಕಂಧ ಭಾಗವತದಲ್ಲಿ ಹೇಳಿದೆ. ಮಾಯಾ ಅವಿದ್ಯಾ ವಾಸನೆ ಇಂದ ಎಚ್ಚರ ಇಲ್ಲದವನಾಗಿ ಸಂಸಾರದಲ್ಲಿ ತಿರುಗುತ್ತಾ ಯಥಾರ್ಥವನ್ನು ತಿಳಿಯದೇ ಹೋಗುತ್ತಾನೆ. ಹೀಗೆಂದು ಸುಟ್ಟರೆ ಬೂದಿ, ಇಟ್ಟರೆ ಮಣ್ಣು, ಬಿಟ್ಟರೆ ನರಿನಾಯಿಗಳ ಪಾಲಾಗುವ ದೇಹಾದಿಗಳಲ್ಲಿ ಅಭಿಮಾನಾದಿಗಳನ್ನು ಬಿಟ್ಟವರು ಈ ಮಾಯಾವನ್ನು ದಾಟುತ್ತಾರೆ. ಮತ್ತು ಮನುಷ್ಯ ಪಶು ಆದಿ ಜೀವರಾಶಿಯಲ್ಲಿ ಅವಿದ್ಯೆಯಿಂದ ಗುಣಗಳ ಪ್ರವಾಹವು ಪ್ರವೃತ್ತವಾಗುತ್ತದೆ ಎಂದು ದಶಮ ಸ್ಕಂಧದಲ್ಲಿ ಹೇಳಿದೆ.

**ವಿಮೋಹಿತೋಽಯಂ ಜನ ಈಶಮಾಯಯಾ ತ್ವದೀಯಯಾತ್ವಾಂ ನ ಭಜತ್ಯನರ್ಥದೃಕ್ । ಸುಖಾಯದುಃಖ ಪ್ರಭವೇಷು ಸಜ್ಜತೇ ಗೃಹೇಷು ಯೋಷಿತ್ ಪುರುಷ್ಕಶ್ಚ ವಂಚಿತಃ। ಮರ್ತ್ಯಾತ್ಮಬುದ್ಧೇಃ ಸುತದಾರಕೋಶೇಷ್ವಾ ಸಜ್ಜಮಾನಸ್ಯ ದುರಂತಚಿಂತಯಾ । ಕಲೇವರೇಸ್ಮಿನ್ ಘಟ ಕುಡ್ಯ ಸನ್ನಿಭೇ ನಿರೂಢಮಾನೋ ನರದೇವ ಇತ್ಯಹಂ ಇತ್ಯಾದಿ ಮುಚಕುಂದ ಸ್ತುತಿಃ । ಅವಿದ್ಯಯಾ ಮುಹ್ಯತಿ ಶೋಚಮಾನಃ। ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ। ಅನಾದಿಮಾಯಯಾ ಸುಪ್ತ ಇತ್ಯಾದಿ ಶ್ರುತಯಃ ।**

ದಶಮಸ್ಕಂಧದಲ್ಲಿ ಮುಚಕುಂದನ ಸ್ತೋತ್ರದಲ್ಲಿ ಹೇ ಈಶ! ನಿನ್ನ ಮಾಯೆಯಿಂದ ಜನ ಸಮೂಹವೇ ಮೋಹಿತವಾಗಿ ನಿನ್ನನ್ನು ಭಜಿಸದೇ ಹೋಗಿದೆ. ಆಗುವ ಅನರ್ಥದಲ್ಲಿ ದೃಷ್ಟಿಯೇ ಇಲ್ಲದೇ ಸುಖ ಬೇಕು ಎಂಬಾಸೆ. ಆದರೆ ದುಃಖಮೂಲವೇ ಆದುದರಲ್ಲಿ ಆಸಕ್ತರಾಗುತ್ತಾರೆ. ಹೆಣ್ಣು ಗಂಡುಗಳು ಪರಸ್ಪರ ವಂಚಿತರಾಗುತ್ತಾರೆ. ಮರಣಾರ್ಹವಾದ ದೇಹದಲ್ಲಿ ನಾನೇ ಎಂಬ ಬುದ್ಧಿ, ಅತ್ಯಂತ ಚಿಂತೆಯಿಂದ, ಮಕ್ಕಳು ಹೆಂಡತಿಯರಲ್ಲಿ ಆಸಕ್ತರಾಗುತ್ತಾರೆ. ನಾನಾದರೋ ಘಟ ಕಂಭಗಳಿಗೆ ಸಮವಾದ ಜಡವಾದ ಈ ದೇಹದಲ್ಲಿ ರಾಜಾ ಎಂಬ ದುರಹಂಕಾರದಿಂದ ಮೆರೆದೆ, ನಿನ್ನ ಮಾಯೆಯಿಂದ ನಿನ್ನನ್ನು ಮರೆತೆ. ನಿನ್ನನ್ನು ಸೇವಿಸಲಿಲ್ಲ. ಇನ್ನು ಶ್ರುತಿಯಾದರೋ (ಅವಿದ್ಯಯಾ ಶೋಚತಿ ಮುಹ್ಯಮಾನಃ) ಅವಿದ್ಯೆಯಿಂದ ಮುಗ್ಧರಾಗಿ ಜನರು ದುಃಖಕ್ಕೆ ಈಡಾಗುತ್ತಾರೆ. ಎಂದು ಅನಾದಿ ಮಾಯೆಯಿಂದ ಸ್ವಯಂಪಂಡಿತರು ಧೀರರು ಹೀಗೆ ವಿಪರೀತಜ್ಞಾನಭಾಗಿಗಳಾಗಿ ಅಜ್ಞಾನ ಕತ್ತಲೆಯಲ್ಲಿ

ಮ್ಮೆಮರೆಯುತ್ತಾರೆ. ಹೀಗೆ ಶ್ರುತಿ ಹೇಳುತ್ತದೆ.

**ಮಾಯಾಪಿ ಶಂಬರಾದ್ಯಧೀನಾ ಗಜತುರಗಾದ್ಯುಪಾದಾನಭೂತಾ ಭವತಿ । ತೇ ಚ ಪದಾರ್ಥಾ ನಿರ್ಣಯ ಏವೋಕ್ತಾಃ । ಅಥಾತ್ಮಸೇನಾಮವಮೃದ್ಯಮಾನಾಂ ವೀಕ್ಷ್ಯಾಸುರಃ ಶಂಬರನಾಮಧೇಯಃ । ಸೂರ ಮಾಯಾವಿದ ಸಹ್ಯಮಾಯೋ ವರಾದುಮೇಶಸ್ಯ ಸುರಾನ್ವಿಮೋಹಯನ್ । ಮಾಯಾ ಸಹಸ್ರೇಣ ಸುರಾಃ ಸಮರ್ದಿತಾರಣೇ ವಿಷೇದುಃಶಶಿ ಸೂರ್ಯ ಮುಖ್ಯಾ ಇತಿ । ಏವಂ ಭಗದತ್ತೇನ ಯುದ್ಧಕಾಲೇ ಘಟೋತ್ಕಚಸ್ಯ ಮಾಯಯಾ ಗಜ ಚತುಷ್ಟಯ ನಿರ್ಮಾಣ ಮುಕ್ತಂ । ಘಟೋತ್ಕಚೋಭ್ಯದ್ರವದಾಶುವೀರಃ ಸ್ವಮಾಯಯಾ ಹಸ್ತಿ ಚತುಷ್ಟಯಸ್ಥಃ ।**

ಮಾಯವು ಶಂಬರಾಸುರಾದಿಗಳ ಅಧೀನವಾದುದು ಆನೆ ಕುದುರೆ ಮೊದಲಾದುವುಗಳಿಗೆ ಉಪಾದಾನವಾದುದು. ಅವುಗಳನ್ನು ನಿರ್ಣಯದಲ್ಲಿ ಹೇಳಿದೆ. ಶಂಬರಾಸುರನು ತನ್ನ ಸೇನೆಯನ್ನು ಮರ್ದನ ಮಾಡುವವುದನ್ನು ನೋಡಿ, ಮಹಾ ಮಾಯಾವನ್ನು ತಿಳಿದ ಶಂಬರಾಸುರನು ಮಹೇಶನ ವರದಿಂದ ಇತರಾಸಹ್ಯನಾಗಿ ಮಾಯಾ ಸಹಸ್ರದಿಂದ ದೇವತೆಗಳನ್ನು ಮರ್ದನ ಮಾಡಿದನು. ಆಗ ಚಂದ್ರ ಸೂರ್ಯ ಇವರೇ ಮೊದಲಾದ ದೇವತೆಗಳು ರಣದಲ್ಲಿ ಬಹುಖೇದ ಭಾಗಿಗಳಾದರು.

ಇದೇ ರೀತಿಯಾಗಿ ಭಗದತ್ತನಿಂದ (ನರಕ ಪುತ್ರ) ಯುದ್ಧಕಾಲದಲ್ಲಿ ಅಮಾತ್ಯನ ಮೇಲೆ ನಾಲ್ಕು ಮಾಯಾ ಆನೆಗಳ ನಿರ್ಮಾಣ ಮಾಡಿದನೆಂದೂ ಹೇಳಿದೆ. ವೀರನಾದ ಘಟೋತ್ಕಚನು ತನ್ನ ಮಾಯೆಯಿಂದ ನಾಲ್ಕು ಆನೆಗಳನ್ನು ನಿರ್ಮಿಸಿ ಅವುಗಳೊಂದಿಗೆ ಧಾವಿಸಿ ಬಂದನೆಂದೂ ಹೇಳಿದೆ. ಮಾಯೆಯು ಮಾಯಾ ಗಜತುರಗಾದಿಗಳಿಗೆ ಉಪಾದಾನವೂ ಆಗಿದೆ.

**ಚತುರ್ಗಜಾತ್ಸ್ಯೋಪರಿಗಾತ್ಮಕಶ್ಚ ಘಟೋತ್ಕಚಃ ಸುಪ್ರತೀಕಂಚತಂಚ । ನಾನಾಪ್ರಕಾರೈರ್ವಿತುದಂಶ್ಚಕಾರ ಸಂದಿಗ್ಧ ಜೀವ್ಯೈಜಗತಾಂ ಸಮಕ್ಷಮಿತಿ । ತಥಾ । ಅಲಂಬುಸೇರಾವತೋರ್ಯುದ್ಧಕಾಲೇ ಮಾಯಯಾ ಪದಾತ್ಯಶ್ವನಿರ್ಮಾಣೇ ನ ತೇಷಾಂ ಹನನಮುಕ್ತಂ । ಧೃಷ್ಟ್ವಾತಮುಗ್ರಂ ದೃತರಾಷ್ಟ್ರಪುತ್ರೋ ವಿದೇಶರಕ್ಷೋಽಲಂಬುಸನಾಮಧೇಯಂ । ಜಹ್ಯಾರ್ಜುನಿಂಕ್ಷಿಪ್ರಮಿತಿಸ್ಮಸೋಽಪಿ ಸಮಾಸದನ್ನಾಗಸುತಾತನೂಜಂ । ತಯೋರಭೂದ್ಯುದ್ಧಮತೀವದಾರುಣಂ ಮಾಯಾಯುಜೋರ್ವೀರ್ಯವತೋರ್ಮಹಾದ್ಭುತಂ ।**

ಘಟೋತ್ಕಚನು ನಾಲ್ಕು ಆನೆಗಳ ಮೇಲೆ ಕೂತು ಭಗದತ್ತನನ್ನೂ ಸುಪ್ರತೀಕ (ಗಜ)ವನ್ನೂ ನಾನಾರೀತಿಯಾಗಿ ಭಾದೆ ಕೊಡುವವನಾದನು. ಆಗ ಉಭಯ ಪಕ್ಷದ ಎಲ್ಲರೂ ನೋಡುತ್ತಿರುವಂತೆ ಸಂದಿಗ್ಧಪ್ರಾಣಗಳುಳ್ಳವಾದರು. ಮತ್ತೂ ಹಾಗೆಯೇ ಅಲಂಬುಸ ಐರಾವತದ ಯುದ್ಧಕಾಲದಲ್ಲಿಯೂ ಕುದುರೆಗಳು ಕಾಲಾಳುಗಳು ಇತ್ಯಾದಿಗಳನ್ನು ಸೃಷ್ಟಿಮಾಡಿದರು. ಅದರಲ್ಲಿ ಇರಾವತನ ವಧೆಯೂ ಆಯಿತೆಂದು ಹೇಳಿದೆ. ಅದನ್ನು ನೋಡಿ ದುರ್ಯೋಧನನು ಅಲಂಬುಸನನ್ನು ಕುರಿತು ಅರ್ಜುನ ಪುತ್ರನನ್ನು ವಧಿಸೆಂದು ಹೇಳಿದನು. ಅಲಂಬುಸನು ಕೇಳಿ ನಾಗಕನ್ಯಾಪುತ್ರನನ್ನು ಕುರಿತು ಯುದ್ಧಕ್ಕೆ ಹೋದನು. ಅಲಂಬುಸನಿಗೂ ಘಟೋತ್ಕಚನಿಗೂ ಭಯಂಕರವಾದ ಘೋರಯುದ್ಧವಾಯಿತು.

**ಸಸಾದಿನೋಽಶ್ವಾನ್ಸತುರಾಕ್ಷಸೋಽಸೃಜತ್ತೇಽಪಾರ್ಥಪುತ್ರಸ್ಯ ಚಸಾದಿನೋಽಹನ್ನಿತಿ । ನಚತೇ ಗಜಾದಯೋ ಭ್ರಾಂತಿ ಕಲ್ಪಿತಾ ಏವೇತಿ ವಾಚ್ಯಂ। ಛೇದ ಭೇದಾದಿನಾ ದುಃಖಾದ್ಯರ್ಥ ಕ್ರಿಯಾಕಾರಿತ್ವದರ್ಶನಾತ್। ನ ಚಾರೋಪಿತಸ್ಯಾಸತೋಽರ್ಥಕ್ರಿಯಾಕಾರಿತ್ವಂ ಸಂಮತಂ। ನಚತೇ ಪ್ರಕೃತಿ ಜನ್ಯಾ ಏವೇತಿವಾಚ್ಯಂ । ಮಾಯಯಾ ಸೃಜನ್ನಿತ್ಯುಕ್ತೇಃ । ಪರಮಾತ್ಮವತ್ತೇಷಾಂ ಪ್ರಾಕೃತಸೃಷ್ಟೌ ಸಾಮರ್ಥ್ಯಾಭಾವಾಚ್ಚ । ಅತೋ ಮಾಯೋಪಾದಾನಕಾ ತೇ ಪದಾರ್ಥಾಃ ।**

ಆ ಅಲಂಬುಸ ರಾಕ್ಷಸನು ಕಾಲಾಳುಗಳಿಂದ ವಿಶಿಷ್ಟವಾದ ಕುದುರೆಗಳನ್ನು ಮಾಯೆಯಿಂದ ಸೃಜಿಸಿ ಅರ್ಜುನನ ಮಗನ ಕಾಲಾಳುಗಳು ಸಾರೋಟರೇ ಮೊದಲಾಗಿ ನಾಶಮಾಡಿದನು. ಹೀಗೆ ಹೇಳಿದೆ. ಹೀಗೆಲ್ಲಾ ಮಾಯೆಯು ಹೇಳಿರುವುದರಿಂದ ಆಗಜ ತುರಗಾದಿಗಳು ಭ್ರಾಂತಿ ಕಲ್ಪಿತ (ವಿಷಯ) ಆಗೋಣವೇ ಆದರೆ, ಬ್ರಾಂತಿವಿಷಯವಾದ ಪದಾರ್ಥಗಳಿಗೆ ಅರ್ಥಕ್ರಿಯಾಕಾರಿತ್ವ ಇಲ್ಲ. ಈ ಯುದ್ಧ ನಿರ್ಮಿತ ಗಜ ತುರಗಾದಿಗಳಲ್ಲಿ ಛೇದ ಭೇದಾದಿ ಅರ್ಥಕ್ರಿಯೆಗಳು ಕಂಡಿರುತ್ತದೆ. ಆರೋಪಿತ(ಭ್ರಾಂತಿ ವಿಷಯ)ವಾದುದಕ್ಕೆ ಅರ್ಥಕ್ರಿಯಾಕಾರ್ಯತೆ ಯಲ್ಲೂ ಕಂಡಿರುವುದಿಲ್ಲ. ಪ್ರಾಕೃತಗಳು ಎನ್ನೋಣವೇ ಎಂದರೇ, ಪ್ರಾಕೃತಗಳೆಂದೂ ಆಗಬಾರದು. ಪ್ರಾಕೃತ ಪದಾರ್ಥಗಳಂತೇ ನಂತರವೂ ಅವುಗಳು ಕಾಣಬೇಕಾದೀತು. ದೂರ್ವಾಸರಿಗೆ ಶ್ರೀರಾಮಚಂದ್ರ ಸಕಲ ಪಕ್ವಾನ್ನಗಳನ್ನು ತತ್ಕಾಲದಲ್ಲಿ ನಿರ್ಮಿಸಿದಂತೆ ಇದಕ್ಕೂ ಪ್ರಾಕೃತತೆ ಇರಲಿ ಎಂದರೆ, ಅಲ್ಲಿ ಶ್ರೀ ರಾಮನು ಮಾಯೆಯಿಂದ ಮಾಡಿದನೆಂದು ಹೇಳಿದೆ. ಅಲ್ಲದೆ ಸರ್ವ ಸಮರ್ಥನಾದ ಪ್ರಭುವಿನಂತೆ ಪ್ರಾಕೃತ ಸೃಷ್ಟಿಯಲ್ಲಿ ರಾಕ್ಷಸಾದಿಗಳಿಗೆ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದ ಅವುಗಳು ಮಾಯಾ ಉಪಾದಾನವಾದ ಪದಾರ್ಥಗಳೇ ಎಂದು ಹೇಳಬೇಕು.

**ಏವಮೈಂದ್ರಜಾಲಿಕಮಾಯಾಸ್ಥಲೇಪಿ ಮಾಯಾ ವಿನಾ ಪ್ರಯುಕ್ತಾ ಮಾಯಾ ದ್ರಷ್ಟು ಪುರುಷ ನಯನ ಸಂಬದ್ಧಾ ಸತೀ ಗಜತುರಗಾದಿ ಭ್ರಾಂತಿಂ ಜನಯತಿ। ನತುತೇ ಪದಾರ್ಥಾಃ ಸತ್ಯಾಃ। ತದುಕ್ತಂ ತತ್ವನಿರ್ಣಯೇ। ಅಧಿಷ್ಠಾನಂಚಸದೃಶಂ ತಥ್ಯವಸ್ತು ದ್ವಯಂವಿನಾ । ನ ಭ್ರಾಂತಿರ್ಭವತಿಕ್ವಾಪಿ ಸ್ವಪ್ನಮಾಯಾದಿಕೇಷ್ವಪೀತಿ ।**

ಐಂದ್ರಜಾಲಿಕಾದಿ ಸ್ಥಳಗಳಲ್ಲಿಯೂ ಹೀಗೆ ಮಾಯೋಪಾದನತೆಯೇ ಹೇಳಬೇಕು. ಮಾಯಾವಿಯುಕ್ತ ಮಾಯೇ ನೋಡುವರ ಕಣ್ಣಿಗೆ ಸಂಬಂಧವಾಗಿ ಗಜತುರಗಾದಿ ಭ್ರಾಂತಿಯನ್ನು ಹುಟ್ಟಿಸುತ್ತದೆ. ಆದ್ದರಿಂದ ಆ ಪದಾರ್ಥಗಳೂ ಸತ್ಯವಾಗಿರುವುಗಳಾಗುವುದಿಲ್ಲ. ಇದನ್ನು ನಿರ್ಣಯದಲ್ಲಿ ಹೇಳಿರುತ್ತಾರೆ. ಭ್ರಾಂತಿಗೆ ಅಧಿಷ್ಠಾನ ಸದೃಶ ಸತ್ಪದಾರ್ಥ ಇವೆರಡು ಕಾರಣವು. ಇವೆರಡು ಇಲ್ಲದೆ ಭ್ರಾಂತಿ ಹುಟ್ಟುವುದಿಲ್ಲವು. ಸ್ವಪ್ನಮಾಯಾದಿಗಳಲ್ಲಿಯೂ ವಾಸನೋಪಾದಕ ಸ್ವಪ್ನಪದಾರ್ಥಗಳು ಅರ್ಥಕ್ರಿಯಾಕಾರಿ ಆದುದರಿಂದ ಸತ್ಯಗಳೇ ಮಾಯೋಪಾದಾನಕ ಪದಾರ್ಥಗಳು ಅರ್ಥಕ್ರಿಯಾಕಾರಿಯಾದರೂ ಮಿಥ್ಯಾಗಳೇ.

**ತಟ್ಟೀಕಾಯಾಮಿತಿ । ಐಂದ್ರಜಾಲಿಕ ಮಾಯಾಪದಾರ್ಥ ಭ್ರಾಂತಿರಪ್ಯಧಿಷ್ಠಾನಪ್ರಧಾನಾಧೀನೇತಿ । ಶೈವಲಾವಿದ್ಯಾಪಿ ತೃತೀಯ ಸ್ಕಂಧ ತಾತ್ಪರ್ಯೋಕ್ತಾ । ಶೈವಲಾನಾಮ ಸಾಮಾಯಾಜಗದ್ಬಂಧಾತ್ಮಿಕಾಸದೇತಿ । ತಟಾಕಾದಿ ಜಲೋಪರಿಹರಿತವರ್ಣಾಜಲಾಚ್ಛಾದಿಕಾಶೈವಲಾ ಪ್ರತ್ಯಕ್ಷ ಸಿದ್ಧಾ । ಸಾಹಸ್ತಾದಿನಾ ಇತಸ್ತತಶ್ಚಾಲನೇ ಸತಿತಜ್ಜಲಂ ವಿಹಾಯ ಪಾರ್ಶ್ವಸ್ಥಾ ಭವತಿ । ಪುನರ್ಹಸ್ತಾದ್ಯಪಗಮೇ ಪೂರ್ವವಜ್ಜಲಾಚ್ಛಾಧಿಕಾಭವತಿ । ಪ್ರಾಕೃತ ಭಾಷಯಾ ಪಾವಿಶಿಕೇತ್ಯುಚ್ಯತೇ । ತದ್ವಜ್ಜೀವ ಸಂಬದ್ಧಾ ಮಾಯಾ ಸಚ್ಛಾಸ್ತ್ರ ಶ್ರವಣಾದಿ ಜನ್ಯ ಪರೋಕ್ಷ ಜ್ಞಾನೇನ ಜೀವಸ್ವರೂಪಮನಾವೃತ್ಯತಿಷ್ಠತಿ ।**

ಅದರ ಟೀಕೆಯಲ್ಲೂ ಇಂದ್ರಜಾಲಾದಿಗಳಿಂದಾದ ಮಾಯಾ ಪದಾರ್ಥಗಳ ಭ್ರಾಂತಿಯು ಅಧಿಷ್ಠಾನ ಪ್ರಧಾನಗಳು ಆಗಿರುತ್ತದೆ. ಶೈವಲಾ ನಾಮಕಮಾಯಾ (ಅವಿದ್ಯಾ) ಇದನ್ನು ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿರುತ್ತದೆ. ಶೈವಲಾ ನಾಮಕ ಮಾಯೆಯು ಯಾವಾಗಲೂ ಜಗತ್ತಿಗೆ ಬಂಧಕವಾದುದು. ಎಂದು ಹೇಳಿದೆ ಅದರ ಟೀಕೆಯಲ್ಲೂ ನೀರಿನ ಮೇಲೆ ಹಸಿರಾದ ಹಾವಿಸಿ ಪಾಚಿಕಟ್ಟಿರುತ್ತದೆ. ಅದು ಕೈಯಾಡಿಸುವಿಕೆಯಿಂದ ನೀರು ಸ್ವಚ್ಛವಾಗುತ್ತದೆ. ಪುನಃ ಯಥಾಪ್ರಕಾರವಾಗಿ ಆವರಿಸುತ್ತದೆ. ಹಾಗೆ ಶೈವಲೀ ಸಂಜ್ಞಕವಾದ ಅವಿದ್ಯೆಯು ಜೀವಸಂಬದ್ಧವಾಗಿ

ಜೀವನ ಸ್ವರೂಪವನ್ನು ಆವರಿಸುತ್ತದೆ. ಸತ್ ಶಾಸ್ತ್ರ ಶ್ರವಣಾದಿಜನ್ಯ ಪರೋಕ್ಷ ಜ್ಞಾನದಿಂದ ಜೀವನ ಸ್ವರೂಪವನ್ನು ಆವರಿಸದೇ ದೂರವಾಗುತ್ತದೆ. ಹೀಗೆ ಹೇಳಿದೆ.

**ತತ್‌ಜ್ಞಾನನಾಶೇ ಪುನರ್ಜೀವಸ್ಯ ರೂಪಮಾಚ್ಛಾದಯತೀತಿ । ಕೇಚಿತ್ತು ಶೈವಲಾವಿದ್ಯಾ ಜಡಪ್ರಕೃತಿರೇವೇತ್ಯಾಹುಃ । ಅಪರೇತು ಪಂಚ ಪರ್ವಾವಿದ್ಯೇತ್ಯಾಹು। ನನು ಲಕ್ಷ್ಮ್ಯಾಃ ಪರಮಾತ್ಮಗತ ಯಾವದ್ಗುಣಜ್ಞಾನಮಸ್ತಿನವಾ।ನಾದ್ಯಃ। ಸರ್ವತ್ರ ಸರ್ವದೇವೇಶಂ ಪಶ್ಯತ್ಯೇವ ರಮಾಪತಿತು । ನತು ಸರ್ವೈರ್ವಿಶೇಷೈಸ್ತಂ ಪಶ್ಯತ್ಯ ಪ್ಯನ್ಯತೋಧಿಕಮಿತಿ ಜ್ಞಾನಪಾದೀಯಾನುವ್ಯಾಖ್ಯಾನವಿರೋಧಾತ್ । ಈಶಾದನ್ಯತ್ರ ಅನಾಲೋಚನೇ ಸರ್ವವಿಷಯಕಂ ಲಕ್ಷ್ಮೀಜ್ಞಾನಮಿತಿ ಪ್ರಮಾಣ ಲಕ್ಷಣ ವಿರೋಧಾಚ್ಚ ।**

ಶಾಸ್ತ್ರ ಜನ್ಯವಾದ ಜ್ಞಾನ ನಷ್ಟವಾದರೆ ಪುನಃ ಜೀವನನ್ನು ಆಚ್ಛಾದಿಸುತ್ತದೆ. (ಸ್ವರೂಪವನ್ನು ಮುಚ್ಚುತ್ತದೆ) ಕೆಲವರು ಶೈವಲೀ ಅವಿದ್ಯಾವನ್ನು ಜಡಪ್ರಕೃತಿ ಎನ್ನುತ್ತಾರೆ. ಮತ್ತು ಕೆಲವರು ಪಾಂಚಪರ್ವಾ ಅವಿದ್ಯಾ ಎನ್ನುತ್ತಾರೆ ಲಕ್ಷ್ಮೀದೇವಿಗೆ ಪರಮಾತ್ಮನ ಸರ್ವ ಗುಣವಿಷಯಕ ಜ್ಞಾನವಿದೆಯೇ ಇಲ್ಲವೇ, ಇಲ್ಲವೆನಲಾಗುವುದಿಲ್ಲ. ಲಕ್ಷ್ಮಿಯು ಯಾವಾಗಲೂ ಎಲ್ಲಾ ಸ್ಥಳಗಳಲ್ಲಿಯೂ ಪರಮಾತ್ಮನನ್ನು ಕಾಣುತ್ತಾಳೆ. ಅಲ್ಲದೇ ಬ್ರಹ್ಮಾದಿ ಎಲ್ಲಾ ದೇವತೆಗಳಿಗಿಂತಲೂ ಅಧಿಕವಾಗಿ ತಿಳಿಯುತ್ತಾಳೆ ಹಾಗೂ ಕಾಣುತ್ತಾಳೆ ಎಂತಲೂ, ಆದರೆ ಸರ್ವ ಗುಣಗಳನ್ನೂ ಅಶೇಷ ವಿಶೇಷವಾಗಿ ತಿಳಿಯಲಾರಳು. ಭಗವದತಿರಿಕ್ತ ಸ್ಥಳದಲ್ಲಿ ಸರ್ವವಿಷಯಕ ಸಮಗ್ರ ಜ್ಞಾನವೇ ಲಕ್ಷ್ಮೀಜ್ಞಾನವೆಂದು ಲಕ್ಷ್ಮೀಜ್ಞಾನದ ಲಕ್ಷಣವೂ ಹೇಳಿರುವುದರಿಂದ.

**ನದ್ವಿತೀಯಃ । ಅಜ್ಞಾನಿತ್ವಾಪತ್ತ್ಯಾ ಸಂಸಾರಿತ್ವಂಸ್ಯಾತ್ । ತಥಾಚ ಪೂರ್ವೋಕ್ತ ನಿತ್ಯಮುಕ್ತತ್ವ ವ್ಯಾಘಾತ ಇತಿ ಚೇನ್ನ । ಭಾವರೂಪಾಜ್ಞಾನಾಭಾವೇಪಿ ಜ್ಞಾನಾಭಾವರೂಪಾಜ್ಞಾನ ಸಂಭವಾತ್। ನನ್ವೇವಂ ಜ್ಞಾನಾಭಾವರೂಪಾಜ್ಞಾನಮೇವ ಸರ್ವಜೀವೇಷ್ವಪ್ಯಸ್ತುನತುಭಾವರೂಪಾ-ಜ್ಞಾನಂ । ನ ಚ ಸಂಸಾರಿತ್ವಾನುಪಪತ್ತ್ಯಾ ಭಾವರೂಪಾಜ್ಞಾನಂ ಕಲ್ಪ್ಯತೀತಿವಾಚ್ಯಂ। ಲಿಂಗಶರೀರ ಪ್ರಕೃತಿಬಂಧಾದಿನೈವ ಸಂಸಾರಿತ್ವೋಪಪತ್ತೇರಿತಿ ಚೇನ್ನ । ಅಹಮಜ್ಞೋಮಾಮನ್ಯಂಚನಜಾನಾಮೀತಿ ಸಾಕ್ಷಿಸಿದ್ಧತ್ವೇನ ದುರಪಹ್ನವತ್ವಾತ್ । ನಚಾಹಮಜ್ಞ ಇತಿ ಪ್ರತ್ಯಕ್ಷಂ**

**ಜ್ಞಾನಾಭಾವ ಗೋಚರಮಿತಿವಾಚ್ಯಂ । ಸುಷುಪ್ತಿಕಾಲೇಽಜ್ಞಾನ ಪ್ರತೀತ್ಯಭಾವ ಪ್ರಸಂಗಾತ್ ।**

ಲಕ್ಷ್ಮೀದೇವಿಗೆ ಸ್ಪಷ್ಟಜ್ಞಾನವಿಲ್ಲವೆಂದೆನಲು ಬರುವುದಿಲ್ಲ. ಅಜ್ಞಾನದಿಂದ ಸಂಸಾರಾವಸ್ಥೆ ಒದಗಿ ಮುಕ್ತತ್ವ ಇಲ್ಲವಾಗಬೇಕಾದೀತು. ಆದುದರಿಂದ ಜ್ಞಾನಿಯಾಗಿಲ್ಲ ಎಂದೆನಬಾರದು. ಏಕೆಂದರೆ ಲಕ್ಷ್ಮೀದೇವಿಗೆ ಭಾವರೂಪ ಅಜ್ಞಾನವು ಸುತರಾಂ ಇಲ್ಲವಾದರೂ ಅಭಾವ ರೂಪ ಅಜ್ಞಾನವು ಇದ್ದೇ ಇದೆ. ಸರಿಯೇ, ಭಾವ ಅಭಾವ ಹೀಗೆ ಎರಡು ವಿಧ ಅಜ್ಞಾನವನ್ನು ಏಕೆ ಒಪ್ಪಬೇಕು, ಎಲ್ಲಾ ಜೀವರಲ್ಲೂ ಅಭಾವರೂಪ ಅಜ್ಞಾನ ಹೇಳಿಬಿಡಬಹುದಲ್ಲವೆ ಅಂದರೆ, ಭಾವರೂಪ ಅಜ್ಞಾನವಿಲ್ಲವಾದರೆ ಸಂಸಾರಿತನವೇ ಇಲ್ಲವಾಗಲೆಂಬ ಆಪಾದನೆ ಬರುತ್ತೆಂದರೆ, ಹಾಗಲ್ಲ ಸಂಸಾರಿತೆಗೆ ಭಾವರೂಪಾಜ್ಞಾನ ಕಾರಣವಲ್ಲ, ಲಿಂಗದೇಹ ಪ್ರಕೃತಿ ಸಂಬಂಧಗಳು ಕಾರಣವೆನ್ನುತ್ತೇವೆಂದರೆ ಅಲ್ಲ, ನಾನು ಅಜ್ಞನು, ಇತರ ವಿಷಯಗಳಲ್ಲೂ ಅಜ್ಞನು ಆಗಿದ್ದೇನೆ ಇತ್ಯಾದಿ ಅನುಭವವೂ ಪ್ರತ್ಯಕ್ಷ ಸಿದ್ಧವು. ಇದೇ ಭಾವಾಜ್ಞಾನ ಮೂಲಕವೆಂದರೆ, ಅಲ್ಲ. ಇದೂ ಅಭಾವಾಜ್ಞಾನ ಮೂಲಕವೆ, ಎನ್ನುತ್ತೇವೆಂದರೆ ನಿದ್ರಾವಸ್ಥಾದಲ್ಲಿ ಅಜ್ಞಾನಾನುಭವ ಇದೆ, ಅದಿಲ್ಲದೇ ಹೋಗಬೇಕಾದೀತು.

**ನಹಿ ತತ್ರಾಪಿ ಜ್ಞಾನಂ ಭಾವಪ್ರತೀತಿಃ ಯುಕ್ತಾ । ಮನಸೋಽಪ್ಯುಪರತತ್ವೇನ ಪ್ರತಿಯೋಗ್ಯಧಿಕರಣ ಜ್ಞಾನಾದೇಃ ಅಭಾವಾತ್ । ತತ್ಸತ್ವೇ ಸುಷುಪ್ತ್ಯಭಾವ ಪ್ರಸಂಗಾತ್ । ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋಽನಬಾಹ್ಯಂ ಕಿಂಚನ ವೇದನಾಂತರಮಿತಿ ಶ್ರುತಿವಿರೋಧ ಪ್ರಸಂಗಾಚ್ಚ । ನಚೈತಚ್ಛ್ರುತಿಬಲೇನ ಸುಷುಪ್ತಿಕಾಲೇ ಅಜ್ಞಾನಸ್ಯವಾನ್ಯಸ್ಯವಾ ಜ್ಞಾನಮೇವ ನಾಸ್ತೀತಿವಾಚ್ಯಂ । ಏತಾವಂತಂಕಾಲಂ ನಕಿಮಪ್ಯವೇದಿಷಮಿತಿ ಉತ್ತರಕಾಲೀನ ಅನುಸ್ಮರಣಾನುಪಪತ್ತೇಃ । ನಚ ಸುಪ್ತೋತ್ಥಿತಸ್ಯ ತತ್ಕಾಲೀನ ಜ್ಞಾನಾಭಾವಾನುಮಾನಮಸ್ತು । ಅಹಂತದಾಜ್ಞಾನಾಭಾವವಾನ್ ತದಾನುಪಲಂಭವತ್ವಾದಿತಿ ವಾಚ್ಯಂ । ತದೇತಿಕೋಽರ್ಥಃ । ಕಾಲ ಇತಿ ಚೇತ್ ತರ್ಹಿ ಸುಪ್ತ್ಯವಸ್ಥಾಯಾಮನುಭೂತಸ್ಯ ಇದಾನೀಂಸ್ಮೃತಿಕಾಲೇ ಜ್ಞಾನಾಭಾವಾನುಮಾನೇ ಬಾಧ ಪ್ರಸಂಗಾತ್ । ತದಾಕಾಲಜ್ಞಾನಸ್ಯಾಂಗೀಕೃತತ್ವಾತ್ । ಅತೋ ಭಾವರೂಪಾಜ್ಞಾನಸ್ಯ ಸುಷುಪ್ತಿಕಾಲೇಪಿ ಸಾಕ್ಷಿಣೈವ ಸಿದ್ಧಿರಂಗೀಕರ್ತವ್ಯಾ । ತದುಕ್ತಂ**

**ಮಾಂಡೂಕಭಾಷ್ಯೇ ।**

ನಿದ್ರಾವಸ್ಥಾದಲ್ಲಿ ಜ್ಞಾನವಿರುವುದೆಂಬುದು ಯುಕ್ತವಲ್ಲ. ಏಕೆಂದರೆ ಮನಸ್ಸು ಉಪರತೆ (ಇಂದ್ರಿಯಗಳ ಸಂಬಂಧವಿಲ್ಲದಿರುವಿಕೆ)ವಾಗಿರುವುದರಿಂದ ವಿಷಯಗಳಿಗೆ ಪಾತ್ರವಾದ ಜ್ಞಾನಾದಿಗಳಿಲ್ಲದಿರುವುದರಿಂದ, ಜ್ಞಾನವಿದೆ ಎಂದರೆ ನಿದ್ರೆಯೇ ಇಲ್ಲವೆಂದೆನಬೇಕಾಗುತ್ತದೆ. ಮತ್ತು ಪ್ರಾಜ್ಞನಾಮಕ ಪರಮಾತ್ಮನಿಂದ ಆಲಿಂಗಿತನಾಗಿ ನಿದ್ರೆಯಲ್ಲಿ ಬಾಹ್ಯವನ್ನು ಏನನ್ನೂ ತಿಳಿಯುವುದಿಲ್ಲ ಎಂದು ಹೇಳುವ ವೇದದ ವಿರೋಧ ಬರುವುದರಿಂದ, ನಿದ್ರೆಯಲ್ಲಿ ಜ್ಞಾನವಿರುತ್ತದೆಂಬುದು ಯುಕ್ತವಲ್ಲ. ಹಾಗಾದಲ್ಲಿ ಹಿಂದೆ ಹೇಳಿದ ವೇದದ ಬಲದಿಂದ(ಪ್ರಮಾಣದಿಂದ) ನಿದ್ರೆಯಲ್ಲಿ ಅಜ್ಞಾನವಾಗಲಿ ಬೇರೆ ಜ್ಞಾನವಾಗಲಿ ಏನೂ ಇಲ್ಲವೆನ್ನಬೇಕಾದೀತು. ಆದರೆ ಹಾಗೆನ್ನಲು ಬರುವುದಿಲ್ಲ, ಏಕೆಂದರೆ ಎಚ್ಚರವಾದ ಮೇಲೆ, ನಾನಿಲ್ಲಿಯವರೆಗೂ(ನಿದ್ರಾವಸ್ಥೆಯಲ್ಲಿ) ಸ್ವಲ್ಪವೂ ಏನನ್ನೂ ತಿಳಿದಿರಲಿಲ್ಲ ಎಂಬ ಸ್ಮೃತಿಯು ಬರುತ್ತದೆ, ಅದು ಬಾರದೇ ಹೋಗಬೇಕಾದೀತು. ಮಲಗಿ ಎದ್ದವನಿಗೆ ನಿದ್ರೆಯಲ್ಲಿ ಜ್ಞಾನಾಭಾವದ ಅನುಮಾನವು ಎಂದರೆ, ನಾನು ಆಗ ಜ್ಞಾನವಿಲ್ಲದವನೆಂದು ಎನಿಸುವುದರಿಂದ, ಎಂದರೆ, ಹಾಗೆನ್ನಬಾರದು. ಅಲ್ಲಿ ಆಗ ಎಂಬುದರರ್ಥವೇನು, ನಿದ್ರಾಕಾಲದಲ್ಲಿ ಎಂದಷ್ಟೇ ಎಂದರೆ ನಿದ್ರೆಯಲ್ಲಿ ಅನುಭವಿಸಿದರು ಈಗ ಸ್ಮೃತಿ ಇಲ್ಲವೆಂದೂ ಅರ್ಥವೆಂದಮೇಲೆ ಜ್ಞಾನವಿಲ್ಲವೆಂಬುದು ಬಾಧಕವಾಗುತ್ತದೆ. ಈಗ ಆಗಯೆಂದು ಕಾಲದ ವಿಚಾರವಿರುವುದರಿಂದ, ಆದ್ದರಿಂದ ಭಾವರೂಪಾಜ್ಞಾನವು (ನಿದ್ರೆಯಲ್ಲಿ) ಸಾಕ್ಷಿಸಿದ್ಧವೆಂದು ಒಪ್ಪಬೇಕು. ಇದನ್ನು ಮಾಂಡೂಕ್ಯಭಾಷ್ಯದಲ್ಲಿ ಹೇಳಿರುತ್ತಾರೆ.

**ಸುಷುಪ್ತಂತು ತಮೋಽಜ್ಞೇಯಂ ಹರಿಂ ಪ್ರಾಜ್ಞತದಾವೃತಃ । ನಕಾಮಯೇನ್ನೈವ ಪಶ್ಯೇಜ್ಜೀವಃ ಸ್ವಾರ್ತತಮೋವಿನಾ । ಕಾಲಂಚ ತಸ್ಯ ಸ್ಥಾನಸ್ಯ ಪತಿಃ ಪ್ರಾಜ್ಞೋಹರಿಃ ಸ್ವಯಮಿತಿ । ನಾತ್ಮಾನಂ ನಪರಾಂಶ್ಚೈವ ನಸತ್ಯಂ ನಾಪಿಚಾನೃತಂ । ಪ್ರಾಜ್ಞಃ ಸಂವೇದಯೇತ್ಕಿಂಚಿಜ್ಜೀವ ಕಾಲತಮೋವಿನಾ । ಸುಪ್ತ್ಯವಸ್ಥಾಂ ಸುಖಂಚಾಪಿ ವಿನಾನಾನ್ಯತ್ ಪ್ರದರ್ಶಯೇದಿತಿ । ಕಿಂಚಾವಿದ್ಯಾಯಾ ಭಾವರೂಪತ್ವಮೇವಾಂಗೀಕರ್ತವ್ಯಂ ।**

ನಿದ್ರೆಯಲ್ಲಿ ಪ್ರಾಜ್ಞನಾಮಕ ಪರಮಾತ್ಮನನ್ನು ಹೊಂದಿ ಅಜ್ಞಾನಾವೃತನಾಗಿರುವುದರಿಂದ ನಿದ್ರಿತನೆಂದರೆ ಅಜ್ಞಾನಿ ಎಂದು ತಿಳಿಯಬೇಕು. ನಿದ್ರೆಯಲ್ಲಿ ತನ್ನ ಜ್ಞಾನತಮಸ್ಸು (ಅಜ್ಞಾನ) ಎರಡನ್ನು ಬಿಟ್ಟು ಏನೂ ಇರುವುದಿಲ್ಲ ಆಗ ಏನನ್ನು ಬಯಸುವುದೂ ಇಲ್ಲ, ಏನನ್ನು ನೋಡುವುದೂ ಇಲ್ಲ. ಆಕಾಲ

ಆಸ್ಥಾನಗಳಿಗೆ ಪ್ರಾಜ್ಞನೇ ಆದ ಹರಿಯು ಸ್ವಯಂ ಸ್ವಾಮಿ ಆಗಿರುತ್ತಾನೆ. ಆಗ ಜೀವನು ತನ್ನನ್ನು, ಪರರನ್ನು, ಸತ್ಯವನ್ನು, ಸುಳ್ಳನ್ನು ಏನನ್ನು ತಿಳಿಯುವುದಿಲ್ಲ. ಆಗ ಪ್ರಾಜ್ಞನು ಜೀವ, ಕಾಲ, ತಮಸ್ಸು ವಿನಃ ಮಿಕ್ಕವುಗಳನ್ನು ತಿಳಿಸುವುದಿಲ್ಲವೆಂದರ್ಥವು, ಹೀಗೆ ಹೇಳಿದೆ. ಅವಿದ್ಯೆಗೆ ಭಾವರೂಪತ್ವವನ್ನೇ ಅಂಗೀಕರಿಸಬೇಕು.

**ತಮೋಗುಣೇನೇಶ್ವರಸೃಷ್ಟತ್ವಸ್ಯಬ್ರಹ್ಮಶರೀರೇ ಪ್ರಕ್ಷೇಪಸ್ಯ ತಚ್ಛರೀರಾನ್ನಿಸ್ಸೃತತ್ವಸ್ಯ ಜೀವಸ್ವರೂಪಾವರಕ ತ್ವಸ್ಯಾಽ ಪರೋಕ್ಷಜ್ಞಾನನಾಶ್ಯತ್ವಸ್ಯಚ ಅಭಾವೇ ಸರ್ವಥಾವಕ್ತುಂ ಅಶಕ್ಯತ್ವಾದಿತಿ ಸಂಕ್ಷೇಪಃ । ಅವಿದ್ಯಾಯಾ ಆಶ್ರಯಮಾಹ ।**

**ಪ.ಸಂ. ಸರ್ವಾಜ್ಞ್ಯವಿದ್ಯಾಜೀವಾಶ್ರಿತಾ ।**

**ತದುಕ್ತಂ ತತ್ತ್ವೋದ್ಯೋತೇ ಪುಂಗತಮೇವಹಿತಮ ಇತಿ । ಮಾಂಡೂಕ ಭಾಷ್ಯೇಪಿ ಘನೋಜೀವಸ್ತಮೋವೃತ ಇತಿ । ಜಿಜ್ಞಾಸಾಧಿಕರಣಾನುವ್ಯಾಖ್ಯಾನೇಪಿ ಸ್ವಭಾವಾಜ್ಞಾನವಾದಸ್ಯ ನಿರ್ದೋಷತ್ವಾನ್ನತದ್ಭವೇದಿತಿ ।**

ಪರಮಾತ್ಮನು ತಮೋಗುಣ (ಅವಿದ್ಯೆ)ವನ್ನು ಸೃಜಿಸಿ ಚತುರ್ಮುಖರ ದೇಹದಲ್ಲಿ ಹಾಕಿದನು. ಅದು ಹೊರಬಿದ್ದು ಜೀವನ ಸ್ವರೂಪವನ್ನು ಅಪರೋಕ್ಷಜ್ಞಾನವನ್ನು ಆವರಿಸಿತು. ಅದಿಲ್ಲವಾದರೆ ಏನೂ ಹೇಳಲು ಬರುವುದಿಲ್ಲವಾದ್ದರಿಂದ ಭಾವರೂಪ ಅಜ್ಞಾನವನ್ನು ಒಪ್ಪಲೇಬೇಕು. ಸಂಕ್ಷೇಪವಾಗಿ ಇಷ್ಟನ್ನು ತಿಳಿಸಿದೆ. ಅಂತಹ ಅವಿದ್ಯೆಗೆ ಆಶ್ರಯವನ್ನು ಹೇಳುತ್ತಾರೆ. ಸರ್ವಜೀವರೂ ಆಶ್ರಯರೇ ಆಗಿರುತ್ತಾರೆ. ಇದನ್ನು ತತ್ತ್ವೋದ್ಯೋತ 'ಪುಂಗತಮೇವಹಿ' ಎಂಬ ವಾಕ್ಯದಿಂದ ಹೇಳಿರುತ್ತಾರೆ. ಮಾಂಡೂಕಭಾಷ್ಯದಲ್ಲಿಯೂ ಜೀವನು ಘನತಮಸ್ಸಿನಿಂದ ಆವೃತ (ಮುಚ್ಚಿದವ)ನಾಗಿದ್ದಾನೆಂದು ಜಿಜ್ಞಾಸಾಧಿಕರಣ ಸುಧಾದಲ್ಲೂ ಸ್ವಾಭಾವಿಕವಾದ ಅಜ್ಞಾನ ಜೀವನಿಗೆ ಎಂಬವಾದವು ನಿರ್ದೋಷವಾಗಿದೆ. ಆದ್ದರಿಂದ ಅದು ತಪ್ಪಾಗುವುದಿಲ್ಲವೆಂದಿದ್ದಾರೆ. ಇಲ್ಲಿ ಸ್ವಭಾವ ಶಬ್ದವು ಜೀವನ ಸ್ವರೂಪವನ್ನೇ ಹೇಳುತ್ತದೆ ಎಂದು ಸುಧಾದಲ್ಲಿ ಹೇಳಿದೆ.

**ಅತ್ರ ಸ್ವಭಾವ ಶಬ್ದೋ ಜೀವಸ್ವರೂಪಪರ ಇತಿ ಸುಧಾಯಾಂ ಉಕ್ತಂ । ತಥಾಹಿತದ್ವ್ಯಾಖ್ಯಾನಿ । ಸ್ವಸ್ಯಾಸೌಭಾವಶ್ಚೇತಿ ಸ್ವಭಾವೋ ಜೀವಃ । ತದಾಶ್ರಿತಂ ತದಾವರಣಮಿತಿವಾದಃ । ಸ್ವಭಾವಾಜ್ಞಾನವಾದಃ ಜೀವಾಶ್ರಿತಂ ಜೀವಾವರಣಂ ಚ ಅಜ್ಞಾನಮಿತ್ಯಂಗೀಕಾರಾದಿತಿ ।**

ಸುಧಾಗ್ರಂಥದಲ್ಲಿ ಸ್ವಭಾವಶಬ್ದವನ್ನು ಸ್ವಶ್ಚಾಸೌಭಾವಶ್ಚ ಹೀಗೆ ಕರ್ಮಧಾರಯ ಸಮಾಸದಿಂದ ಜೀವನ ಸ್ವರೂಪವೆಂದು ಹೇಳಿ, ಅದರ ಆಶ್ರಯವೆಂದರೆ ಜೀವಸ್ವರೂಪಾವರಣ(ಕವಚ) ಎಂದರ್ಥವು. ಸ್ವಭಾವಾಜ್ಞಾನವಾದವೆಂದರೆ ಅಜ್ಞಾನವು ಜೀವನಿಗೆ ಆವರಣ (ಕವಚ)ವೆಂದರ್ಥ ಅಂಗೀಕೃತವೇ ಆಗಿರುತ್ತದೆ. ಹೀಗೆ ಹೇಳಿದೆ.

**ನಚ ಅವಿದ್ಯಾಪಟಲಪಿಹಿತನಯನೈಃ ಅಜ್ಞೈಃ ಅನ್ಯಥಾವ್ಯಾಖ್ಯಾತಾನೀತಿ ಟೀಕಾವಿರೋಧ ಇತಿ ವಾಚ್ಯಂ। ನೀಯತೇನೇನೇತಿ ನಯನಮಿತಿ ನಯನಶಬ್ದಸ್ಯ ಸ್ವರೂಪಮನಃ ಪರತ್ವಾತ್ । ಯದ್ವಾ ಅವಿದ್ಯಾಪಟಲಪಿಹಿತಂ ನಯನಂ ಯಥಾವಸ್ಥಿತ ಯೋಜನಾಪ್ರಕಾರೋ ಯೇಷಾಂ ತೈರಿತಿ ವ್ಯಾಖ್ಯಾನ ಸಂಭವಾತ್ । ನನ್ವೇವಮಜ್ಞಾನಸ್ಯ ಜೀವಾಶ್ರಿತತ್ವಾನುಪಪತ್ತಿಃ । ಜೀವಸ್ಯ ಜ್ಞಾನಸ್ವರೂಪತ್ವೇನಾಜ್ಞಾನಾವರಣಾನುಪಪತ್ತೇಃ । ಅನ್ಯಥಾಂಧಕಾರಸ್ಯ ದೀಪಾವರಕತ್ವಾಪತ್ತೇಃ । ನಚಸ್ವರೂಪಜ್ಞಾನಂನ ಅಜ್ಞಾನವಿರೋಧಿ । ಕಿಂತು ವೃತ್ತಿರೂಪಜ್ಞಾನಮಿತಿವಾಚ್ಯಂ । ಅಜ್ಞತಾಖಿಲಸಂವೇತ್ತುಃ ಘಟತೇನಕುತಶ್ಚನೇತ್ಯುಪಾಧಿಖಂಡನೇ ಈಶ್ವರ ಸ್ವರೂಪಜ್ಞಾನಸ್ಯ ಅಜ್ಞಾನ ವಿರೋಧಿತ್ವೋಕ್ತಿಃ ಸ್ಯಾದಿತಿಚೇತ್ । ಉಚ್ಯತೇ ।**

ಅವಿದ್ಯಾ ಎಂಬ ತೆರೆಯಿಂದ ಮುಚ್ಚಲ್ಪಟ್ಟ ಕಣ್ಣುಗಳುಳ್ಳ ಅಜ್ಞಾನಿಗಳಿಂದ ವಿಪರೀತವಾಗಿ ವ್ಯಾಖ್ಯಾನಿಸಿದ ಪ್ರಯುಕ್ತ, ಹೀಗೆಂದು ಅಜ್ಞಾನಕ್ಕಾಶ್ರಯ ಕಣ್ಣೆಂದು ಹೇಳಿದ ಟೀಕಾವಿರೋಧ ಬರುವುದಿಲ್ಲವೇ ಎಂದರೆ, ವಿರೋಧವು ಬರುವುದಿಲ್ಲ. ಅಲ್ಲಿ ನಿಯತೇ ಅನೇನ ಇತಿ ನಯನಂ, ಅಂದರೆ ಜೀವನ ಸ್ವರೂಪವಾದ ಮನಸ್ಸೆಂದು ಅರ್ಥಹೇಳುವುದರಿಂದ ಅಥವಾ ಯಥಾಸ್ಥಿತಾರ್ಥವೇ ಆಗಲಿ, ಅಜ್ಞಾನವೆಂಬ ತೆರೆ ಉಳ್ಳವರ ಕಣ್ಣಿಗೆ ಹೇಗೆ ಕಾಣುವುದೋ ಆ ಪ್ರಕಾರವೆಂದರ್ಥ ಮಾಡಿದರೂ ವಿರೋಧ ಬರುವುದಿಲ್ಲ. ಹೀಗೆ ಹೇಳಿದರೂ ಜೀವನಿಗೆ ಅಜ್ಞಾನಾಶ್ರಯತೆ ಬರುವುದಿಲ್ಲ. ಜೀವನು ಜ್ಞಾನಸ್ವರೂಪನಾಗಿರುವುದರಿಂದ, ಜ್ಞಾನಾಜ್ಞಾನಗಳಿಗೆ ಆಶ್ರಯ ಭಾವವು ಕೂಡುವುದಿಲ್ಲ. ವಿರೋಧವಿರುವುದರಿಂದ. ವಿರೋಧವಿದ್ದರೂ ಆಶ್ರಯಿಭಾವವನ್ನು ಹೇಳುತ್ತೇವೆಂದರೆ, ಕತ್ತಲೆಗೆ ದೀಪವು ಆವರಣವಾಗಬೇಕಾದೀತು. ಸ್ವರೂಪಜ್ಞಾನವು ಅಜ್ಞಾನವಿರೋಧಿ ಅಲ್ಲ. ವೃತ್ತಿಜ್ಞಾನವೇ ಅಜ್ಞಾನವಿರೋಧಿ ಆಗುವುದು. ಎಂದರೆ ಅದೂ ಸರಿಯಲ್ಲ. ಉಪಾಧಿಖಂಡನದಲ್ಲಿ ಅಖಿಲಜ್ಞಾನಿಯಾದ ಭಗವಂತನಿಗೆ ಎಂದಿಗೂ ಹೇಗೂ ಅಜ್ಞಾನವಿಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ ಅಜ್ಞಾನಕ್ಕೆ ಜ್ಞಾನರೂಪನಾದ ಜೀವಾಶ್ರಯತೆ ಕೂಡುವುದಿಲ್ಲ ಎಂದರೆ ಹೇಳುತ್ತಾರೆ.

**ಜ್ಞಾನಾಜ್ಞಾನಯೋಃ ಸರ್ವಥಾವಿರೋಧ ಏವ । ನಚಜೀವಸ್ಯ ಸ್ವಪ್ರಕಾಶಜ್ಞಾನರೂಪಸ್ಯಾಜ್ಞಾನಾವರಣಾನುಪಪತ್ತಿರಿತಿವಾಚ್ಯಂ । ಈಶ್ವರಾಚಿಂತ್ಯಶಕ್ತ್ಯಾ ಅಜ್ಞಾನಸ್ಯ ಜೀವಾಶ್ರಿತತ್ವ ಸಂಭವಾತ್ । ತದುಕ್ತಂ ಜಿಜ್ಞಾಸಾಧಿಕರಣ ಸುಧಾಯಾಂ । ಅತಃ ಪರಮೇಶ್ವರ ಏವ ಸತ್ವಾದಿಗುಣಮಯ್ಯಾವಿದ್ಯಾವಿರೋಧಿತ್ವೇನ ಅವಿದ್ಯಯಾ ಸ್ವಾಧೀನಯಾ ಪ್ರಕೃತ್ಯಾ ಅಚಿಂತ್ಯಾಽದ್ಭುತಯಾ ಸ್ವಶಕ್ತ್ಯಾ ಜೀವಸ್ಯ ಪ್ರಕಾಶಮಪಿ ಸ್ವರೂಪಚೈತನ್ಯಮಪ್ಯಾಚ್ಛಾದಯತೀತಿ ಯುಕ್ತಮಿತಿ । ತಥಾತತ್ರೈವ । ಜೀವಾಶ್ರಿತಂ ಜೀವಾವರಣಂ ಚ ಅಜ್ಞಾನಮಿತ್ಯಂಗೀಕಾರಾತ್ । ತಚ್ಚ ಸ್ವಪ್ರಕಾಶಸ್ಯಾಪಿ ಪರಮೇಶ್ವರೇಚ್ಛಯಾ ಪರಮೇಶ್ವರೇ ಸ್ವಧರ್ಮೇಷು ಚ ಅಜ್ಞಾನಂ ಸಂಭವತ್ಯೇವೇತಿ ।**

ಜ್ಞಾನಅಜ್ಞಾನಗಳಿಗೆ ವಿರೋಧವೇನೋ ಸಹಜವೇ, ಆದರೂ ಜ್ಞಾನಸ್ವರೂಪನಾದ ಜೀವಗೆ ಅಜ್ಞಾನಾವರಣವಿಲ್ಲ ಎಂದೆನ್ನಬಾರದು. ಏಕೆಂದರೆ ಈಶ್ವರನ ಅಚಿಂತ್ಯಾದ್ಭುತ ಶಕ್ತಿಯಿಂದ ಜೀವನಿಗೆ ಅ ಜ್ಞಾನಆವರಣವು ಸಂಭಾವಿತವೇ ಆಗಿರುತ್ತದೆ. ಇದನ್ನು ಜಿಜ್ಞಾನಾಧಿಕರಣದಲ್ಲಿ ಜೀವನು ಅವಿದ್ಯಾವಿರೋಧಿಯಾದರೂ ಗುಣಮಯವಾದ ಪ್ರಕೃತ್ಯಾತ್ಮಕವಾದ ಅವಿದ್ಯೆಯಿಂದ, ಜೀವಸ್ವಪ್ರಕಾಶನಾದರೂ ಸ್ವರೂಪ ಚೈತನ್ಯವನ್ನು ಆಚ್ಛಾದನೆ ಮಾಡುತ್ತಾನೆ. ಇದು ಯುಕ್ತವೂ ಅನುಭವ ಸಿದ್ಧವೂ ಆಗಿರುತ್ತದೆ ಎಂದಿರುತ್ತಾರೆ. ಮತ್ತು ಅಲ್ಲಿಯೇ ಜೀವಾಶ್ರಿತ (ಜೀವಾವರಣ) ಅಜ್ಞನವೆಂದು ಅಂಗೀಕೃತವಗಿದೆ. ಆದ್ದರಿಂದಲೇ ಜೀವನಿಗೆ ಸ್ವಪ್ರಕಾಶತೆ ಇದ್ದರೂ ಭಗವದಿಚ್ಛೆಯಿಂದ, ಬಗವಂತನ ವಿಷಯ, ಧರ್ಮವಿಷಯಾದಿಗಳಲ್ಲಿ ಅಜ್ಞಾನ ಸಿದ್ಧವಾಗಿಯೇ ಇರುವುದಾಗಿದೆ. ನಚ್ಛಾಸ್ತ್ರಶ್ರವಣದಿಂದ ದೂರವಾದರೂ ಪುನಃ ಪುನಃ ಅಜ್ಞನ ಬರುತ್ತಲೇ ಇರುತ್ತದೆ.

**ನನ್ವೇವಮಜ್ಞಾನಸ್ಯ ಜೀವಾಶ್ರಿತತ್ವೇ ಪರಮಾತ್ಮಾಪರೋಕ್ಷಜ್ಞಾನೇನ ನಿವೃತ್ತಿರ್ನಸ್ಯಾತ್ । ಜ್ಞಾನಸ್ಯಾಂತಃ ಕರಣ ಪರಿಣಾಮತ್ವೇನಾಂತಃ ಕರಣಾಶ್ರಿತತ್ವಾತ್ । ಸಮಾನಾಧಿಕರಣಯೋಃ ಏವ ದೀಪಾಂಧಕಾರಯೋಃ ನಿವರ್ತ್ಯನಿವರ್ತಕಭಾವಸ್ಯ ದರ್ಶನಾದಿತಿಚೇತ್ । ಅಭೇದ ಸಂಬಂಧೇನಅಸ್ಯಾಂತಃ ಕರಣನಿಷ್ಠತ್ವೇಽಪಿ ಸಂಯೋಗಸಂಬಂಧೇನ ಆತ್ಮನಿಷ್ಠತ್ವಾತ್ । ಮನಸಃ ಆತ್ಮಾಶ್ರಿತತ್ವಾತ್ । ಅಯಃ ಪಿಂಡಸಂಬಂಧಾದ್ಗ್ನೇರಯಃ ಪಿಂಡಸಂಬದ್ಧ ಪಟಾದಿದಾಹಕತ್ವದಿತ್ಯಲಂ ।**

**ನನ್ವಜ್ಞಾನಸ್ಯ ಜೀವಾಶ್ರಿತತ್ವೇ ಏಕಸ್ಯಾಪರೋಕ್ಷಜ್ಞಾನೋತ್ಪತ್ತಾವಜ್ಞಾನನಾಶೇ ಸರ್ವೇಷಾಮಪಿ ಮುಕ್ತಿಃ ಸ್ಯಾದಿತ್ಯತ ಆಹ ।**

**ಪ.ಸಂ. ಪ್ರಾತಿಸ್ವಿಕೀಚ ।**

ಅಜ್ಞಾನಕ್ಕೆ ಜೀವಾಶ್ರಿತತ್ವ ಹೇಳಿದರೆ ಭಗವದಪರೋಕ್ಷದಿಂದ ಅಜ್ಞಾನನಾಶವಾಗದೇ ಹೋಗಲಿ. ಜ್ಞಾನ ಅಂತಃಕರಣ ಪರಿಣಾಮರೂಪವಾದ್ದರಿಂದ ಜ್ಞಾನವು ಅಂತಃಕರಣದಲ್ಲಿ, ಅಜ್ಞಾನವು ಜೀವನಲ್ಲಿ ಹೀಗೆ ಏಕಾಶ್ರಯವಿಲ್ಲವಾದ್ದರಿಂದ, ಏಕಾಶ್ರಿತವಾದವುಗಳಿಗೆ ದೀಪ ಅಂಧಕಾರಗಳಿಗೆ ಪರಸ್ಪರ ವಿರೋಧರೂಪತೆ ಕಂಡಿರುವುದರಿಂದ ಎಂದರೆ, ಅಂತಃಕರಣವು ಅಭೇದಸಂಬಂಧದಿಂದ ಜೀವನಲ್ಲಿ ಅಜ್ಞಾನವು ಸಂಯೋಗ ಸಂಬಂಧದಿಂದ ಹೀಗೆ ಏಕಾಧಿಕರಣ (ಏಕಾಶ್ರಯತೆ) ಉಂಟು. ಮನಸ್ಸಿಗೆ ಏಕಾಶ್ರಯತ್ವ ಇರುತ್ತದೆ, ಅಗ್ನಿಗೆ ಕಬ್ಬಿಣದ ಮುದ್ದೆಯ ಸಂಬಂಧದಿಂದ, ಕಬ್ಬಿಣದ ಮುದ್ದೆಯ ಸಂಬಂಧ ಬಟ್ಟೆಗೆ ಹೇಗೆ ಸುಡುವಿಕೆಯೋ ಹಾಗೆ ಜೀವನಲ್ಲಿರುವ ಅಜ್ಞಾನಕ್ಕೆ ಜೀವಾಭಿನ್ನ ಅಂತಃಕರಣದಲ್ಲಿರುವ ಭಗದಪರೋಕ್ಷಕ್ಕೆ ಅಜ್ಞಾನನಾಶಕತೆ ವಿಹಿತವೇ ಆಗಿರುತ್ತದೆ. ಅಜ್ಞಾನವು ಜೀವಾಶ್ರಿತವಾಗಿರುವುದರಿಂದ, ಒಬ್ಬರಿಗೆ ಅಪರೋಕ್ಷವಾದರೇ ಅಜ್ಞಾನನಾಶವಾಗಿ ಎಲ್ಲರಿಗೂ ಮೋಕ್ಷವಾಗಲಿ ಹೀಗೆ ಪ್ರಸಂಗ ಬಂದರೆ ಹೇಳುತ್ತಾರೆ, ಪ್ರಾತಿಸ್ವಕೀ ಎಂದು. ಅಜ್ಞಾನವು ಪ್ರತಿ ಜೀವರಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿಯೇ ಆಗಿರುತ್ತದೆ.

**ಏಕೈಕಸ್ಯ ಜೀವಸ್ಯೈಕೈಕಮಜ್ಞಾನಂ । ನತು ಸರ್ವಜೀವಾಶ್ರಿತಮೇಕ - ಮಜ್ಞಾನಂ । ಅತ ಏಕಸ್ಯಾಪರೋಕ್ಷಜ್ಞಾನೇನ ತದಾಶ್ರಿತಾಜ್ಞಾನನಾಶೇಽಪಿ ಜೀವಾಂತರಸ್ಯಾಜ್ಞಾನಾಂತರಾಶ್ರಿತತ್ವಾನ್ನತಸ್ಯಾಪಿ ಮುಕ್ತಿಃ ಇತ್ಯರ್ಥಃ। ತದುಕ್ತಂ ದಶಮಸ್ಕಂಧತಾತ್ಪರ್ಯೇ । ಅಥಾನ್ಯೇ ಪ್ರಕೃತೀದುಷ್ಟೇನ್ಯಪುಪ್ರಾತಿಸ್ವಿಕಂ ಸ್ಥಿತೇ ಇತಿ । ಏಕಾದಶತಾತ್ಪರ್ಯೇಽಪಿ । ಪಿಶಾಚವಸ್ಥಿತಾಮಾಯಾಮುಚ್ಯತೇ ಜೀವಗಾಯದಾ । ದಹ್ಯಂತೇ ತದ್ಗುಣಾಃ ಸರ್ವೇಸಾಚ ಪ್ರಾತಿಸ್ವಿಕೀನರ ಇತಿ ।**

ಪ್ರತಿಯೊಬ್ಬರಿಗೆ ಒಂದೊಂದು ಅಜ್ಞಾನವು. ಸರ್ವ ಜೀವಾಶ್ರಿತವಾದುದೊಂದೇ ಇರುವುದಿಲ್ಲ. ಆದುದರಿಂದಲೇ ಒಬ್ಬನ ಪರೋಕ್ಷದಿಂದ ಒಂದು ಅಜ್ಞಾನ ನಷ್ಟವಾದರೆ ಎಲ್ಲರಿಗೂ ಮೋಕ್ಷವಾಗಲೆಂಬ ಆಪೇಕ್ಷ ಬರುವುದಿಲ್ಲ. ಇದನ್ನು ದಶಮತಾತ್ಪರ್ಯದಲ್ಲಿ ಹೇಳಿದೆ. ಇನ್ನು ದುಷ್ಟವಾದ ಪ್ರಕೃತ್ಯಾತ್ಮಕವಾದುದು ಎರಡು, ಪ್ರತಿ ಜೀವರಲ್ಲೂ ಇರುತ್ತದೆ ಎಂದು ಹೇಳಿದೆ.

ಏಕಾದಶತಾತ್ಪರ್ಯದಲ್ಲಿಯೂ ಜೀವನಲ್ಲಿ ಪಿಶಾಚಿಯಂತೆ ಇರುವ ಮಾಯೆ ಯಾವಾಗ ಬಿಡುತ್ತದೆಯೋ ಆಗ ಆ ಮಾಯಾಗುಣಗಳೆಲ್ಲ ಸುಟ್ಟುಹೋಗುತ್ತದೆ. ಆ ಮಾಯಾ (ಪ್ರಕೃತಿಯು) ಪ್ರತಿ ಜೀವರಲ್ಲೂ ಪ್ರತ್ಯೇಕ ಪ್ರತ್ಯೇಕವಾಗಿಯೇ ಇರುತ್ತದೆ.

**ಅವಿದ್ಯಾಭಿಮಾನಿನೀಚ ದುರ್ಗೇತಿದ್ರಷ್ಟವ್ಯಂ। ತದುಕ್ತಮೇಕಾದಶತಾತ್ಪರ್ಯೇ ಶ್ರೀಸ್ತು ವಿದ್ಯಾಸಮುದ್ದಿಷ್ಟಾ ದುರ್ಗಾऽವಿದ್ಯಾ ಪ್ರಕೀರ್ತಿತೇತಿ । ಅವಿದ್ಯಾಯಾ ದ್ರವ್ಯತ್ವಂಚ ತಮೋಗುಣ ವಿಕಾರತ್ವಾದ್ಯುಕ್ತಂ। ಜಿಜ್ಞಾಸಾಧಿಕರಣ ಸುಧಾಯಾಂ ಅಪಿ ದ್ರವ್ಯತ್ವೇನ ವ್ಯವಹಾರಾಚ್ಚಸಿದ್ಧಂ । ತಥಾಹಿತದ್ವಾಕ್ಯಂ। ಅಂತಃ ಕರ್ಮಾದಿ ವ್ಯತಿರಿಕ್ತಂ ಮಾಯಾವಿದ್ಯಾ ಪ್ರಕೃತಿಶಬ್ದಾಭಿಧೇಯಮನಾದ್ಯೇವ ಕಿಮಪಿ ದ್ರವ್ಯಮಂಗೀಕರಣೀಯ ಮಿತಿ।**

## ॥ ಇತ್ಯವಿದ್ಯಾಪ್ರಕರಣಂ ॥

ಅವಿದ್ಯೆಗೆ ಅಭಿಮಾನೀ ದುರ್ಗಾದೇವಿಯು ಎಂದು ತಿಳಿಯಬೇಕು. ಇದನ್ನು ಏಕಾದಶತಾತ್ಪರ್ಯದಲ್ಲಿ ಹೇಳಿದೆ. ಶ್ರೀದೇವಿಗೆ ವಿದ್ಯಾ ಎಂದು ಹೆಸರು. ವಿದ್ಯಾಭಿಮಾನಿಯಾದ್ದರಿಂದ ದುರ್ಗಾರೂಪಕ್ಕೆ ಅವಿದ್ಯಾ ಎಂದು ಪ್ರಕೀರ್ತಿಯು. ಅವಿದ್ಯಾಭಿಮಾನಿನಿ ಆದ್ದರಿಂದ, ಅವಿದ್ಯೆಗೆ ದ್ರವ್ಯತ್ವವು, ತಮೋಗುಣ ವಿಕಾರವೇ ಆದುದರಿಂದ ಎಂದು ಹೇಳಿರುತ್ತದೆ. ಜಿಜ್ಞಾಸಾಧಿಕರಣ ಸುಧಾದಲ್ಲಿಯೂ, ದ್ರವ್ಯವೆಂದು ವ್ಯವಹಾರವಾದ್ದರಿಂದಲೂ ಅವಿದ್ಯೆಗೆ ದ್ರವ್ಯರಾಶಿಯಲ್ಲಿ ಪ್ರವೇಶವೇ ಎಂದದಿರುತ್ತಾರೆ. ಅಲ್ಲಿಯ ವಾಕ್ಯಗಳಾದರೂ, ಕರ್ಮಾದಿ ವ್ಯತಿರಿಕ್ತವಾದ ಮಾಯೆಯು, ಅವಿದ್ಯಾ, ಪ್ರಕೃತಿ, ಶಬ್ದಗಳಿಂದ ಹೇಳಿಸಿಕೊಳ್ಳಲ್ಪಟ್ಟಿದೆ. ಅದು ಅನಾದಿಯು ಅದನ್ನು ಒಂದು ದ್ರವ್ಯವಾಗಿಯೇ ಅಂಗೀಕಾರ ಮಾಡಬೇಕು. ಹೀಗೆ ಹೇಳಿರುತ್ತದೆ.

ಹೀಗೆ ದ್ರವ್ಯದಲ್ಲಿಯ ಅವಿದ್ಯಾ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೨೮. ವರ್ಣಪ್ರಕರಣ

**ಇದಾನೀಂ ವರ್ಣಾಖ್ಯ ದ್ರವ್ಯವಿಭಾಗ ಮಾಹ ।**

**ಪ.ಸಂ. ವರ್ಣಾಅಕಾರಾದಯ ಏಕಪಂಚಾಶತ್ ॥**

**ಏಕಪಂಚಾಶದಿತಿ । ತದುಕ್ತಂತಂತ್ರಸಾರೇ । ಏಕ ಪಂಚಾಶದ್ವರ್ಣಾನಾಂ-ಚತುರ್ವಿಂಶತಿ ಮೂರ್ತಯ ಇತಿ । ಪಂಚಾಶದ್ವರ್ಣವಾಚ್ಯಾಸ್ತಾ ವರ್ಣಾಸ್ತಾರಾರ್ಣಭೇದಿತಾಃ । ಸಕ್ಷಕಾರಾನ್ನೃಸೇದ್ವರ್ಣಾನ್ನೃಸಿಂಹಃ ಕ್ಷಸ್ಯದೇವತೇತಿ । ಸನುತಂತ್ರಸಾರೇ ಅಕಾರಾದ್ಯತಿಶಾಂತಾಂತಃ ಸೋಯಮಷ್ಟಾಕ್ಷರೋಮತ ಇತಿ । ಶಾಂತಾತಿಶಾಂತನಾದಬಿಂದು ಘೋಷಾಣಾಂಪಂಚಾನಾಮೇಕಪಂಚಾಶದ್ವರ್ಣಾತಿರಿಕ್ತಾನಾ ಮುಕ್ತೇಃ । ತಥಾ ಏಕಾದಶ ಸ್ಕಂಧ ತಾತ್ಪರ್ಯೇ ತ್ರಿಮಾತ್ರ ಮಾದಿತಃ ಕೃತ್ವಾಯಾವಚ್ಚಾನಂತ ಮಾತ್ರಕಾಃ । ಪ್ರಣವಾಸ್ತೇವಿಭೇಧೇನಅನಂತಾಃ ಪರಿಕೀರ್ತಿತಾಃ ।**

ವರ್ಣಗಳೆಂಬ ದ್ರವ್ಯಗಳನ್ನು ವಿಭಾಗಿಸುತ್ತಾರೆ. ವರ್ಣಗಳು ಅಕಾರಾದಿಗಳು ಐವತ್ತೊಂದು. ತಂತ್ರಸಾರದಲ್ಲಿ, ಐವತ್ತೊಂದು ಅಕಾರಾದಿ ವರ್ಣಗಳಿಗೆ ಕೇಶವಾದಿ ಇಪ್ಪತ್ನಾಲ್ಕು ಮೂರ್ತಿಗಳು ಪ್ರತಿಪಾದ್ಯವಾದವು. ತಾರ-ಓಂಕಾರದ ಅಕ್ಷರಗಳ ಭೇದದಿಂದಲೇ ಐವತ್ತೊಂದು ವರ್ಣಗಳಾದವು. ಕೊನೆಯ ಕ್ಷಕಾರಕ್ಕೆ ನೃಸಿಂಹನೇ ದೇವತೆ (ವಾಚ್ಯನು) ಹೀಗೆಂದುಹೇಳಿದೆ. ತಂತ್ರಸಾರದಲ್ಲಿ ಅಕಾರಾದಿ ಅತಿಶಾಂತಾಂತವಾದ ಎಂಟು ಅಕ್ಷರಗಳು ಓಂಕಾರಕ್ಕೆ ಎಂದು ಹೇಳಿ ಶಾಂತ, ಅತಿ ಶಾಂತ, ನಾದ, ಬಿಂದು, ಘೋಷ ಈ ಐದು ವರ್ಣಗಳಿಗೆ ಐವತ್ತೊಂದು ವರ್ಣಗಳಿಂದ ಅತಿರಿಕ್ತತೆ ಹೇಳಿದೆ. ಹಾಗೆ ಏಕಾದಶ ತಾತ್ಪರ್ಯದಲ್ಲಿ ಮೂರು ಮಾತ್ರ (ವರ್ಣ)ಗಳು ಮೊದಲು ಮಾಡಿ ಯಾವತ್ತೂ ಅನಂತಾನಂತ ವರ್ಣಗಳು ಪ್ರಣವ (ಓಂಕಾರದ) ಮಾತ್ರಾಗಳೇ ಪ್ರಭೇದದಿಂದ ಅನಂತಗಳೆಂದು ಪ್ರಸಿದ್ಧವಾಗಿವೆ.

**ಏಕಮಾತ್ರೋತ್ತರಾಃ ಸರ್ವೇವಾಸುದೇವಾಭಿದಾಯಕಾಃ । ತೇಷಾಂ ವ್ಯಾಖ್ಯಾನ ರೂಪಾಹಿಸರ್ವವೇದಾಃ ಪ್ರಕೀರ್ತಿತಾ ಇತಿ ಪ್ರಣವಾಂತರ್ಗತಾನಾಮನಂತ ವರ್ಣನಾಮುಕ್ತೇಃ । ಮಧ್ವವಿಜಯೇಪಿ । ಅನಂತ ಮಾತ್ರಾಂತಮುದಾಹರಂತಿ ಯಂ ತ್ರಿಮಾತ್ರ ಪೂರ್ವಂ ಪ್ರಣವೋಚ್ಚಯಂ ಬುಧಾಃ । ತದಾ ಭವದ್ವಾವಿಚತುರ್ಮುಖಾಕೃತಿರ್ಜಪಾಧಿಕಾರೀಯತಿರಸ್ಯಸೂಚಿತ ಇತಿ**

**ಅನಂತವರ್ಣಾತ್ಮಕತ್ವೋಕ್ತೇಃ । ಕಥಂ ಏಕಪಂಚಾಶದ್ವರ್ಣಾ ಇತಿಚೇದುಚ್ಯತೇ।**

ಎಲ್ಲಾ ವರ್ಣಗಳೂ ಒಂದು ವರ್ಣ ಪೂರ್ವಕವಾದವುಗಳೇ, ವಾಸುದೇವನನ್ನೇ ಹೇಳುವವುಗಳು. ಆ ವರ್ಣಗಳ ಅನಂತತೆ ಹೇಳಿದೆ. ಸುಮಧ್ವವಿಜಯದಲ್ಲಿಯು ಅಕಾರ, ಉಕಾರ, ಮಕಾರ ಹೀಗೆ ಮೂರು ವರ್ಣ ಪೂರ್ವಕವಾದ ಪ್ರಣವವು (ಓಂಕಾರವು) ಅನಂತಾನಂತ ಮಾತ್ರಾಂತವಾದುದೆಂದು ಹೇಳಿದೆ. ಜ್ಞಾನಿಗಳು ಪ್ರಣವದ ಉಚ್ಚತೆಯನ್ನು ಹೇಳುತ್ತಾರೆ. ಮುಂದಿನ ಚತುರ್ಮುಖಬ್ರಹ್ಮನ ಆಕಾರವುಳ್ಳ ಪ್ರಣವಜಪಾಧಿಕಾರಿಯಾದ ಯತಿ ಎಂದು ಸೂಚಿಸುತ್ತಿತ್ತು. ಹೀಗೆ ಓಂಕಾರಕ್ಕೆ ಅನಂತ ವರ್ಣಾತ್ಮಕತ್ವವನ್ನು ಹೇಳಿದೆ. ಹೀಗಿರಲು ಐವತ್ತೊಂದು ವರ್ಣಗಳೆಂದು ಹೇಗೆ ಹೇಳಿದೆ ಎಂಬುದಕ್ಕೆ ಹೇಳುತ್ತಾರೆ.

**ಓಂಕಾರಗತೇಷ್ವಕಾರೋಕಾರಮಕಾರೇಷ್ವೇವಾನಂತಾನಾಂ ಮಾತ್ರಾಣಾಂ ಅಂತರ್ಭೂತತ್ವೇನಾಕಾರಾದಿ ಗ್ರಹಣೇನೈವ ತೇಷಾಮಪಿ ಗೃಹೀತತ್ವಾನ್ನ ವಿರೋಧಃ । ಯದ್ವಾಸರ್ವೈರುಚ್ಚಾರ್ಯಮಾಣ ವರ್ಣಾಭಿಪ್ರಾಯೇಣ ಪ್ರವೃತ್ತೈಕ ಪಂಚಾಶದ್ವರ್ಣಾನಾಮಿತಿ ತಂತ್ರಸಾರಾನುಸಾರೇಣ ವಿಭಾಗಸ್ಯ ಕೃತತ್ವಾನ್ನದೋಷಇತ್ಯವಧೇಯಂ । ನನುವರ್ಣಾನಾಮೇಕಪಂಚಾಶತ್ತ್ವೇ ಲೌಕಿಕವೈದಿಕ ವಾಕ್ಯಾನಾಮಾನಂತ್ಯಂ ಕಥಂ ಸ್ಯಾದಿತ್ಯತ ಆಹ ।**

**ತ.ಸಂ. ಸರ್ವೇ ಲೌಕಿಕ ವೈದಿಕಾಶ್ಚ ಶಬ್ದಾ ಏಕಪಂಚಾಶದ್ವರ್ಣಾತ್ಮಕಾಃ ಪ್ರತ್ಯೇಕಂ ವ್ಯಾಪ್ತಾ ಅನಾದಿನಿತ್ಯಾಶ್ಚ ॥**

ಓಂಕಾರದಲ್ಲಿ ಮೊದಲನೆಯವುಗಳಾದ ಅಕಾರ, ಉಕಾರ ಮತ್ತು ಮಕಾರ ಅಕ್ಷರಗಳಲ್ಲಿ ಅನಂತಾನಂತ ಮಾತ್ರಾಗಳ ಅಂತರ್ಭಾವ ಇರುವುದರಿಂದ ಯಾವ ವಿರೋಧವೂ ಬರುವುದಿಲ್ಲ. ಅಥವಾ ಎಲ್ಲರಿಂದಲೂ ಉಚ್ಚರಿಸುವ ವರ್ಣಗಳ ಅಭಿಪ್ರಾಯದಿಂದ ಐವತ್ತೊಂದು ವರ್ಣಗಳೆಂದು ಹೇಳಿರುವುದು. ತಂತ್ರಸಾರಾನುಗುಣವಾಗಿ ವಿಭಾಗಿಸಿರುವುದಾದ್ದರಿಂದ ಯಾವ ದೋಷವೂ ಬರುವುದಿಲ್ಲ. ಹೀಗೆ ತಿಳಿಯಬೇಕು. ಮತ್ತು ವರ್ಣಗಳು ಐವತ್ತೊಂದು ಎಂದಿರಲು ವೈದಿಕ, ಲೌಕಿಕ ವಾಕ್ಯಗಳು ಅನಂತವೆಂಬುದು ಹೇಗೆ ಎಂದರೆ ಹೇಳುತ್ತಾರೆ. ವೈದಿಕ ಲೌಕಿಕ ಶಬ್ದಗಳೆಲ್ಲವು ಐವತ್ತೊಂದು ಅಕ್ಷರಾತ್ಮಕವಾದವುಗಳೇ, ಅವುಗಳು ಪ್ರತ್ಯೇಕ ಪ್ರತ್ಯೇಕವಾಗಿ ವ್ಯಾಪ್ತವಾದವುಗಳು. ಹಾಗೂ ಅನಾದಿನಿತ್ಯವಾದವುಗಳು.

**ಆನುಪೂರ್ವಿವಿಶೇಷವಿಶಿಷ್ಟಾ ಇತಿಶೇಷಃ । ತಥಾಚ ವರ್ಣಾನಾಮೇಕಪಂಚಾಶತ್ತ್ವೇಪ್ಯಾನುಪೂರ್ವೀವಿಶೀಷ್ಟಾನಾಂ ಲೌಕಿಕ ವೈದಿಕ**

**ವಾಕ್ಯಾನಾಂ ಅನಂತ್ಯೋಪಪತ್ತೇಃ ನದೋಷ ಇತಿ ಭಾವ । ತಾರ್ಕಿಕಾಸ್ತು। ವರ್ಣಾ ಆಕಾಶ ವಿಶೇಷಗುಣಾ ಉಚ್ಚಾರಣೇನೋತ್ಪದ್ಯಂತೇಽ-ಥನಶ್ಯಂತೀತ್ಯಾಹುಃ । ತಾನ್ನಿರಾಚಷ್ಟೇ ।**

ಆನುಪೂರ್ವಿಭೇದಗಳಿಂದ, ಸಮಸ್ತ 'ಲೌಕಿಕ ವೈದಿಕ ಶಬ್ದಗಳು ಐವತ್ತೊಂದು ಅಕ್ಷರಗಳಿಂದಲೇ ಆಗಿರುತ್ತವೆ. ಆದುದರಿಂದ ಐವತ್ತೊಂದು ಅಕ್ಷರಗಳಿಂದ ಆನಂತ್ಯತೆವೆಂಬುದು ದೋಷವಾಗದು. ತಾರ್ಕಿಕರು, ವರ್ಣಗಳು ಆಕಾಶದ ವಿಶೇಷ ಗಣವು, ಉಚ್ಚಾರಣದಿಂದ ಹುಟ್ಟುತ್ತವೆ ನಂತರ ನಷ್ಟವಾಗುತ್ತವೆ ಹೀಗೆನ್ನುತ್ತಾರೆ. ಈ ಮತವನ್ನು ನಿರಾಕರಿಸುತ್ತಾರೆ.

**ಪ್ರತ್ಯೇಕಂ ವ್ಯಾಪ್ತಾ ಇತ್ಯಾದಿನಾ । ಗುಣತ್ವೇವ್ಯಾಪ್ತತ್ವಾನುಪಪತ್ತೇರಿತಿಭಾವಃ। ನಚ ವರ್ಣಾನಾಂ ವ್ಯಾಪ್ತತ್ವೇ ಪ್ರಮಾಣಾಭಾವ ಇತಿ ವಾಚ್ಯಂ । ದೇಶತಃ ಕಾಲತಶ್ಚೈವ ಗುಣತಶ್ಚತ್ರಿಧಾಹರೇಃ । ಯಥಾ ಅನಂತ್ಯಂ ನಚಾನ್ಯಸ್ಯ ಪ್ರಕೃತೇರ್ದೇಶಕಾಲತಃ । ತಥಾಶಬ್ದಸ್ಯ ಕಾಲಸ್ಯದೇಶಾನಂತ್ಯಂಚಕಾಲತಃ । ಕಾಲಶಬ್ದಾತ್ಮಿಕಾಸ್ಮೈವೇತಿ ತೃತೀಯ ಸ್ಕಂಧ ತಾತ್ಪರ್ಯೋಕ್ತೇಃ । ತಥಾಚೇತ್ಥಮನುಮಾನ ಪ್ರಯೋಗಃ । ವರ್ಣಾಃ ದ್ರವ್ಯಂವ್ಯಾಪ್ತತ್ವಾದಾ ಕಾಶವದಿತಿ ।**

ಪ್ರತ್ಯೇಕವಾಗಿ ವರ್ಣಗಳೆಲ್ಲವೂ ವ್ಯಾಪ್ತವಾದವುಗಳೇ ಆಗಿರುತ್ತವೆ. ವರ್ಣಗಳು ಗುಣವಾದರೇ ವ್ಯಾಪ್ತಗಳು ಹೇಗಾಗುತ್ತವೆ ? ವರ್ಣಗಳಿಗೆ ವ್ಯಾಪ್ತತ್ವ ವಿಷಯದಲ್ಲಿ ಪ್ರಮಾಣಗಳಿಲ್ಲ ಎಂದರೆ, ಹಾಗೆನಬಾರದು. ದೇಶ ಕಾಲ ಗುಣಗಳಿಂದ ವ್ಯಾಪ್ತತ್ವ (ಆನಂತ್ಯ) ಶ್ರೀ ಹರಿಗೊಬ್ಬನಿಗೇ. ಮಿಕ್ಕ ಯಾರಿಗೂ ಪ್ರಕೃತ್ಯಾದಿಗಳಿಗೆ ಮೂರರಿಂದ ವ್ಯಾಪ್ತಿ ಇರುವುದಿಲ್ಲ. ಆದರೆ ಶಬ್ದಕ್ಕೆ ಕಾಲಕ್ಕೆ ದೇಶತಃ ಕಾಲತಃ (ಕಾಲ ದೇಶಗಳಿಂದ) ವ್ಯಾಪ್ತಿಯು ಇರುತ್ತದೆ. ಹೀಗೆ ತೃತೀಯ ಸ್ಕಂಧ ತಾತ್ಪರ್ಯದಲ್ಲಿ, ಆಚಾರ್ಯರು ಹೇಳಿರುತ್ತಾರೆ. ಹೀಗೆ ಅನುಮಾನವೂ ಇದೆ. ವರ್ಣಗಳೆಲ್ಲವೂ ವ್ಯಾಪ್ತಗಳಾದವುಗಳೆ, ದ್ರವ್ಯವಾಗಿರುವುದರಿಂದ, ಆಕಾಶದಂತೆ ಆಕಾಶದಲ್ಲಿ ದ್ರವ್ಯತೆ ವ್ಯಾಪ್ತತ್ವವು ಇದೆ. ಹಾಗೆ ವರ್ಣಗಳು ದ್ರವ್ಯವಾದ್ದರಿಂದ ವ್ಯಾಪ್ತಗಳಾಗಿರುತ್ತವೆ. ಈ ನಿರ್ದುಷ್ಟಾನುಮಾನವೂ ಪ್ರಮಾಣವು.

**ನಚ ದ್ರವ್ಯತ್ವೇಽಪಿ ಪೃಥಿವ್ಯಾದಿವನ್ಮಧ್ಯಮಪರಿಮಾಣತ್ವಮಸ್ತ್ವಿತಿ ವಾಚ್ಯಂ । ತಥಾತ್ವೇ ಘಟಾದಿವದನಿತ್ಯತ್ವಾಪತ್ತೇಃ । ನಚೇಷ್ಟಾಪತ್ತಿರಿತಿವಾಚ್ಯಂ । ವರ್ಣಾನಾಂ ದೇವತಾನಾಂಚ ನಿತ್ಯತ್ವಾನ್ನಕ್ರಮಃ ಸ್ಮೃತ ಇತಿ ತಂತ್ರಸಾರ**

**ವಿರೋಧಾಪತ್ತೇಃ । ನಾಪ್ಯಣು ಪರಿಮಾಣಂ ವಕ್ತುಂ ಯುಕ್ತಂ । ಅತೀಂದ್ರಿಯತ್ವ ಆಪತ್ತೇಃ । ನಚ ವ್ಯಾಪ್ತತ್ವೇ ಆಕಾಶವದತೀಂದ್ರಿಯತ್ವಂ ಸ್ಯಾದಿತಿವಾಚ್ಯಂ । ವ್ಯಾಪ್ತತ್ವೇಽಪಿ ತವಾತ್ಮನೋಮಾನಸತ್ವವಚ್ಛ್ರೋತ್ರಗ್ರಾಹ್ಯತ್ವೋಪಪತ್ತೇಃ । ಅತೋ ವರ್ಣಾನಾಂ ದ್ರವ್ಯತ್ವಂ ವ್ಯಾಪ್ತತ್ವಂಚ ಯುಕ್ತಮೇವ ।**

ವರ್ಣಗಳಿಗೆ ದ್ರವ್ಯತ್ವ ಹೇಳಿದರೆ, ಘಟಾದಿಗಳಂತೆ ಮಧ್ಯಮ ಪರಿಮಾಣತೆ ಒಂದು ಇಲ್ಲವಾಗಲಿ, ಹಾಗೆನಬಾರದು. ಘಟಾದಿಗಳಂತೆ ಅನಿತ್ಯತೆ ಬರಲೆಂದೂ ಆಪಾದನೆ ಬರುತ್ತದೆ. ಆಗಲಿ ಎಂದರೆ ವರ್ಣಗಳೂ ಭಗವದವತಾರಗಳೂ ನಿತ್ಯಗಳಾದ್ದರಿಂದ ಇಲ್ಲಿ ಕ್ರಮವಿರುವುದಿಲ್ಲ ಎಂಬ ತಂತ್ರಸಾರ ವಿರೋಧವು ಬರುತ್ತದೆ. ಅಣು ಪರಿಮಾಣತೆಯೂ ಯುಕ್ತವಲ್ಲ. ಅತೀಂದ್ರಿಯವಾಗಬೇಕಾದೀತು. ಆಕಾಶದಂತೆ ವ್ಯಾಪ್ತವಾದರೆ ಅತೀದ್ರಿಯವಾಗಲಿ ಎಂತಲೂ ಎನಬಾರದು. ನಮ್ಮ ಸಿದ್ಧಾಂತದಲ್ಲಿ ವ್ಯಾಪ್ತವಾದ ಮನಸ್ಸಿನಂತೆ, ಶ್ರೋತ್ರಗ್ರಾಹ್ಯತೆ ಯುಕ್ತವೇ ಆಗಿರುತ್ತದೆ. ಆದುದರಿಂದ ವರ್ಣಗಳಿಗೆ ವ್ಯಾಪ್ತತ್ವ ಹಾಗೂ ದ್ರವ್ಯತ್ವವು ಯುಕ್ತವೇ ಆಗಿರುತ್ತದೆ.

**ತದುಕ್ತಂ ಪ್ರಕೃತ್ಯಧಿಕರಣ ಸುಧಾಯಾಂ । ತತಾಪಿತದ್ವಾಕ್ಯಾನಿ । ಶಬ್ದೋವರ್ಣಾತ್ಮಾವಾಪಕ್ಷೋಧ್ವನಿರೂಪೋವಾ । ನಾದ್ಯಃ ತಸ್ಯಗುಣತ್ವಾಸಿದ್ಧೇಃ । ಆತ್ಮನ ಏಕೇಂದ್ರಿಯ ಗ್ರಾಹ್ಯತ್ವವದ್ದ್ರವ್ಯ ಸ್ಯೈವಸತಃ ಶಬ್ದಸ್ಯ ಬಾಹ್ಯೇಂದ್ರಿಯ ಗ್ರಾಹ್ಯತ್ವೇಽಪಿ ವಿರೋಧಾಭಾವಾದಿತಿ । ವಿಷ್ಣುತತ್ವನಿರ್ಣಯ ಟೀಕಾಯಾಮಪಿ । ವರ್ಣಾನಾಂ ದ್ರವ್ಯತ್ವೇಽಪಿ ಸರ್ವಗತತ್ವಾತ್ । ಅಣುತ್ವೇತೀಂದ್ರಿಯತ್ವಾಪತ್ತೇಃ । ಮಧ್ಯಮ ಪರಿಮಾಣತ್ವೇ ನಿತ್ಯತ್ವ ವಿರೋಧಾದಿತಿ ।**

ಪ್ರಕೃತ್ಯಧಿಕರಣ ಸುಧಾದಲ್ಲಿ ಹೇಳಿದೆ. ಈ ರೀತಿಯಾಗಿ ಶಬ್ದಗಳು ವರ್ಣಾತ್ಮಕವಾಗಲಿ ಧ್ವನ್ಯಾತ್ಮಕವಾಗಲಿ, ಅವುಗಳಿಗೆ ಗುಣವು ಸಿದ್ಧಿಸುವುದಿಲ್ಲ. ಮತ್ತು ಆತ್ಮಗೆ ಮನ ಒಂದೇ ಇಂದ್ರಿಯ ಗ್ರಾಹ್ಯತೆಯಂತೆ ಶಬ್ದಗಳಿಗೂ ಬಾಹ್ಯೇಂದ್ರಿಯ ಗ್ರಾಹ್ಯತೆ ಹೇಳಿದರೆ, ದ್ರವ್ಯತ್ವ ವ್ಯಾಪ್ತತ್ವಗಳಿಗೆ ವಿರೋಧವು ಬರುವುದಿಲ್ಲವೆಂದು ಹೇಳಿದೆ. ವಿಷ್ಣುತತ್ವನಿರ್ಣಯ ಟೀಕೆಯಲ್ಲಿ ವರ್ಣಗಳಿಗೆ ದ್ರವ್ಯತ್ವ ಹೇಳಿದರೂ ಸರ್ವ ವ್ಯಾಪ್ತತ್ವಕ್ಕೆ ವಿರೋಧವಿಲ್ಲ. ಅಣುತ್ವವನ್ನು ಹೇಳಿದರೆ ಅತೀಂದ್ರಿಯತ್ವ ಬರಬೇಕಾಗುತ್ತದೆ. ಘಟಾದಿಗಳಂತೆ ಮಧ್ಯಮ ಪರಿಮಾಣ ಹೇಳಿದರೆ ಅನಿತ್ಯತ್ವ ಬರಬೇಕಾಗುತ್ತದೆ.

**ಜಿಜ್ಞಾಸಾಧಿಕರಣ ಸುಧಾಯಾಮಾಪಿ । ವರ್ಣಾಃ ತಾವನ್ನಿತ್ಯದ್ರವ್ಯತ್ವಾನ್ನಕ್ವಚಿತ್ಸಮವೇತಾ ಇತಿ । ನನು ವರ್ಣಾನಾಂ ನಿತ್ಯತ್ವಂ ವಕ್ತುಂ ಯುಕ್ತಂ । ಉಚ್ಚಾರಣೇ ಸತ್ಯುತ್ಪನ್ನಗಕಾರೋ ನಷ್ಟೋಗಕಾರ ಇತಿ ಪ್ರತೀತಿ ವಿರೋಧಾದಿತಿಚೇನ್ನ । ತಸ್ಯಾಃ ವ್ಯಂಜಕೋಚ್ಚಾರಣ ವಿಷಯತ್ವಾದಿತ್ಯಾಹ ।**

**ಪ.ಸಂ. ಉಚ್ಚಾರಣ ಧ್ವನಿ ವ್ಯಂಗ್ಯಾಃ ।**

ವರ್ಣಗಲು ನಿತ್ಯದ್ರವ್ಯವಾದ್ದರಿಂದ ಒಂದೇಕಡೆ ಸ್ಥಿತವಾಗಿರುವುವವುಗಳಲ್ಲ, ಎಂದು ಶಬ್ದಗಳು (ವರ್ಣಗಳು) ನಿತ್ಯವೆನಬಾರದು. ಏಕೆಂದರೆ ಗಕಾರವು ಹುಟ್ಟಿತು. ಮರುಕ್ಷಣದಲ್ಲಿ ನಷ್ಟವಾಯಿತೆಂಬ ವ್ಯವಹಾರಪ್ರತ್ಯಕ್ಷವಿರುವುದರಿಂದ ಎಂದರೆ ಹೀಗೂ ಎನ್ನಬಾರದು. ಉಚ್ಚಾರಣೆಯು ವ್ಯಂಜಕವಾಗಲಿ ವರ್ಣಜನಕವಲ್ಲ. ಧ್ವನಿವ್ಯಂಗ್ಯಗಳೆಂದು ಹೇಳಿದರ ಉಚ್ಚಾರಣಕ್ಕೆ ವ್ಯರ್ಥತೆ ಬರುತ್ತದೆ.

**ಉಚ್ಚಾರಣಜನ್ಯಾಧ್ವನಿರುಚ್ಚಾರಣ ಧ್ವನಿಃ । ಧ್ವನಿ ವ್ಯಂಗ್ಯಾ ಇತ್ಯೇವೋಕ್ತೌ ಉಚ್ಚಾರಣಸ್ಯ ವೈಯರ್ಥ್ಯಾಪಾತಾತ್ । ಉಚ್ಚಾರಣ ವ್ಯಂಗ್ಯಾ ಇತ್ಯೇವೋಕ್ತೇ ಆಕಾಶಗುಣೇ ಶಬ್ದೇವ್ಯಜ್ಯಮಾನಾವರ್ಣಾ ಇತಿ ತತ್ವನಿರ್ಣಯವಿರೋಧ ಪ್ರಸಂಗಾತ್ । ಅತಉಭಯಮಪ್ಯುಪಾತ್ತಂ। ನನು ವರ್ಣಾನಾಂ ದ್ರವ್ಯತ್ವೇ ಘಟಾದಿವದ್ವಾಚಕತ್ವಂ ನಸ್ಯಾದಿತ್ಯತ ಆಹ ।**

**ಪ.ಸಂ. ಪ್ರತ್ಯೇಕಮಾನುಪೂರ್ವೀ ವಿಶೇಷ ವಿಶಿಷ್ಟತಯಾ ಚ ಪದಾರ್ಥ ವಾಚಕಾಃ ।**

**ಇಂದ್ರಿಯಾಣಾಂ ದ್ರವ್ಯತ್ವೇಪ್ಯರ್ಥ ಪ್ರಕಾಶಕತ್ವವದ್ವರ್ಣಾನಾಂ ದ್ರವ್ಯತ್ವೇಪ್ಯರ್ಥಪ್ರತಿಪಾದಕಮುಪಪನ್ನಮೇವೇತಿ ಭಾವಃ ।**

॥ ಇತಿ ವರ್ಣಪ್ರಕರಣಂ ॥

ತತ್ವನಿರ್ಣಯದಲ್ಲಿ ಆಕಾಶಗುಣವಾದ ಶಬ್ದದಲ್ಲಿ ವ್ಯಂಜಮಾನವರ್ಣಗಳು ಎಂದಿರುವ ವಿರೋಧ ಬರುತ್ತದಾದ್ದರಿಂದ ವ್ಯಂಗ್ಯವೂ ಹೌದು ಅಭಿವ್ಯಕ್ತವೂ ಹೌದೆಂದು ಹೇಳಬೇಕು. ವರ್ಣಗಳಿಗೆ ದ್ರವ್ಯತ್ವ ಹೇಳಿದರೆ ಘಟಪಟಾದಿಗಳಂತೆ ವಾಚಕತೆ ಇಲ್ಲವಾಗಲಿ ಅಂದರೆ ಹಾಗೆನ್ನಬಾರದು. ಇಂದ್ರಿಯಗಳು ದ್ರವ್ಯವೇ ಆದರೂ ಅರ್ಥ ಪ್ರಕಾಶಕತೆ ಇರುವಂತೆ ವರ್ಣಗಳು ದ್ರವ್ಯವಾದರೂ ಅರ್ಥ ಪ್ರತಿಪಾದಕತೆ ಯುಕ್ತವೇ ಆಗಿರುತ್ತದೆ.

ಹೀಗೆ ದ್ರವ್ಯದಲ್ಲಿ ಹದಿನಾರನೆಯದಾದ ವರ್ಣ ನಿರೂಪಣೆಯ ಕನ್ನಡಾನುವಾದವು ಸಮಾಪ್ತಗೊಂಡಿತು.

* * * * * * * *

# ೨೯.ಅಂಧಕಾರ ಪ್ರಕರಣ

**ಇದಾನೀಂ ಅಂಧಕಾರಾಖ್ಯಂ ದ್ರವ್ಯಂ ನಿರೂಪಯತಿ ।**

**ಪ.ಸಂ. ಪ್ರಕಾಶವಿನಾಶ್ಯೋಂಧಕಾರಃ ।**

**ಪ್ರಕಾಶನಾಶ್ಯತ್ವಂ ಚ ಅಂಧಕಾರಸ್ಯ ಪ್ರತ್ಯಕ್ಷಸಿದ್ಧಂ । ನಚ ಪ್ರಕಾಶನಾಶ್ಯತ್ವಂನ ತಮೋಲಕ್ಷಣಂ । ಪ್ರಭಾಧ್ವಂಸದ್ವಾರಾಪ್ರಭಾಕುಡ್ಯ ಸಂಯೋಗೇತಿ ವ್ಯಾಪ್ತ್ಯಾಪತ್ತೇರಿತಿವಾಚ್ಯಂ ಪ್ರಕಾಶಜನ್ಯತ್ವೇನವಾ। ಸಾಕ್ಷಾದಿತಿವಾ-ವಿಶೇಷಣಾತ್ ನ ಚೈವಂ ಪ್ರಕಾಶಪ್ರಾಗಭಾವೇತಿವ್ಯಾಪ್ತಿಃ । ಭಾವತ್ವೇನಾಪಿ ವಿಶೇಷಣಾತ್ ।**

ಈಗ ಅಂಧಕಾರ (ಕತ್ತಲೆಯು) ಒಂದು ದ್ರವ್ಯವೆಂದು ನಿರೂಪಿಸುತ್ತಾರೆ. ಪ್ರಕಾಶದ (ಬೆಳಕಿನ) ನಾಶಕತ್ವವೇ ಅಂಧಕಾರವು. ಇದು ಪ್ರತ್ಯಕ್ಷ ಸಿದ್ಧವೂ ಆಗಿದೆ. ಗೋಡೆಯು ಸಹಾ ಪ್ರಕಾಶವನ್ನು ಮುಚ್ಚುವುದರಿಂದ ಅದರಲ್ಲೂ ಪ್ರಕಾಶನಾಶಕತೆ ಲಕ್ಷಣ ಬರುವುದೆಂದರೆ ಬರುವುದಿಲ್ಲ. ಸಾಕ್ಷಾತ್ ಪ್ರಕಾಶನಾಶಕತೆ ಅಂಧಕಾರ ಲಕ್ಷಣವು ಗೋಡೆಯಲ್ಲಿ ಅತಿವ್ಯಾಪ್ತಿ ಬರುವುದಿಲ್ಲ. ಪ್ರಕಾಶ ಪ್ರಾಗಭಾವದಲ್ಲಿ ಅತಿವ್ಯಾಪ್ತಿ ಎಂದರೆ, ಭಾವವು ಆಗಿ ಪ್ರಕಾಶನಾಶಕತೆ ಲಕ್ಷಣವೆನ್ನುವುದರಿಂದ ಅತಿವ್ಯಾಪ್ತಿ ಬರುವುದಿಲ್ಲ.

**ನನು ತಮೋ ನದ್ರವ್ಯಂ । ಕಿಂತು ತೇಜೋಭಾವಃ । ನಚೈಕಸ್ಯ ದೀಪಾದಿ ತೇಜಸೋ ಧ್ವಂಸೇಸತಿ ದೀಪಾಂತರವತಿ ಗೇಹೇಂಧಕಾರ ಪ್ರತೀತ್ಯಾಪತ್ತಿಃ । ಕಿಂಚೈತದ್ದೀಪವತಿ ಗೇಹೇದೀಪಾಂತರ ಪ್ರಾಗಭಾವವತ್ಯಂಧಕಾರ ಪ್ರತೀತ್ಯಾಪತ್ತಿಃ । ಉಭಯತ್ರಾಪಿ ತೇಜೋಭಾವಸ್ಯ ಸತ್ತ್ವಾದಿತಿ ವಾಚ್ಯಂ । ತೇಜೋ ಅತ್ಯಂತಾಭಾವಸ್ಯ ವಿವಕ್ಷಿತತ್ವಾತ್ । ಅತ್ಯಂತಾಭಾವಸ್ಯ ಪ್ರಾಗಭಾವಧ್ವಂಸೋಭಯವಿರೋಧಿತ್ವೇನ ತದುಭಯತ್ರ ಪ್ರಾಗಭಾವ ಪ್ರತಿಯೋಗಿಧ್ವಂಸಾನಾಂ ಸತ್ವಾನ್ನಾಂಧಕಾರ ಪ್ರತೀತಿಃ ।**

**ಅತ್ಯಂತಾಭಾವಾಭಾವಾತ್ ।**

ಅಂಧಕಾರವು ಪ್ರತ್ಯೇಕ ದ್ರವ್ಯವಲ್ಲ. ಅಭಾವರೂಪವೆನ್ನಬೇಕು. ಏಕೆಂದರೆ ದೀಪ ಹೋದಲ್ಲಿ ಕತ್ತಲೆ ಬರುತ್ತದೆ. ತೇಜಸ್ಸಿನ ಅಭಾವ (ಬೆಳಕು ಇಲ್ಲದಿರುವಿಕೆ) ಕತ್ತಲೇ ಅಲ್ಲವಾದರೆ ಇನ್ನೊಂದು ದೀಪ ಬಂದ ನಂತರವು ಕತ್ತಲೆಯ ವ್ಯವಹಾರ ಬರಲಿ, ಮತ್ತು ಒಂದು ದೀಪ ಉಳ್ಳ ಮನೆಯಲ್ಲಿ ಮತ್ತೊಂದು ದೀಪದ ಪ್ರಾಗಭಾವ ಇರುವಲ್ಲಿ ಕತ್ತಲೆ ಪ್ರಸಿದ್ಧಿಯಾಗಲಿ, ದೀಪ ಇರುವ ಮನೆ ಇಲ್ಲದ ಮನೆ ಎರಡೂ ಕಡೆ ಬೆಳಕಿನ ಅಭಾವ ಇರುವುದರಿಂದ ಎಂದರೆ ಹೀಗೆನ್ನಬಾರದು. ತೇಜಸ್ಸಿನ ಅತ್ಯಂತಾಭಾವವೇ ವಿವಕ್ಷಿತವಾಗಿರುವುದರಿಂದ, ಅತ್ಯಂತಾಭಾವವು ಪ್ರಾಗಭಾವ, ಪ್ರಧ್ವಂಸಾಭಾವಗಳಿಗೆ ವಿರೋಧಿ ಆಗಿರುವುದರಿಂದ ಆ ಎರಡೂ ಸ್ಥಳಗಳಲ್ಲಿ ಪ್ರಾಗಭಾವ ಪ್ರತಿಯೋಗಿ ಧ್ವಂಸಗಳ ಇರುವಿಕೆಯಿಂದ ಅಂಧಕಾರ ಪ್ರತೀತಿ ಬರುವುದಿಲ್ಲ. ಅಂಧಕಾರದ ಅತ್ಯಂತಾಭಾವವಿಲ್ಲದಿರುವುದರಿಂದ.

**ನಚೈವಂ ಗೇಹಾದಾವಂಧಕಾರ ಪ್ರತ್ಯಯ ಏವ ನಸ್ಯಾತ್ । ದೀಪವತಿ ದೀಪ ಅತ್ಯಂತಾಭಾವಸ್ಯ ತತ್ಪ್ರಾಗಭಾವವತಿ ತದ್ಧ್ವಂಸವತಿ ಚ ದೀಪಾತ್ಯಂತಾಭಾವಸ್ಯ ವಿರೋಧೇನ ವಕ್ತುಮಶಕ್ಯತ್ವಾದಿತಿ ವಾಚ್ಯಂ । ಪ್ರೌಢಪ್ರಕಾಶಕ ತೇಜಸ್ಸಾಮಾನ್ಯಾಭಾವಸ್ಯ ವಿವಕ್ಷಿತತ್ವಾತ್ ಇತಿ ಚೇದುಚ್ಯತೇ । ನೀಲಂ ತಮಶ್ಚಲತೀತಿ ಪ್ರತ್ಯಯಸ್ತಾವತ್ ಅನುಭವಸಿದ್ಧಃ। ಅತೋನೀಲರೂಪಾಶ್ರತಯಾ ಕ್ರಿಯಾಶ್ರಯತಯಾ ಚ ಮೂರ್ತ ದ್ರವ್ಯತ್ವಸಿದ್ಧಿಃ । ನಚ ನೀಲಂ । ತಮಶ್ಚಲತೀತಿಪ್ರತ್ಯಯಃ ಭ್ರಮಃ ಬಾಧಕ ಜ್ಞಾನ ಅಭ[illegible] ಇತಿ ಪ್ರತೀತಿವದಿತಿ ವಾಚ್ಯಂ ಬಾಧಕಜ್ಞಾನ ಅಭಾವಾತ್ ।**

ಯಾವ ಮನೆಯಲ್ಲೂ ಕತ್ತಲ ಪ್ರಸಕ್ತಿಯೇ ಇಲ್ಲವಾಗಲಿ. ದೀಪವಿರುವ ಮನೆಯಲ್ಲೂ ದೀಪದ ಪ್ರಾಗಭಾವ, ದೀಪದ ಧ್ವಂಸಗಳಿರುವುದರಿಂದ ಇವುಗಳ ವಿರೋಧಿಯಾದ ದೀಪಾತ್ಯಂತವೂ ಹೇಳಲು ಬರುವುದಿಲ್ಲವಾದ್ದರಿಂದ, ಎಲ್ಲೂ ಅಂಧಕಾರ ಪ್ರಸಕ್ತಿಯು ಇಲ್ಲವಾಗಲಿ ಎಂದರೆ, ಹಾಗೆನ್ನಬಾರದು. ನಾವು ಪ್ರೌಢಪ್ರಕಾಶಕ ತೇಜಸ್ಸಾಮಾನ್ಯಾಭಾವವೇ ಅಂಧಕಾರವೆಂದು ವಿವಕ್ಷಿಸಿರುವುದರಿಂದ, ಇನ್ನು ಹೇಳುತ್ತೇವೆ. ಕಪ್ಪಾದ ಕತ್ತಲೆ ಎಂದು ಪ್ರತ್ಯಕ್ಷ ಹಾಗೂ ವ್ಯವಹಾರವಿದೆ. ಆದುದರಿಂದ ಕಪ್ಪುರೂಪ ಕ್ರಿಯಾಶ್ರಯವಾದ ಒಂದು ಮೂರ್ತಪದಾರ್ಥ ದ್ರವ್ಯವು ಸಿದ್ಧಿಸುತ್ತದೆ. ಕಪ್ಪಾದ ಕತ್ತಲೆ ಎಂಬುದು ಭ್ರಾಂತಿ ಅಲ್ಲ, ಉತ್ತರ ಕಾಲೀನ ಬಾಧಜ್ಞಾನವಿಲ್ಲವಾದುದರಿಂದ ಆಕಾಶವು ನೀಲಿಬಣ್ಣದ್ದು ಎಂಬ ಪ್ರತೀತಿಯು

ಇದ್ದಂತೆ.

**ನಭೋನೈಲ್ಯಸ್ಯ ಶಾಸ್ತ್ರಬಾಧಿತತ್ವೇನ ಆರೋಪಿತತ್ವಾತ್ । ಕಿಂಚ ತಮಸ ಏವ ದ್ರವ್ಯತ್ವಂ ಅಸ್ತು ತದಭಾವರೂಪತ್ವಂ ತೇಜಸಃ ಕಿಂನಸ್ಯಾತ್ । ನಹಿ ವಿರೋಧ ಮಾತ್ರೇಣೈಕಸ್ಯಾಪರ ವಿರಹರೂಪತ್ವಂ ವಕ್ತುಂ ಯುಕ್ತಂ । ಕಾಕೋಲೂಕಾಹಿ ಮೂಷಿಕಾದೀನಾಮಪಿ ತಥಾತ್ವಾಪತ್ತೇಃ । ಅಪಿಚ ರಾತ್ರೌ ಸೂರ್ಯಾದಿ ಪ್ರಕಾಶಾಭಾವೇನ ಪ್ರೌಢಪ್ರಕಾಶಕ ತೇಜಸ್ಸಾಮಾನ್ಯಾಭಾವ ಸತ್ತ್ವೇನ ದೀಪವತಿ ಗೇಹೇಽಂಧಕಾರ ಪ್ರತ್ಯಯಃ ಸ್ಯಾತ್ । ನಚ ಸಾಮಾನ್ಯಾಭಾವಸ್ಯ ಯತ್ಕಿಂಚಿತ್ಪ್ರತಿಯೋಗಿಸತ್ತ್ವವಿರೋಧಿ ತ್ವಾದ್ದೀಪವತಿ ನ ತೇಜಸ್ಸಾಮಾನ್ಯಾಭವ ಇತಿ ವಾಚ್ಯಂ । ತರ್ಹಿ ದೀಪಾಪಸರಣೇ ದೀಪ ಧ್ವಂಸಸ್ಯ ದೀಪಾಂತರ ಪ್ರಾಗಭಾವಸ್ಯಚ ಸತ್ತ್ವೇನೇತತ್ಸಾಮಾನ್ಯಾಭಾವಾಭಾವೇನ ತತ್ರಾಂಧಕಾರ ಪ್ರತ್ಯಯಾಭಾವ ಪ್ರಸಂಗಾದಿತ್ಯಭಿಪ್ರಾಯೇಣ ತಾರ್ಕಿಕಾನ್ನಿರಾಕರೋತಿ ।**

**ಪ.ಸಂ. ನತು ತೇಜೋಭಾವಃ ।**

**ನಿರವಕಾಶಾನಿದೂಷಣಾನ್ಯಾಹ ।**

**ಪ.ಸಂ. ಚಕ್ರಾದಿಚ್ಛೇದ್ಯತ್ವಾತ್ ।**

ಆಕಾಶವು ನೀಲಿಯಾಗಿದೆ ಎಂಬುದು ಶಾಸ್ತ್ರನಿಷಿದ್ಧವಾದ್ದರಿಂದ ಭ್ರಾಂತಿಯೇ, ಯಾವತ್ತು ಕತ್ತಲೆಗೆ ದ್ರವ್ಯತೆ ಇರಲಿ, ಕತ್ತಲು ಇಲ್ಲದಿರುವಿಕೆ ತೇಜಸ್ಸು ಎಂಬುವುದೇ ಎಂದರೆ, ಹಾಗೆನ್ನಬಾರದು. ಪರಸ್ಪರ ವಿರೋಧಮಾತ್ರಕ್ಕೆ ಅವುಗಳ ಅಭಾವರೂಪತೆ ಹೇಳಬಾರದು. ಹಾಗೆ ಹೇಳುವುದಾದರೆ ಪರಸ್ಪರ ವಿರೋಧಿಗಳಾದ ಕಾಗೆಗೂಗೆಗಳಿಗೆ ತದಭಾವರೂಪತೆ, ಕಾಗೆ ಅಭಾವವೇ ಗೂಗೆ, ಗೂಗೆ ಅಭಾವವೇ ಕಾಗೆ. ಇಲಿಯ ಅಭಾವವೇ ಹಾವು, ಹಾವಿನ ಅಭಾವವೇ ಮುಂಗಸಿ ಹೀಗೆ ಭಾವಪದಾರ್ಥಗಳಿಗೆ ಅಭಾವರೂಪತೆಯೇ ಮೊದಲಾದ ಅನರ್ಥಗಳು ಒದಗಬೇಕಾದೀತು. ಮತ್ತು ರಾತ್ರಿಯಲ್ಲಿ ಸೂರ್ಯಪ್ರಕಾಶವಿಲ್ಲದೆ ಪ್ರೌಢಪ್ರಕಾಶಕ ತೇಜಸ್ಸಾಮಾನ್ಯವಿಲ್ಲದಿರುವುದರಿಂದ ದೀಪವಿರುವ ಮನೆಯಲ್ಲಿ ಕತ್ತಲೆ ಎಂಬ ವ್ಯವಹಾರಬರಲಿ, ಎಂದರೆ, ತೇಜಸ್ಸಾಮಾನ್ಯದ ಇಲ್ಲದಿರುವಿಕೆಗೆ ಸ್ವಲ್ಪ ಬೆಳಕು ಇರುವಿಕೆಯೂ ವಿರೋಧಿಯೇ, ಆದುದರಿಂದ ದೀಪವಿರುವಲ್ಲಿ ಕತ್ತಲೆ ವ್ಯವಹಾರ ಬರುವುದಿಲ್ಲ. ದೀಪವನ್ನು ತೆಗೆಯುವುದರಿಂದ ದೀಪ ಧ್ವಂಸವು, ಮತ್ತೊಂದು ದೀಪದ ಪ್ರಾಗಭಾವವು ಇರುವುದರಿಂದ, ದೀಪ ಸಾಮಾನ್ಯದ ಅಭಾವವಿರುವುದರಿಂದ, ಅಲ್ಲಿ

ಕತ್ತಲೆ ಪ್ರಸಕ್ತಿಯೇ ಇಲ್ಲವಾಗಲಿ, ಈ ಅಭಿಪ್ರಾಯದಿಂದ ತಾರ್ಕಿಕರನ್ನು ನಿರಾಕರಿಸುತ್ತಾರೆ. ತೇಜಸ್ಸಿನ ಅಭಾವವೇ ಕತ್ತಲೆ ಅಲ್ಲ. ಕತ್ತಲೆಯೇ ಪ್ರತ್ಯೇಕದ್ರವ್ಯವು ಇನ್ನು ನಿರವಕಾಶ ದೂಷಣಾಗಳನ್ನು ಹೇಳುತ್ತಾರೆ. ಚಕ್ರದಿಂದ ಕತ್ತರಿಸುವುದರಿಂದ

**ಅಂಧಕಾರಸ್ಯ ತೇಜಃ ಪ್ರಾಗಭಾವರೂಪತ್ವೇ ಚಕ್ರಚ್ಛೇದ್ಯತ್ವಾನುಪಪತ್ತೇಃ । ನಹ್ಯನ್ಯಪ್ರಾಗಭಾವಸ್ಯಾನ್ಯಚ್ಛೇದ್ಯತ್ವಂ ಯುಕ್ತಂ ತೇಜೋಧ್ವಂಸಾತ್ಯಂತಾಭಾವಯೋಃ ಚನಿತ್ಯೇನ ಛೇದ್ಯತ್ವಸ್ಯೈವಾಭಾವಾದಿತಿಭಾವಃ । ಅಂಧಕಾರಸ್ಯ ಚಕ್ರಚ್ಛೇದ್ಯತ್ವಂ ಚೋಕ್ತಂ ನಿರ್ಣಯೇ । ವಹ್ನಿಂ ಪ್ರವಿಕ್ಷಂತಮಮುಂನಿವಾರ್ಯ ಯಯೌಸವಿಪ್ರಃ ಸಹಫಲ್ಗುನೋಹರಿಃ । ಆಶಾಮುದೀಚೀಂಬೃಹತಾರಥೇನ ಕ್ಷಣೇನ ತೀರ್ತ್ವಾರ್ಣವಚಸಪ್ತವಾರಿಧೀನ್ । ದದುಶ್ಚಮಾರ್ಗಂ ಗಿರಯೋಬ್ಧಯೋಸ್ತಥಾ ವಿದಾರ್ಯಚಕ್ರೇಣ ತಮೋಂಧಮೀಶಃ ಇತಿ । ನ ಚಾಂಧತಮಸ್ಯ ದುರ್ಗಾತ್ಮಕತ್ವಾತ್ಕಥಂ ಚಕ್ರಚ್ಛೇದ್ಯತ್ವಮಿತಿ ವಾಚ್ಯಂ । ಜಡಪ್ರಕೃತ್ಯುಪಾದಾನಕಸ್ಯೈವಾತಿ ನಿಬಿಡಸ್ಯ ಚಕ್ರಚ್ಛೇದ್ಯತ್ವಾತ್ । ದುರ್ಗಾರೂಪಸ್ಯಾಪ್ರತಿಘತ್ವೇನಾತ್ಯ ಪ್ರತಿಬಂಧಕತಯಾಚಕ್ರಾಚ್ಛೇದ್ಯತ್ವಾತ್ ।**

ಕತ್ತಲೆಗೆ ಬೆಳಕಿನ ಪ್ರಾಗಭಾವರೂಪತೆ ಆದರೇ ಚಕ್ರದಿಂದ ಕಡೆಯುವಿಕೆ ಅಯುಕ್ತವೇ ಆಗುತ್ತದೆ. ಒಂದು ಅಭಾವದ ನಾಶಕತೆಯು ಮತ್ತೊಂದಕ್ಕೆ ಯುಕ್ತವಲ್ಲ. ಬೆಳಕಿನ ಧ್ವಂಸ ಅತ್ಯಂತಾಭಾವಗಳಿಗೆ ನಿತ್ಯತ್ವವಿರುವುದರಿಂದ ನಾಶಕತೆ ಇರುವುದಿಲ್ಲವೆಂದು ಅಭಿಪ್ರಾಯವು. ಅಂಧಕಾರಕ್ಕೆ ಚಕ್ರದಿಂದ ಛೇದ್ಯತ್ವವನ್ನು ನಿರ್ಣಯದಲ್ಲಿ ಹೀಗೆ ಹೇಳಿರುತ್ತದೆ, ಅರ್ಜುನನಿಗೆ ಅಗ್ನಿಪ್ರವೇಶ ಮಾಡುವುದನ್ನು ಬಿಡಿಸಿ, ಅರ್ಜುನ ಬ್ರಾಹ್ಮಣರೊಂದಿಗೆ ಶ್ರೀಕೃಷ್ಣನು ಉತ್ತರದಿಕ್ಕನ್ನು ರಥದಿಂದ ಕ್ಷಣದಲ್ಲಿ ದಾಟಿಸಿ, ಹಾಗೆ ಏಳು ಸಮುದ್ರಗಳನ್ನು ದಾಟಿಸಿದನು. ಆಗ ಪರ್ವತಗಳು ಸಮುದ್ರಗಳು ದಾರಿಯನ್ನು ಕೊಟ್ಟವು. ಚಕ್ರದಿಂದ ತಮೋಂಧಕಾರವನ್ನು ಕತ್ತರಿಸಿ ಹೋದನೆಂದು, ಹೀಗೆ ಅಂಧಕಾರದ ಕತ್ತರಿಸುವಿಕೆ ಚಕ್ರಕ್ಕೆ ಹೇಳಿರುತ್ತದೆ. ಅಂಧಕಾರವು ದುರ್ಗಾರೂಪವಾದ್ದರಿಂದ ಚಕ್ರದಿಂದ ಕತ್ತರಿಸುವಿಕೆ ಹೇಗೆ ಎಂದೆನಬಾರದು. ಜಡ ಪ್ರಕೃತಿ ಉಪಾದಾನಕವಾದ ಅತಿ ನಿಬಿಡವಾದ ತಮಸ್ಸಿಗೆ (ಕತ್ತಲೆಗೆ) ಚಕ್ರಛೇದಕತೆ ಯುಕ್ತವೇ ಆಗಿರುತ್ತದೆ. ದುರ್ಗಾರೂಪವು ಅಪ್ರತಿಘ (ಅಚ್ಛೇದ್ಯ ಅಭೇದ್ಯ)ವಾದ್ದರಿಂದ ಅದು ಪ್ರತಿಬಂಧಕವೂ ಅಲ್ಲ, ಅದಕ್ಕೆ ಛೇದವೂ ಇಲ್ಲ. ಇದನ್ನು ತಿಳಿಯಬೇಕಾದುದು ಮತ್ತೂ,

**ಕುರುಪಾಂಡವ ಯುದ್ಧ ಕಾಲೇ ಸೂರ್ಯೇಸತ್ಯೇವ ಕೃಷ್ಣೇನ ಸೃಷ್ಟಾಂಧಕಾರಸ್ಯ ಸರ್ವೈರುಪಲಬ್ಧತ್ವೇನ ತೇಜೋಽಭಾವರೂಪತ್ವಾಭಾವಾದಿತ್ಯಪಿಗ್ರಾಹ್ಯಂ । ತದುಕ್ತಂ ನಿರ್ಣಯೇ । ಅಜಿತೇ ದ್ರೋಣತನಯೇತ್ವಹತೇಚ ಜಯದ್ರಥೇ। ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಂ । ತದೈವ ಸೂರ್ಯೇ ಸಕಲೈಶ್ಚದೃಷ್ಟೇ ಹಾಹೇತಿವಾದಃ ಸುಮಹಾನಥಾಸೀದಿತಿ ।**

**ಪ.ಸಂ. ಬ್ರಹ್ಮಣಾಪೀಯಮಾನತ್ವಾದಾವರಣತ್ವಾತ್ಸ್ವತಂತ್ರ್ಯೇಣೋಪಲಭ್ಯ ಮಾನತ್ವಾಚ್ಚ ।**

ಕುರು ಪಾಂಡವರ ಯುದ್ಧಕಾಲದದಲ್ಲಿ ಸೂರ್ಯನಿದ್ದಾಗ್ಯೂ (ಕೃಷ್ಣನಿಂದ ಸೃಜಿಸಲ್ಪಟ್ಟ) ಕತ್ತಲೆಯು ಸರ್ವರಿಗೂ ಸ್ಪಷ್ಟದೃಷ್ಟವಾದ್ದರಿಂದ, ಅಂಧಕಾರವು ತೇಜೋಅಭಾವರೂಪವಲ್ಲವೆಂದು ಸ್ಪಷ್ಟವಾಗುತ್ತದೆ. ಇದನ್ನು ನಿರ್ಣಯದಲ್ಲಿ ಹೇಳಿರುತ್ತಾರೆ. ಅಶ್ವತ್ಥಾಮಾಚಾರ್ಯರು ಸೋಲದಿರಲು, ಜಯದ್ರಥ ಇನ್ನೂ ಬದುಕಿರಲು ಅರ್ಜುನನಿಗೆ ಜಯವನ್ನು ಬಯಸುವ ಶ್ರೀಕೃಷ್ಣನು ಪ್ರಬಲವಾದ ಕತ್ತಲೆಯನ್ನು ಸೃಷ್ಟಿಮಾಡಿದನು. ಪುನಃ ಸೂರ್ಯನು ಎಲ್ಲರಿಗೂ ಕಾಣಿಸುತ್ತಿರಲು ಅಲ್ಲಿ ಹಾಹಾಕಾರವಾಯಿತೆಂದು.

ಸೃಷ್ಟಿ ಆದಿಯಲ್ಲಿ ಬ್ರಹ್ಮದೇವರಿಂದ, ಪಾನ ಮಾಡಿರುವುದರಿಂದ, ಬ್ರಂಹ್ಮಾಂಡಾವರಣದಲ್ಲೊಂದಾಗಿರುವುದರಿಂದಲೂ, ಸ್ವತಂತ್ರವಾಗಿ ಕಾಣುವುದರಿಂದಲೂ ತಮಸ್ಸು ದ್ರವ್ಯವೆಂದು ಸಿದ್ಧವು.

**ತಥಾಚ ತಮಸಃ ತೇಜೋಽಭಾವರೂಪತ್ವೇ ಪಾನಕರ್ಮತ್ವಾನುಪಪತ್ತಿರಿತಿ ಬೋಧ್ಯಂ । ತದುಕ್ತಂ ತೃತೀಯ ಸ್ಕಂಧ ಭಾಗವತೇ । ವಿಶ್ವಮಾತ್ಮಗತಂ ವ್ಯಂಜನ್ಕೂಟಸ್ಥೋ ಜಗದಂಕುರಃ ಸ್ವತೇಜಸಾ ಪಿಬತ್ತೀವ್ರ ಮಾತ್ಮಪ್ರಸ್ವಾಪಸಂ ತಮ ಇತಿ। ನಚೈವಂ ಪ್ರಲಯಕಾಲೀನ ತಮಸ ಆರಂಭಣಾಧಿಕರಣ ಟೀಕಾಯಾಂ ತಮಆಸೀದಿತ್ಯತ್ರ ತಮಃ ಶಬ್ದ ವ್ಯಾಖ್ಯಾನರೂಪೇಣ ಯತ್ತಮೋ ಪರಿಮಿತಂ ಸಲಿಲಂ ಭೂತ್ವಾಸೀತ್ಪ್ರಕೃತ್ಯಾಖ್ಯಂ ತೇನೇದಂ ಸರ್ವಂ ಗೂಹಿತಮಾಸೀದಿತ್ಯನೇನ ದುರ್ಗಾರೂಪತ್ವಸ್ಯ ವರಾಹಪುರಾಣಾದಿಸಾಚೋಕ್ತೇಃ ಕಥಂ ಬ್ರಹ್ಮಪೀತತ್ವಮಿತಿವಾಚ್ಯಂ । ತದ್ಭಿನ್ನಸ್ಯಾಪಿ ಜಡಪ್ರಕೃತ್ಯಪಾದಾನಕಸ್ಯ ತಮಸೋ ಬ್ರಹ್ಮಣಾಪೀತತ್ವಾತ್ । ತದುಕ್ತಂ ತೃತೀಯ ತಾತ್ಪರ್ಯೇ ।**

ಕತ್ತಲೆಯು ತೇಜಸ್ಸಿನ ಇಲ್ಲದಿರುವಿಕೆಯೇ ಆದರೆ ಕುಡುವುದು ಎಂಬುದು ಅಸಂಭವವೇ ಎಂದು ತಿಳಿಯಬೇಕು. ಇದನ್ನು ತೃತೀಯಸ್ಕಂಧ ಭಾಗವತದಲ್ಲಿ

ಹೇಳಿರುತ್ತದೆ. ಜಗತ್ತಿನ ಅಂಕುರಕ್ಕೆ ಕಾರಣನಾದ ನಿರ್ವಿಕಾರನಾದ ಚತುರ್ಮುಖ ಬ್ರಹ್ಮದೇವರು ಜಗತ್ತನ್ನು ವ್ಯಕ್ತಪಡಿಸುವವರಾಗಿ ತಮ್ಮನ್ನೇ ನಿದ್ರೆಗೊಳಿಸುವ ತಮಸ್ಸನ್ನು (ಕತ್ತಲೆ) ಸ್ವಪ್ರಭಾವದಿಂದ ಕುಡಿದು ಬಿಟ್ಟಿತು. ಹೀಗೂ ಹೇಳಿರುತ್ತದೆ. ಆರಂಭಣಾಧಿಕರಣ ಸುಧಾ ಟೀಕಾದಲ್ಲಿ ಪ್ರಳಯಕಾರಿಕವಾದ ತಮ ಆಸೀತ್ ಎಂಬಲ್ಲಿ ತಮಶ್ಶಬ್ದವ್ಯಾಖ್ಯಾನ ಸಂದರ್ಭದಲ್ಲಿ ತಮಸ್ಸಿನ ಮೇಲೆ ಮಿತವಾದ ನೀರು ಆಗಿ ಪ್ರಕೃತಿಯಿಂದ ಎಲ್ಲ ಮುಚ್ಚಿರುವುದಾಗಿದೆ. ಎಂಬ ಸಂದರ್ಭದಲ್ಲಿ ಮತ್ತು ವರಾಹಪುರಾಣಾದಿಗಳಿಂದಲೂ ತಮಸ್ಸಿಗೆ ದುರ್ಗಾರೂಪತ್ವ ಹೇಳಿರುವುದರಿಂದ, ಬ್ರಹ್ಮಪಾನಮಾಡಿದರೆಂಬುದು ಹೇಗೆ ಎಂದರೆ, ದುರ್ಗಾರೂಪ ತಮೋ ಭಿನ್ನವಾದ ಜಡಪ್ರಕೃತಿ ಉಪಾದಾನಕವಾದ ತಮಸ್ಸನ್ನು ಬ್ರಹ್ಮದೇವರು ಪಾನಮಾಡಿರುವುದರಿಂದ ವಿರೋಧವಿಲ್ಲವು. ಹೀಗೆ ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿರುತ್ತದೆ.

**ಮಹಾಂತಂ ಯೋಽಸೃಜಚ್ಚೈವ ಮೋಹಕಂಚ ತಮೋಗ್ರಸದಿತಿ । ಪ್ರಥಮ ತಾತ್ಪರ್ಯೇಽಪಿ । ತಮಸಾಪ್ಯುಪಗೂಢಸ್ಯ ಯತ್ತಮಃ ಪಾನಮೀಶಿತುರಿತಿ । ಆವರಣತ್ವಾದಿತಿ । ತಥಾಚಾಂಧಕಾರಸ್ಯ ಅಭಾವರೂಪತ್ವೇ ಘಟಾದ್ಯಾವರಕತ್ವಾನುಪಪತ್ತೇಃ ದ್ರವ್ಯತ್ವಮೇವ ಯವನಿಕಾದಿವದಂಗೀ-ಕರ್ತವ್ಯಮಿತಿ ಭಾವಃ। ನ ಚಾಂಧಕಾರಸ್ಥ ಪುರುಷಸ್ಯ ದೀಪವತಿ ಪ್ರದೇಶಾಂತರೇ ಘಟಾದಿ ಜ್ಞಾನದರ್ಶನಾನ್ನಾವರಕತ್ವಮಂಧಕಾರಸ್ಯೇತಿ ವಾಚ್ಯಂ । ವಿಷಯಾವರಕತ್ವಸ್ಯೈವ ವಿವಕ್ಷಿತತ್ವೇನ ಪುರುಷಾವರಕತ್ವಸ್ಯಾನುಕ್ತತ್ವಾತ್ । ಸ್ವಾತಂತ್ರ್ಯೇಣೇತಿ ।**

ಯಾವ ಬ್ರಹ್ಮದೇವರೇ ಜೀವಮೋಹಕವಾದ ದೊಡ್ಡಪರಿಮಿತಿಯ ತಮಸ್ಸನ್ನು ಸೃಜಿಸಿ ಅದನ್ನು ತಾವೇ ನುಂಗಿಬಿಟ್ಟರು. ಹೀಗೆ ಪ್ರಥಮ ತಾತ್ಪರ್ಯದಲ್ಲಿಯೂ ತಮಸ್ಸಿನ್ನಿಂದ ಮುಚ್ಚಿದ ಯಾವ ತಮಸ್ಸೋ ಅದೇ ಬ್ರಹ್ಮದೇವರಿಂದ ಪೇಯವಾಯಿತೆಂದು, ಆವರಣವಾಗಿರುವುದರಿಂದ, ಹೀಗೆ ಹೇಳಿದ ಮೇಲೆ ಅಂಧಕಾರವು ಬೆಳಕಿನ ಅಭಾವ ರೂಪವೇ ಆದರೆ ಘಟಾದಿಗಳಿಗೆ ಮುಚ್ಚುವಿಕೆ ಯುಕ್ತವಾಗುವುದಿಲ್ಲ. ದ್ರವ್ಯತೆಯು ಪರದೆಗಳಂತೆ ಮುಚ್ಚುವಿಕೆಯನ್ನು ಒಪ್ಪಬೇಕು. ಕತ್ತಲೆಯಲ್ಲಿದ್ದ ಮನುಷ್ಯನಿಗೆ ಬೆಳಕಿನಲ್ಲಿರುವ ವಸ್ತುವಿನ ಜ್ಞಾನವಾಗುವುದರಿಂದ ಕತ್ತಲೆಗೆ (ಆವರಕ) ಮುಚ್ಚುವಿಕೆಯನ್ನು ಒಪ್ಪಬಾರದು ಎಂಬುದು ಸರಿಯಲ್ಲ. ವಸ್ತುಗಳಿಗೆ ಕತ್ತಲೆಯಿಂದ ಮುಚ್ಚುವಿಕೆ ಹೇಳಿದೆಯಾಗಲಿ ಪುರುಷರಿಗಲ್ಲವಾದ್ದರಿಂದ ಈ ಆಪಾದನೆ ಬರುವುದಿಲ್ಲ. ಆದುದರಿಂದಲೇ ಸ್ವಾತಂತ್ರ್ಯತ್ವ ಇರುವುದೆಂದಿರುವುದು.

**ಪ್ರತಿಯೋಗ್ಯುಲ್ಲೇಖಂವಿನೇಹಾಂಧಕಾರ ಇತ್ಯುಪಲಬ್ಧೇರಿತ್ಯರ್ಥಃ । ತೇಜೋಭಾವರೂಪತ್ವೇ ಘಟೋನಾಸ್ತೀತಿವದಿಹತೇಜೋನಾಸ್ತೀತ್ಯೇವ ಪ್ರತ್ಯಯಾಪತ್ಯಾಂಧಕಾರೋಽಸ್ತೀತಿ ಪ್ರತ್ಯಯೋನಸ್ಯಾತ್ । ನನು ತಮಸ ಉತ್ಪತ್ತಿಮತ್ವೇ ಉಪಾದಾನಂ ವಕ್ತವ್ಯಮಿತಿಚೇನ್ನ । ತಮೋಗುಣಸ್ಯವಾ ಭೂತಸ್ಥ ತಮಸೋವಾಂಧಕಾರೋಪಾದಾನತ್ವ ಸಂಭವಾತ್ । ತದುಕ್ತಂ ಬಿಂಬಪ್ರತಿಬಿಂಬೈಕ್ಯಭಂಗೇನ್ಯಾಯಾಮೃತೇ । ಪ್ರತಿಬಿಂಬಸ್ಯ ಕ್ಲೃಪ್ತ ದ್ರವ್ಯಾನಾಂತರ್ಭಾವೇ ತಮೋವದ್ದ್ರವ್ಯಾಂತರತ್ವ ಸಂಭವಾಚ್ಚೇತಿ । ಇತ್ಯಂಧಕಾರ ಪ್ರಕರಣಂ ।**

ಕತ್ತಲೆಯು ಬೆಳಕಿನ ಇಲ್ಲದಿರುವಿಕೆ (ತೇಜೋಽಭಾವರೂಪ) ಆದರೆ, ಅಭಾವದ ಜ್ಞಾನವು ಪ್ರತಿಯೋಗಿಯ ಉಲ್ಲೇಖ (ಪ್ರಸಿದ್ಧ) ಇಲ್ಲದೇ ಬರುವುದಿಲ್ಲ. ಅಂಧಕಾರ -ಕತ್ತಲೆ ಇದೆ ಎಂಬ ವ್ಯವಹಾರ ಯಾವ ಜ್ಞಾನವಿಲ್ಲದೇ ಬರುವುದರಿಂದ ಕತ್ತಲೆ ಬೆಳಕಿನ ಇಲ್ಲದಿರುವಿಕೆ ಎನ್ನಬಾರದು ಎಂದು 'ಸ್ವಾತಂತ್ರ್ಯೇಣ' ಎಂಬುದರರ್ಥವು.

-ಬೆಳಕಿನ ಅಭಾವರೂಪವೇ ಆದರೆ ಘಟವಿಲ್ಲವೆಂಬುದರ ವ್ಯವಹಾರ ಹೇಗೆಯೋ ಹಾಗೆ ಬೆಳಕಿಲ್ಲ ಎಂದು ವ್ಯವಹಾರಬಂದು, ಕತ್ತಲೆ ಇದೆ ಎಂಬ ವ್ಯವಹಾರ ಬರದೇ ಹೋಗಲಿ ಎಂದೂ ಆಪಾದನೆ ಬರುತ್ತದೆ. ಹಾಗಾದರೆ ತಮಸ್ಸಿನ ಉತ್ಪತ್ತಿ ಉಪಾದಾನವನ್ನು ಹೇಳಬೇಕು ಎಂದರೆ, ತಮೋಗುಣವಾಗಲಿ, ಭೂತದಲ್ಲಿರುವ ತಮಸ್ಸಾಗಲಿ ಅಂಧಕಾರದ ಉಪಾದಾನವಾಗಿರುತ್ತದೆ. ನ್ಯಾಯಾಮೃತದಲ್ಲಿಯ ಬಿಂಬಪ್ರತಿಬಿಂಬ ಐಕ್ಯಭಂಗ ಪ್ರಸಂಗದಲ್ಲಿ ಹೇಳಿದೆ. ಪ್ರತಿಬಿಂಬದ ಕ್ಲೃಪ್ತದ್ರವ್ಯಾಂತರ್ಭಾವ ಹೇಳದಿದ್ದರೇ ಅಂಧಕಾರದಂತೆ ಪ್ರತ್ಯೇಕದ್ರವ್ಯವನ್ನು ಒಪ್ಪಬೇಕಾಗುತ್ತದೆ ಎಂದು. ಸಿದ್ಧಾಂತವು, ತಮಸ್ಸು (ಅಂಧಕಾರವು) ಪ್ರತ್ಯೇಕ ದ್ರವ್ಯವೇ ಆಗಿರುತ್ತದೆ.

ಹೀಗೆ ಹದಿನೇಳನೆಯ ದ್ರವ್ಯವಾದ ಅಂಧಕಾರ ನಿರೂಪಣೆಯೊಂದಿಗೆ ಕನ್ನಡಾನುವಾದವು ಮುಗಿಯಿತು.

* * * * * * * *

# ೩೦.ವಾಸನಾ ಪ್ರಕರಣ

**ಇದಾನೀಂ ವಾಸನಾರೂಪ ದ್ರವ್ಯಂ ನಿರೂಪಯತಿ**

**ಪ.ಸಂ. ಸ್ವಾಪ್ನ ಪದಾರ್ಥೋಪಾದಾನಾನಿ ವಾಸನಾಃ ।**

**ಪ್ರತಿಜೀವಂ ವಾಸನಾನಾಂ ನಾನಾತ್ವಾದ್ವಾಸನಾ ಇತಿ ಬಹುವಚನೋಕ್ತಿಃ ।ನನು ಸ್ವಾಪ್ನಪದಾರ್ಥಾಃ ಸರ್ವೇಽಪಿಮಿಥ್ಯಾಭೂತಾಃ । ಕುತಸ್ತೇಷಾಂ ಉಪಾದಾನಾಪೇಕ್ಷಾ । ಅನ್ಯಥಾಸ್ವಪ್ನಕಾಲೇತೇಷಾಂ ಸೃಷ್ಟತ್ವೇ ಸ್ವಪ್ನೋತ್ಥಾನಾನಂತರಮಪಿ ದೃಶ್ಯೇರನ್ । ಬಹಿಃ ಸೃಷ್ಟತ್ವೇ ಪಾರ್ಶ್ವಸ್ಥೈರುಪಲಭ್ಯೇರನ್ । ಅಂತಃ ಸೃಷ್ಟತ್ವೇ ಹೃದಯವಿದಾರಣ ಪ್ರಸಂಗಾದಿತಿ ಚೇನ್ನ । ಸುಖದುಃಖಾದ್ಯರ್ಥಕ್ರಿಯಾಕಾರಿತ್ವೇನ ಶುಭಾಶುಭ ಸೂಚಕತ್ವೇನಚ ತೇಷಾಂ ಸತ್ಯತ್ವಾತ್ ।**

ಈಗ ವಾಸನಾ ಎಂಬ ದ್ರವ್ಯವನ್ನು ನಿರೂಪಿಸುತ್ತಾರೆ. ಸ್ವಪ್ನಪದಾರ್ಥಗಳಿಗೆ ಬೇರೆ ಬೇರೆಯಾದದ್ದೇ ವಾಸನಾಗಳು. ಆದುದರಿಂದ ಬಹುವಚನವನ್ನು ಹೇಳಿರುತ್ತಾರೆ. ಸ್ವಪ್ನಪದಾರ್ಥಗಳೆಲ್ಲವೂ ಮಿಥ್ಯಾ (ಸುಳ್ಳು) ಆದವುಗಳೇ ಅದಕ್ಕೆ ಉಪಾದಾನದ ಅಪೇಕ್ಷೆ ಏಕೆ? ಸ್ವಪ್ನಪದಾರ್ಥಗಳು ಸತ್ಯವಾದವುಗಳಾಗಿದ್ದರೇ ಎಚ್ಚರವಾದ ಮೇಲೂ ಕಾಣಬೇಕಾಗಿತ್ತು! ಸ್ವಪ್ನಪದಾರ್ಥಗಳ ಸೃಷ್ಟಿಯು ದೇಹದ ಹೊರಗೋ? ಅಥವಾ ಒಳಗೋ? ಹೊರಗಾದಪಕ್ಷದಲ್ಲಿ ಮಿಕ್ಕವರಿಗೆ (ಬದಿಯಲ್ಲಿರುವವರಿಗೆ) ಕಾಣಬೇಕಾದೀತು. ದೇಹದ ಒಳಗೇ ಎಂದರೆ ದೇಹವು ಸೀಳಿಹೋಗಬೇಕಾದೀತು. ಆದ್ದರಿಂದ ಸ್ವಪ್ನವು ಮಿಥ್ಯಾ ಎಂಬುದು ಸರಿ ಎಂದರೆ, ತಪ್ಪು ಹಾಗೆನ್ನಬಾರದು. ಸ್ವಪ್ನ ಪದದಾರ್ಥಗಳು ಸತ್ಯವಾದವುಗಳೇ ಸುಖದುಃಖಾದಿ ಅರ್ಥಕ್ರಿಯಾಕಾರಿಗಳಾಗಿರುವುದರಿಂದ ಮತ್ತು ಶುಭಾಶುಭ ಸೂಚಕಗಳೂ ಆಗಿರುವುದರಿಂದ.

**ನಹ್ಯಸತಃ ಸಾಧಕತ್ವಂ ಕ್ವಾಪಿದೃಷ್ಟಂ । ರಜ್ಜುಸರ್ಪಾದೇಃ ಸಮಿತ್ಯಸುಷಿರಾದೇಶ್ಚನಾರ್ಥಕ್ರಿಯಾಕಾರಿತ್ವಂ । ಕಿಂತು ತದ್ವಿಷಯಕ ಜ್ಞಾನಸ್ಯ ಸದ್ರೂಪಸ್ಯೈವ ಸಾಧಕತ್ವಂ ಸರ್ಪಭ್ರಮಾದಾವಪಿ ಹಿಜ್ಞಾನಮ-ಸ್ತ್ಯೇವತಾದೃಶಮಿತಿ । ತದುಕ್ತಮನುವ್ಯಾಖ್ಯಾನೇ ಶುಭಾಶುಭ ಸೂಚಕತ್ವೇತು ಸೂಚಕಶ್ಚಹಿ ಶ್ರುತೇರಾಚಕ್ಷತೇಚ ತದ್ವಿದ ಇತಿಸೂತ್ರಂ । ಯದಾಕರ್ಮಸು**

**ಕಾಮ್ಯೇಷು ಸ್ತ್ರಿಯಂ ಸ್ವಪ್ನೇಭಿಪಶ್ಯತಿ । ಸಮೃದ್ಧಿಂ ತತ್ರ ಜಾನೀಯಾತ್ತಸ್ಮಿನ್ ಸ್ವಪ್ನನಿದರ್ಶನ ಇತಿ ಶ್ರುತಿಃ ।**

ಅಸತ್ಪದಾರ್ಥಗಳಿಗೆ ಕ್ರಿಯಾಸಾಧಕತೆಯು ಎಲ್ಲೂ ಕಂಡಿರುವುದಿಲ್ಲ. ಹಗ್ಗವನ್ನು ನೋಡಿ ಹಾವೆಂದು, ಸೂರ್ಯನಿಗೆ ರಂಧ್ರಗಳನ್ನು ತಿಳಿಯುವುದು ಆ ಪದಾರ್ಥಗಳಿಗೆ ಕ್ರಿಯಾಕಾರಿತ್ವವು ಎಲ್ಲೂ ಇಲ್ಲ. ಮತ್ತು ಆ ಅಜ್ಞಾನಕ್ಕೆ ಅರ್ಥಕ್ರಿಯಾಗಳು ಕಂಡಿರುತ್ತವೆ. ಅನುವ್ಯಾಖ್ಯಾನದಲ್ಲಿ ಸ್ವಪ್ನಜ್ಞಾನಾದಿಗಳಲ್ಲಿ ಸತ್ಯತೆ ಇದೆ ಎಂತೆಯೇ ಕ್ರಿಯಾದಿಗಳು ಕಂಡಿವೆ ಎಂದಿರುತ್ತಾರೆ. ಸ್ವಪ್ನ ಪದಾರ್ಥಗಳು ಶುಭಾಶುಭಾಗಳನ್ನು ಸೂಚಿಸುತ್ತವೆ ಎಂಬ ವಿಷಯದಲ್ಲಿ "ಸೂಚಕಶ್ಚಹಿ ಶ್ರುತೇರಾಚಕ್ಷತೇ ಚತದ್ವಿದಃ" ಎಂಬ ಸೂತ್ರವೇ ಪ್ರಮಾಣವು ಸೂತ್ರಾರ್ಥ - ಸ್ವಪ್ನಪದಾರ್ಥಗಳು ಶುಭಾಶುಭ ಸೂಚಕಗಳೇ, ಅದನ್ನು ಜ್ಞಾನಿಗಳು ತಿಳಿಯುತ್ತಾರೆ ಎಂದು ಮತ್ತು ಕಾಮ್ಯಕರ್ಮಗಳ ಆರಂಭ ಸಂದರ್ಭದಲ್ಲಿ ಸ್ವಪ್ನದಲ್ಲಿ ಸ್ತ್ರೀಯನ್ನು ಕಂಡರೆ ಫಲಸಮೃದ್ಧಿ ಎಂದು ತಿಳಿಯಬೇಕು ಎಂದು ಶ್ರುತಿಗಳು ಹೇಳುತ್ತವೆ.

**ಐತರೇಯೋಕ್ತ ಸ್ವಪ್ನಾಧ್ಯಾಯಶ್ಚಮಾನಂ । ಐತರೇಯ ಭಾಷ್ಯಮಪಿ । ಬೃಹತ್ತಮಂ ಮಧುಯದಿಸಹಾಪೂಪೇನ ಭಕ್ಷಯೇತ್ । ಸ್ವಪ್ನೇ ತಸ್ಯಾಚಿರಾನ್ಮೃತ್ಯೂರಕ್ತಾಬ್ಜೇವಾಶಿರೋಧೃತ ಇತಿ। ಯಚ್ಛಾನ್ಯಥೇತ್ಯಾದಿ ದೂಷಣಮುಕ್ತಂ ತನ್ನ । ತೇಷಾಂ ದೇಹಾಂತರುತ್ಪತ್ತ್ಯಂಗೀಕಾರಾತ್ । ಅಪ್ರತಿಘವಾಸನೋಪಾದಾನತ್ವೇನ ಹೃದಯ ವಿದಾರಣಾದೇರಭಾವಾತ್ । ತತ್ಕಾಲ ಏವ ವಿದ್ಯುದಾದಿವದೀಶ್ವರಸೃಷ್ಟತ್ವೇನ ವಿನಷ್ಟತ್ವೇನ ಚ ಸ್ವಪ್ನೋತ್ಥಿತಸ್ಯ ತಜ್ಞಾನಾಯೋಗಾತ್ ।**

ಐತರೇಯ ಭಾಷ್ಯದಲ್ಲಿಯೂ, ಸ್ವಪ್ನದಲ್ಲಿ ಹೆಚ್ಚಾದ ಜೇನುತುಪ್ಪವನ್ನು ಯಥೇಚ್ಛ ಅಪೂಪದೊಂದಿಗೆ ತಿನ್ನುತ್ತಾನೆಯೋ, ಅದು ಶೀಘ್ರ ಮರಣ ಸೂಚಕವು ಮತ್ತು ಕೆಂದಾವರೆ(ಕಮಲ)ಯನ್ನು ತಲೆಯಲ್ಲಿ ಮುಡಿಯುವುದು ಶೀಘ್ರಮರಣ ಸೂಚಕವೆಂದೂ ಹೇಳಿದೆ. ಸ್ವಪ್ನಪದಾರ್ಥಗಳನ್ನು ದೇಹದಲ್ಲೇ ಸೃಜಿಸುತ್ತಾನೆ. ಪ್ರಬಲ ಉಪಾಸನೆಯೇ ಉಪಾದಾನವಾಗಿ ಸೃಜಿಸುವುದರಿಂದ ಹೊರಗೆ ಕಾಣುತ್ತಲೆನ್ನಲು ಅವಕಾಶವಿಲ್ಲ. ಸ್ವಪ್ನದಲ್ಲಿ ಮಿಂಚಿನಂತೆ ಈಶ್ವರನಿಂದಲೇ ಹುಟ್ಟುವುದರಿಂದ ಆಗಲೇ ನಾಶವೂ ಆಗುವುದರಿಂದ ಸ್ವಪ್ನದಿಂದೆಚ್ಚರವಾದ ಮೇಲೆ ಕಾಣಲೆಂಬುದಕ್ಕೆ ಅವಕಾಶವಿಲ್ಲ.

**ನನ್ವೇತಾದೃಶ ವಾಸನಾನಾಮುಪಾದಾನಂ ಕಿಂ ಆಶ್ರಯೋವಾಕ**

**ಇತ್ಯಾಶಂಕಾಯಾಮಾಹ ।**

**ಪ.ಸಂ. ಪೂರ್ವಾನುಭವ ಜನ್ಯಾಃ ಮನೋಗತಾಃ ।**

**ಜಾಗ್ರದವಸ್ಥಾಯಾಂ ಯೇಪದಾರ್ಥಾ ಅನುಭೂತಾಃ ತತ್ತದನುಭವೇಭ್ಯೋಽಂತಃಕರಣೋಪಾದಾನ ಕಾ ಅಂತಃಕರಣಾಶ್ರಿತಾ-ಜಾಯಂತಇತ್ಯರ್ಥಃ। ತದುಕ್ತಂ ಭಕ್ತಿಪಾದೀಯ ಅನುವ್ಯಾಖ್ಯಾನೇ। ವಾಸನಾಃ ಸರ್ವವಸ್ತೂನಾಂ ಅನಾದ್ಯನುಭವ ಆಗತಾಃ। ಸಂತ್ಯೇವಾಶೇಷಜೀವಾನಾಂ ಅನಾದಿಮನಸಿಸ್ಥಿತಾಃ। ಸಂಸ್ಕಾರೈರ್ಭಗವಾನೇವ ಸೃಷ್ಟ್ವಾನಾನಾವಿಧಂಜಗತ್। ಸ್ವಪ್ನಕಾಲೇದರ್ಶಯತೀತಿ ।**

ಇಂತಹ ವಾಸನೆಗೆ ಉಪಾದಾನ ಯಾವುದು. ಹೀಗೆ ಶಂಕಿಸಿದರೆ ತಿಳಿಸುತ್ತಾರೆ. ಹಿಂದಿನ ಜನ್ಮಗಳಲ್ಲಿ ಈ ಜನ್ಮದಲ್ಲಿ ಅನುಭವಿಸಿದ ಅಂತಃಕರಣದಿಂದ ಹುಟ್ಟಿದ (ಅಂತಃಕರಣವೇ ಉಪಾದಾನವು) ಅಂತಃಕರಣಾಶ್ರಿತವಾದವುಗಳಾಗಿ ವಾಸನಾಗಳೆನಿಸುತ್ತವೆ. ಭಕ್ತಿಪಾದೀಯ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಸರ್ವವಸ್ತುರೂಪಗಳಾದ ವಾಸನಾಗಳು ಅನಾದಿ ಅನುಭವದಿಂದ ಬಂದವುಗಳಾಗಿರುತ್ತವೆ. ಅನಾದಿ ಜೀವರಿಗೆ ಅನಾದಿ ಕಾಲದಿಂದಲೂ ಎಲ್ಲ ಜೀವರ ಮನಸ್ಸಿನಲ್ಲಿರುತ್ತವೆ. ಪರಮಾತ್ಮನೇ ಜೀವರುಗಳ ಸಂಸ್ಕಾರದಿಂದ ನಾನಾವಿಧವಾದ ಜಗತ್ತನ್ನು ಸ್ವಪ್ನಕಾಲದಲ್ಲಿ ತೋರಿಸುತ್ತಾನೆ.

**ಭಾಷ್ಯೇಪಿ । ಮನೋಗತಾಂಸ್ತು ಸಂಸ್ಕಾರಾನ್ ಸ್ವೇಚ್ಛಯಾಪರಮೇಶ್ವರಃ । ಪ್ರದರ್ಶಯತಿ ಜೀವಾಯ ಸಸ್ವಪ್ನ ಇತಿ ಗೀಯತಇತಿ । ನನ್ವೇವಂ ವಾಸನಾನಾಮನಾದಿತ್ವೋಕ್ತೇಃ ಕಥಂ ಪೂರ್ವಾನುಭವ ಜನ್ಯತ್ವಮುಕ್ತಂ। ತಥಾ ಸಂಸ್ಕಾರಾಣಾಮೇವ ಸ್ವಾಪ್ನ ಪದಾರ್ಥೋಪಾದಾನಕತ್ವೋಕ್ತೇರ್ನವಾ-ಸನಾನಾಮುಪಾದಾನತ್ವ ಮಿತ್ಯತ ಆಹ ।**

**ಪ.ಸಂ. ಪ್ರವಾಹತೋ ಅನಾದಯಃ । ಸಂಸ್ಕಾರಪದವಾಚ್ಯಾಃ ।**

**ಅನಾದಿತ್ವ ವಚನಂ ಪ್ರವಾಹತೋಽನಾದಿತ್ವಪರಂ । ಸಂಸ್ಕಾರರೂಪಾ ಏವ ವಾಸನಾ ಅತೋನವಿರೋಧ ಇತಿಭಾವಃ। ಏವಂ ಸ್ವಾಪ್ನಪದಾರ್ಥನ್ಯಾಯಏವ ಮನೋರಥ ಪದಾರ್ಥೇಷು ದ್ರಷ್ಟವ್ಯಃ ।**

ಭಾಷ್ಯದಲ್ಲಿಯೂ ಪರಮೇಶ್ವರನು ಜೀವರ ಮನಸ್ಸಿನಲ್ಲಿನ ಸಂಸ್ಕಾರಗಳನ್ನು ತನ್ನ ಇಚ್ಛಾದಿಂದಲೇ ತೋರಿಸುತ್ತಾನೆ. ಅದೇ ಸ್ವಪ್ನ ಎನಿಸಿಕೊಳ್ಳುತ್ತದೆ. ಸರಿಯೇ

ಆದರೇ ವಾಸನಾಗಳಿಗೆ ಅನಾದಿತ್ವವನ್ನು ಹೇಳಿದಿರಿ. ಅವುಗಳಿಗೆ ಪೂರ್ವಾನುಭವದಿಂದ ಹುಟ್ಟಿದವುಗಳಾಗಿ ಹೇಳಿದೆಯಲ್ಲ ಅದು ಹೇಗೆ? ಮತ್ತು ಸಂಸ್ಕಾರಗಳಿಗೆ ಸ್ವಪ್ನ ಉಪಾದಾನತೆ ಹೇಳಿತು. ವಾಸನಾಗಳಿಗೆ ಉಪಾದಾನತೆ ಹೇಳಿತಲ್ಲಾ ಎಂದರೇ, ಸತ್ಯವು ವಾಸನಾಗಳಿಗೆ ಸಂಸ್ಕಾರವೆಂದು ಎನ್ನುತ್ತಾರೆ. ಅವುಗಳು ಪ್ರವಾಹದಂತೆ ಅನಾದಿಗಳಾದವುಗಳು. ಅಂತಃಕರಣ ಸಂಸ್ಕಾರ ವಾಸನಾ ಇವುಗಳ ಪರ್ಯಾಯ ಶಬ್ದಗಳಾದ್ದರಿಂದ ವಿರೋಧವಿಲ್ಲ. ಹೀಗೆ ಸ್ವಪ್ನಪದಾರ್ಥದಂತೆಯೇ ಮನೋರಥ (ಮನಸ್ಸಿನಲ್ಲಿ ತಂದುಕೊಂಡ) ಪದಾರ್ಥಗಳು ಎಂದು ತಿಳಿಯಬೇಕು.

**ನನು ಸಮನೋರಥ ಪದಾರ್ಥಾನಾಂ ವಾಸನಾಮಯತ್ವಂ । ಕಿಂತು ಭ್ರಾಂತಿ ಕಲ್ಪಿತತ್ವಮೇವೇತಿ ಚೇನ್ನ। ಉತ್ಪದ್ಯಂತೇ ವಿಲೀಯಂತೇ ದರಿದ್ರಾಣಾಂ ಮನೋರಥಾ ಇತ್ಯಾದಿನೋತ್ಪತ್ತಿವಿನಾಶ ಪ್ರತಿಪಾದಕ ಪುರಾಣವಾಕ್ಯೇ ವಿರೋಧ ಪ್ರಸಂಗಾತ್ । ತವಯನ್ಮನೋರಥಃ ಸಮವಾಸೀದಿತ್ಯಾದಿ ವ್ಯಪದೇಶಸ್ತು ಮನೋರಥಬಾಹ್ಯಪದಾರ್ಥಯೋಃ ಸಾದೃಶ್ಯಾದ್ಗೌಣಃ । ನತ್ವಭೇದಾದಿತಿಬೋಧ್ಯಂ । ತದುಕ್ತಂ ಸ್ವಪ್ನಾಧಿಕರಣಸುಧಾಯಾಂ ।**

ಮನೋರಥ ಪದಾರ್ಥಗಳಿಗೆ ವಾಸನಾಮಯತೆ ಇಲ್ಲ. ಏಕೆಂದರೆ ಭ್ರಾಂತಿ ಕಲ್ಪಿತತ್ವವನ್ನು ಹೇಳಿರುತ್ತದೆಂದರೆ, ತಪ್ಪು, ದರಿದ್ರರಿಗೆ ಮನೋರಥಗಳು ಹುಟ್ಟುತ್ತವೆ ಹಾಗೂ ನಷ್ಟವಾಗುತ್ತವೆ. ಇತ್ಯಾದಿ ಪುರಾಣ ವಾಕ್ಯಗಳಲ್ಲಿ ಉತ್ಪತ್ತಿ ವಿನಾಶಗಳು ಹೇಳಿರುವುದರ ವಿರೋಧ ಬರುತ್ತದೆ. ನಿನಗೇನು ಮನೋರಥವಿದ್ದಿತು ಅದೇ ಎಂಬ ವ್ಯವಹಹಾರವು, ಮನೋರಥ ಪದಾರ್ಥ ಬಾಹ್ಯಪದಾರ್ಥಗಳ ಸಾದೃಶ್ಯದಿಂದ ಬರುವ ಗೌಣವ್ಯವಹಾರವು. ಅಭೇದದಿಂದ ಆದುದಲ್ಲ ಎಂದು ತಿಳಿಯಬೇಕು. ಸ್ವಪ್ನಾಧಿಕರಣ ಸುಧಾದಲ್ಲಿ ಹೇಳಿರುತ್ತದೆ.

**ತಸ್ಮಾದ್ಯಥಾ ಮನೋರಥೇಧ್ಯಾನೇವಾ ಸಂಸ್ಕಾರಯೋನೀನರ್ಥಾನ್ಮನಸಾ-ನುಭವತ್ಯೇವಂ ಸ್ವಪ್ನೇಪೀತಿ ಕಿಮನುಪಪನ್ನಂ । ಇಯಾಂಸ್ತುವಿಶೇಷಃ । ಮನೋರಥಾದೌ ಪ್ರಯತ್ನಪೂರ್ವಿಕಾ ಸೃಷ್ಟಿಃ ಸ್ವಪ್ನೇ ಪುನರೀಶ್ವರಾಧೀ-ನೈವೇತಿ ।**

ಹೀಗೆ ಮನೋರಥದಲ್ಲಿ ಧ್ಯಾನದಲ್ಲಿ ಸಂಸ್ಕಾರ ಕಾರಣಪದಾರ್ಥಗಳನ್ನು ಹೇಗೆ ಅನುಭವಿಸುತ್ತೇವೆಯೋ ಹಾಗೇ ಸ್ವಪ್ನದಲ್ಲಿಯೂ, ಈ ವಿಷಯದಲ್ಲಿ ಅನುಪಪತ್ತಿ ಏನೆಂಬುದು, ಆದರೆ ಈವಿಶೇಷ ಮನೋರಥವು ಸ್ವಪ್ರಯತ್ನ ಮೂಲಕ, ಸ್ವಪ್ನವು ಕೇವಲ ಶ್ರೀಹರೇಚ್ಛಾ ಮೂಲಕವು, ಎರಡೂ ವಾಸನೋಪಾದಾನಕವೇ ಆಗಿರುತ್ತದೆ.

**ತತ್ತ್ವನಿರ್ಣಯಟೀಕಾಯಾಮಪಿ । ಇಯಮೇವರೀತಿಃ ಮನೋರಥಸ್ಯ । ಇಯಾಂಸ್ತು ವಿಶೇಷಃ । ಸ್ವಪ್ನೇಽದೃಷ್ಟವಶಾದೇವ ವಾಸನಾಪರಿಣಾಮೋ-ದೃಶ್ಯತೇ । ಮನೋರಥೇತು ಪುರುಷಪ್ರಯತ್ನಾಧೀನ ಇತೀತಿ । ಏವಂ ಉಪಾಸನಾಕಾಲೇ ಯೋ ಭಗವತ್ಸದೃಶಾಕಾರಃ ಪ್ರತೀಯತೇ ಸೋಽಪಿ ವಾಸನಾಮಯ ಏವ । ಭಗವತಃ ಸಾಕ್ಷಾತ್ಧ್ಯಾನವಿಷಯತ್ವಾಯೋಗಾತ್ । ತದುಕ್ತಂ ಸೂತ್ರೇ ತಥಾನ್ಯಪ್ರತಿಷೇಧಾದಿತಿ। ಭಾಷ್ಯೇಽಪಿ । ಯಥಾ ಜೀವಾನಂದಾದೇಃ ಅನ್ಯದ್ಬ್ರಹ್ಮ ತಥೋಪಾಸಾಕೃತಾದಪಿ । ಪಶ್ಯಂತಿ ಪರಮಂಬ್ರಹ್ಮ ಚಿತ್ತೇಯತ್ಪ್ರತಿಬಿಂಬಿತಮಿತಿ ।**

ತತ್ವನಿರ್ಣಾಯ ಟೀಕಾದಲ್ಲಿಯೂ ಇದೇ ರೀತಿ ಮನೋರಥಕ್ಕೆ ತಿಳಿಸಿದೆ, ಆದರೇ ವಿಶೇಷವೆಂದರೆ, ಸ್ವಪ್ನದಲ್ಲಿ ಅದೃಷ್ಟ ಮೂಲಕವೇ ವಾಸನಾ ಪರಿಣಾಮ ಕಾಣುತ್ತದೆ. ಮನೋರಥದಲ್ಲಿ ಪುರುಷಪ್ರಯತ್ನದಿಂದ ಹೀಗೆ, ಉಪಾಸನಾಕಾಲದಲ್ಲಿ ಏನು ಭಗವಂತನ ಸದೃಶವಾದ ಆಕಾರವು ತೋರುತ್ತದೆಯೋ ಅದು ವಾಸನಾ ಆದುದುವೇ. ಏಕೆಂದರೆ ಭಗವಂತನು ಸಾಕ್ಷಾತ್ ಧ್ಯಾನವಿಷಯನಾಗುವುದಿಲ್ಲವಾದ್ದರಿಂದ. ಇದನ್ನು 'ಓಂ ತಥಾನ್ಯ ಪ್ರತಿಷೇಧಾತ್ ಓಂ' ಎಂಬ ಸೂತ್ರದಲ್ಲಿ ಹೇಳಿದೆ. ಭಾಷ್ಯದಲ್ಲಿಯೂ ಹೇಗೆ ಜೀವನ ಆನಂದಾದಿಗಳಿಂದ ಹರಿಯು ಭಿನ್ನನೋ ಹಾಗೆ ಉಪಾಸನಾ ಮಾಡಿದ್ದರಿಂದಲೂ ಎಂದು ಹೇಳಿದೆ. ಪರಬ್ರಹ್ಮನನ್ನು ಚಿತ್ತದಲ್ಲಿ ಪ್ರತಿಬಿಂಬಿತನಾದವನ್ನು ಕಾಣುತ್ತಾರೆ.

**ಟೀಕಾಯಾಮಪಿ । ಧ್ಯಾನೇಪ್ರತೀತಸ್ಯಾಬ್ರಹ್ಮತ್ವಾದಿತಿ । ನ್ಯಾಯ ವಿವರಣಭಾವಬೋಧೇಽಪಿ । ಚಿತ್ತಪ್ರತಿಬಿಂಬರೂಪತಾ । ಧ್ಯಾನಕಾಲೇ ಪ್ರತೀತ ಚಿತ್ತೋಪಾದಾನಕ ರೂಪಸ್ವರೂಪತಾ । ನೇತ್ಯರ್ಥ ಇತಿ । ಜಿಜ್ಞಾಸಾಧಿಕರಣ ಸುಧಾಯಾಮಪಿ । ಶ್ರವಣದರ್ಶನಾದಿಜನಿತ ಮಾನಸ ವಾಸನಾಮಯ ಸ್ಯಮಸ್ತುನೋ ಮನಸಾವಲೋಕನಂ ಧ್ಯಾನಮಿತ್ಯಂಗೀಕಾರಾತ್ । ಅತೀಂದ್ರಿಯೋಪಾದಾನಕಸ್ಯಾಪಿ ದ್ರವ್ಯಸ್ಯೈಂದ್ರಿಯಕತ್ವಂ ತ್ರ್ಯಣುಕಾದೇರಿವೋಪಪದ್ಯತ ಇತಿ । ಸ್ವಪ್ನಾಧಿಕರಣ ಸುಧಾಯಾಮಪಿ । ನಚತೇಷಾಂ ಗುಣತ್ವೇನೋಪಾದಾನತ್ವಾನುಪಪತ್ತಿಃ । ಮನೋವೃತ್ತಿತ್ವೇನ ದ್ರವ್ಯತ್ವಾದಿತಿ । ಅತಏವ ದ್ರವ್ಯತ್ವಂ ಸಿದ್ಧಂ ।**

॥ ಇತಿ ವಾಸನಾ ಪ್ರಕರಣಂ ॥

ಟೀಕಾದಲ್ಲಿಯೂ ಧ್ಯಾನದಲ್ಲಿ ತೋರಿದವನಿಗೆ ಪರಬ್ರಹ್ಮತೆ ಇಲ್ಲ. ಅಂದರೆ

ಚಿದಾನಂದಾತ್ಮಕ ಪರಮಾತ್ಮನ ಧ್ಯಾನದಲ್ಲಿ ಕಾಣುವುದಿಲ್ಲ ಎಂದರ್ಥವು. ನ್ಯಾಯವಿವರಣ ಭಾವಭೋಧದಲ್ಲಿಯೂ ಚಿತ್ತ ಪ್ರತಿಬಿಂಬವೆಂದರೆ, ಧ್ಯಾನಕಾಲದಲ್ಲಿ ತೋರಿದ ವಸ್ತು(ಮನಸ್ಸು) ಉಪಾದಾನವಾದ ಸ್ವರೂಪವೆಂದರ್ಥವು. ಜಿಜ್ಞಾಸಾಧಿಕರಣ ಸುಧಾದಲ್ಲಿಯೂ ಶ್ರವಣ ಪ್ರತಿಮಾದಿದರ್ಶನದಿಂದ ಹುಟ್ಟಿದ ಮಾನಸ ವಾಸನಾಮಯ ವಸ್ತುವನ್ನು ಮನಸಾ ನೋಡುವುದೇ ಧ್ಯಾನವೆಂದಂಗೀಕರಿಸಿರುವುದರಿಂದ, ಅತೀಂದ್ರಿಯೋಪಾದಾನಕವಾದ ದ್ರವ್ಯಕ್ಕೆ (ಐಂದ್ರಿಕತೆಯು) ಕಾಣಿಸುವಿಕೆಯು ತ್ರ್ಯಣುಕಾದಿಗಳಂತೆಯೇ ಯುಕ್ತವಾಗಿರುತ್ತದೆ. ಸ್ವಪ್ನಾಧಿಕರಣ ಸುಧಾದಲ್ಲಿಯೂ ವಾಸನಾಗಳಿಗೆ ಗುಣತ್ವಗಳಿರುವುದರಿಂದ ಉಪಾದಾನತ್ವ ಯುಕ್ತವಲ್ಲ ಎನ್ನಬಾರದು. ಮನಸ್ಸಿನಲ್ಲಿರುವುದರಿಂದ, ದ್ರವ್ಯತ್ವವೂ ಇರುವುದರಿಂದ, ಉಪಾದಾನತೆ ಕೂಡುತ್ತದೆ. ಯುಕ್ತವೂ ಆಗುತ್ತದೆ ಎಂದಿರುತ್ತಾರೆ. ಆದುದರಿಂದಲೇ ವಾಸನಾಕ್ಕೆ ದ್ರವ್ಯತ್ವವು ಸಿದ್ಧವಾಯಿತು.

ಹೀಗೆ ವಾಸನಾಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೩೧.ಕಾಲ ಪ್ರಕರಣ

**ಕ್ರಮಪ್ರಾಪ್ತಂ ಕಾಲಂ ನಿರೂಪಯತಿ ।**

**ಪ.ಸಂ. ಆಯುರ್ವ್ಯವಸ್ಥಾಪಕಃ ಕಾಲಃ ।**

**ಅಯಂ ಶತಾಯುರಯಂ ದೀರ್ಘಾಯುಃ ಚಿರಂಜೀವೀ ತಸ್ಯಾಯುರ್ಗತಮಾಯುರ್ವರ್ಧತ ಇತ್ಯಾದಿ ವ್ಯವಹಾರಾಸಾಧಾರಣ ಕಾರಣ ಮಿತ್ಯರ್ಥಃ । ತದುಕ್ತಂ ದ್ವಿತೀಯ ಸ್ಕಂಧ ಭಾಗವತೇ । ಆಯುರ್ಹರತಿ ವೈಪುಂಸಾಮುದ್ಯನ್ನಸ್ತಂಚಯನ್ನಸೌ । ತಸ್ಯರ್ತೇಯಃ ಕ್ಷಣೋನೀತ ಉತ್ತಮಶ್ಲೋಕ ವಾರ್ತಯೇತಿ । ತತ್ತಾತ್ಪರ್ಯಮಪಿ । ತಸ್ಯಾಯುಷೋಯ ಉತ್ತಮ ಶ್ಲೋಕವಾರ್ತಯಾ ಖತೇಕ್ಷಣಃ ಸನೀತವಿವವ್ಯಥೇತಿ । ತೃತೀಯಸ್ಕಂಧ ಭಾಗವತೇಪಿ । ತಮಸ್ಯಪಾರೇ ವಿದುರಾತ್ಮಸರ್ಗಂ ವಿಚಿನ್ವತೋಭೂತ್ಸುಮಹಾಂಸ್ತ್ರಿನೇಮಿಃ । ಯೋದೇಹಭಾಜಾಂ ಭಯಮೀರಯಾನಃ ಪರಿಕ್ಷಿಣೋತ್ಯಾಯುರಜಸ್ಯಹೇತಿರಿತಿ ।**

ಕ್ರಮಪ್ರಾಪ್ತವಾದ ಕಾಲವನ್ನು ನಿರೂಪಿಸುತ್ತಾರೆ.

ಆಯುಷ್ಯದ ವ್ಯವಸ್ಥಾಪಕವಾದುದೇ ಕಾಲವು. ಇವನು ನೂರುವರ್ಷದವನು, ಇವನು ದೀರ್ಘಾಯುಷ್ಯದವನು, ಇವನು ಚಿರಂಜೀವಿಯು, ಇವನಿಗೆ ವಯಸ್ಸು ಹೋಗಿದೆ, ಇವನಿಗೆ ವಯಸ್ಸಿನ ವೃದ್ಧಿ ಆಗುತ್ತಿದೆ ಇವೇ ಮೊದಲಾದ ಸಾಧಾರಣವ್ಯವಹಾರ ಕಾರಣವೆಂದರ್ಥವು. ಇದನ್ನು ದ್ವಿತೀಯಸ್ಕಂಧ ಭಾಗವತದಲ್ಲಿ ಹೇಳಿದೆ. ಸೂರ್ಯನು ಉದಯಾಸ್ತಮಗಳನ್ನು ಮಾಡುತ್ತಾ ಜೀವಸಾಮಾನ್ಯರ ಆಯುಷ್ಯವನ್ನು ಕಳೆಯುತ್ತಾನೆ. ಹೀಗಿರುವುದರಲ್ಲಿ ಉತ್ತಮನಾದ ಪರಮಾತ್ಮನ ಮಹಿಮೆ, ಅವನ ಗಾನಮಾಡುವರ ವಾರ್ತಾದಿಂದ ಒಂದು ಕ್ಷಣ ಕಳೆದರೇ ಅದೇ ಸತ್ಯವು, ಸಾರ್ಥಕವು ದ್ವಿತೀಯಸ್ಕಂಧ ತಾತ್ಪರ್ಯದಲ್ಲಿಯೂ ಉತ್ತಮಶ್ಲೋಕನ ವಾರ್ತಾರಹಿತವಾದ ಕ್ಷಣವು ವ್ಯರ್ಥವೆಂದು, ಹಾಗೂ ತೃತೀಯಸ್ಕಂಧ ಭಾಗವತದಲ್ಲೂ ಅಗಾಧವಾದ ಅಜ್ಞಾನದಲ್ಲಿ ಜನ್ಮವನ್ನೇ ತಿಳಿಯದೇ ಅನ್ಯ ವಿಚಾರದಲ್ಲೇ ಅನೇಕ ಜನ್ಮಗಳು ಉರಳಿ ದೇಹಧರಿಸಿದ ಜೀವಸಾಮಾನ್ಯಕ್ಕೆ ಭಯವನ್ನುಂಟುಮಾಡುವ ಪರಮಾತ್ಮನ ಆಯುಧದಂತಿರುವ ಕಾಲಚಕ್ರವು ಕ್ಷಣಕ್ಷಣದಲ್ಲೂ ಆಯುಷ್ಯವನ್ನು ಕ್ಷೀಣಗೊಳಿಸುತ್ತದೆ.

**ಏವಂ ವಿಧೈರಹೋರಾತ್ರೈಃ ಕಾಲಗತ್ಯುಪಲಕ್ಷಿತಃ । ಅಪೇಕ್ಷಿತಮಿವಾಸ್ಯಾಪಿ ಪರಮಾಯುರ್ವಯಶತಮಿತಿ । ನಿರ್ಣಯೇಪಿ ಕಾಲಕೃತಮಾಯು-ರ್ವಿಭೀಷಣಾಯ ರಾಮೇಣದತ್ತಮಿತ್ಯುಕ್ತಂ । ಮತ್ವಾತೃಣೋ ಪಮಮಶೇಷಸದಂತಕಂತಂರಕ್ಷಃ ಪತೇಸ್ತ್ವವರಜಸ್ಯ ದದೌಸಲಂಕಾಂ । ಕಲ್ಪಾಂತಮಸ್ಯ ನಿಶಿಚಾರಪತಿತ್ವಪೂರ್ವಮಾಯುಃ ಪ್ರದಾಯ ನಿಜಲೋಕಗತಿಂ ತದಂತ ಇತಿ । ಏವಂ ಹನುಮದಾದೀನಾಂ ಅಪಿ ಕಾಲಕೃತಮೇವ ಚಿರಾಯುರಿತಿ ದ್ರಷ್ಟವ್ಯಂ । ಅತಏವ ಪರಮಾತ್ಮನೋ ಮುಕ್ತಾನಾಂಚ ಕಾಲಸಂಬಂಧಾಭಾವಾನ್ನಾಯುರ್ಮರ್ಯಾದಾ । ನವರ್ತತೇಯತ್ರ ರಜಸ್ತಮಸ್ತಯೋಃ ಸತ್ವಂಚ ಮಿಶ್ರಂ ನಚಕಾಲವಿಕ್ರಮ ಇತಿ ದ್ವಿತೀಯ ಸ್ಕಂಧಭಾಗವತೋಕ್ತೇಃ ।**

ಈ ರೀತಿಯಾಗಿ ಅಹೋರಾತ್ರಿಗಳಿಂದ ಕಾಲದ ಕ್ರಮವು ಅನುಭವಸಿದ್ಧವಾಗಿದೆ. ಅಪೇಕ್ಷಿತವಾದಂತೆ ಪರಮಾಯುಷ್ಯವು ನೂರುವರ್ಷವೆಂದು, ನಿರ್ಣಯದಲ್ಲಿಯೂ ಕಾಲಕೃತವಾದ ಆಯುಷ್ಯವನ್ನು ಶ್ರೀರಾಮನು ವಿಭೀಷಣನಿಗಿತ್ತನು ಎಂದು ಹೇಳಿದೆ. ಶ್ರೀರಾಮನು ಅಂತಹ ಲಂಕಾಪಟ್ಟಣವಾದರೂ ಅಂತಉಳ್ಳದ್ದೇ ಆದ್ದರಿಂದ ಎಂದು ತೃಣ ಸಮಾನವಾದುದೇ ಎಂದು ರಾಕ್ಷಸಾಧಿಪತಿಯ ತಮ್ಮನಾದ ವಿಭೀಷಣನಿಗೆ ಕೊಟ್ಟನೆಂದಿದೆ. ಈ ವಿಭೀಷಣನಿಗೆ ಒಂದು ಕಲ್ಪಾಂತ ಆಯುಷ್ಯವನ್ನು ಕೊನೆಗೆ

ತನ್ನ ಲೋಕವನ್ನು ದಯೆತೋರಿ ಕೊಟ್ಟನು. ಹೀಗೆ ಎಲ್ಲಕ್ಕೂ ಕಾಲಾಧೀನತೆ ಹೇಳಿದೆ. ಹೀಗೆ ಹನುಮದಾದಿಗಳಿಗೂ ಕಾಲಕೃತವಾದುದೇ ಚಿರಾಯುತ್ವವೆಂದು ತಿಳಿಯಬೇಕು. ಆದ್ದರಿಂದಲೇ ಪರಮಾತ್ಮನಿಗೂ ಮುಕ್ತರಿಗೂ ಕಾಲಸಂಬಂಧವಿಲ್ಲವಾದ್ದರಿಂದ ಅವರಿಗೆ ಕಾಲದ ಮರ್ಯಾದಾ(ಒಳಪಟ್ಟಿರುವಿಕೆ) ಇರುವುದಿಲ್ಲ. ಯಾವ ಭಾಗವತ್ಸ್ಥಾನದಲ್ಲಿ ರಜಸ್ಸು ತಮಸ್ಸು ಗುಣಗಳಾಗಲಿ ಮಿಶ್ರಿತತ್ವವಾಗಲಿ ಕಾಲಪ್ರಭಾವವಾಗಲಿ ಇರುವುದಿಲ್ಲವೋ ಎಂದು ಭಾಗವತ ದ್ವಿತೀಯಸ್ಕಂಧದಲ್ಲಿ ಹೇಳಿರುವುದು.

**ಸಚಕಾಲಸ್ತಾರ್ಕಿಕಾದ್ಯಂಗೀಕೃತ ಕಾಲವನ್ನಾಖಂಡೈಕ ಇತ್ಯಾಹ ।**

ಪ.ಸಂ. ಕ್ಷಣಲವಾದ್ಯನೇಕರೂಪಃ । ಪ್ರತ್ಯೇಕಂ ವ್ಯಾಪ್ತಃ ।

**ತದುಕ್ತಂ ತೃತೀಯಸ್ಕಂಧಭಾಗವತೇ। ದ್ವ್ಯಣುದ್ವೌಪರಮಾಣೂಸ್ಯಾ-ತ್ರಸರೇಣುಸ್ತ್ರಯಃ ಸ್ಮೃತಃ । ತ್ರ್ಯಸರೇಣುತ್ರಿಕಂ ಭುಂಕ್ತೇಯಃ ಕಾಲಃ ಸತ್ರುಟಿಸ್ಮೃತಃ। ತಸ್ತ್ರಿಭಾಗುಸ್ತುವೇಧಃಸ್ಯಾತ್ರ್ಯಸ್ತ್ರಿಭಿಸ್ತುಲವಃಸ್ಮೃತಃ। ನಿಮೇಷ ಸ್ತ್ರಿಲವೋ ಜ್ಞೇಯಃ ಆಮ್ನಾತಸ್ತತ್ರಯಃ ಕ್ಷಣಃ। ಕ್ಷಣಾನಸ್ಪಂಚನಿದುಃ ಕಾಷ್ಠಾಂ ಲಘುತಾದಶಪಂಚ ಚ । ಲಘೂನಿವೈ ಸಮಾಮ್ನಾತಾ ದಶಪಂಚ ಚ ನಾಡಿಕಾ ।**

ಇಂತಹ ಕಾಲವು ತಾರ್ಕಿಕರು ಹೇಳುವಂತೆ ಅಖಂಡವೂ, ಒಂದೇ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಕ್ಷಣ ಲವ ಹೀಗೆ ಅನೇಕ ಅವಯವ (ಪ್ರಭೇದಗಳು)ಗಳುಳ್ಳದ್ದು, ಪ್ರತ್ಯೇಕವಾದವುಗಳು. ಇದನ್ನು ತೃತೀಯಸ್ಕಂಧ ಭಾಗವತದಲ್ಲಿ ಎರಡು ಅಣುಗಳು ಪರಮಾಣು ಅನಿಸುತ್ತದೆ. ಇಂತಹವುಗಳು ಮೂರು ಕಲೆತರೆ ತ್ರಸರೇಣು ಅನಿಸುತ್ತದೆ. ತ್ರಸರೇಣುಗಳ ಮೂರು ತ್ರುಟಿ, ಇದರ ಮೂರು ವೇಧಃ ಇವುಗಳ ಮೂರೇ ಲವ, ಮೂರು ಲವಗಳೇ ನಿಮಿಷ, ಇದರ ಮೂರು ಕ್ಷಣ, ಇದರ ಐದು ಕಾಷ್ಠಾ, ಕಾಷ್ಠಾಹದಿನೈದು ಲಘು, ಲಘುಹದಿನೈದು ನಾಡಿಕಾ ಹೀಗೆ ಕಾಲದ ಅವಯವಗಳಲ್ಲಿ ಪ್ರಭೇಧ ಉಂಟು.

**ತೇದ್ವೇಮುಹೂರ್ತಃ ಪ್ರಹರಃ ಷಡ್ಯಾಮಃ ಸಪ್ತವಾಸ್ನೃಣಾಮಿತ್ಯಾದಿ । ತಾರ್ಕಿಕಾಸ್ತು ಕಾಲಸ್ಯ ನಿತ್ಯತ್ವಮಾಹುಃ । ತಾನ್ನಿರಾಕರೋತಿ ।**

ಪ.ಸಂ. ಪ್ರಕೃತ್ಯೋತ್ಪತ್ತಿವಿನಾಶವಾನ್ ।

**ಸರ್ವೇನಿಮೇಷಾಜಜ್ಞಿರೇವಿದ್ಯುತಃ ಪುರುಷಾದಧೀತಿ ಶ್ರುತೇರಿತಿ ಭಾವಃ । ತದುಕ್ತಮನುವ್ಯಾಖ್ಯಾನೇ ವೈಶೇಷಿಕಾಧಿಕರಣೇ ।**

ಎರಡು ನಾಡಿಕಾಮುಹೂರ್ತ ನಂತರ ಪ್ರಹರ ಇದರ ಆರುಯಾಮ. ಇತ್ಯಾದಿ ಕ್ರಮದಲ್ಲಿ ಕಾಲಗಳು ಅನೇಕ ವಿಭಾಗಗಳಿಂದ ಇರುತ್ತದೆ. ತಾರ್ಕಿಕರು

ಕಾಲನಿತ್ಯತ್ವವನ್ನು ಹೇಳುತ್ತಾರೆ, ಅದನ್ನು ತಪ್ಪೆಂದು ತಿಳಿಸುತ್ತಾರೆ. ಪ್ರಕೃತ (ಆಗಾಗ್ಗೆ) ಹುಟ್ಟುಸಾವುಗಳುಳ್ಳದ್ದು, ಅನೇಕ ನಿಮಿಷಗಳು ಹುಟ್ಟಿದವು ಮಿಂಚಿನಂತೆ ಪರಮಾತ್ಮನಿಂದ ಎಡಬಿಡದೇ ಎಂದು ಶ್ರುತಿಗಳು ಹೇಳುವುದರಿಂದ, ಇದನ್ನು ಅನುವ್ಯಾಖ್ಯಾನ ವಿಶೇಷಾಧಿಕರಣದಲ್ಲಿ ಹೇಳಿದೆ.

**ವಿಶೇಷಾಶ್ಚೈವ ಕಾಲಸ್ಯ ಹರೇರಿಚ್ಛಾವಶಾಃ ಸದಾ। ಸರ್ವೇ ನಿಮೇಷಾ ಇತಿ ಹಿ ಶ್ರುತಿರೇವಾಹಸಾದರಮಿತಿ । ನನು ಕಾಲಸ್ಯೋತ್ಪತ್ತ್ಯಂಗೀಕಾರೇ ತಸ್ಯೋಪಾದಾನಂ ವಕ್ತವ್ಯಂ। ಕಾಲಸ್ಯ ಯಾವದವ್ಯಾಕೃತಾಕಾಶ ವ್ಯಾಪ್ತತ್ವೇನ ಪರಿಮಿತಾನಾಂ ಪಂಚಭೂತಾನಾಂ ಉಪಾದಾನತ್ವಾನುಪಪತ್ತೇಃ । ಪ್ರಲಯ ಕಾಲಸ್ಯಾಪಿ ಜಾಯಮಾನತ್ವೇನ ಪಂಚಭೂತಾನಾಂ ತದಾನೀಂ ಅಭಾವಾಚ್ಚ। ಅತಏವ ಮಹದಾದಿಕಮಪಿ ನೋಪಾದಾನಮಿತ್ಯತ ಆಹ । ಪ್ರಕೃತ್ಯೇತಿ ಪ್ರಕೃತೇಶ್ಚ ನಿತ್ಯತ್ವಾದ್ವ್ಯಾಪ್ತತ್ವಾಚ್ಚ ವ್ಯಾಪ್ತಕಾಲೋಪಾದಾನತ್ವಂ ಸಂಭವತ್ಯೇವೇತ್ಯರ್ಥಃ । ತದುಕ್ತಂ ವೈಶೇಷಿಕಾಧಿಕರಣಸುಧಾಯಾಂ ।**

ಶ್ರೀಹರೀಚ್ಛಾನುಸಾರವಾಗಿ ಕಾಲದಲ್ಲಿ ವಿಶೇಷ (ವಿಭಾಗ)ಗಳಿರುತ್ತದೆ. ನಿಮಿಷಗಳು ಹುಟ್ಟಿದವೆಂದು ವೇದಗಳು ಹೇಳುತ್ತದೆ ಹೇಗೆ? ಕಾಲಕ್ಕೆ ಉತ್ಪತ್ತಿ ಹೇಳಿದರೆ ಉಪಾದಾನ(ಪರಿಣಾಮ ಕಾರಣ)ವನ್ನು ಹೇಳಬೇಕು. ಪಂಚಭೂತಗಳಂತೂ ಆಗುವುದಿಲ್ಲ. ಏಕೆಂದರೆ ಕಾಲವು ಅವ್ಯಾಕೃತಾಕಾಶ ಪರ್ಯಂತ ವ್ಯಾಪ್ತವಾಗಿದೆ. ಆದ್ದರಿಂದ ಮಿತವಾದ ಭೂತಗಳು ಹೇಗೆ ಉಪಾದಾನತೆ ಯುಕ್ತವಾಗುತ್ತದೆ. ಪ್ರಳಯಕಾಲದಲ್ಲಿ ಹುಟ್ಟುವುದರಿಂದ, ಆಗ ಪಂಚಭೂತಗಳಿರು ವುದಿಲ್ಲವಾದುದರಿಂದಲೂ ಭೂತಗಳು ಉಪಾದಾನಗಳಾಗಲಾರವು. ಆದ್ದರಿಂದಲೇ ಮಹತ್ತತ್ವಾದಿಗಳೂ ಕಾಲೋಪಾದಾನಗಳಾಗಲಾರವು ಎಂದರೆ ಹೇಳುತ್ತಾರೆ. ಪ್ರಕೃತ್ಯವೆಂದು ಅಂದರೇ ಸೂಕ್ಷ್ಮಪ್ರಕೃತಿ ಉಪಾದಾನಕವಾದುದು ಪ್ರಕೃತಿಗೆ ನಿತ್ಯತ್ವ, ವ್ಯಾಪ್ತತ್ವ ಇರುವುದರಿಂದ ಕಾಲೋಪಾದಾನಕತ್ವಯುಕ್ತವು ಆಗುತ್ತದೆ. ಇದನ್ನು ವೈಶೇಷಿಕಾಧಿಕರಣ ಸುಧಾದಲ್ಲಿ ಹೇಳಿದೆ.

**ಕಾಲೋಪಾದಾನಂ ಪ್ರಕೃತಿರೇವೇತಿ । ಪ್ರಲಯಕಾಲೇಪಿ ಕಾಲ ಸೃಷ್ಟಿರಂಗೀಕರ್ತವ್ಯಾ । ಅನ್ಯಥಾ ಕಾಲಸ್ಯತ್ವಷ್ಟಮೋಭಾಗಃ ಸೃಷ್ಟಿಕಾಲ ಉದಾಹೃತ ಇತಿ ದಶಮತಾತ್ಪರ್ಯಾರ್ಥಸ್ಯಾಘಟನಾಪತ್ತೇಃ । ನಹಿ ಕಾಲಸೃಷ್ಟೇರಭಾವೇ ಪ್ರಲಯಕಾಲಾಷ್ಟಮಭಾಗಮಾರಭ್ಯ ಸೃಷ್ಟಿ ಕಾಲವ್ಯುತ್ಪಾದನಂ ಘಟತೇ । ಕಿಂಚ ಗೀತಾಯಾಮಹೋರಾತ್ರಿ ಶಬ್ದವಾಚ್ಯಯೋಃ ಸೃಷ್ಟಿಪ್ರಲಯಕಾಲಯೋಃ ಸಾಮ್ಯಮುಕ್ತಂ ।**

ಕಾಲಕ್ಕೆ ಉಪಾದಾನವು ಪ್ರಕೃತಿಯೇ ಆಗಿರುತ್ತದೆ. ಪ್ರಳಯದಲ್ಲೂ ಕಾಲದ ಸೃಷ್ಟಿ ಅಂಗೀಕರಿಸಿರುತ್ತದೆ. ಇಲ್ಲವಾದರೆ ಕಾಲದ ಎಂಟನೇ ಒಂದು ಭಾಗವು

ಸೃಷ್ಟಿಗೆ ಆರಂಭಕಾಲ ಎಂದು ಹೇಳುವ ದಶಮತಾತ್ಪರ್ಯಕ್ಕೆ ಘಟನೆ ಆಗುವುದಿಲ್ಲ. ಪ್ರಳಯದಲ್ಲಿ ಕಾಲಸೃಷ್ಟಿ ಇಲ್ಲವಾದರೆ ಎಂಟನೇ ಭಾಗ ಹೇಳಲು ಶಕ್ಯವಾಗುತ್ತದೆಯೇ? ಮತ್ತು ಗೀತಾದಲ್ಲಿ ಹಗಲು ರಾತ್ರಿ ಶಬ್ದಗಳಿಗೆ ಸೃಷ್ಟಿ ಪ್ರಳಯಗಳೆಂದು ಅವುಗಳಿಗೆ ಸಾಮ್ಯವೆಂದೂ ಹೇಳಿರುತ್ತದೆ.

**ತತ್ಪ್ರಲಯೇ ಕಾಲಸೃಷ್ಟ್ಯನಂಗೀಕಾರೇ ಕಥಂಸ್ಯಾತ್ । ಸಹಸ್ರಯುಗಪರ್ಯಂತಂ ಅಹರ್ಯದ್ಬ್ರಹ್ಮಣೋವಿದುಃರಾತ್ರಿಂಯುಗಸಹಸ್ರಾಂತೇ ತೇಹೋರಾತ್ರವಿದೋಜನಾಃ । ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ । ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತ ಸಂಜ್ಞಕ ಇತಿ । ನ ಚೈತಚ್ಛ್ಲೋಕಸ್ಯ ದೈನಂದಿನ ಪ್ರಲಯ ಪರತ್ವಮೇವ ಅಸ್ತ್ವಿತಿವಾಚ್ಯಂ । ಅವ್ಯಕ್ತಾದ್ವ್ಯಕ್ತಯಃ ಸರ್ವಾ ಇತಿ ಮಹದಾದೀನಾಂ ಉತ್ಪತ್ತಿವಿನಾಶಯೊರುಕ್ತೇಃ । ನಹಿ ಬ್ರಹ್ಮಣೋದೈನಂದಿನ ಸೃಷ್ಟಿ ಪ್ರಲಯಯೋಃ ಮಹದಾದಿ ಸೃಷ್ಟಿಸ್ತದ್ವಿನಾಶೋವಾ ಭವತಿ । ಅತೋ ಮಹಾಪ್ರಲಯ ಮಹಾಸೃಷ್ಟಿಪರ ಏವಾಯಂ ಶ್ಲೋಕ ಇತಿ । ತದುಕ್ತಂ ಗೀತಾಭಾಷ್ಯೇ ಬ್ರಹ್ಮಪರಂ । ದ್ವಿಪರಾರ್ಧ ಪ್ರಲಯಏವಾರ್ಥ ವಿವಕ್ಷಿತಃ । ಅವ್ಯಕ್ತಾದ್ವ್ಯಕ್ತಯಃ ಸರ್ವಾ ಇತ್ಯುಕ್ತೇಃ । ಉಕ್ತಂ ಚಮಹಾಕೌರ್ಮೇ । ಅನೇಕ ಯುಗಪರ್ಯಂತಂ ಮಹಾವಿಷ್ಣೋಸ್ತಥಾನಿಶಾ । ರಾತ್ರ್ಯಾದೌ ಲೀಯತೇ ಸರ್ವಂ ಅಹರಾದೌತು ಜಾಯತ ಇತಿಚೇತಿ ।**

ಪ್ರಲಯದಲ್ಲಿ ಕಾಲಸೃಷ್ಟಿಯನ್ನು ಅಂಗೀಕರಿಸದಿದ್ದರೆ ವ್ಯವಹಾರವಾದರೂ ಹೇಗೆ, ಸಹಸ್ರಯುಗ ಪರ್ಯಂತವೂ ಬ್ರಹ್ಮನ ಹಗಲು, ಯುಗ ಸಹಸ್ರವು ರಾತ್ರಿ ಹೀಗೆ ಎರಡುಯುಗ ಸಹಸ್ರಗಳು ಹಗಲುರಾತ್ರಿಗಳೆಂದು ಜ್ಞಾನಿಗಳು ತಿಳಿಯುತ್ತಾರೆ. ಎಲ್ಲಾ ಪದಾರ್ಥಗಳೂ ಅವ್ಯಕ್ತತತ್ತ್ವ (ಪ್ರಕೃತಿತತ್ವ)ದಿಂದಲೇ ಅಭಿವ್ಯಕ್ತಗಳಾಗುತ್ತವೆ. ಹಗಲಾಗುತ್ತಿರಲು ಹುಟ್ಟುತ್ತವೆ. ರಾತ್ರಿ ಆಗುತ್ತಿರಲು ನಷ್ಟಗಳಾಗುತ್ತವೆ. ಅಲ್ಲಿಯೇ ಅವ್ಯಕ್ತಸಂಜ್ಞಕ ತತ್ತ್ವದಲ್ಲಿ, ಇವನ್ನು ಗೀತಾಭಾಷ್ಯದಲ್ಲಿ ಬ್ರಹ್ಮನ ಪರವಾಗಿ ದ್ವಿಪರಾರ್ಧ ಪ್ರಳಯವೇ ವಿವಕ್ಷಿತವಾಗಿದೆ. ವ್ಯಕ್ತವಾದವುಗಳೆಲ್ಲವೂ ಅವ್ಯಕ್ತದಿಂದಲೇ ಹೀಗೆ ಹೇಳಿದೆ. ಮಹಾಕೂರ್ಮಪುರಾಣದಲ್ಲಿಯೂ ವಿಷ್ಣುವಿಗೆ ಹಗಲಿನ ಸಂಕೇತ ಮಹಾಯುಗ ಪರ್ಯಂತವು, ಅಷ್ಟೇ ರಾತ್ರ್ಯಾದಿಗಳಲ್ಲಿ ಸರ್ವವೂ ನಷ್ಟವಾಗುತ್ತದೆ. ಹಗಲಿನಲ್ಲಿ ಸರ್ವವೂ ಹುಟ್ಟುತ್ತದೆ ಹೀಗೆ ಹೇಳಿದೆ. ಕೃತ, ತ್ರೇತಾ, ದ್ವಾಪರ ಹಾಗೂ ಕಲಿ ಈ ನಾಲ್ಕುಯುಗಗಳು ಸೇರಿ ಮಹಾಯುಗವೆಂದು ಹೆಸರು.

**ತಥಾ ತೃತೀಯಸ್ಕಂಧ ಭಾಗವತೇಪಿ ಪ್ರಲಯಕಾಲೇಪಿ ಕಾಲಸೃಷ್ಟಿರುಕ್ತಾ ಸೋಂತಃ ಶರೀರೇರ್ಪಿತ ಭೂತಸೂಕ್ಷ್ಮಃ ಕಾಲಾತ್ಮಿಕಾಂ ಶಕ್ತಿಮುದೀರಯಾಣಃ ಉವಾಸತಸ್ಮಿನ್‌ಸಲಿಲೇಪದೇಶ್ವೇ ಯಥಾ ನಲೋದಾರುಣಿರುದ್ಧವೀರ್ಯಃ**

**ಇತಿ । ಏತಚ್ಛ್ಲೋಕೋ ವ್ಯಾಖ್ಯಾತಃ ಸುಧಾಯಾಂ ವೈಶೇಷಿಕಾಧಿಕರಣೇ । ಕಾಲಾತ್ಮಿಕಾಂ ಕಾಲಾಖ್ಯಾಂ ಸಹಕಾರಿಶಕ್ತಿಃ ಉದೀರಯಾಣೋ ಜನಯನ್ನಿತ್ಯರ್ಥ ಇತಿ । ಕೇಚಿತ್ತು ಕಾಲೋಪಾದಾನಂ ನಪ್ರಕೃತಿಃ । ತಸ್ಯಾವ್ಯಾಪ್ತ ಕಾಲೋಪಾದಾನತ್ವೇ ಸರ್ವಾವಯವೈಃ ಅಪಿ ಕಾಲಾತ್ಮನಾ ಪರಿಣತತ್ವೇನ ಮಹದಾದ್ಯುಪಾದಾನತ್ವಾಭಾವ ಪ್ರಸಂಗಾತ್ ।**

ಹಾಗೆ ತೃತೀಯ ಸ್ಕಂಧ ಭಾಗವತದಲ್ಲಿ ಪ್ರಳಯಕಾಲದಲ್ಲಿಯೂ ಕಾಲದ ಸೃಷ್ಟಿಯು ಹೇಳಿರುತ್ತದೆ. ಪರಮಾತ್ಮನು ತನ್ನ ಶರೀರದಲ್ಲಿ ಇರಿಸಿದ್ದ ಸೂಕ್ಷ್ಮವಾದ ಕಾಲನಾಮಕಶಕ್ತಿಯನ್ನು ಪ್ರಚೋದಿಸುವನಾಗಿ, ತನ್ನ ಸ್ಥಾನವೇ ಆದ ಅಗಾಧ ಉದಕದಲ್ಲಿ ಹೇಗೆ ಅಗ್ನಿಯು ತನ್ನ ಶಕ್ತಿಯನ್ನು ಮರೆಮಾಚಿ ಕಟ್ಟಿಗೆಯಲ್ಲಿರುತ್ತಾನೆಯೋ ಹಾಗೆ ಇದ್ದನು ಎಂದು, ಈ ಶ್ಲೋಕವು ಸುಧಾವೈಶೇಷಿಕಾಧಿಕರಣದಲ್ಲಿ ವ್ಯಾಖ್ಯಾನಿಸುತ್ತಾ ಕಾಲಾಖ್ಯವಾದ ಸಹಕಾರಿ ಶಕ್ತಿಯನ್ನು ಹುಟ್ಟಿಸಿದನು ಎಂದಿರುತ್ತಾರೆ. ಆದ್ದರಿಂದ ಪ್ರಳಯಕಾಲದಲ್ಲೂ ಕಾಲಸೃಷ್ಟಿ ಇರುತ್ತದೆ. ಕೆಲವರು ಕಾಲಕ್ಕೆ ಉಪಾದಾನವು ಪ್ರಕೃತಿ ಆಗುವುದಿಲ್ಲ ಎನ್ನುತ್ತಾರೆ. ಪ್ರಕೃತಿಯು ವ್ಯಾಪ್ತವಾದ ಕಾಲಕ್ಕೆ ಉಪಾದಾನವೆಂದರೆ, ತನ್ನ ಎಲ್ಲಾ ಅವಯವಗಳಿಂದಲೂ (ಎಲ್ಲಾ ಭಾಗಗಳಿಂದಲೂ) ಕಾಲಾತ್ಮಕವಾಗಿ ಪರಿಣಮಿಸಿ ಮಹದಾದಿಗಳಿಗೆ ಉಪಾದಾನವಾಗದೇ ಹೋಗಬೇಕಾದೀತು.

**ನಹ್ಯೇಕಸ್ಯೈವ ಯುಗಪದುಭಯೋಪಾದಾನತ್ವಂ ಸರ್ವಾವಯವೈರಿತಿ ವಕ್ತುಂ ಯುಕ್ತಂ। ಅನುಭವವಿರೋಧಾತ್। ಕಿಂತು ಪೂರ್ವಪೂರ್ವಕಾಲಾಪಿ- ಪ್ಯೋತ್ತರೋತ್ತರ ಕಾಲೋಪಾದಾನಂ । ಯಥಾ ಬಾಲ್ಯಾವಸ್ಥಾಯಾಂ ವಿದ್ಯಮಾನಸ್ಯೈವ ದೇಹಸ್ಯೋತ್ತರೋತ್ತರ ದೇಹೋಪಾದಾನತ್ವಂ । ಯಥಾ ವಾದೀಪಜ್ವಾಲಾಯಾ ಉತ್ತರೋತ್ತರ ದೀಪಜ್ವಾಲೋಪಾದಾನತ್ವಂ । ಯಥಾವಾ ದ್ರೌಪದೀ ವಸ್ತ್ರಸ್ಯ ದುಃಶಾಸನೇನ ಅಪಹಾರಕಾಲೇ ಪೂರ್ವಪೂರ್ವ ವಸ್ತ್ರಸ್ಯೋತ್ತರೋತ್ತರವಸ್ತ್ರೋಪಾದಾನತ್ವಂ ತದ್ವದಿತ್ಯಾಹುಃ । ತನ್ನ । ಕಾಲೋಪಾದಾನಂ ಪ್ರಕೃತಿರಿತಿ ಸುಧಾವಿರೋಧ ಪ್ರಸಂಗಾತ್ । ನಚ ಪ್ರಕರ್ಷೇಣ ಕರೋತೀತಿ ಪ್ರಕೃತಿರಿತಿ ಪ್ರಕೃತಿ ಶಬ್ದಸ್ಯ ಕಾಲಪರತ್ವಮಿತಿ ವಾಚ್ಯಂ। ಯೋಗಾಪೇಕ್ಷಯಾ ರೂಢೇಃ ಪ್ರಬಲತ್ವಾತ್।**

ಒಂದಕ್ಕೆ ಎಲ್ಲ ಭಾಗಗಳಿಂದಲೂ ಉಪಾದಾನವೆಂಬುದು ಯುಕ್ತವಲ್ಲ. ಅನುಭವವಿರೋಧ ಬರುವುದರಿಂದ, ಆದರೆ ಮೊದಲ ಮೊದಲಿನ ಕಾಲವು ನಂತರ ನಂತರದ (ಮುಂದು ಮುಂದಿನ)ಕಾಲಕ್ಕೆ ಉಪಾದಾನವು. ಹೇಗೆಂದರೆ ಬಾಲ್ಯಾವಸ್ಥಾ ದೇಹವು ಉತ್ತರೋತ್ತರ ದೇಹೋಪಾದಾನವಾಗುವುದು ಹೇಗೋ ಹಾಗೆ ಮತ್ತು ಮೊದಲ ದೀಪದ ಜ್ವಾಲೆಯು ಮುಂದಿನ ಜ್ವಾಲೆಗಳಿಗೆ ಉಪಾದಾನವಾಗುವಂತೆ

ಮತ್ತು ದ್ರೌಪದೀದೇವಿಯ ವಸ್ತ್ರಗಳನ್ನು ದುಃಶಾಸನ ಸೆಳೆಯುವಾಗ ಮೊದಲಿನ ವಸ್ತ್ರವೇ ಉತ್ತರೋತ್ತರ ಉಪಾದಾನಗಳಾದವು, ಹಾಗೆ ಕಾಲಕ್ಕೆ ಕಾಲವೇ ಉಪಾದಾನವೆಂದು ಹೇಳುತ್ತಾರೆ. ಅದು ತಪ್ಪೆನಿಸುತ್ತದೆ. ಕಾಲಕ್ಕೆ ಉಪಾದಾನವು ಪ್ರಕೃತಿಯೇ ಎಂದು ಹೇಳುವ ಸುಧಾ ವಿರೋಧವು ಬರುವುದರಿಂದ, ಅಲ್ಲಿ ಪ್ರಕೃತಿಶಬ್ದವು ಪ್ರಕೃಷ್ಟವಾಗಿ (ಪ್ರಬಲವಾಗಿ) ಕಾರಕವು ಎಂಬ ವ್ಯುತ್ಪತ್ತಿ ಇಂದ ಪ್ರಕೃತಿ ಎಂದರೆ ಕಾಲವೇ ಎಂತಲೂ ಎನಬಾರದು. ಯೋಗರೂಢಿ ಈ ಎರಡರಲ್ಲಿ ರೂಢಿಗೇ ಪ್ರಾಬಲ್ಯತೆ ಇರುವುದರಿಂದ.

**ಕಿಂಚನಚ ಸರ್ವಾಧಾರಭೂತೌ ದೇಶಕಾಲೌ ಕಿಂಚಿದ್ರವ್ಯಾತ್ಮನಾವಿಕುರುತ ಇತಿ ವಿಯತ್ಪಾದೀಯ ಚಂದ್ರಿಕಾವಿರೋಧ ಪ್ರಸಂಗಾತ್ । ಕಿಂಚ ಪೂರ್ವಕಾಲಸ್ಯೋತ್ತರಕಾಲೋಪಾದಾನತ್ವೇ ಕಾಲ ಪ್ರವಾಹೋಽನಾದಿ ನಿತ್ಯ ಇತಿ ಸಿದ್ಧಾಂತ ವಿರೋಧ ಪ್ರಸಂಗಾತ್ । ಪೂರ್ವಾವಧಿ ರಹಿತಾನಾಂ ಪರಸ್ಪರಮತ್ಯಂತಭಿನ್ನಾನಾಂ ಸಜಾತೀಯಾನಾಂ ಅನವರತಮುತ್ಪತ್ತಿಮತಾಂ ವಿಚ್ಛೇದಾಭಾವೋಹಿ ಪ್ರವಾಹತೋ ಅನಾದಿನಿತ್ಯತ್ವಂ । ಯಥಾ ಜಗತ್ಪ್ರವಾಹಸ್ಯಾನಾದಿನಿತ್ಯತ್ವಂ । ನಹ್ಯತ್ರ ಪೂರ್ವಪೂರ್ವಜಗತಾಮುತ್ತರೋತ್ತರ ಜಗದುಪಾದಾನತ್ವಂ । ಕಿಂತು ಪರಸ್ಪರಂ ಬಿನ್ನಾನಾಂ ಏವ ಪ್ರಕೃತ್ಯುಪಾದಾನಕತಯಾ ಸಂತತೋತ್ಪತ್ತಿಃ ।**

ಮತ್ತು ಪ್ರಕೃತಿಶಬ್ದಕ್ಕೆ ಕಾಲಾರ್ಥಕತೆ ಕೂಡುವುದಿಲ್ಲ. ಆಕಾಶಾಧಿಕರಣ ಚಂದ್ರಿಕಾದಲ್ಲಿ ಸರ್ವಕ್ಕೂ ಆಧಾರವಾದ ದೇಶಕಾಲಗಳನ್ನು ದ್ರವ್ಯಾತ್ಮಕವಾಗಿ ವಿಕಾರಮಾಡುವುದರಿಂದ ಪ್ರಕೃತಿಗೆ ಪ್ರಕೃತಿ ಶಬ್ದವಾಚ್ಯತೆ ಎಂದಿರುವುದರಿಂದ, ಅದರ ವಿರೋಧವೂ ಬರುತ್ತದೆ. ಮತ್ತು ಪೂರ್ವಕಾಲ ಉತ್ತರಕಾಲಕ್ಕೆ ಉಪಾದಾನವೆಂದರೆ ಕಾಲಪ್ರವಾಹವು ಅನಾದಿ ಎಂಬುವುದು ತಪ್ಪಾಗಬೇಕಾಗುತ್ತದೆ. ಏಕೆಂದರೆ ಪೂರ್ವಾವಧಿ ಇಲ್ಲದೇ ಪರಸ್ಪರ ಅತ್ಯಂತ ಭಿನ್ನಗಳೇ ಆಗಿ, ಸಜಾತೀಯಗಳಾಗಿ, ಎಡಬಿಡದೆ ಉತ್ಪತ್ತಿ ವಿಚ್ಛೆದವಿಲ್ಲದಿರುವಿಕೆಯೇ ಪ್ರವಾಹ ಶಬ್ದಾರ್ಥವು. ಜಗತ್ ಪ್ರವಾಹವು ಅನಾದಿನಿತ್ಯವೆನ್ನುವಮಾತು ಸರಿಯಾಗಿರುತ್ತದೆ. ಮೊದಲ ಮೊದಲಿನ ಜಗತ್ತು ಮುಂದುಮುಂದಿನ ಜಗತ್ತಿಗೆ ಉಪಾದಾನಗಳಲ್ಲವಾದ್ದರಿಂದ, ಅವುಗಳು ಪರಸ್ಪರ ಭಿನ್ನಗಳೇ ಆಗಿ ಪ್ರಕೃತಿ ಉಪಾದಾನಗಳಾಗಿ ಅವಿಚ್ಛಿನ್ನ ಹುಟ್ಟುವವುಗಳಾದ್ದರಿಂದ ಭಿನ್ನವಾದವುಗಳಿಗೆ ಉಪಾದಾನ ಉಪಾದೇಯತೆ ಕೂಡುವುದಿಲ್ಲ. ಅಭಿನ್ನಗಳಿಗೆ ಪ್ರವಾಹತೆ ಕೂಡುವುದಿಲ್ಲ.

**ಏವಂ ಯೋಗಿಜ್ಞಾನಂ ಋಜೂನಾಮನಾದಿನಿತ್ಯಮಿತಿ ಪ್ರಮಾಣಲಕ್ಷಣೋಕ್ತ ಋಜುಯೋಗಿಜ್ಞಾನ ವ್ಯಕ್ತೀನಾಂನ ಪೂರ್ವಜ್ಞಾನೋಪಾದಾನಕತ್ವಂ ಕಿಂತು ಪರಸ್ಪರಂ ಭಿನ್ನಾನಾಮೇವಾಂತಃ ಕರಣೋಪಾದಾನಕತ್ವಂ ।**

**ಉಪಚಾರತೋನಾದಿನಿತ್ಯಸ್ಯಾಪಿ ಗಂಗಾಪ್ರವಾಹಸ್ಯ ನಪೂರ್ವಪೂರ್ವೋತ್ಪನ್ನೋದಕಾನಾಂ ಉತ್ತರೋತ್ತರ ಜಲೋಪಾದಾನತ್ವಂ ಕಿಂತು ಪರಸ್ಪರ ಮತ್ಯಂತ ಭಿನ್ನಾನಾಮೇವ ಸಂಶ್ಲಿಷ್ಟತಯಾಗಮನಾವಿಚ್ಛೇದಃ । ತಥಾಚ ಪೂರ್ವಪೂರ್ವಕಾಲಸ್ಯೋತ್ತರೋತ್ತರಕಾಲೋಪಾದಾನತ್ವೇ ಉಪಾದಾನೋಪಾದೇಯಯೋರಭೇದೇ ಭಿನ್ನಾನಾಮುತ್ಪತ್ತಿವಿನಾಶಪರಂಪರಾಭಾವಾತ್ ಪ್ರವಾಹತೋऽನಾದಿತ್ವ ಭಂಗ ಪ್ರಸಂಗ ಏವ ।**

ಹೀಗೆ ಯೋಗಿಜ್ಞಾನವು, ಋಜಯೋಗಿಜ್ಞಾನವು ಅನಾದಿನಿತ್ಯಗಳೆಂದು ಪ್ರಮಾಣ ಲಕ್ಷಣದಲ್ಲಿ ಹೇಳಿರುವಲ್ಲಿಯೂ ಪೂರ್ವಪೂರ್ವ ಉಪಾದಾನಕತ್ವ ಇರುವುದಿಲ್ಲ. ಆದರೆ ಪರಸ್ಪರ ಭಿನ್ನಗಳೇ ಆದ ಜ್ಞಾನಗಳಿಗೆ ಅಂತಃಕರಣವೇ ಉಪಾದಾನವು. ಅನಾದಿನಿತ್ಯವಾದ ಗಂಗಾಪ್ರವಾಹಕ್ಕೆ ಮೊದಮೊದಲು ನೀರು ಮುಂದು ಮುಂದಿನ ನೀರಿಗೆ ಉಪಾದಾನಗಳಲ್ಲ. ಅತ್ಯಂತ ಭಿನ್ನಗಳೇ ಆದ ನೀರಿನ ಅವಿಚ್ಛಿನ್ನ ಗಮನವೇ ಪ್ರವಾಹವು. ಅಂದ ಮೇಲೆ ಮುಂದು ಮುಂದಿನ ಕಾಲಕ್ಕೆ ಹಿಂದಿನ ಕಾಲವು ಉಪಾದಾನವಾದರೆ ಅಭೇದವೇ ಬಂದು ಭಿನ್ನಗಳ ಪ್ರವಾಹತಾ ಕೂಡದೇ ಕಾಲಕ್ಕೆ ಪ್ರವಾಹತೋ ನಿತ್ಯತೆ ಎಂಬುದು ಭಂಗವಾಗುತ್ತದೆ.

**ಯಚ್ಚೋಕ್ತಂ ಶರೀರಾದಿ ದೃಷ್ಟಾಂತೇನ ಪರಸ್ಪರಮುಪಾದಾನೋಪಾದೇಯಭಾವ ಇತಿ । ತನ್ನ । ತತ್ರ ಪ್ರವಾಹಶಬ್ದಸ್ಯ ಪ್ರಯೋಗಾಭಾವಾತ್ । ನಹಿ ದೇವದತ್ತಸ್ಯೈಕಸ್ಮಿನ್ನೇವದೇಹೇ ಶರೀರ ಪ್ರವಾಹ ಇತಿ ವ್ಯಪದೇಶೋಸ್ತಿ । ಕಿಂಚ ಪ್ರಲಯಕಾಲೋಗತಃ ಸೃಷ್ಟಿಕಾಲ ಉತ್ಪನ್ನ ಇತ್ಯುತ್ಪತ್ತಿವಿನಾಶ ಪ್ರತ್ಯಯೌನಸ್ಯಾತಾಂ । ನಹಿದೇವದತ್ತ ಶರೀರೇ ನಷ್ಟಂಪೂರ್ವಶರೀರಂ ಶರೀರಾಂತರಮುತ್ಪನ್ನಮಿತಿ ವ್ಯಪದೇಶೋಸ್ತಿ ಕಿಂತು ತದೇವೇದಂ ಶರೀರಮಿತಿ । ಅಪಿಚನಿತ್ಯಾವೇದಾಃ ಪುರಾಣಾದ್ಯಾಃ ಕಾಲಃ ಪ್ರಕೃತಿರೇವಚ ಇತಿ ತತ್ವಸಂಖ್ಯಾನ ಟೀಕಾಯಾಂ ಕಾಲಪ್ರವಾಹಸ್ಯ ನಿತ್ಯಾನಿತ್ಯತ್ವಮುಕ್ತಂ ।**

ಮತ್ತು ದೇಹದೃಷ್ಟಾಂತದಿಂದ ಪರಸ್ಪರ ಉಪಾದಾನ ಉಪಾದೇಯಭಾವವು. ಸರಿಯಲ್ಲ. ಅಲ್ಲಿ ಪ್ರವಾಹಶಬ್ದ ಪ್ರಯೋಗವೇ ಇಲ್ಲವಾದ್ದರಿಂದ ದೇವದತ್ತನಿಗೆ ಒಂದೇ ದೇಹದಲ್ಲಿ ದೇಹಾಂತರ ಪ್ರವಾಹ ವ್ಯವಹಾರವಿದೆಯೇ ? ಮತ್ತು ಪ್ರಲಯಕಾಲ ಮುಗಿಯಿತು ಸೃಷ್ಟಿಕಾಲ ಬಂತು ಹೀಗೆ ಹುಟ್ಟು ವಿನಾಶಗಳ ವ್ಯವಹಾರವು ಇಲ್ಲವಾಗಲಿ, ಮತ್ತು ದೇವದತ್ತನ ದೇಹದಲ್ಲಿ ಒಂದು ದೇಹ ಹೋಯಿತು ಮತ್ತೊಂದು ದೇಹ ಬಂದಿತು ಹೀಗು ವ್ಯವಹಾರ ಬರಲಿ, ಬರೊಲ್ಲವಾದರೂ ಅದೇ ಶರೀರವೇ ಎಂದು ಸ್ಪಷ್ಟವಿರುತ್ತದೆ. ಮತ್ತು ವೇದಗಳು

ನಿತ್ಯವಾದವು ಪುರಾಣಾದಿಗಳು, ಕಾಲ, ಪ್ರಕೃತಿ ಒಂದೊಂದು ಪ್ರಕಾರವಾಗಿ ನಿತ್ಯಾನಿತ್ಯವಾದವುಗಳು ಅನಿತ್ಯಗಳು ಹೀಗೆಂದು ತತ್ವಸಂಖ್ಯಾನ ಟೀಕಾದಲ್ಲಿ ಹೇಳಿದೆ.

**ತಚ್ಚೈಕದೇಶೈರುತ್ಪತ್ತಿವಿನಾಶಾ ಏಕದೇಶಿನಸ್ತದಭಾವ**
**ಇತಿ । ತದಯುಕ್ತಂ ಸ್ಯಾತ್ ।**

ಆದುದರಿಂದ ಅವುಗಳಿಗೆ ಒಂದು ಭಾಗದಿಂದ ಹುಟ್ಟುನಾಶಗಳು ಇನ್ನೊಂದು ಭಾಗದಿಂದ ನಿತ್ಯಗಳು ಹೀಗೆ ಹೇಳುತ್ತಾರೆ. ಅದು ಅಯುಕ್ತವಾಗುವುದು.

**ನಹಿ ಪೂರ್ವಕಾಲಸ್ಯೋತ್ತರಕಾಲೋಪಾದಾನತ್ವೇ ಪೂರ್ವಕಾಲಸ್ಯ ವಿನಾಶೋ ಯುಕ್ತಃ । ಅಪಿಚ । ಯತ್ಪರಿಣಾಮಿ ತದನಿತ್ಯಮಿತಿ ವ್ಯಾಪ್ತಿಃ ಸರ್ವ ಸಿದ್ಧಾ। ನಚ ಪರಿಣಾಮಿನಃ ಕಾಲಸ್ಯವಿನಾಶಸ್ತ್ವತ್ಪಕ್ಷೇಯುಕ್ತಃ। ಉಪಾದಾನಾಭಾವೇನೋತ್ತರಕಾಲಾನುತ್ಪತ್ತಿ ಪ್ರಸಂಗಾತ್ । ನಚಾವಿನಷ್ಟಸ್ಯೈವ ಕಾಲಸ್ಯಾಜಸ್ರಂ ಪರಿಣಾಮ ಇತಿ ವಾಚ್ಯಂ । ತಥ್ಯುರ್ತ್ಪನ್ನಸ್ಯಕಾರ್ಯಭಾವಂ ಪರಿತ್ಯಜ್ಯ ಕಾರಣಾತ್ಮನಾವಸ್ಥಾನರೂಪ ವಿನಾಶಾಭಾವೇ ನಿತ್ಯತ್ವಮೇವಾಯಾತೀತಿ ಕಿಂಪರಿಣಾಮವ್ಯಸನೇನ । ಅನ್ಯಥೈತಾದೃಶ ಪರಿಣಾಮಸ್ಯಅವ್ಯಾಕೃತಾಕಾಶಾದಾವಪಿ ವಕ್ತುಂಶಕ್ಯತ್ವೇನ ಪರಾಧೀನ ವಿಶೇಷಾವಾಪ್ತಿರೂಪೋತ್ಪತ್ತಿ ಕಥನಪ್ರಯಾಸೋನಸ್ಯಾತ್ ।**

ಮೊದಲಿನ ಕಾಲಕ್ಕೆ ಮುಂದಿನ ಕಾಲದ ಉಪಾದಾನತೆ ಹೇಳುವುದಾದರೆ ಪೂರ್ವಕಾಲನಾಶವೂ ಹೇಳಬೇಕು. ಅದು ಯುಕ್ತವಲ್ಲ. ಮತ್ತು ಯಾವುದು ಪರಿಣಾಮಿಯೋ ಅದು ಅನಿತ್ಯವು. ಹೀಗೆ ವ್ಯಾಪ್ತಿಯು ಪ್ರಸಿದ್ಧವಾಗಿರುತ್ತದೆ. ನಿನ್ನ ಮತ (ತಾರ್ಕಿಕ) ರೀತಿಯಾಗಿಯೂ ಪರಿಣಾಮ ಹೊಂದುವ ಕಾಲಕ್ಕೆ ನಾಶವು ಯುಕ್ತವಲ್ಲ. ಉಪಾದಾನವಿಲ್ಲದೇ ಮುಂದಿನ ಕಾಲವೇ ಇಲ್ಲವಾಗುವ ಪ್ರಸಂಗ ಬರುವುದರಿಂದ, ನಾವು ನಷ್ಟವಾಗುವ ಕಾಲವೇ ತಕ್ಷಣದಲ್ಲಿ ಪರಿಣಾಮವಾಗುತ್ತದೆ. ಹೀಗೆನ್ನುವುದಾದಲ್ಲಿ ಅದು ತಪ್ಪಾಗುವುದು. ಹಾಗಾದರೆ ಹುಟ್ಟುವುದಕ್ಕೆ ಕಾರ್ಯರೂಪತೆಯೇ ಇಲ್ಲದೆ ಕಾರಣರೂಪದಲ್ಲಿ ಸ್ಥಿತಿರೂಪ ವಿನಾಶವಿಲ್ಲ ಅಂದರೆ ನಿತ್ಯತೆಯೇ ಬರುವುದು, ಪರಿಣಾಮದ ವ್ಯಸನವೇಕೆ, ಇಲ್ಲವಾದರೆ ಇಂತಹ ಪರಿಣಾಮಕ್ಕೆ ಅವ್ಯಾಕೃತ ಆಕಾಶಾದಿಗಳಲ್ಲೂ ಹೇಳಲು ಶಕ್ಯವಾಗುವುದರಿಂದ ಪರಾಧೀನ ವಿಶೇಷಾವಾಪ್ತಿ ಹೇಳುವ ಪ್ರಸಂಗವೇ ಬರುವುದಿಲ್ಲ.

**ಪ್ರಕೃತೇಃ ಕಾಲೋಪಾದಾನತ್ವ ಪಕ್ಷೇತು ಪ್ರಕೃತಿಸೂಕ್ಷ್ಮಾಣಾಂ ಅನಂತಾನಾಂ ಪರಸ್ಪರಂ ಭಿನ್ನತ್ವೇನ ಪ್ರತ್ಯೇಕಂ ಕಾಲೋಪಾದಾನತ್ವ ಸಂಭವೇನ ಕಾರ್ಯಾಣಾಂ ಕಾಲಾನಾಂ ಪರಸ್ಪರ ಭಿನ್ನತ್ವಮುತ್ಪತ್ತಿ ವಿನಾಶಾ ಪ್ರವಾಹತೋನಾದಿತ್ವಂಚ ಘಟತೇ । ಯಚ್ಚೋಕ್ತಂ ಸರ್ವ ಪ್ರಕೃತೇಃ ಕಾಲೋಪಾದಾನತ್ವೇ ಉಪಾದಾನಾಭಾವಾನ್ಮಹದಾದ್ಯುತ್ಪತ್ತಿಃ ನಸ್ಯಾದಿತಿ ।**

**ತನ್ನ।**

ಪ್ರಕೃತಿಗೆ ಕಾಲೋಪಾದಾನತ್ವ ಹೇಳುವ ಪಕ್ಷದಲ್ಲಿ ಸೂಕ್ಷ್ಮಪ್ರಕೃತಿಗಳು ಅನಂತವಾದ್ದರಿಂದ ಪರಸ್ಪರ ಭಿನ್ನಗಳೇ ಆಗಿರುವುದರಿಂದಲೂ ಪ್ರತ್ಯೇಕ ಕಾಲೋಪಾದಾನತೆಯು ಯುಕ್ತವಾಗಿ ಕಾರ್ಯಗಳಿಗೆ ಕಾಲಗಳಿಗೆ ಪರಸ್ಪರ ಉತ್ಪತ್ತಿ ವಿನಾಶಗಳು ಬಂದು ಪ್ರವಾಹತಃ ಅನಾದಿತ್ವವು ಯುಕ್ತವಾಗುತ್ತದೆ. ಮತ್ತು ಸರ್ವಪ್ರಕೃತಿ ಕಾಲೋಪಾದಾನವಾದರೆ ಬೇರೆ ಉಪಾದಾನವಿಲ್ಲದೆ ಮಹದಾದಿಗಳ ಉತ್ಪತ್ತಿಯೇ ಇಲ್ಲವಾಗಬೇಕಾದೀತು ಎಂದು. ಹೀಗೆನ್ನುವುದು ತಪ್ಪಾದುದು.

**ಸರ್ವತ್ರ ವ್ಯಾಪ್ತಾನಾಂ ಕತಿಪಯ ಪ್ರಕೃತಿಸೂಕ್ಷ್ಮಾಣಾಂ ಕಾಲೋಪಾದಾನತ್ವಂ ಕತಿಪಯಾನಾಂ ಮಹದಾದ್ಯುಪಾದಾನತ್ವಂ ಕತಿಪಯಾನಾಂಚ ಮೂಲರೂಪೇಣಾವಸ್ಥಾನಮಿತ್ಯಂಗೀಕಾರಾತ್ । ನಚೈವಮಲ್ಪಸೂಕ್ಷ್ಮೋಪಚಿತತ್ವಾತ್ಕಾಲಸ್ಯ ವ್ಯಾಪ್ತತ್ವಂ ನಸ್ಯಾದಿತಿವಾಚ್ಯಂ ಉಪಾದಾನೋಪಾದೇಯಯೋಃ ಸಮಪರಿಮಾಣತ್ವ ನಿಯಮಾಭಾವಾತ್ । ಅಲ್ಪಾನಾಮೇವ ಮಹಾಕಾರ್ಯಾತ್ಮನಾ ಪರಿಣಾಮ ಸಂಭವಾತ್ । ಯಥಾ ದಶಸಹಸ್ರಯೋಜನ ಪರಿಮಿತ ಸೂರ್ಯಮಂಡಸ್ಯಪರಿತಃ ಸಪ್ತಕೋಟಿ ಯೋಜನಪರಿಮಿತ ಲೋಕಾಲೋಕ/ ಪ್ರದೇಶ ಪರ್ಯಂತ ವ್ಯಾಪ್ತ ಪ್ರಕಾಶೋಪಾದಾನತ್ವಂ । ಯಥಾವಾವೃತ್ರಾಸುರ ದೇಹಸ್ಯ ಪರಿಮಿತತ್ವೇನ ಸರ್ವೈಃ ದೃಶ್ಯಸ್ಯ ಯುಗಪದೇವ ಪಂಚಾಶತ್ಕೋಟಿ ವಿಸ್ತೀರ್ಣ ಭೂಮಂಡಲವ್ಯಾಪ್ತ ದೇಹೋಪಾದಾನತ್ವಂ । ಯಥಾವಾಲ್ಪ ಪರಿಮಾಣವತೋ ದ್ರೌಪದೀವಸ್ತ್ರಸ್ಯ ಅಪರಿಮಿತ ಪರಿಮಾಣೋಪೇತ ವಸ್ತ್ರೋಪಾದಾನತ್ವಂ ।**

ಸರ್ವತ್ರವ್ಯಾಪ್ತವಾದ ಕೆಲವು ಸೂಕ್ಷ್ಮಪ್ರಕೃತಿಗೆ ಕಾಲೋಪಾದಾನಕತ್ವವು ಕೆಲಸೂಕ್ಷ್ಮಪ್ರಕೃತಿಗೆ ಮೂಲರೂಪದಿಂದಲೇ ಇರುವಿಕೆ ಹೀಗೆ ಅಂಗೀಕರಿಸುತ್ತೇವೆ. ಸೂಕ್ಷ್ಮಪ್ರಕೃತಿಯಿಂದ ಹಿಗ್ಗಿದ ಕಾಲಕ್ಕೆ ವ್ಯಾಪ್ತತೆ ಇಲ್ಲವಾಗಲಿ ಎನ್ನಬಾರದು. ಉಪಾದಾನೋಪಾದೇಯಗಳಿಗೆ ಸಮ ಪರಿಮಾಣನಿಯಮವಲ್ಲವಾದ್ದರಿಂದ ಅಲ್ಪೋಪಾದಾನದಿಂದಲೇ ಮಹಾಪರಿಮಾಣ ಸಂಭವಿಸಿರುವುದು ಕಂಡಿರುವುದರಿಂದ, ದಶಸಹಸ್ರ ಯೋಜನ ಪರಿಮಾಣವುಳ್ಳ ಸೂರ್ಯಮಂಡಲಕ್ಕೆ ಸುತ್ತಲೂ ಏಳುಕೋಟಿ ಯೋಜನವುಳ್ಳ ಲೋಕಾಲೋಕಪ್ರದೇಶ ಪರ್ಯಂತ ವ್ಯಾಪ್ತವಾದ ಪ್ರಕಾಶೋಪಾದಾನಕತ್ವದಂತೆ ಮತ್ತು ವೃತ್ರಾಸುರನ ದೇಹವು ಎಲ್ಲರಿಗೂ ಕಾಣುವಂತೆ ಪರಿಮಿತವಾದುದು. ಅದು ಐವತ್ತುಕೋಟಿ ಪರಿಮಿತ ಭೂಮಂಡಲವನ್ನು ವ್ಯಾಪಿಸಿದ ದೇಹಕ್ಕೆ ಉಪಾದಾನವಾಯಿತು. ಮತ್ತು ಅಲ್ಪಪರಿಮಿತವಾದ ದ್ರೌಪದೀ ದೇವಿಯವಸ್ತ್ರವು ಅಪರಿಮಿತವಾದ ವಸ್ತ್ರಗಳಿಗೆ

ಉಪಾದಾನವಾಯಿತು. ಮತ್ತು

**ಯಥಾ ವಾ ಬಿಡಾಲಸಂಮಿತ ಹನೂಮದ್ದೇಹಸ್ಯ ಮಾಹೇಂದ್ರಪರ್ವತೇ ಮಹಾಕಾಯೋಪಾದಾನತ್ವಂ । ಯಥಾವಾಣೂನಾಂ ಜೀವಾನಾಂ ಪಂಚಾಶತ್ಕೋಟಿ ವಿಸ್ತೀರ್ಣ ಬ್ರಹ್ಮಾಂಡಾಂತಸ್ತದ್ಬಹಿಶ್ಚಯಥಾಯೋಗ್ಯ ವ್ಯಾಪ್ತಪ್ರಕಾಶಾಭಿವ್ಯಂಜಕತ್ವಂ ತದ್ವದುಪಪತ್ತೇಃ। ಕಾಲಸ್ಯ ಸ್ರಷ್ಟುರೀಶ್ವರಸ್ಯಾಚಿಂತ್ಯಶಕ್ತ್ಯಾಚ ಯಾವನ್ನಿರ್ವಾಹಸಂಭವಾಚ್ಚ । ತಸ್ಮಾತ್ ಸಾಧೂಕ್ತಂ ಕಾಲೋಪಾದಾನಂ ಪ್ರಕೃತಿರಿತಿ । ನನುಕಾಲಃ ಕಾಲೇಸ್ತಿನವಾ। ನೇತಿಪಕ್ಷೇ ಅಸತ್ವಂ ಸ್ಯಾತ್ । ದೇಶಕಾಲಸತ್ವಸ್ಯೈವಸತ್ತಾ ರೂಪತ್ವಾತ್ ಆದ್ಯೇ ಆತ್ಮಾಶ್ರಯ ಇತ್ಯತ ಆಹ ।**

ಬೆಕ್ಕಿನ ಪರಿಮಾಣವುಳ್ಳ ಹನುಮಂತನದೇಹಕ್ಕೆ ಮಹೇಂದ್ರ ಪರ್ವತದಲ್ಲಿ ದೊಡ್ಡದೇಹದ ಉಪಾದಾನತೆ, ಅಣುಗಳಾದ ಜೀವರಿಗೆ ಐವತ್ತುಕೋಟಿ ವಿಸ್ತೀರ್ಣದ ಬ್ರಹ್ಮಾಂಡದ ಒಳಗೂ ಹೊರಗೂ ಯೋಗ್ಯಾತಾನುಸಾರ ತಮ್ಮ ಪ್ರಕಾಶ ವ್ಯಾಪಕತೆ ಹೇಗೋ ಹಾಗೆ ಅಚಿಂತ್ಯಾದ್ಭುತಶಕ್ತನಾದ ಪರಮಾತ್ಮನ ಇಚ್ಛೆಯಿಂದ ಕಾಲಕ್ಕೆ ಎಲ್ಲಾ ನಿರ್ವಾಹಕತೆ ಸಂಭವಿಸುತ್ತದೆ. ಆದ್ದರಿಂದ ಕಾಲಕ್ಕೆ ಪ್ರಕೃತಿ ಉಪಾದಾನವೆಂದು ಸರಿಯಾದ ಯುಕ್ತಿಯೂ ಆಗಿದೆ. ಕಾಲವು ಕಾಲದಲ್ಲಿದೆಯೋ ಇಲ್ಲವೋ ? ಇಲ್ಲವೆಂದರೆ ಅಸತ್ ಆಗಬೇಕಾಗುತ್ತದೆ. ದೇಶಕಾಲದಿಂದ ಸತ್ವವೆ ಸತ್ತಾರೂಪವಾದ್ದರಿಂದ, ಇದೇ ಅಂದರೆ ಆತ್ಮಾಶ್ರಯವೆಂಬುದು ಬರುತ್ತದೆ.

**ಪ.ಸಂ. ಸ್ವಗತಃ ।**

**ಇದಾನೀಂ ಪ್ರಾತಃ ಕಾಲಃ ಸಾಯಂಕಾಲಸ್ತೂತ್ತರತ್ರೇತ್ಯನುಭವಾದಿತಿ ಭಾವಃ । ತದುಕ್ತಂ ವೈಶೇಷಿಕಾಧಿಕರಣ ಅನುವ್ಯಾಖ್ಯಾನೇ । ಈಶೋದೇಶಶ್ಚಕಾಲಶ್ಚ ಸ್ವಗತಾಏವ ಸರ್ವದೇತಿ । ಕಾಲಸ್ಯ ಸ್ವಗತತ್ವೇನ ನವಿರೋಧೋಪಿಕಶ್ಚನ । ಸ್ಯಾತ್ಕಾಲಃ ಸರ್ವದೈವೇತಿ ಕಾಲಸ್ಯಸ್ವಗತತ್ವತಇತಿ। ದಿಗ್ವತ್ಕಾಲೋಪಿ ಸರ್ವಾಧಾರಇತ್ಯಾಹ ।**

**ಪ.ಸಂ. ಸರ್ವಾಧಾರಶ್ಚ ।**

**ಇದಾನೀಂ ಘಟ ಇತ್ಯಾದಿ ಪ್ರತ್ಯಯಬಲಾದಿತ್ಯರ್ಥಃ। ತದುಕ್ತಂ ಪ್ರಕೃತ್ಯಧಿಕರಣ ಅನುವ್ಯಾಖ್ಯಾನೇ । ತದೇತದಿತಿ ಸರ್ವಂಚ ದೃಶ್ಯಂವಾ ಸ್ಮೃತಿಗೋಚರಂ । ಸಾಕ್ಷಿಸಿದ್ಧೇನ ಕಾಲೇನಖಚಿತಂಹ್ಯೇವ ವರ್ತತೇ । ತಸ್ಮಾನ್ನತಂವಿನಾ ಕಿಂಚಿತ್ಸ್ಮರ್ತುಂ ದ್ರಷ್ಟುಮಥಾಪಿವೇತಿ ।**

ಹೀಗೆ ವಿಕಲ್ಪಗಳು ಬಂದರೆ ಹೇಳುತ್ತಾರೆ. ಸ್ವಗತವಾದುದೇ ಕಾಲವು. ಈಗ ಹಗಲು ಆಮೇಲೆ ಸಾಯಂಕಾಲ ಹೀಗೆ ಅನುಭವವಿರುವುದರಿಂದ, ವೈಶೇಷಿಕಾಧಿಕರಣ

ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಈಶ, ದೇಶ ಮತ್ತು ಕಾಲ ಈಮೂರು ಸದಾಸ್ವಗತಗಳೇ ಆಗಿರುತ್ತವೆ ಎಂದು, ಆತ್ಮಾಶ್ರಯಾದಿ ವಿರೋಧಗಳು ಬರುವುದಿಲ್ಲ. ಕಾಲಕ್ಕೆ ಸ್ವಗತ ವಿಷಯದಲ್ಲಿ ಪ್ರತ್ಯಕ್ಷಾದಿಗಳು ಇರುವುದರಿಂದ ಮತ್ತು ದಿಕ್ಕಿನಂತೆ ಕಾಲವು ಸರ್ವಾಧಾರವೇ ಆಗಿರುತ್ತದೆ ಎಂದಿರುತ್ತಾರೆ. ಕಾಲವು ಸರ್ವಾಧಾರವೂ ಆಗಿರುತ್ತದೆ. ಇಲ್ಲಿ ಈಗ ಘಟ ಈ ವಸ್ತು ಇತ್ಯಾದಿ ವ್ಯವಹಾರವಿರುವುದರಿಂದ, ಇದನ್ನು ಪ್ರಕೃತ್ಯಧಿಕರಣ ಅನುವ್ಯಾಖ್ಯಾನದಲ್ಲಿ, ಅದು ಇದು, ಆಗ ಈಗ, ಅದೇ ಇದೇ ಇತ್ಯಾದಿ ಪ್ರತ್ಯಕ್ಷ ಸ್ಮೃತಿ ಸಿದ್ಧವಾಗಿ ಕಾಲಖಚಿತವಾಗಿ ಸಾಕ್ಷಿಸಿದ್ಧವೇ ಆಗಿರುತ್ತದೆ. ಆದ್ದರಿಂದಲೇ ಕಾಲವಿಲ್ಲದೇ ಏನೂ ಸ್ಮರಿಸಲು ನೋಡಲು ಶಕ್ಯವಿಲ್ಲವಾದ್ದರಿಂದ ಸರ್ವಾಧಾರವಾದುದು ಕಾಲವು.

**ನನು ಕಾಲಸ್ಯೋತ್ಪತ್ತಿವಿನಾಶವತ್ತ್ವೇ ಸರ್ವಾಸ್ಯಾಪ್ಯಸತ್ತ್ವಂ ಸ್ಯಾತ್। ಅನಾದಿನಿತ್ಯತ್ವ ಪ್ರತಿಪಾದಕ ಪ್ರಮಾಣವಿರೋಧಶ್ಚಸ್ಯಾದಿತ್ಯತ ಆಹ ।**

**ಪ.ಸು. ಕಾಲಪ್ರವಾಹಸ್ತು ನಿತ್ಯಃ ।**

**ಪೂರ್ವಪೂರ್ವಕಾಲಾನಾಮುತ್ಪತ್ತಿವಿನಾಶೇಽಪಿ ಪುನಃಪುನಃ ಕಾಲಾಂತರಾಣಾ-ಮುತ್ಪಾದೇನ ಪ್ರವಾಹವಿಚ್ಛೇದಾಭಾವಾನ್ನಕೋಽಪಿ ದೋಷ ಇತಿಭಾವಃ । ತದುಕ್ತಮನುವ್ಯಾಖ್ಯಾನೇವಿಯತ್ಪಾದೇ । ಕಾಲಪ್ರವಾಹಏವೈಕೋ ನಿತ್ಯೋನತು ವಿಶೇಷವಾನಿತಿ । ತೃತೀಯಸ್ಕಂಧತಾತ್ಪರ್ಯೇಽಪಿ । ಪೂರ್ವಾಪರಾದಿ ಭೇದೇನ ಸಕಾಲಃ ಪರಮೋಮಹಾನಿತಿ। ತಥಾಶಬ್ದಸ್ಯ ಕಾಲಸ್ಯ ದೇಶಾನಂತ್ಯಂಚ ಕಾಲತ ಇತಿ ಚ । ಪ್ರಕೃತಿವತ್ಕಾರ್ಯಮಾತ್ರಕಾರಣ-ಮಿತ್ಯಾಹ ।**

**ಪ.ಸು. ಸರ್ವಕಾರ್ಯೋತ್ಪತ್ತಿಹೇತುಃ ।**

**ಕಾಲಾತ್ಪ್ರಸೂತಿಂ ಮನ್ಯಂತೇ ಕಾಲಾದ್ಭವಂತಿ ಭೂತಾನೀತ್ಯಾದಿ ಶ್ರುತೇಃ ಸ್ವತಏವಕಾಲೇ ವಿಶೇಷಾಂಗೀಕೃತೇಶ್ಚೇತಿ ಭಾಷ್ಯೋಕ್ತೇಃ। ಕಾಲಸ್ಯದ್ರವ್ಯತ್ವಂಚ ವೈಶೇಷಿಕಾಧಿಕರಣಸುಧಾಯಾಂ ಕಾಲೇಶ್ವರಾದೀನಿಹಿ ದ್ರವ್ಯಾಣಿ ಪರಮಮಹತ್ತ್ವವಂತೀಷ್ಯಂತ ಇತ್ಯುಕ್ತಂ ।**

## ॥ ಇತಿ ಕಾಲ ಪ್ರಕರಣಂ ॥

ಕಾಲಕ್ಕೆ ಹುಟ್ಟುವಿನಾಶ ಹೇಳಿದರೆ, ಎಲ್ಲಪದಾರ್ಥಗಳಿಗೂ ಅಸ್ತಿತ್ವ ಬರಬೇಕಾದೀತು. ಅನಾದಿನಿತ್ಯತೆ ಹೇಳುವ ಪ್ರಮಾಣವಿರೋಧವೂ ಬರುತ್ತದೆ ಎಂದರೆ ಹೇಳುತ್ತಾರೆ. ಕಾಲವು ಅನಿತ್ಯವಾದರೂ ಕಾಲಪ್ರವಾಹ ನಿತ್ಯವಾದ್ದರಿಂದ ಯಾವ ಆಪತ್ತೂ ಬರುವುದಿಲ್ಲ. ಮೊದಲ ಕಾಲ ನಷ್ಟವಾದರೂ ಪುನಃ ಪುನಃ ಕಾಲಾಂತರಗಳ ಉತ್ಪತ್ತಿ ಇಂದ ಪ್ರವಾಹ ವಿಚ್ಛೇದವಿಲ್ಲವಾದ್ದರಿಂದ ಯಾವ

ದೋಷವೂ ಬರುವುದಿಲ್ಲ. ಇದನ್ನು ಅನುವ್ಯಾಖ್ಯಾನ ವಿಯತ್ಪಾದದಲ್ಲಿ ಹೇಳಿದೆ. ಕಾಲಪ್ರವಾಹ ಒಂದೇ ನಿತ್ಯವಾದುದು ಅದರಲ್ಲಿ ಏನೂವಿಶೇಷವಿಲ್ಲ. ಹೀಗೆಂದು ತೃತೀಯಸ್ಕಂಧತಾತ್ಪರ್ಯದಲ್ಲಿಯೂ, ಮೊದಲು ನಂತರವೆಂಬ ಭೇದದಿಂದ ಕಾಲವು ಮಹತ್ತರವಾದುದು ಎಂದು, ಹಾಗೂ ಶಬ್ದಕ್ಕೆ ಕಾಲಕ್ಕೆ ದೇಶಕ್ಕೆ ಕಾಲತಃ ಅನಂತ್ಯವೆಂದು ಹೇಳುತ್ತದೆ. ಕಾಲವು ಪ್ರಕೃತಿಯಂತೆ ಕಾರ್ಯಮಾತ್ರಕಾರಣವು ಎಂದು ಹೇಳುತ್ತಾರೆ.

ಕಾಲವು ಸರ್ವಕಾರ್ಯೋತ್ಪತ್ತಿಗೆ ಕಾರಣವು. ಏಕೆಂದರೆ 'ಕಾಲಾತ್ಪ್ರಸೂತಿಮನ್ಯಂತೇ 'ಕಾಲಾತ್‌ಭವಂತಿ ಭೂತಾನಿ' ಅಂದರೆ ಸರ್ವಭೂತಗಳಿಗೂ ಕಾಲದಿಂದಲೇ ಹುಟ್ಟುತ್ತವೆ. ಇತ್ಯಾದಿ ಶ್ರುತಿಗಳಿಂದಲೂ ಮತ್ತು ಭಾಷ್ಯದಲ್ಲಿ ಸ್ವತಃಕಾಲದಲ್ಲಿ ವಿಶೇಷವು ಅಂಗೀಕರಿಸಲ್ಪಟ್ಟಿರುವುದೆಂದಿರುವುದರಿಂದಲೂ, ಇನ್ನು ಕಾಲಕ್ಕೆ ದ್ರವ್ಯತ್ವವನ್ನು ವೈಶೇಷಿಕಾಧಿಕರಣ ಸುಧಾದಲ್ಲಿ ಕಾಲ ಈಶ್ವರಾದಿಗಳಿಗೆ ದ್ರವ್ಯತ್ವ ಪರಮ ಮಹತ್ತ್ವ ಒಪ್ಪಿರುವುದಾಗಿ ಹೇಳಿದೆ.

ಹೀಗೆ ದ್ರವ್ಯದಲ್ಲಿಯ ಹತ್ತೊಂಬತ್ತನೆಯದಾದ ಕಾಲನಿರೂಪಣೆಯು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೨೦. ಪ್ರತಿಬಿಂಬ ಪ್ರಕರಣ

**ಇದಾನೀಂ ಅವಶಿಷ್ಟಂ ಪ್ರತಿಬಿಂಬಂ ನಿರೂಪಯತಿ ।**

**ಪ.ಸಂ. ಪ್ರತಿಬಿಂಬಸ್ತು ಬಿಂಬಾವಿನಾಭೂತಸ್ತತ್ಸದೃಶಃ ।**

**ಬಿಂಬಾಧೀನಸತ್ತಾಕ್ರಿಯಾದಿಮತ್ತ್ವಮಿತ್ಯರ್ಥಃ । ತದುಕ್ತಂ ಗೀತಾಭಾಷ್ಯೇ । ನಹಿ ಪ್ರತಿಬಿಂಬಸ್ಯಕ್ರಿಯಾ । ನಹಿ ಬಿಂಬಕ್ರಿಯಯ್ಯೆವಕ್ರಿಯಾವಾನಿತಿ । ತದರ್ಥಸ್ತು ಪ್ರಮೇಯದೀಪಿಕಾಯಾಮುಕ್ತಃ । ಬಿಂಬಕ್ರಿಯಯಾ ಬಿಂಬಾಧೀನಕ್ರಿಯಯೇತಿ। ನನ್ವೇವಂ ಘಟಪಟಾದಿ ಜಡಸ್ಯಾಪಿ ಪರಮಾತ್ಮಾದಿ ಪ್ರತಿಬಿಂಬತ್ವಾಪತ್ತಿರಿತ್ಯತಆಹ । ತತ್ಸದೃಶ ಇತಿ । ತತ್ಸಾದೃಶ್ಯಂಚ ಕ್ವಚಿತ್ ಜ್ಞಾನಾನಂದಾದಿನಾ ಕ್ವಚಿತ್ಕರಚರಣಾದಿಮತ್ತ್ವಾದಿನಾ ವಿವಕ್ಷಿತಂ । ತೇನಜಡೇನಾತಿವ್ಯಾಪ್ತಿಃ ।**

ದ್ರವ್ಯಗಳಲ್ಲಿ ಕೊನೆಯದೆನಿಸಿದ ಪ್ರತಿಬಿಂಬವನ್ನು ನಿರೂಪಿಸುತ್ತಾರೆ.

ಪ್ರತಿಬಿಂಬವು ಬಿಂಬದಿಂದ ಯಾವಾಗಲೂ ಎಡಬಿಡದೇ ಇರುವುದು ಮತ್ತು ಬಿಂಬ ಸದೃಶವಾದುದು. ಪ್ರತಿಬಿಂಬವೆಂದರೆ ಬಿಂಬದ ಅಧೀನ ಇರುವಿಕೆ ಮತ್ತು ಕ್ರಿಯಾದಿಗಳುಳ್ಳದ್ದು ಎಂದರ್ಥವು. ಇದನ್ನು ಗೀತಾಭಾಷ್ಯದಲ್ಲಿ ಪ್ರತಿಬಿಂಬಕ್ಕೆ ಕ್ರಿಯಾದಿಗಳೇ ಇಲ್ಲ. ಆದರೇ ಕಾಣುವುದೆಲ್ಲವೂ ಬಿಂಬದ್ದೆ ಆಗಿರುತ್ತದೆ ಎಂದು ಹೇಳಿದೆ. ಇದರ ಅರ್ಥವನ್ನೇ ಪ್ರಮೇಯದೀಪಿಕಾದಲ್ಲಿ ಬಿಂಬಕ್ರಿಯೆ ಎಂದರೆ ಬಿಂಬಾಧೀನಕ್ರಿಯೆ ಎಂದರ್ಥವೆಂದು ಹೇಳಿದೆ. 'ಬಿಂಬ ಅವಿನಾಭೂತಃ ಪ್ರತಿಬಿಂಬಃ' ಬಿಂಬವನ್ನು ಎಡಬಿಡದೇ ಇರುವಿಕೆ ಪ್ರತಿಬಿಂಬದ ಲಕ್ಷಣ. ಎಂದರೆ ಸರ್ವವ್ಯಾಪ್ತನಾದ ಪರಮಾತ್ಮನನ್ನು ಘಟಪಟಾದಿಗಳೂ ಎಡಬಿಡದೇ ಇರುವುದರಿಂದ ಅವುಗಳೂ ಪ್ರತಿಬಿಂಬಗಳಾಗಲಿ ಎಂದರೆ ಹೇಳುತ್ತಾರೆ. ತತ್ಸದೃಶಃ ಎಂದು. ಬಿಂಬಸದೃಶವೂ ಆಗಿರಬೇಕು ಎಂದರ್ಥವು. ಸಾದೃಶ್ಯವೆಂದರೂ ಕೆಲವೆಡೆ ಜ್ಞಾನಾನಂದಾದಿಗಳಿಂದ ಕೆಲವೆಡೆ ಕರಚರಣಾದಿಗಳಿಂದ ವಿವಕ್ಷಿತವಾದ್ದರಿಂದ ಜಡಪದಾರ್ಥಗಳು ಪ್ರತಿಬಿಂಬಗಳಾಗುವುದಿಲ್ಲ.

**ಅತಏವ ದೈತ್ಯಾನಾಂ ಅಪಿ ಪರಮಾತ್ಮಪ್ರತಿಬಿಂಬತ್ವಂ ಸಂಭವತಿ । ಚೇತನತ್ವೇನ ಕರಚರಣಾದಿಮತ್ವೇನ ಚ ಸಾದೃಶ್ಯ ಸಂಭವಾತ್ । ತದುಕ್ತಂ ಭಕ್ತಿಪಾದೀಯ ಅನುವ್ಯಾಖ್ಯಾನೇ । ಜೀವಸ್ಯತಾದೃಶತ್ವಂಚ ಚಿತ್ತ್ವಮಾತ್ರಂ ನಚಾಪರಂ । ತಾವನ್ಮಾತ್ರೇಣ ಚಾಭಾಸೋ ರೂಪಮೇಷಾಂ ಚಿದಾತ್ಮನಾಂ। ಕಿಂಚಿತ್ಸುಖಾದಿ ಸಾದೃಶ್ಯಮಪೀಶೇನ ಅಸುರಾನ್ಯತ ಇತಿ । ನಚೈವಂ ಪ್ರತಿಮಾಯಾ ಅಪಿ ಪರಮಾತ್ಮ ಪ್ರತಿಬಿಂಬತ್ವಂ ಸ್ಯಾದಿತಿವಾಚ್ಯಂ । ಇಷ್ಟಾಪತ್ತೇಃ ।**

ಆದುದರಿಂದಲೇ ದೈತ್ಯರಿಗೂ ಪರಮಾತ್ಮನೊಂದಿಗೆ ಪ್ರತಿಬಿಂಬತೆ ಸಂಭವಿಸುವುದರಿಂದ, ಇದನ್ನು ಭಕ್ತಿಪಾದ ಅನುವ್ಯಾಖ್ಯಾನದಲ್ಲಿ ಹೇಳಿದೆ. ಜೀವರಿಗೆ ಪರಮಾತ್ಮನಿಂದ ಸಾದೃಶ್ಯವೆಂದರೆ, ಚೇತನತ್ವ ಮಾತ್ರವು. ಇನ್ನು ಬೇರೆಯಾದ ಸಾದೃಶ್ಯವೂ ಇರುವುದಿಲ್ಲ. ಚೇತನತ್ವ ಮಾತ್ರದಿಂದಲೇ ಪ್ರತಿಬಿಂಬವೆಂಬುದು ಮತ್ತು ಸ್ವಲ್ಪ ಸುಖಾದಿ ಸಾದೃಶ್ಯದಿಂದಲೂ ಪ್ರತಿಬಿಂಬತೆ ಉಂಟು ಆದರೆ, ದೈತ್ಯರ ಹೊರತಾಗಿ ಪ್ರತಿಮೆಗಳಲ್ಲೂ ಪರಮಾತ್ಮನ ಪ್ರತಿಬಿಂಬತೆ ಬರಲಿ ಎಂದರೆ, ಇದು ಆಕ್ಷೇಪವೇ ಅಲ್ಲ ನಮಗೆ ಇಷ್ಟಾಪತ್ತಿಯೇ ಆಗಿರುತ್ತದೆ.

**ಅಮಂತ್ರಜ್ಞಂ ವಟುಂ ದೃಷ್ಟ್ವಾ ಹರಿರ್ಬಿಂಬಾತ್ಪಲಾಯತ ಇತಿ । ಪ್ರತಿಮಾಯಾಂ ಪ್ರತಿಬಿಂಬ ಶಬ್ದಾಪರಪರ್ಯಾಯ ಬಿಂಬಶಬ್ದ ಪ್ರಯೋಗಾತ್ । ಮುಕ್ತಿಯೋಗ್ಯಾನಾಂತು ಜ್ಞಾನಾನಂದಾದಿನಾ ಸಾದೃಶ್ಯಮಸ್ತ್ಯೇವ । ದರ್ಪಣಾದಿಗತ ಮುಖಾದಿ ಪ್ರತಿಬಿಂಬೇಪಿ ಮುಖಾದಿಗತ ನಯನಾದಿ ಸಾದೃಶ್ಯಸ್ಯ ಸತ್ವಾನ್ನತತ್ರಾವ್ಯಾಪ್ತಿಃ । ಪರಮಾತ್ಮರೂಪಾಣಾಂ**

**ಪರಮಾತ್ಮಪ್ರತಿಬಿಂಬತ್ವ ವಾರಣಾಯ ಬಿಂಬಭಿನ್ನತ್ವಮಪಿದೇಯಂ । ತದ್ವಿಭಾಗಮಾಹ ।**

**ಪ.ಸಂ. ಸಚ ದ್ವಿವಿಧಃ । ನಿತ್ಯೋಽನಿತ್ಯಶ್ಚ ।**

**ನಿತ್ಯಪ್ರತಿಬಿಂಬಾನಾಹ**

**ಪ.ಸಂ. ಪರಮಾತ್ಮವ್ಯತಿರಿಕ್ತಾಃ ಸರ್ವೇಽಪಿ ಚೇತನಾಃ ಪರಮಾತ್ಮಪ್ರತಿಬಿಂಬಾನಿತ್ಯಾಃ ।**

**ದರ್ಪಣಾದೌ ಮುಖಪ್ರತಿಬಿಂಬಸ್ಯ ಬಿಂಬಭೂತ ಮುಖನಾಶೇನವಾ ದರ್ಪಣರೂಪೋಪಾಧಿನಾಶೇನವಾ ತತ್ಸನ್ನಿಧಿನಾಶೇನವಾ ನಾಶೋದೃಷ್ಟಃ । ನತಥಾಚೇತನೇಷು ।**

ಮಂತ್ರಗಳನ್ನರಿಯದ ವಟುವನ್ನು (ಪೂಜೆ ಮಾಡುವವನು) ನೋಡಿ ಹರಿಯು ಬಿಂಬದಿಂದ ಓಡಿಹೋಗುತ್ತಾನೆ. ಎಂಬಲ್ಲಿ ಪ್ರತಿಮೆಯಲ್ಲಿಯ ಪ್ರತಿಬಿಂಬ ಶಬ್ದ ಪರ್ಯಾಯವಾಗಿ ಬಿಂಬಶಬ್ದವು ಪ್ರಯುಕ್ತವಾಗಿರುತ್ತದೆ. ಮುಕ್ತಿಯೋಗ್ಯರಿಗೆ ಜ್ಞಾನಾನಂದಾದಿಗಳಿಂದ ಸಾದೃಶ್ಯವಿದ್ದೇ ಇದೆ. ಕನ್ನಡಿಯೇಮೊದಲಾದವುಗಳಲ್ಲಿ ಮುಖಾದಿಗಳು ಅಲ್ಲಿಯ ಕಣ್ಣೇ ಮೊದಲಾದ ಅಂಗಗಳ ಸಾದೃಶ್ಯ ಇರುವುದರಿಂದ ಅವ್ಯಾಪ್ತಿ ಬರುವುದಿಲ್ಲ. ಪರಮಾತ್ಮನ ರೂಪಗಳಲ್ಲಿ ಸಾದೃಶ್ಯವಿರುವುದರಿಂದ ಪ್ರತಿಬಿಂಬಗಳಾಗಲಿ ಎಂಬ ಆಪಾದನೆ ಪರಿಹಾರಕ್ಕಾಗಿ ಬಿಂಬಭಿನ್ನಗಳೆಂದು ವಿಶೇಷಣವು. ಬಿಂಬಸದೃಶಗಳಾಗಿ, ಬಿಂಬಭಿನ್ನವಾದವುಗಳೇ ಪ್ರತಿಬಿಂಬಗಳೆಂದು ಲಕ್ಷಣವು. ಅದರ ವಿಭಾಗವನ್ನು ಹೇಳುತ್ತಾರೆ. ಪ್ರತಿಂಬಿಂಬಗಳು ನಿತ್ಯ ಹಾಗೂ ಅನಿತ್ಯಗಳೆಂದು ಎರಡುವಿಧವು. ಸರ್ವ ಚೇತನಗಳು, ಕನ್ನಡಿಯಲ್ಲಿಯ ಪ್ರತಿಬಿಂಬವು ಬಿಂಬನಾಶವಾದರೂ, ಉಪಾಧಿನಾಶವಾದರೂ, ಸನ್ನಿಧಾನ ನಾಶವಾದರೂ ಪ್ರತಿಬಿಂಬನಾಶವಾಗುತ್ತದೆ. ಆದರೆ ನಿತ್ಯರಾದ ಚೇತನರಲ್ಲಿ ಹಾಗಲ್ಲವಾದ್ದರಿಂದ ಎಂದಿಗೂ ಪ್ರತಿಬಿಂಬ ನಾಶವಿಲ್ಲವಾದ್ದರಿಂದ ಸರ್ವಚೇತನರೂ ನಿತ್ಯಪ್ರತಿಬಿಂಬರೆ.

**ಬಿಂಬಸ್ಯ ಪರಮಾತ್ಮನೋ ವಕ್ಷ್ಯಮಾಣ ಸ್ವರೂಪೋಪಾಧೇಃ ತತ್ಸನ್ನಿಧೇಶ್ಚ ನಿತ್ಯತ್ವೇನ ನಾಶಕಾಭಾವಾನ್ನನಾಶ ಇತಿ ಭಾವಃ । ಜೀವಾನಾಂ ಪೂರ್ವಂ ಜೀವತ್ವೇನ ರೂಪೇಣ ದ್ರವ್ಯತ್ವೋಕ್ತಾವಪಿ ಪ್ರತಿಬಿಂಬತ್ವೇನಾಪಿ ದ್ರವ್ಯತ್ವಂ ಸಂಭವತೀತ್ಯಭಿಪ್ರಾಯೇಣ ಪುನರುಕ್ತಮಿತಿ ದ್ರಷ್ಟವ್ಯಂ । ಪರಮಾತ್ಮ ಪ್ರತಿಬಿಂಬಾ ಇತ್ಯುಪಲಕ್ಷಣಂ । ರಮಾಬ್ರಹ್ಮಾದಿ ಪ್ರತಿಬಿಂಬಾ ಇತ್ಯಪಿಗ್ರಾಹ್ಯಂ। ಅಧಮದೇವಾನಾಮಪಿ ಸ್ವೋತ್ತಮದೇವತಾ ಪ್ರತಿಬಿಂಬತ್ವಂಚ । ತದುಕ್ತಂ ನಿರ್ಣಯೇ । ಆಭಾಸಕೋಽಸ್ಯ ಪವನಃ ಪವನಸ್ಯರುದ್ರಃ ಶೇಷಾತ್ಮಕೋ ಗರುಡಏವಚ ಶಕ್ರಕಾಮೌ । ಏಂದ್ರೇಶಯೋಸ್ತದಪರೇತ್ವನಯೋಶ್ಚ ತೇಷಾಮ್ಯಷ್ಯಾದಯಃ**

**ಕ್ರಮಶಊನಗುಣಾಃ ಶತಾಂಶಾತ್ ।**

ಬಿಂಬನಾದ ಪರಮಾತ್ಮಗೆ ಮುಂದೆ ಹೇಳುವ ಸ್ವರೂಪ ಉಪಾಧಿಗೂ ಆದರ ಸನ್ನಿಧಿಗೂ ನಿತ್ಯತೆ ಇರುವುದರಿಂದ, ಎಂದಿಗೂ ಪರಮಾತ್ಮನ ಪ್ರತಿಬಿಂಬತೆ ಜೀವರಿಗೆ ನಷ್ಟವಾಗುವುದಿಲ್ಲ. ಜೀವರಿಗೆ ಜೀವತ್ವದಿಂದ ದ್ರುಷ್ಯತ್ವ ಎಂದು ತಿಳಿಸಲು ಪುನಃ ಹೇಳಿರುತ್ತದೆ. ಪರಮಾತ್ಮನ ಪ್ರತಿಬಿಂಬಗಳು ಎಂತಲೂ ತಿಳಿಯಬೇಕು. ರಮಾಬ್ರಹ್ಮಾದಿಗಳು ಪ್ರತಿಬಿಂಬರೇ ಆಗಿರುತ್ತಾರೆ. ಆದರೆ ದೇವತೆಗಳೆಲ್ಲಾ ಸೋತ್ತಮದೇವತೆಗಳಿಗೆ ಪ್ರತಿಬಿಂಬಗಳೆಂದು ತಿಳಿಯಬೇಕು. ಇದನ್ನು ತಾತ್ಪರ್ಯ ನಿರ್ಣಯದಲ್ಲಿ ಹೇಳಿರುತ್ತಾರೆ. ಪರಮಾತ್ಮನಿಗೆ ವಾಯುದೇವರು, ವಾಯುವಿಗೆ ಶೇಷಪದವಿಗೆ ಬರುವ ರುದ್ರದೇವರು, ಶೇಷಗರುಡರು, ಇವರಿಗೆ ಇಂದ್ರಕಾಮರು, ಇವರಿಬ್ಬರಿಗೂ ಬೇರೆಯವರಾದ ಋಷ್ಯಾದಿಗಳು. ಹೀಗೆ ಕ್ರಮವಾಗಿ ಒಂದು ನೂರು ಗುಣಗಳಿಂದ ಕಡಿಮೆ ಆದರೂ ಪ್ರತಿಬಿಂಬರು ಎಂದು, ವಿಷ್ಣುವು ಎಂದಿಗೂ ಎಲ್ಲರಿಗೂ ಬಿಂಬನಾಗಿರುವನು ಎಂದು.

**ವಿಷ್ಣೋಃ ಸದೈವೇತಿ । ಆಥರ್ವಣಭಾಷ್ಯೇಽಪಿ । ಪ್ರತಿಬಿಂಬೋ ಹರೇಃ ಪ್ರಾಣಸ್ತಸ್ಯಚಾನ್ಯಾಃ ಕಲಾಃ ಕ್ರಮಾತ್ । ಕಲಾನಾಂ ದೇವತಾ ಅನ್ಯಾದೇವತಾನಾಂ ನರಾದಯ ಇತಿ । ಸ್ತ್ರೀಣಾಮಪ್ಯುತ್ತಮೋತ್ತಮ ಸ್ತ್ರೀಪ್ರತಿಬಿಂಬತ್ವಂ ಪರಂಪರಯಾ ಪರಮಾತ್ಮ ಪ್ರತಿಬಿಂಬತ್ವಂಚ ಜ್ಞೇಯಂ ತದುಕ್ತಂ ನಿರ್ಣಯೇ । ಆಭಾಸಕಾತ್ಪರಮಾತಸ್ಯ ಮರುತ್ಸ್ವರೂಪಾತ್ಶ್ರೇಷ್ಠಾಕಶ್ಯಪಜಾತ್ತದನುಗೀಃ ಶಿವತೋಽವರಿಷ್ಠಾ । ತಸ್ಯಾ ಉಮಾಪಿಪತಿನೀಚ ಗಿರಿಸ್ತಯೋಸ್ತು ಶಚ್ಯಾದಿಕಾಃ ಕ್ರಮಶಏವ ಯಥಾಪುಮಾಂಸ ಇತಿ । ಏವಮಧಮದೇವಾಃ ಪುಮಾಂಸೋಽಪ್ಯುತ್ತಮದೇವಸ್ತ್ರೀಪ್ರತಿಬಿಂಬಭೂತಾಃ । ತದುಕ್ತಂ ಭಕ್ತಿಪಾದೀಯಾನುವ್ಯಾಖ್ಯಾನೇ । ಛಾಯಾ ವಿಷ್ಣೋ ರಮಾತಸ್ಯಾಶ್ಛಾಯಾಧಾತಾವಿಶೇಷತಃ । ತಸ್ಯೇಂದ್ರಕಾಮೌಚ ತಯೋಸ್ತಯೋರನ್ಯೇಽಖಿಲಾ ಅಪಿ ।**

ಅಥರ್ವಣಭಾಷ್ಯದಲ್ಲಿಯೂ ಶ್ರೀಹರಿಗೆ ಪ್ರಾಣನು ಪ್ರತಿಬಿಂಬನು ಅವನಿಗೆ ಬೇರೆ ಕಲಾಗಳು ಕ್ರಮವಾಗಿ ಕಲಾಗಳಿಗೆ ಬೇರೆದೇವತೆಗಳು ದೇವತೆಗಳಿಗೆ ನರರು ಆದಿಯಾಗಿ ಹೀಗೆಂದು ಹೇಳಿದೆ. ಸ್ತ್ರೀಯರಿಗೂ ಸೋತ್ತಮ ಸ್ತ್ರೀ ಪ್ರತಿಬಿಂಬತೆಯೇ ಎಂದು ತಿಳಿಯಬೇಕು. ನಿರ್ಣಯದಲ್ಲಿ ಹೇಳಿದೆ. ಪರಮಾತ್ಮನಿಗೆ ಬ್ರಹ್ಮದೇವರಿಗೂ ಶ್ರೇಷ್ಠಳಾದ ರಮಾದೇವಿ ಪ್ರತಿಬಿಂಬಳು. ಮರುತ್ಸ್ವರೂಪವುಳ್ಳ ಅವಳಿಗೆ ಬ್ರಹ್ಮದೇವರು, ಅವರನ್ನನುಸರಿಸಿ ಸರಸ್ವತಿ ಭಾರತಿಯರು ಶಿವನಿಗಿಂತಲೂ ಶ್ರೇಷ್ಠರು. ಅವಳಿಗೆ ಶಿವ ಪ್ರತಿಬಿಂಬ, ಅವನಿಗೆ ಉಮಾದೇವಿ, ಅವರಿಗೆ

ಸೌಪರ್ಣಿವಾರುಣಿ, ಅವಳಿಗೆ ಶಚೀದೇವಿ. ಹಾಗೆಯೇ ಗಂಡಸರಲ್ಲಿಯೂ ಎಂದು. ಹೀಗೆ ಅಧಮದೇವತೆಗಳಲ್ಲಿ ಉತ್ತಮ ಸ್ತ್ರೀ ಪ್ರತಿಬಿಂಬಗಳೆನಿಸುತ್ತಾರೆ. ಅನುವ್ಯಾಖ್ಯಾನ ಭಕ್ತಿಪಾದದಲ್ಲಿ ವಿಷ್ಣುವಿಗೆ ಛಾಯಾ (ಪ್ರತಿಬಿಂಬ) ರಮಾದೇವಿ, ಅವರಿಗೆ ಬ್ರಹ್ಮದೇವರು, ಅವರಿಗೆ ಗರುಡ ಶೇಷರು, ಅವರಿಗೆ ಇಂದ್ರಕಾಮರು, ಇವರಿಗೆ ಇನ್ನು ಅವರರು ಎಂದು ಹೇಳಿದೆ.

**ಹರೇರ್ಬ್ರಹ್ಮಾ ಸ್ವಗೀಃ ತಸ್ಯಾ ವಿಶೇಷಾವಿಂದ್ರಃ ವಿತಯೋಃ । ಮಾರಶ್ಚಾಭಾಸಕಾಃ ಸರ್ವವಿತಯೋಃ ತದಧೀನತ ಇತಿ । ನಪುಂಸಾಂ ಕಥಂ ಸ್ತ್ರೀಪ್ರತಿಬಿಂಬತ್ವಂ ತತ್ಸಾದೃಶ್ಯಾಭಾವಾದಿತಿ ವಾಚ್ಯಂ । ಚಿತ್ತ್ವೇನ ಕರಚರಣಾದಿನಾ ಚ ಸಂಭವೇ ಸಯಾವತ್ಸಾದೃಶ್ಯಸ್ಯಾನುಪಯೋಗಾತ್ । ತದುಕ್ತಂ ತತ್ರೈವ । ನಾತಿಸಾಮ್ಯಂ ನಿದರ್ಶನಂ ಇತಿ । ನನು ನಪುಂಸಕ ಜೀವಾನಾಂ ಪರಮಾತ್ಮಾದಿ ಪ್ರತಿಬಿಂಬತ್ವಂ ಅಸ್ತಿ ನವಾ । ನೇತಿಪಕ್ಷೇ ಜೀವತ್ವಂನಸ್ಯಾತ್। ಅಂಶಾಏವ ಹೀಮೇಜೀವಾಃ ಮಮೈವಾಂಶೋ ಜೀವಲೋಕ ಇತ್ಯಾದಿ ಶ್ರುತಿಸ್ಮೃತಿಭಿಃ ಪರಮಾತ್ಮಾಂಶತ್ವಸ್ಯ ಸಿದ್ಧತ್ವೇನ ತದ್ವಿರೋಧ ಪ್ರಸಂಗಾತ್। ನಾದ್ಯಃ । ಪರಮಾತ್ಮಾದೇರಪಿ ನಪುಂಸಕತ್ವಾಪತ್ತೇರಿತಿ ಚೇನ್ನ । ಜಾತ್ಯಾ ನಪುಂಸಕಜೀವಾನಾಂ ಏವ ಅಭಾವಾತ್।**

ಶ್ರೀ ಹರಿಗೆ ಬ್ರಹ್ಮನು, ಬ್ರಹ್ಮದೇವರಿಗೆ ಸರಸ್ವತೀ, ಅವರಿಗೆ ಗರುಡ ಶೇಷರು, ಅವರಿಗೆ ಇಂದ್ರ, ಇಂದ್ರನಿಗೆ ಕಾಮ ಹೀಗೆ ಅಧೀನರಾದವರೆಲ್ಲಾ ಪ್ರತಿಬಿಂಬರೇ, ಪುರುಷರಿಗೆ ಸ್ತ್ರೀಬಿಂಬತೆ ಹೇಗೆಂದೆನಬಾರದು. ಜೀವತ್ವ ಕರಚರಣಾದಿಗಳಿರುವಿಕೆ ಇಂದ ಸಾದೃಶ್ಯವಿರುತ್ತದೆ. ಎಲ್ಲ ರೀತಿಯಿಂದಲೂ ಸಾದೃಶ್ಯವು ಅನುಪಯುಕ್ತವೇ ಆಗಿರುತ್ತದೆ. ಅದನ್ನೂ ಇಲ್ಲಿಯೇ ಹೇಳಿದೆ, ಅತಿಸಾಮ್ಯವು ಅಪ್ರಯೋಜಕವೇ ಎಂದು. ನಪುಂಸಕರಿಗೆ ಭಗವತ್ಪ್ರತಿಬಿಂಬತೆ ಇದೆಯೊ? ಇಲ್ಲವೊ? ಇಲ್ಲವೆಂದಲ್ಲಿ ಜೀವತ್ವವೇ ಇಲ್ಲವಾಗಬೇಕಾಗುತ್ತದೆ. ಭಗವದಂಶಗಳೇ ಜೀವರು. ಗೀತಾದಲ್ಲಿ, ಭೂಲೋಕದಲ್ಲಿ ನನ್ನ ಪ್ರತಿಬಿಂಬಗಳೆ (ಅಂಶಗಳು) ಜೀವರೆಂದು ಹೇಳಿರುವುದರಿಂದ, ಅದರ ವಿರೋಧ ಬರುತ್ತದೆ. ಪ್ರತಿಬಿಂಬವೆಂದರೆ ಶ್ರೀಹರಿಗೂ ನಪುಂಸಕತೆ ಬರಬೇಕಾದೀತು. ಎಂದರೆ ಹೀಗೆನಬಾರದು. ಜಾತ್ಯಾ (ಸ್ವರೂಪದಲ್ಲಿ) ನಪುಂಸಕರೇ ಇಲ್ಲವಾದ್ದರಿಂದ.

**ಸ್ವತಃ ಪುಂಸಾಮೇವ ಶಾಪಾದಿನಾ ಪಾಪಾದಿನಾಚ ನಪುಂಸಕತ್ವಂ । ಅತಏವಾರ್ಜುನಸ್ಯೋರ್ವಶೀ ಶಾಪೇನ ಸಂವತ್ಸರಪರ್ಯಂತಂ ಅಜ್ಞಾತವಾಸೇ ಷಂಡರೂಪತ್ವಂ ನಿರ್ಣಯೋಕ್ತಂ । ಷಂಡೋಭವೇತ್ಯೇವ ತಯಾಭಿಶಪ್ತೇ ಪಾರ್ಥೇ ಶಕ್ರೋಽನುಗ್ರಹಂತಸ್ಯ ಚಾಧಾತ್ । ಸಂವತ್ಸರಂ ಷಂಡರೂಪೀಚರಸ್ತ್ವನ ಷಂಡತಾತೇ ಭವಿತೀತಿ ಧೃಷ್ಣುರಿತಿ । ಏವಂ ಪರಮಾತ್ಮನಃ ಸರ್ವಾತ್ಮನಾ**

**ಷಂಡರೂಪ ಅಭಾವ ಏವ । ತದುಕ್ತ್ಮೈತರೇಯಭಾಷ್ಯೇ । ನಚ ನಪುಂಸಕಂ ರೂಪಂ ಭಗವತಃ ಕುತ್ರಚಿದುಕ್ತಂ । ಪ್ರಸಿದ್ಧಮೇವ ರೂಪದ್ವಯಂ । ನಪುಂಸಕರೂಪೇ ಪ್ರಮಾಣಾಭಾವಾತ್ ಏವ । ಸ್ತ್ರೀಪುಂ ರೂಪದ್ವಯಂ ವಿಷ್ಣೋಃ ನತ್ವತೀಯಂ ಕಥಂಚನ ।**

ಸ್ವತಃ ಪುರುಷರೇ ಆದವರಿಗೆ ಶಾಪಾದಿಗಳಿಂದ, ಪಾಪ ಮುಂತಾದವುಗಳಿಂದ ಬರುವುದು ನಪುಂಸಕತೆಯು. ಆದುದರಿಂದಲೇ ಊರ್ವಶೀ ಶಾಪದಿಂದ ಒಂದು ವರುಷಕಾಲಪರ್ಯಂತ ನಪುಂಸಕತೆಯು ಅರ್ಜುನನಿಗೆ ಬಂದಿತು. ಅದೇ ಅಜ್ಞಾತವಾಸದಲ್ಲಿಯ ಷಂಡತನವೆಂದು ನಿರ್ಣಯದಲ್ಲಿ ಹೇಳಿರುತ್ತಾರೆ. ಊರ್ವಶಿಯು ಷಂಡನಾಗೆಂದು ಅರ್ಜುನನಿಗೆ ಶಾಪಕೊಡುತ್ತಿರಲು, ಇಂದ್ರನು ಅನುಗ್ರಹಿಸಿ ಒಂದು ವರುಷ ಮಾತ್ರ ಷಂಡನಾಗಿ ಕಳೆ ಎಂದು ಶಾಪವನ್ನು ಅಲ್ಪೀಕರಿಸಿದನು. ಪರಮಾತ್ಮನಿಗೆ ಸರ್ವಥಾ ಷಂಡತನ ಇರುವುದಿಲ್ಲ. ಎಲ್ಲಿಯೂ ಪರಮಾತ್ಮನಿಗೆ ಷಂಡತೆಯನ್ನು ಹೇಳಿರುವುದು ಯಾರಿಗೂ ಯಾವಾಗಲೂ ಕಂಡಿಲ್ಲವೆಂದು ಐತರೇಯ ಭಾಷ್ಯದಲ್ಲಿ ಹೇಳಿದೆ. ಎರಡು ರೂಪಗಳು ಸರ್ವತ್ರದಲ್ಲೂ ಪ್ರಸಿದ್ಧವು. ನಪುಂಸಕ ರೂಪವು ಎಂದು ಎಲ್ಲೂ ಪ್ರಮಾಣಗಳು ಇರುವುದಿಲ್ಲ. ಪರಮಾತ್ಮನಿಗೆ ಸ್ತ್ರೀ ಮತ್ತು ಪುಂ. ಎಂದು ಎರಡು ರೂಪಗಳೆಂದು ಮತ್ತು ಎಂದಿಗೂ ಮೂರನೇ ರೂಪವಿಲ್ಲವೆಂದು ಪ್ರಸಿದ್ಧಿಯು.

**ಸಾಕ್ಷಾನ್ನಪುಂಸಕಸ್ತ್ವಸ್ಮಾನ್ಮುಕ್ತಭಾಗೀ ನತುಕ್ವಚಿತ್ । ವಿಷ್ಣೋರ್ನಪುಂಸಕಾಕಾರೋ ನೈವಾಸ್ತಿಕ್ವಚನ ಪ್ರಭೋರಿತಿ । ಏವಂ ಪುಂಸಾಂಸ್ತ್ರೀದೇಹ ಪ್ರಾಪ್ತಾವಪಿ ಬಿಂಬರೂಪ ಪುರುಷರೂಪಮೇವ ನಿಜಸ್ವರೂಪಸ್ಯ-ವ್ಯತ್ಯಾಸಾಭಾವಾತ್ । ನಚ ಸ್ತ್ರೀಣಾಂ ಪುಂಸ್ತ್ವೇಕಾಗತಿರಿತಿವಾಚ್ಯಂ । ತಥಾಭಾವಸ್ಯೈವಾಭಾವಾತ್ । ತದುಕ್ತಂ ಗೀತಾತಾತ್ಪರ್ಯೇ । ಯಾಂತಿ ಸ್ತ್ರೀತ್ವಂ ಪುಮಾಂಸೋಪಿ ಪಾಪತಃ ಕಾಮತೋಪಿವಾ । ನಸ್ತ್ರಿಯೋಯಾತಿ ಪುಂಸ್ತ್ವಂತು ಸ್ವಭಾವಾದೇವಯಾಃ ಸ್ತ್ರಿಯಃ । ಪುಂಸಾ ಸಹೈವ ಪುಂದೇಹೇ ಸ್ಥಿತಿಃ ಸ್ಯಾದ್ವರದಾನತಃ । ತಜ್ಜನ್ಮನಿ ವರಾಃ ಪಾಪಜಾತಾಭ್ಯೋನಿಜಸ್ತ್ರಿಯಃ ।**

ಸಾಕ್ಷಾತ್ ನಪುಂಸಕರಂತೂ ಸ್ವರೂಪದಲ್ಲಿಯೇ ಇಲ್ಲ. ಮುಕ್ತಿಯೋಗ್ಯರಂತೂ ಮೊದಲೇ ಇಲ್ಲ. ಪ್ರಭುವಾದ ವಿಷ್ಣುವಿಗೆ ನಪುಂಸಕಾಕಾರ ಎಂದಿಗೂ ಸರ್ವಥಾ ಇಲ್ಲ. ಹೀಗೆ ಪುರುಷರಿಗೆ ಸ್ತ್ರೀ ದೇಹ ಬಂದರೂ ಬಿಂಬ ಪುರುಷನೇ ಆಗಿರುತ್ತಾನೆ. ನಿಜಸ್ವರೂಪಕ್ಕೆ ಎಂದಿಗೂ ವ್ಯತ್ಯಾಸವಿರುವುದಿಲ್ಲ. ಸ್ತ್ರೀಯರಿಗೆ ಪುಂಸ್ತ್ವ ಬಂದರೆ ಗತಿ ಏನೆಂದೆನಬಾರದು. ಹಾಗಾಗುವುದು ಅಸಂಭಾವಿತವೇ ಆಗಿರುತ್ತದೆ. ಗೀತಾ ತಾತ್ಪರ್ಯದಲ್ಲಿ ಹೇಳಿದೆ. ಪುರುಷನಾದವನು (ಗಂಡಸು) ಪಾಪದಿಂದಾಗಲಿ, ಅತಿಕಾಮನಾದಿಂದಾಗಲಿ ಸ್ತ್ರೀತ್ವವನ್ನು ಹೊಂದುತ್ತಾನೆ. ಆದರೇ ಸ್ತ್ರೀಯು ಎಂದಿಗೂ

ಪುರುಷರಾಗುವುದಿಲ್ಲ. ವರಾದಿಗಳಿಂದ ಪುರುಷದೇಹದಲ್ಲಿ ಪುರುಷನಿಂದ ಸಹಿತರಾಗಿರುತ್ತಾರೆ. ಸ್ವರೂಪದಲ್ಲಿ ಸ್ತ್ರೀಯರು ಸ್ತ್ರೀಯರಾಗಿ ಹಾಗೂ ಪುರುಷರು ಪುರುಷನೇ ಆಗಿ ಇದ್ದು ಪಾಪದಿಂದ ಆಯಾಜನ್ಮದಲ್ಲಿ ದೇಹಾಂತರದಲ್ಲಿ ಹುಟ್ಟುತ್ತಾರೆ.

**ಸರ್ವೇಷಾಮಪಿ ಜೀವಾನಾಮಂತ್ಯದೇಹೋಯಥಾನಿಜಃ । ಮುಕ್ತೌ ಚ ನಿಜಭಾವಃ ಸ್ಯಾತ್ಕರ್ಮಭೋಗಾಂತತೋಽಪಿಚೇತಿ । ನಿರ್ಣಯೇಽಪಿ । ಪುಂಸಾಂಸ್ತ್ರೀತ್ವಂ ಭವೇತ್ಕ್ವಾಪಿ ತಥಾಪ್ಯಂತೇಪುಮಾನ್ ಭವೇತ್ । ಸ್ತ್ರೀಣಾಂ ನೈವಹಿ ಪುಂಸ್ತ್ವಂಸ್ಯಾದ್ಬಲವತ್ಕಾರಣೈರಪೀತಿ । ನನ್ವೇವಂ ನವಮಸ್ಕಂಧ ಭಾಗವತೆ ಇಲಾಯಾಃ ಸ್ತ್ರಿಯಃ ಸುದ್ಯುಮ್ನನಾಮಕ ಪುಂದೇಹ ಪ್ರಾಪ್ತಿರುಕ್ತಾ। ಅಸ್ತೌತ್ಷೀದಾದಿಪುರುಷಮಿಲಾಯಾಃ ಪುಂಸ್ತ್ವಕಾಮ್ಯಯಾ । ತಸ್ಮೈಕಾಮವರಂತುಷ್ಟೋ ಭಗವಾನ್ಹರಿರೀಶ್ವರಃ । ದದಾವಿಲಾಭವತ್ತೇನ ಸುದ್ಯುಮ್ನಃ ಪುರುಷರ್ಷಭ ಇತಿ ।**

ಸರ್ವಜೀವರಿಗೂ ಅಂತಿಮ ದೇಹ ಸ್ವರೂಪದ್ದೆ ಆದ ಪುಂ ಅಥವಾ ಸ್ತ್ರೀಯದ್ದೇ ಆಗಿರುತ್ತದೆ. ಮುಕ್ತಿಯಲ್ಲಿ ನಿಜ ಸ್ವರೂಪವೇ ವ್ಯಕ್ತವಾಗುತ್ತದೆ. ಅಲ್ಲಿ ಕರ್ಮಭೋಗವೇ ಇರುವುದಿಲ್ಲ. ನಿರ್ಣಯದಲ್ಲಿಯೂ ಪುರುಷರಿಗೆ ಕ್ವಚಿತ್ ಸ್ತ್ರೀತ್ವ ಬರುತ್ತದೆ ಆದರೂ ಕೊನೆಗೆ ಪುರುಷನೇ ಆಗುವನು, ಸ್ತ್ರೀಯರಿಗೆ ಎಂದಿಗೂ ಪುಸ್ತ್ವ ಬರುವುದಿಲ್ಲ. ಎಷ್ಟು ಬಲವತ್ ಕಾರಣಗಳಿದ್ದರೂ ಹಾಗೆಯೇ ಎಂದು ನವಮಸ್ಕಂಧ ಭಾಗವತದಲ್ಲಿ, ಇಲಾಗೆ ಪುರುಷದೇಹ ಬಂದಿತೆಂದು ಹೇಳಿದೆ. ಬೃಹಸ್ಪತ್ಯಾಚಾರ್ಯರು ಇಲಾಗೆ ಪುಂಸ್ತ್ವ ಬರಲು ಆದಿಪುರುಷನಾದ ಶ್ರೀಹರಿಯನ್ನು ಸ್ತೋತ್ರಮಾಡಿದರು. ಶ್ರೀಹರಿಯು ಇಚ್ಛಾವರವನ್ನು ಕೊಟ್ಟನು. ಮನುಪುತ್ರಿಯಾದ ಇಲಾ ಸುದ್ಯುಮ್ನನಾದನೆಂದು ಹೇಳಿದೆ.

**ತತ್ಕಥಂ ಸ್ತ್ರೀಣಾಂ ಪುಂಸ್ತ್ವಾಭಾವ ಇತಿ ಚೇನ್ನ । ಇಲಾಯಾಃ ಪೂರ್ವಜನ್ಮನಿ ಪುಂಸ್ತ್ವಸ್ಯೈವ ನಿರ್ಣಯಾದಿ ಪ್ರಮಾಣಬಲೇನ ಕಲ್ಪ್ಯತ್ವಾತ್। ತದುಕ್ತಂ ನ್ಯಾಯದೀಪಿಕಾಯಾಂ ನವಮಾಂತೇ। ಇಲಾಯಾಃ ಸುದ್ಯುಮ್ನತ್ವದರ್ಶನಾದಿತಿ। ಅತೋನವಿರೋಧಃ ।**

ಹೇಗೆ ಹೆಂಗಸರಿಗೆ ಪುಂಸ್ತ್ವವಿಲ್ಲವೆಂದು ಹೇಳುವುದು ಯುಕ್ತವಾಗುತ್ತದೆ ಎಂದರೆ, ಹಾಗಲ್ಲ ಇಲಾಗೆ ಪೂರ್ವಜನ್ಮದಲ್ಲಿ ಪುಂಸ್ತ್ವವೇ ಇದ್ದಿತೆಂಬು ನಿರ್ಣಯಾದಿಗಳ ಪ್ರಮಾಣದಿಂದ ಕಲ್ಪಿತವಾಗುತ್ತದೆ. ಇದನ್ನು ನ್ಯಾಯದೀಪಿಕಾದ ನವಮಸ್ಕಂಧಾಂತ್ಯದಲ್ಲಿ ಹೇಳಿರುತ್ತದೆ. ಇಲಾಗೆ ಸುದ್ಯುಮ್ನತ್ವವು ಕಂಡಿರುತ್ತದೆಂದು. ಆದುದ್ಧರಿಂದ ವಿರೋಧವಿಲ್ಲವು,

**ನನು ನಪರಮಾತ್ಮ ಪ್ರತಿಬಿಂಬತ್ವಂ ಸರ್ವಚೇತನಾನಾಂ । ಉಪಾಧೇರ-ಭಾವಾತ್ । ದರ್ಪಣಾದ್ಯುಪಾಧಾವೇವಮುಖಪ್ರತಿಬಿಂಬದರ್ಶನಾತ್ । ನಚಾಂತಃ ಕರಣಮೇವೋಪಾಧಿರಿತಿವಾಚ್ಯಂ। ತಸ್ಯ ಸಂಸಾರಕಾಲೇಸತ್ತ್ವೇಪಿ ಮುಕ್ತೌ ತನ್ನಾಶೇನ ಜೀವನಾಶ ಪ್ರಸಂಗಾತ್ । ಲಕ್ಷ್ಮ್ಯಾಮುಕ್ತಾನಾಂ ಚೋಪಾಧಿ ಸಂಬಂಧಾಭಾವೇನ ಪರಮಾತ್ಮ ಪ್ರತಿಬಿಂಬತ್ವಾಭಾವ ಪ್ರಸಂಗಾಚ್ಚೇತ್ಯತ ಆಹ ।**

**ಪ.ಸಂ. ನಿತ್ಯಾನಿತ್ಯೋಪಾಧಿಯುಕ್ತಾಃ । ಸ್ಯಾಪೇಕ್ಷಯೋತ್ತಮೋತ್ತಮ ಪ್ರತಿಬಿಂಬಾಶ್ಚ ।**

ಪರಮಾತ್ಮನ ಪ್ರತಿಬಿಂಬತೆಯು ಸಕಲಚೇತನರಿಗೂ ಇರುತ್ತದೆ. ಉಪಾಧಿ ಇಲ್ಲವಾದರೂ, ದರ್ಪಣ(ಕನ್ನಡಿ) ರೂಪ ಉಪಾಧಿಯಲ್ಲಿಯೇ ಪ್ರತಿಬಿಂಬ ಕಾಣುವುದರಿಂದ, ಇಲ್ಲಿ ಅಂತಃಕರಣ ಉಪಾಧಿ ಎಂದರೆ, ಹಾಗೆನ್ನಬಾರದು, ಸಂಸಾರದಲ್ಲೇ ಅಂತಃಕರಣವು. ಮೋಕ್ಷದಲ್ಲಿ ಇಲ್ಲವಾದ್ದರಿಂದ ಜೀವವೇನಾಶವಾಗಲೆಂಬ ಪ್ರಸಂಗ ಬರುತ್ತದೆ. ಮತ್ತು ಲಕ್ಷ್ಮೀದೇವಿಗೂ ಮುಕ್ತರಿಗೂ ಉಪಾಧಿವಿಲ್ಲವಾದ್ದರಿಂದ ಪ್ರತಿಬಿಂಬತೆ ಇಲ್ಲವಾಗಲಿ ಎಂಬ ಪ್ರಸಂಗ ಬಂದರೆ ಹೇಳುತ್ತಾರೆ. ಉಪಾಧಿಗಳು ನಿತ್ಯ ಹಾಗೂ ಅನಿತ್ಯಗಳೆಂದು ಎರಡು ವಿಧ. ಸ್ವರೂಪೋಪಾಧಿ ನಿತ್ಯವಾದುದು. ಅಂತಃಕರಣೋಪಾಧಿ ಅನಿತ್ಯವಾದದ್ದು.

**ತಥಾಚ ಅಂತಃ ಕರಣನಾಶೇಪಿ ನಿತ್ಯಸ್ವರೂಪೋಪಾಧೇಃ ಸರ್ವದಾಸತ್ತ್ವಾನ್ನಾಂತಃ ಕರಣನಾಶೇನ ಜೀವನಾಶಃ । ನವಾಲಕ್ಷ್ಮ್ಯಾ ಮುಕ್ತಾನಾಂ ಚ ಪ್ರತಿಬಿಂಬತ್ವಾಭಾವ ಇತ್ಯರ್ಥಃ । ತದುಕ್ತಂ ಗೀತಾಭಾಷ್ಯೇ ।**

ಹೀಗಿರುವುದರಿಂದ ಅಂತಃಕರಣ ನಾಶವಾದರೂ ಸ್ವರೂಪೋಪಾಧಿನಿತ್ಯವಾಗಿರುವುದರಿಂದ, ಅಂತಃಕರಣ ನಾಶ ಪ್ರಯುಕ್ತ ಪ್ರತಿಬಿಂಬತೆ ಇಲ್ಲವಾಗಲಿ, ಜೀವನಾಶವಾಗಲಿ ಎಂಬ ಆಕ್ಷೇಪಗಳಿಗೆ ಅವಕಾಶವಿರುವುದಿಲ್ಲ. ಮತ್ತು ಲಕ್ಷ್ಮೀದೇವಿಗೂ ಪ್ರತಿಬಿಂಬತ್ವ ಇಲ್ಲವಾಗಲೆಂಬ ಆಕ್ಷೇಪಣೆಗೂ ಅವಕಾಶವಿಲ್ಲ. ಇದನ್ನು ಗೀತಾಭಾಷ್ಯದಲ್ಲಿ ಹೇಳಿರುತ್ತದೆ.

**ನಿತ್ಯಶ್ಚೋಪಾಧಿಃ ಕಶ್ಚಿದಸ್ತಿ । ಪ್ರತಿಪತ್ತೌ ವಿಮೋಕ್ಷಸ್ಯ ನಿತ್ಯೋಪಾಧ್ಯಾಸ್ವರೂಪಯಾ । ಚಿದ್ರೂಪಯಾಯುತೋಜೀವಃ ಕೇಶವ ಪ್ರತಿಬಿಂಬಕಃ ಇತಿ । ಚತುರ್ಥಸ್ಕಂಧ ತಾತ್ಪರ್ಯೇಪಿ । ಜೀವೋಪಾಧಿರ್ದ್ವಿಧಾಪ್ರೋಕ್ತಃ ಸ್ವರೂಪಂ ಬಾಹ್ಯಮೇವಚ । ಬಾಹ್ಯೋಪಾಧಿರ್ಲಯಂಯಾತಿ ಮುಕ್ತಾವನ್ಯಸ್ಯತು ಸ್ಥಿತಿರಿತಿ । ನಚ ಸೋಪಾಧಿರನುಪಾಧಿಶ್ಚ ಪ್ರತಿಬಿಂಬೋ ದ್ವಿಧೇಯತೇ । ಜೀವ ಈಶಸ್ಯಾನುಪಾಧಿರಿಂದ್ರಚಾಪೋ ಯಥಾ ರವೇರಿತಿ ಭಾಷ್ಯವಿರೋಧಃ । ತತ್ರ**

**ಜೀವಸ್ಯಾನುಪಾಧಿ ಪ್ರತಿಬಿಂಬತ್ವೋಕ್ತೇರಿತಿ ವಾಚ್ಯಂ । ಗೀತಾಭಾಷ್ಯಾದ್ಯುದಾಹೃತ ಪ್ರಮಾಣಬಲೇನ ತಸ್ಯ ಮುಕ್ತೌ ಬಾಹ್ಯೋಪಾಧ್ಯಭಾವವಿಷಯ ಕತ್ವಾತ್ । ಅತೋ ನ ವಿರೋಧಃ ।**

ನಿತ್ಯೋಪಾಧಿ ಎಂಬುದಿದೆ, ಮೋಕ್ಷಪ್ರಾಪ್ತಿ ಆಗುತ್ತಿರಲಾಗಿ ಸ್ವರೂಪವಾದ ನಿತ್ಯೋಪಾಧಿಯಾದ ಚಿದ್ರೂಪದಿಂದಲೇ ಈಶನಿಗೆ ಪ್ರತಿಬಿಂಬನಾಗುತ್ತಾನೆ. ಹೀಗೆ ಚತುರ್ಥಸ್ಕಂಧ ತಾತ್ಪರ್ಯದಲ್ಲಿಯೂ ಜೀವನ ಉಪಾಧಿ ಎರಡೆಂಬುದಾಗಿ ಹೇಳಿದೆ. ಅದರ ವಿರೋಧ ಬರುವುದಿಲ್ಲವೇ ಎಂದರೆ, ಬರುವುದಿಲ್ಲ. ಗೀತಾಭಾಷ್ಯಾದಿ ಪ್ರಮಾಣಬಲದಿಂದ, ಗೀತಾಭಾಷ್ಯೋಕ್ತಿಗೆ ಮುಕ್ತಿಯಲ್ಲಿ ಬಾಹ್ಯೋಪಾಧಿರಾಹಿತ್ಯ ಪರತೆ ಇರುತ್ತದೆ ಆದ್ದರಿಂದ ವಿರೋಧವಿಲ್ಲ.

**ಅನಿತ್ಯಪ್ರತಿಬಿಂಬಸ್ಯೋದಾಹರಣಮಾಹ ।**

**ಪ.ಸಂ ದರ್ಪಣಾದೌ ಮುಖಾದಿಪ್ರತಿಬಿಂಬಾ ಅನಿತ್ಯಾಃ ।**

**ದರ್ಪಣನಾಶೇನವಾ ಮುಖ್ಯನಾಶೇನವಾ ತತ್ಸಂನಿಧಿನಾಶೇನವಾ ತತ್ತ್ರಯನಾಶೇನವಾ ನಾಶಸಂಭವಾದಿತ್ಯರ್ಥಃ । ನನು ದರ್ಪಣಾದೌ ಮುಖ ಪ್ರತಿಬಿಂಬೋನೋತ್ಪತ್ತಿವಿನಾಶವಾನುಪಾದಾನಾಭಾವಾದಿತ್ಯತ ಆಹ ।**

**ಪ.ಸಂ. ದರ್ಪಣಾದ್ಯುಪಾಧ್ಯುಪಾದಾನಕಾಃ ।**

**ತಥಾಚ ದರ್ಪಣಾದೇರೇವ ಮುಖಾದಿ ಬಿಂಬಸನ್ನಿಧಾನೇನ ಪ್ರತಿಬಿಂಬಾತ್ಮನಾ ಪರಿಣಾಮಸ್ವೀಕಾರಾನ್ನದೋಷ ಇತ್ಯರ್ಥಃ ।**

ಅನಿತ್ಯ ಪ್ರತಿಬಿಂಬದ ಉದಾಹರಣೆ ಹೇಳುತ್ತಾರೆ. ಕನ್ನಡಿಯಲ್ಲಿ ಮುಖಾದಿ ಪ್ರತಿಬಿಂಬಗಳು ಅನಿತ್ಯವಾದವುಗಳು. ಕನ್ನಡಿಯ ನಾಶವಾಗಲಿ, ಮುಖದ ನಾಶವಾಗಲಿ, ಸನ್ನಿಧಾನದ ನಾಶವಾಗಲಿ ಅಥವಾ ಮೂರೂ ನಾಶವಾಗಲಿ ಕನ್ನಡಿಯಲ್ಲಿ ಪ್ರತಿಬಿಂಬವೂ ಇಲ್ಲ, ನಾಶವೂ ಇಲ್ಲ ಪ್ರತಿಬಿಂಬಕ್ಕೆ ಉಪಾದಾನಕಾರಣವಿಲ್ಲದುದರಿಂದ, ಅಂದರೆ ಹೇಳುತ್ತಾರೆ ಕನ್ನಡಿಯ ಪ್ರತಿಬಿಂಬಕ್ಕೆ ಉಪಾಧಿಯೇ ಉಪಾದಾನವಾಗಿರುತ್ತಾದೆ. ಕನ್ನಡಿಯಲ್ಲಿ ಬಿಂಬವಾದ ಮುಖದ ಸನ್ನಿಧಾನವಿದ್ದರೆ ಪ್ರತಿಬಿಂಬವಾಗಿ ಪರಿಣಮಿಸುತ್ತಿದೆ ಇಲ್ಲವಾದರೆ ಉಪಾಧಿಯೇ ಉಪಾದಾನವು. ಆದ್ದರಿಂದ ಯಾವ ದೋಷವೂ ಇಲ್ಲ.

**ನನು ದರ್ಪಣಾದೇರ್ಮುಖಾದಿ ಪ್ರತಿಬಿಂಬೋಪಾದಾನತ್ವಂ ನಯುಕ್ತಂ। ಸ್ಪರ್ಶವತೋದರ್ಪಣಸ್ಯನಿಸ್ಪರ್ಶ ಪ್ರತಿಬಿಂಬೋಪಾದಾನತ್ವಾಯೋಗಾತ್ । ಅನ್ಯಥಾತ್ವಗಿಂದ್ರಿಯೇಣಾಪಿ ದರ್ಪಣಾಗ್ರಹವತ್ತದ್ಗತ ಪ್ರತಿಬಿಂಬಗ್ರಹಾಪತ್ತೇರಿತಿ ಚೇನ್ನ । ದರ್ಪಣಗತಸೂಕ್ಷ್ಮಾವಯವಾನಾಮೇವ ಪ್ರತಿಬಿಂಬಾತ್ಮನಾ ಪರಿಣಾಮ ಸಂಭವಾತ್। ಪ್ರತಿಬಿಂಬಸ್ಯ ದರ್ಪಣೇನಾತ್ಯಂತ**

**ಸಲ್ಲಗ್ನತ್ವೇನ ಕ್ಷೀರಮಿಶ್ರ ನೀರಾದಿವತ್ಪೃಥಗ್ಗ್ರಹಣಾಭಾವ ಸಂಭವಾತ್ । ನನ್ವೇವಂ ದರ್ಪಣಾದ್ಯುಪಾಧಿಪರಿಣಾಮರೂಪತ್ವೇ ಪ್ರತಿಬಿಂಬಸ್ಯ ಬಿಂಬಸನ್ನಿಧಿನಾಶೇನ ತನ್ನಾಶೋನಸ್ಯಾತ । ಸಮವಾಯಿಕಾರಣ ನಾಶೇನವಾಽಸಮವಾಯಿಕಾರಣನಾಶೇನವಾ ಕಾರ್ಯನಾಶೋದೃಷ್ಟಃ ।**

ಇನ್ನು ಕನ್ನಡಿಗೆ ಮುಖಾದಿ ಪ್ರತಿಂಬಿಂಬೋಪಾದಾನತ್ವವು ಯುಕ್ತವಲ್ಲ, ಏಕೆಂದರೆ ಸ್ಪರ್ಶಉಳ್ಳ ಕನ್ನಡಿಗೆ ನಿಶ್ಪರ್ಶಬಿಂಬ ಪ್ರತಿಬಿಂಬೋಪಾದಾನಕತೆ ಇರುವುದಿಲ್ಲ, ಇರುವುದಾದರೆ ಕನ್ನಡಿಯ ಗ್ರಾಹಕತೆಯಂತೆ ತ್ವಗಿಂದ್ರಿಯಕ್ಕೆ ತ್ವಗಿಂದ್ರಿಯ ಗ್ರಾಹಕತೆ ಬರಬೇಕಾದೀತು ಎಂದರೆ, ಹೀಗು ಎನ್ನಬಾರದು. ಕನ್ನಡಿಯಲ್ಲಿರುವ ಸೂಕ್ಷ್ಮ ಅವಯವಗಳಿಗೆ ಪ್ರತಿಬಿಂಬರೂಪವಾಗಿ ಪರಿಣಮಿಸುವಿಕೆ ಯುಕ್ತವಾಗಿರುವುದರಿಂದ ಪ್ರತಿಬಿಂಬವು ಕನ್ನಡಿಯಲ್ಲಿ ನೀರಕ್ಷೀರನ್ಯಾಯದಂತೆ ಪ್ರತ್ಯೇಕಕರಿಸಲು ಶಕ್ಯವಿಲ್ಲವಾದ್ದರಿಂದ, ಪ್ರತಿಬಿಂಬಕ್ಕೆ ಕನ್ನಡಿರೂಪ ಉಪಾಧಿಯ ಪರಿಣಾಮತೆ ಹೇಳುವುದಾದರೆ ಬಿಂಬಸನ್ನಿಧಾನ ನಾಶವಾದರೂ ಪ್ರತಿಬಿಂಬನಾಶವಾಗದಿರಲಿ ಏಕೆಂದರೆ ಸಮವಾಯಿ ಕಾರಣ ನಾಶವೋ ಅಥವಾ ಅಸಮವಾಯಿ ಕಾರಣನಾಶವೋ, ಕಾರ್ಯನಾಶ ಕಾರಣವಾಗಿ ಕಂಡಿರುವುದರಿಂದ. ಎಂದರೆ,

**ನಚಾತ್ರ ಸಮವಾಯಿಕಾರಣಸ್ಯ ದರ್ಪಣಾದೇಃ ಅಸಮವಾಯಿಕಾರಣಸ್ಯ ತದವಯವ ಸಂಯೋಗಸ್ಯಚ ನಾಶೋಽಸ್ತಿ । ಅತೋ ನ ದರ್ಪಣ ಪರಿಣಾಮಃ ಪ್ರತಿಬಿಂಬಇತಿ ಚೇನ್ನ । ಕ್ವಚಿತ್ಸಮವಾಯಿಕಾರಣನಾಶೇನ ಕಾರ್ಯನಾಶಃ ಕ್ವಚಿದಸಮವಾಯಿ ಕಾರಣನಾಶೇನ ಕಾರ್ಯನಾಶಃ ಕ್ವಚಿದುಭಯನಾಶೇನ ಯಥಾಕಾರ್ಯನಾಶೋಂಗೀಕ್ರಿಯತೇ । ತಥಾ ನಿಮಿತ್ತಕಾರಣ ನಾಶೇನ ಅಪಿ ಕಾರ್ಯನಾಶಸ್ಯಾಪೇಕ್ಷಾ ಬುದ್ಧಿನಾಶಜನ್ಯ ದ್ವಿತ್ವನಾಶವತ್ಪಾಕಜ-ಸ್ಥಲೇಽಗ್ನಿಸಂಯೋಗಜನ್ಯ ಘಟಾದಿರೂಪಾದಿ ನಾಶವಚ್ಚಾಂಗೀ ಕರ್ತವ್ಯತ್ವಾತ್ ।**

ಸಮವಾಯಿಕಾರಣವಾದ ಕನ್ನಡಿಯೇ ಮೊದಲಾದವುಗಳ, ಅಸಮವಾಯಿ ಕಾರಣವಾದ ತದವಯವ ಸಂಯೋಗಾದಿಗಳ ನಾಶವಿದೆ. ಕನ್ನಡಿ ಪರಿಣಾಮದ ನಾಶವಿಲ್ಲವಾದ ಕಾರಣ ಪ್ರತಿಬಿಂಬವಿರಲಿ ಅಂದರೆ ಹಾಗು ಅನ್ನಬಾರದು. ಕೆಲವೆಡೆ ಸಮವಾಯಿ ಕಾರಣದಿಂದ ಕಾರ್ಯನಾಶ, ಕೆಲವೆಡೆ ಅಸಮವಾಯಿ ಕಾರಣದಿಂದ ಕಾರ್ಯನಾಶ, ಕೆಲವೆಡೆ ಎರಡೂ ಕಾರಣ ನಾಶದಿಂದ ಕಾರ್ಯನಾಶವು ಹೇಗೋಹಾಗೆ ನಿಮಿತ್ತಕಾರಣನಾಶದಿಂದಲೂ ಕಾರ್ಯನಾಶವು. ಅಪೇಕ್ಷಾಬುದ್ಧಿನಾಶಧಿಂದ ಹುಟ್ಟಿದ ದ್ವಿತ್ವನಾಶದಂತೆ ಅಗ್ನಿಸಂಯೋಗದಿಂದ ಹುಟ್ಟಿದ ಘಟಾದಿರೂಪ ನಾಶದಂತೆ ಅಂಗೀಕರಿಸಬೇಕು. ಸನ್ನಿಧಿನಾಶವಾದರೂ ಪ್ರತಿಬಿಂಬನಾಶವಾಗದಿರಲಿ ಎಂದು

ಆಕ್ಷೇಪ ಯುಕ್ತವಲ್ಲ.

**ನಚೈವಂ ಬಿಂಬಸನ್ನಿಧಿನಾಶೇನ ಪ್ರತಿಬಿಂಬನಾಶೋಸ್ತು । ಪುನಃ ತದ್ವಿಪರೀತಾಕಾರೋ ದರ್ಪಣಸ್ಯ ಕಥಮಿತಿವಾಚ್ಯಂ । ಬಿಂಬ ಸನ್ನಿಧಿ ನಾಶವಶಾದೇವ ಪ್ರತಿಬಿಂಬಗರ್ಭತಾನಾಶಪೂರ್ವಕಂ ದರ್ಪಣಸ್ಯ ತದ್ವಿಪರೀತ ಪರಿಣಾಮ ಸಂಭವಾತ್ । ಯಥಾ ಹಿ ಸುವರ್ಣರಜತಾದೀನಾಂ ಮೂಷಾಗ್ನಿಸಂಯೋಗೇನದ್ರವಾವಸ್ಥಾನಂ ತದಪಾಯೇ ಪುನರ್ಘನೀಭಾವಸ್ತಥಾ ತ್ರಾಪಿ ಸಂಭವಾತ್ । ತದುಕ್ತಂ ತತ್ವನಿರ್ಣಯ ಟೀಕಾಯಾಂ ಬಹುಜೀವವಾದೇ।**

ಹೀಗೆ ಬಿಂಬಸನ್ನಿಧಿ ನಾಶವಾದರೇ ಪ್ರತಿಬಿಂಬನಾಶವಿರಲಿ, ಆದರೆ ಕನ್ನಡಿಯ ವಿಪರೀತಾಕಾರವಾದ ಪ್ರತಿಬಿಂಬ ನಾಶವು ಏಕೆ, ಹೀಗೂ ಎನ್ನಬಾರದು. ಬಿಂಬ ಸನ್ನಿಧಿ ನಾಶಮೂಲಕವೇ ಪ್ರತಿಬಿಂಬಗರ್ಭತಾನಾಶ ಪೂರ್ವಕವೇ ಆದ ಕನ್ನಡಿಯಲ್ಲಿ ವಿಪರೀತ ಪರಿಣಾಮ ಹುಟ್ಟುತ್ತದೆ. ಹೇಗೆ ಬಂಗಾರ ಬೆಳ್ಳಿ ಮುಂತಾದವುಗಳ ಮೂಷಾಗ್ನಿ ಸಂಯೋಗವಾದಾಗ ನೀರಾಗುತ್ತದೆ, ಪುನಃ ಘಟ್ಟಿ ಆಗುತ್ತದೆ, ಅದರಂತೆ ಇಲ್ಲೂ ಸಂಭವಿಸುವುದರಿಂದ ಎಂದು ತತ್ವನಿರ್ಣಯ ಟೀಕಾದಲ್ಲಿಯ ಬಹುಜೀವವಾದದಲ್ಲಿ ಹೇಳಿರುತ್ತಾರೆ.

**ಯಥಾಬಿಂಬಸನ್ನಿಧಿರಾದರ್ಶಪರಿಣತಿಹೇತುರೇವಂ ತದಪಾಯೋಽಪಿ ವಿಪರೀತ ಪರಿಣತಿಹೇತುಃ । ವಿಪರೀತಪರಿಣತೌಚ ಪ್ರತಿಬಿಂಬಗರ್ಭತಾನಶ್ಯತ್ಯೇವೇತಿ । ನನ್ವನಿತ್ಯ ಪ್ರತಿಬಿಂಬಸ್ಯ ದರ್ಪಣಾದ್ಯುಪಾದಾನಕತ್ವಾನ್ನಪೃಥಕ್ ದ್ರವ್ಯತ್ವೇನ ಪರಿಗಣನ ಮುಕ್ತಮಿತಿಚೇತ್ಸತ್ಯಂ । ದರ್ಪಣಾದ್ಯುಪಾದಾನಕತ್ವೇ ಬಹುವಾದಿ ವಿಪ್ರತಿಪತ್ತೇಸ್ತನ್ನಿರಾಸಾಯ ಪೃಥಗುಕ್ತಿಃ ಇತಿ ದ್ರಷ್ಟವ್ಯಂ ।**

ಹೇಗೆ ಬಿಂಬಸನ್ನಿಧಿಯು ಕನ್ನಡಿಯ ಪರಿಣಾಮಕ್ಕೆ ಕಾರಣವೋ ಹಾಗೆ ಬಿಂಬ ಆದರ ಸನ್ನಿಧಿಯ ಅಭಾವವು ವಿಪರೀತ ಪರಿಣಾಮ ಕಾರಣವೆ, ವಿಪರೀತವಾಗಿ (ವಿರುದ್ಧವಾಗಿ) ಪರಿಣಾಮ ಹೊಂದಿದರ ಪ್ರತಿಬಿಂಬಗರ್ಭತೆಯು ನಷ್ಟವೇ ಆಗುತ್ತದೆ. ಸರಿಯೇ ಅನಿತ್ಯವಾದ ಪ್ರತಿಬಿಂಬಕ್ಕೆ ಕನ್ನಡಿಯ ಉಪಾದಾನತೆಯನ್ನು ಹೇಳಿದ ಮೇಲೆ ಪ್ರತಿಬಿಂಬಕ್ಕೆ ದ್ರವ್ಯತೆ ಬಂದೇ ಬರುತ್ತದೆ. ಅಂದಮೇಲೆ ಪ್ರತ್ಯೇಕ ದ್ರವ್ಯತೆಯನ್ನು ಪ್ರತಿಬಿಂಬಕ್ಕೆ ಏಕೆ ಹೇಳಿದಿರೆಂದರೆ ಸತ್ಯವೇ, ಆದರೆ ಕನ್ನಡಿಯೇ ಪ್ರತಿಬಿಂಬ ಉಪಾದಾನವೆಂಬಲ್ಲಿ ಬಹುವಾದಿಗಳ ವಿಪ್ರತಿಪತ್ತಿ ಇದ್ದುದರಿಂದ ಅವರ ನಿರಾಕರಣೆಗಾಗಿ ಪ್ರತಿಬಿಂಬಕ್ಕೆ ಪ್ರತ್ಯೇಕ ದ್ರವ್ಯತ್ವವನ್ನು ಹೇಳಿರುತ್ತಾರೆ.

**ಯದ್ವಾ । ದರ್ಪಣಾದಿಗತ ಪ್ರಕೃತಿ ಸೂಕ್ಷ್ಮಾಣಾಮೇವ ಪ್ರತಿಬಿಂಬೋಪಾದಾನತ್ವಮಸ್ತು। ಪ್ರತಿಬಿಂಬಸ್ಯಕ್ಲೃಪ್ತದ್ರವ್ಯಾನಂತರ್ಭಾವೇಽಪಿ ತಮೋವದ್ದ್ರವ್ಯಾಂತರತ್ವೋಪಪತ್ತೇರಿತಿ ನ್ಯಾಯಾಮೃತೋಕ್ತಿಃ। ಅದೃಷ್ಟಾನಿ**

**ಯಮಾದಿತ್ಯಧಿಕರಣೇ ಚಂದ್ರಿಕಾಯಾಂತು ದೃಶ್ಯಂತೇಚ ಪ್ರತಿಧ್ವನಿ ಪ್ರತಿಸೂರ್ಯಕಚ್ಛಾಯಾ ಪುರುಷೇಂದ್ರಚಾಪಾದೀನಿ ಭಿನ್ನೋಪಾಧಿರಹಿತಾನ್ಯಪಿ ಪ್ರತಿಬಿಂಬಾನೀತಿ । ಪ್ರತಿಬಿಂಬಾದೀನಾಂ ಸ್ವರೂಪಾತಿರೇಕೇಣ ಭಿನ್ನೋಪಾಧಿ ನಿಯಮೋನಾಸ್ತೀತ್ಯುಕ್ತಂ । ತಚ್ಚ ದರ್ಪಣಾದಿ ಸ್ಥೂಲೋಪಾಧಿ ವ್ಯತಿರಿಕ್ತಸ್ಥಲೇ ದ್ರಷ್ಟವ್ಯಂ । ಅನ್ಯಥಾ ತತ್ವನಿರ್ಣಯಟೀಕಾ ವಿರೋಧ ಪ್ರಸಂಗಾತ್ ।**

ಅಥವಾ ಕನ್ನಡಿಯಲ್ಲಿಯ ಪ್ರಕೃತಿ ಸೂಕ್ಷ್ಮಗಳಿಗೆ ಪ್ರತಿಬಿಂಬದ ಉಪಾದಾನತೆ ಇರಲಿ, ಆದರ ಪ್ರತಿಬಿಂಬಕ್ಕೆ ಕ್ಲುಪ್ತದ್ರವ್ಯದಲ್ಲಿ ಅಂತರ್ಭಾವವಿಲ್ಲವಾದರೂ ತಮಸ್ಸಿನಂತೆ ಪ್ರತ್ಯೇಕದ್ರವ್ಯತೆ ಉಂಟೆಂದು ನ್ಯಾಯಾಮೃತದಲ್ಲಿ ಹೇಳಿರುತ್ತದೆ. ಚಂದ್ರಿಕೆಯಲ್ಲಾದರೋ "ಅದೃಷ್ಟಾನಿಯಮಾತ್" ಎಂಬ ಅಧಿಕರಣದಲ್ಲಿ ಕಾಣುತ್ತವೆ, ಪ್ರತಿಧ್ವನಿಯು, ಸೂರ್ಯನ ಪ್ರತಿಪ್ರಕಾಶ, ಪುರುಷನಲ್ಲಿ ನೆರಳು, ಆಕಾಶಬಿಲ್ಲಿ ಕಾಮನಬಿಲ್ಲು ಇತ್ಯಾದಿ ಪ್ರತಿಬಿಂಬಗಳಲ್ಲಿ ಸ್ವರೂಪವಿನಃ ಬೇರೆಯೇ ಇರುವುದು, ಆದ್ದರಿಂದ ಪ್ರತಿಬಿಂಬಕ್ಕೆ ಉಪಾಧಿನಿಯಮವಿಲ್ಲ ಎಂದಿರುತ್ತಾರೆ. ಆದರೆ ಅದು ಕನ್ನಡಿಯೇ ಮೊದಲಾದ ಸ್ಥೂಲೋಪಾದಿ ಇಲ್ಲದ ಸ್ಥಳದಲ್ಲಿ ಎಂದು ತಿಳಿಯಬೇಕು. ಇಲ್ಲವಾದರೆ ತತ್ವನಿರ್ಣಯಟೀಕಾವಿರೋಧ ಬರುತ್ತದೆ.

**ನನು ಪರಮಾತ್ಮನಖೇಷು ರಮಾಬ್ರಹ್ಮಾದಿ ಪ್ರತಿಬಿಂಬಾನಾಂ ಉಪಾದಾನಾಭಾವಇತಿ ಚೇನ್ನ । ನಖಾನಾಂ ನಾನಾರೂಪತ್ವಾತ್ । ತಚ್ಚ ನಾನಾರೂಪತ್ವಂ ರಮಾಬ್ರಹ್ಮಾದಿ ಬಿಂಬಸನ್ನಿಧಿ ವಶಾದಭಿವ್ಯಜ್ಯತೇ । ಯದ್ವಾತತ್ಸಂಬದ್ಧ ಪ್ರಕೃತಿಸೂಕ್ಷ್ಮಾಣಾಂ ಉಪಾದಾನತ್ವ ಸಂಭವಾತ್ । ಮಾಯಾವಾದಿನಸ್ತು । ಬಿಂಬಪ್ರತಿಬಿಂಬಯೋರೈಕ್ಯಮೇವ ನತುಭೇದಃ । ಯೇನದರ್ಪಣಸ್ಯೈವ ಪ್ರತಿಮುಖಾತ್ಮನಾಪರಿಣಾಮಃ ಸ್ಯಾತ್ । ತಥಾಹಿ । ಬಹಿಃ ಸ್ಥಿತೋ ದೇವದತ್ತೋಯಲ್ಲಕ್ಷಣಸ್ತಲ್ಲಕ್ಷಣ ಏವ ವೇಶ್ಮಾಂತಃ ಪ್ರವಿಷ್ಟೋಽಪಿ ಪ್ರತೀಯತೇ ಯಥಾ ತಥಾಬಹಿಃ ಸ್ಥಿತಂ ಮುಖಂ ದರ್ಪಣ ತಲೇಪ್ರವಿಶತಿ । ಅನ್ಯಥಾ ಪ್ರತಿಮುಖೇ ಬಿಂಬಲಾಂಛಿತತ್ವಾನು-ಪಪತ್ತೇರಿತ್ಯಾಹುಃ । ತಾನ್ನಿರಾಕರೋತಿ ।**

**ಪ.ಸಂ. ನತು ಬಿಂಬಾತ್ಮಕಾಃ ।**

ರಮಾಬ್ರಹ್ಮಾದಿ ದೇವತೆಗಳು ಪರಮಾತ್ಮನ ಮುಂಭಾಗದಲ್ಲಿ ನಿಂತು ಸ್ತೋತ್ರ ನಮನಾದಿಗಳು ಮಾಡುವ ಸಂದರ್ಭದಲ್ಲಿ ರಮಾಬ್ರಹ್ಮಾದಿಗಳ ಪ್ರತಿಬಿಂಬವು ಪರಮಾತ್ಮನ ನಖ (ಉಗುರು)ಗಳಲ್ಲಿ ಮೂಡಿದ್ದವೆಂದು ಹೇಳಿದೆ. ಆ ಪ್ರತಿಬಿಂಬಗಳಿಗೆ ಉಪಾಧಿ ಯಾವುದೆಂದರೆ ನಾನಾರೂಪತ್ವ ಇರುವುದರಿಂದ, ಆ ಅನೇಕ ರೂಪಗಳಾದರೋ ರಮಾಬ್ರಹ್ಮಾದಿಗಳ ಸಾನ್ನಿಧ್ಯತೆ ಮೂಲಕ

ಅಭಿವ್ಯಕ್ತಗಳಾಗುತ್ತವೆ. ಅಥವಾ ಅವರ ಸಂಬದ್ಧ ಪ್ರಕೃತಿ ಸೂಕ್ಷ್ಮಗಳಿಗೆ ಪ್ರತಿಬಿಂಬೋಪಾದಾನತೆ ಕೂಡುತ್ತದೆ. ಮಾಯಾವಾದಿಗಳು ಹೇಳುವಂತೆ, ಬಿಂಬಪ್ರತಿಬಿಂಬಗಳಿಗೆ ಐಕ್ಯವೇಆಗಲಿ ಭೇದವಿರುವುದಿಲ್ಲ. ಪ್ರತಿಬಿಂಬಕ್ಕೆ ಕನ್ನಡಿರೂಪವಾಗಿ ಪರಿಣಾಮವು ಇರುತ್ತದೆ. ಅಂದಮೇಲೆ ದೇವದತ್ತನು ಯಾವಲಕ್ಷಣಗಳಿಂದ ಹೊಗಿರುತ್ತಾನೆಯೋ ಅವನು ಮನೆ ಒಳಗೆ ಪ್ರವೇಶಿಸಿದಾಗ ಅದೇ ಲಕ್ಷಣದಿಂದಲೇ ಇರುತ್ತಾನೆ. ಹಾಗೆ ಹೊರಗಿರುವ ಮುಖವು ಕನ್ನಡಿಯಲ್ಲಿ ಪ್ರವಿಷ್ಟವಾಗುತ್ತದೆ. ಅಂದಮೇಲೆ ಪ್ರತಿಬಿಂಬದಿಂದ ಬಿಂಬಕ್ಕೆ ಐಕ್ಯತೆ ಇರುತ್ತದೆ, ಹಾಗಿಲ್ಲವಾದರೆ ಬಿಂಬದ ಲಾಂಛನಗಳೆಲ್ಲವೂ ಬಿಂಬದಲ್ಲಿಲ್ಲವಾಗಬೇಕಾದೀತು. ಎಂದರೆ ಇವೆಲ್ಲವೂ ತಪ್ಪೆಂದು ನಿರಾಕರಿಸುತ್ತಾರೆ.

**ತ.ಸಂ. ನತು ಬಿಂಬಾತ್ಮಕಾಃ ।**

ಪ್ರತಿಬಿಂಬಗಳು ಬಿಂಬಸ್ವರೂಪಗಳಲ್ಲ.

**ಉಭಯೋಃ ಪ್ರತ್ಯಕ್ಷೇಣೈವ ಭೇದದರ್ಶನೇನಾಭೇದಾಯೋಗಾತ್ । ಕಿಂ ಮುಖಂ ದೇವದತ್ತಶರೀರಂ ಪರಿತ್ಯಜ್ಯ ದರ್ಪಣಂ ಪ್ರವಿಶತ್ಯುತತತ್ರೈವಸ್ಥಿತ್ವಾ। ನಾದ್ಯಃ । ದೇವದತ್ತಶರೀರಸ್ಯ ನಿರ್ಮುಖತ್ವಾಪತ್ತೇಃ । ಪ್ರತ್ಯಕ್ಷವಿರೋಧಾಚ್ಚ। ನಾಪಿತತ್ರೈವಸ್ಥಿತ್ವಾಪ್ರವಿಶತಿ । ಅತಿಪ್ರಸಂಗಾಪತ್ತೇಃ । ದೇವದತ್ತಶರೀರಸ್ಯ ಗೇಹೇ ಪ್ರವೇಶಸ್ತುಯುಜ್ಯತಏವ । ತಸ್ಯ ಬಹಿರಭಾವಾತ್ । ದೂಷಣಾಂತರಂ ಚಾಹ ।**

**ತ. ಸಂ. ಅಭಿಮುಖ್ಯಾದಿವಿರುದ್ಧಧರ್ಮಾಧಿಕರಣತ್ವಾಚ್ ।**

ಎರಡೂ ಭಿನ್ನವಾಗಿ ಕಾಣುತ್ತಿರುವುದರಿಂದ ಅಭೇದ ಕೂಡುವುದಿಲ್ಲ. ದೇವದತ್ತನಮುಖವು ದೇಹವನ್ನು ಬಿಟ್ಟು ಕನ್ನಡಿಯಲ್ಲಿ ಪ್ರವೇಶವಾಗುತ್ತದೆಯೇ? ದೇಹದಲ್ಲಿದ್ದುದರ್ಪಣಣವನ್ನು ಪ್ರವೇಶಿಸುತ್ತದೆಯೋ? ಬಿಟ್ಟು ಎಂಬುದು ಸರಿ ಅಲ್ಲ. ದೇವದತ್ತನ ಮುಖವು ಇಲ್ಲವಾಗಬೇಕಾದೀತು. ಮತ್ತು ಪ್ರತ್ಯಕ್ಷವಿರೋಧವು ಬರುತ್ತದೆ. ದೇವದತ್ತನ ದೇಹದಲ್ಲೇ ಇದ್ದು ಕನ್ನಡಿಯನ್ನು ಪ್ರವೇಶಿಸುವುದಿಲ್ಲ, ಅತಿಪ್ರಸಂಗವಾಗುತ್ತದೆ. ದೇವದತ್ತನು ಹೊರಗಿಲ್ಲವಾದ್ದರಿಂದ ಮನೆಒಳಗೆ ಪ್ರವೇಶ. ಮಾಡಿದನೆಂಬುದು ಸರಿಯೆ ಮತ್ತು ದೂಷಣಾಂತರವನ್ನು ಹೇಳುತ್ತಾರೆ. ಎದುರು ಮುಖ್ಯವೇ ಮೊದಲಾದ ವಿರುದ್ಧ ಧರ್ಮಗಳೇ ಇರುವುದರಿಂದ ಅಭೇದ ಕೂಡುವುದಿಲ್ಲ.

**ತಥಾಚ ಪ್ರತ್ಯಕ್ತ್ವಪರಾಕ್ತ್ವರೂಪ ವಿರುದ್ಧಧರ್ಮಾಧಿಕರಣತ್ವಾನ್ನಾ-ನಯೋರಭೇದಇತಿ ಭಾವಃ । ಆದಿಶಬ್ದೇನ ನ್ಯೂನಾಧಿಕ ಪರಿಮಾಣತ್ವೋಪಾಧಿಸಂಯುಕ್ತತ್ವಾಸಂಯುಕ್ತತ್ವ ತ್ವಗಾದಿ**

**ಗ್ರಾಹ್ಯತ್ವಾಗ್ರಾಹ್ಯತ್ವಾದಯೋಗ್ರಾಹ್ಯಾಃ । ಏವಂ ದರ್ಪಣಗತಾನಾಂ ಪರ್ವತ ಕಸ್ತೂರೀಗುಡಾಗ್ನಿ ಪ್ರತಿಬಿಂಬಾನಾಂ ಚಲತ್ವಅಚಲತ್ವ ಸುರಭಿತ್ವಅಸುರಭಿತ್ವ ಮಾಧುರ್ಯಅಮಾಧುರ್ಯ ದಾಹಕತ್ವಾದಾಹಕತ್ವಾದಯೋ ವಿರುದ್ಧ ಧರ್ಮಾ ಊಹ್ಯಾಃ । ಏವಮೇವ ಚಂದ್ರಿಕಾ ನ್ಯಾಯಮೃತಯೋಃ ಉಕ್ತೇಃ ತಾರ್ಕಿಕಾಸ್ತು ಮುಖಸನ್ನಿಧಿವಶಾತ್ತಸ್ಯೈವ ದರ್ಪಣ ಆರೋಪ ಇತ್ಯಾಹುಃ। ತನ್ನ । ಇದಂ ಮುಖಂ ದರ್ಪಣೇನಾಸ್ತೀತಿ ಬಾಧಜ್ಞಾನದಶಾಯಾಂ ಅಪಿ ದರ್ಪಣೇಮುಖ ಪ್ರತೀತೇರ್ಜಾಯಮಾನತ್ವಾತ್ । ಪ್ರತಿಬಿಂಬಾಂತರ-ಮಾಹ ।**

**ಪ.ಸು. ಛಾಯಾಪಿ ಪ್ರತಿಬಿಂಬಭೂತ್ಯೈವ ।**

ಒಟ್ಟಿನಲ್ಲಿ ಎದುರುಬದರು ಎಡಬಲಗಳ ವೈಪರೀತ್ಯತೆ ಹೀಗೆ ವಿರುದ್ಧಧರ್ಮಗಳಿರುವುದರಿಂದ ಬಿಂಬಪ್ರತಿಬಿಂಬಗಳಿಗೆ ಅಭೇದ ಬರಲು ಶಕ್ಯವಿಲ್ಲ. ಆದಿಶಬ್ದದಿಂದ ಪರಿಮಾಣದಲ್ಲಿ ನ್ಯೂನಾಧಿಕ್ಯತೆಗಳು ಕನ್ನಡಿಯಲ್ಲಿ ಅಂಗಾದಿಗಳ ಗ್ರಾಹ್ಯ ಅಗ್ರಾಹ್ಯತೆಗಳು ವ್ಯತ್ಯಸ್ತವಾದವುಗಳೆಂದು ತಿಳಿಯಬೇಕು. ಮತ್ತು ಕನ್ನಡಿಯಲ್ಲಿ ಪ್ರತಿಬಿಂಬಿಸಿದ ಬೆಟ್ಟ, ಕಸ್ತೂರಿ, ಬೆಲ್ಲ, ಅಗ್ನಿ ಇವುಗಳ ಪ್ರತಿಬಿಂಬಗಳಲ್ಲಿಯ ಧರ್ಮಗಳಾದ ಚಲನೆ -ಅಚಲನೆ, ಮಾಧುರ್ಯ-ಅಮಾಧುರ್ಯ, ದಾಹಕತೆ-ಅದಾಹಕತೆ ಮುಂತಾದ ಅವುಗಳ ವಿರುದ್ಧಧರ್ಮಗಳುಳ್ಳವುಗಳೇ ಆಗಿರುತ್ತವೆ. ಇದನ್ನೇ ಚಂದ್ರಿಕಾ ನ್ಯಾಯಾಮೃತಾದಿಗಳಲ್ಲಿ ಹೇಳಿರುತ್ತದೆ.

ತಾರ್ಕಿಕರು ಮುಖಸನ್ನಿಧಾನದಿಂದ ಆ ಮುಖದ ಆರೋಪವೇ ಕನ್ನಡಿಯಲ್ಲಿ ಎನ್ನುತ್ತಾರೆ. ಅದು ತಪ್ಪಾದುದು, ಈ ಮುಖವು ಕನ್ನಡಿಯಲ್ಲಿಲ್ಲ ಎಂಬ ಬಾಧಜ್ಞಾನ ಸಮಯದಲ್ಲೂ ಕನ್ನಡಿಯಲ್ಲಿ ಮುಖದ ಪ್ರಸಿದ್ಧಿ ಹುಟ್ಟುವುದರಿಂದ, ಬಾಧಜ್ಞಾನವಿರುವುದರಿಂದ ಪ್ರತಿಬಿಂಬವು ಆರೋಪ ವಿಷಯವಲ್ಲ. ಇನ್ನು ಪ್ರತಿಬಿಂಬಗಳನ್ನು ಹೇಳುತ್ತಾರೆ. ನೆರಳು ಸಹಾ ಪ್ರತಿಬಿಂಬವಾದವುಗಳೇ ಎಂದು.

**ಉಪಲಕ್ಷಣಮೇತತ್ । ಪರಿವೇಷೇಂದ್ರಚಾಪ ಪ್ರತಿಸೂರ್ಯ ಪ್ರತಿಧ್ವನಿ ಸ್ಫಟಿಕಲೌಹಿತ್ಯಾದಯೋ ದ್ರಷ್ಟವ್ಯಾಃ । ತದುಕ್ತಂ ನ್ಯಾಯಾಮೃತೇ ಬಿಂಬಪ್ರತಿಬಿಂಬೈಕ್ಯಭಂಗೇ । ಪ್ರತಿಬಿಂಬಮಪಿ ಹಿ ಛಾಯಾವಿಶೇಷ ಇತಿ । ನನು ಛಾಯಾಯಾ ಉತ್ಪತ್ತಿಮತ್ತ್ವ ಉಪಾದಾನಾನುಪಪತ್ತಿಃ । ಪ್ರತಿಬಿಂಬವದ್ದರ್ಪಣಾದ್ಯುಪಾಧೇಃ ಅಭಾವಾದಿತ್ಯತ ಆಹ ।**

**ಪ.ಸು. ನತ್ವನ್ಯಾ ಆಲೋಕೋಪಾದಾನಾಭೂತ್ಯೈವ ।**

ಇನ್ನು ಹೆಚ್ಚಾಗಿ ತಿಳಿಯುವುದು, ಪರಿವೇಷ ಚಂದ್ರಗೆ ಸುತ್ತಲೂ ಕಟ್ಟಿರುವ

ಕೋಟೆ, ನೀರಿನಲ್ಲಿಯ ಸೂರ್ಯನ ಬಿಂಬ, ಕಾಮನಬಿಲ್ಲು, ಪ್ರತಿಧ್ವನಿ, ಸ್ಫಟಿಕ ಲೌಹಿತ್ಯ ಇತ್ಯಾದಿಗಳೂ ಛಾಯೆಯೇ ಪ್ರತಿಬಿಂಬಗಳೇ ಎಂದು ತಿಳಿಯಬೇಕು. ಇದನ್ನು ನ್ಯಾಯಾಮೃತದಲ್ಲಿ ಬಿಂಬ ಪ್ರತಿಬಿಂಬೈಕ್ಯಭಂಗದಲ್ಲಿ ಪ್ರತಿಬಿಂಬವೂ ಛಾಯಾವಿಶೇಷವೇ ಎಂದು ಹೇಳಿರುತ್ತದೆ. ನೆರಳಿಗೆ ಹುಟ್ಟು ಉಪಾದಾನಗಳು ಯುಕ್ತವಾಗುವುದಿಲ್ಲ. ಪ್ರತಿಬಿಂಬದಂತೆ ಕನ್ನಡಿಯೇ ಮೊದಲಾದ ಉಪಾಧಿಗಳಿಲ್ಲವಾದ್ದರಿಂದ ಎಂದರೆ ಹೇಳುತ್ತಾರೆ, ಆಲೋಕ (ಬೆಳಕು) ಉಪಾದಾನವಾದುದು ಬೇರೆ ಯಾವ ಉಪಾದಾನ ಉಪಾಧಿಯೂ ಇರುವುದಿಲ್ಲ.

**ತದನ್ವಯ ವ್ಯತಿರೇಕಾನುವಿಧಾನಾದಿತ್ಯರ್ಥಃ । ಯದ್ವೋಪಾದಾನಾಂತರಂವಾ ತತ್ರಕಲ್ಪ್ಯಂ । ಅನ್ಯಥಾಕಾರ್ಯಾನುಪಪತ್ತೇಃ । ತದುಕ್ತಂ ನ್ಯಾಯಾಮೃತೇ। ಛಾಯಾದಾವಿವ ಕಾರಣಸ್ಯ ಕಲ್ಪ್ಯತ್ವಾತ್ । ಕ್ಲೃಪ್ತದ್ರವ್ಯಾನಂತರ್ಭಾವೇ ತಮೋವದ್ದ್ರವ್ಯಾಂತರತ್ವ ಸಂಭವಾಚ್ಚೇತಿ । ಚಂದ್ರಿಕಾಯಾಮಪಿ। ಪ್ರತಿಬಿಂಬಸ್ಯೋಪಾದಾನಂತ್ವಂಧಕಾರ ಪರಿವೇಷೇಂದ್ರಚಾಪಾದಾ-ವಿವಾಸ್ಪರ್ಶನಂ ಕಿಂಚಿದ್ದ್ರವ್ಯಂ ಕಾರ್ಯಬಲಾತ್ಕಲ್ಪ್ಯಂ । ನಹ್ಯಸ್ಮಾಕಂ ತಾರ್ಕಿಕಾಣಾಂ ಇವ ನವೈವ ದ್ರವ್ಯಾಣೀತಿ ನನು ಛಾಯಾಯಾ ಅಚೇತನತ್ವಾತ್ಕಥಂ ಛಾಯಾವಿಷ್ಣೋಃ ರಮಾ ತಸ್ಯಾಃ । ಇತ್ಯಾದೌ ಚೇತನೇಛಾಯಾ ಶಬ್ದಪ್ರಯೋಗ ಇತ್ಯತ ಆಹ ।**

**ಪ.ಸಂ. ಕ್ವಚಿಚ್ಚೇತನೇಪಿ ಛಾಯಾಶಬ್ದಪ್ರಯೋಗಃ ಪ್ರತಿಬಿಂಬ-ತ್ವಸಾಮ್ಯಾದ್ಭವತೀತಿ ।**

## ॥ ಇತಿ ಪ್ರತಿಬಿಂಬ ಪ್ರಕರಣಂ ॥

**ಇತಿ ಶ್ರೀ ಪದ್ಮನಾಭಸೂರಿ ವಿರಚಿತೇ ಪದಾರ್ಥಸಂಗ್ರಹವ್ಯಾಖ್ಯಾನೇ ಮಧ್ವಸಿಂದ್ಧಾಂತಸಾರೇ ದ್ರವ್ಯನಿರೂಪಣಂ ಸಮಾಪ್ತಂ ॥**

ಆಲೋಕ (ಬೆಳಕು) ಇದ್ದಲ್ಲಿ ಛಾಯಾದಿಗಳು ಇಲ್ಲದೇ ಇಲ್ಲ, ಹೀಗೆ ಅನ್ವಯ ವ್ಯತಿರೇಕದ ಅನುಭವದಿಂದ ಆ ಲೋಕಕ್ಕೆ ಉಪಾದಾನತೆ ತಿಳಿಯಬೇಕು. ಅಥವ ಉಪಾದಾನಾಂತರವನ್ನಾದರು ಅಲ್ಲಿ ಕಲ್ಪಿಸಬೇಕು. ಇಲ್ಲವಾದರೆ, ಕಾರ್ಯವಾಗದೇ ಇರಲೆಂದು ಅನುಪಪತ್ತಿಯು (ಅಯುಕ್ತತೆಯು) ಬರುತ್ತದೆ. ನ್ಯಾಯಾಮೃತದಲ್ಲಿ ಇದನ್ನು ಹೇಳಿರುತ್ತಾರೆ. ಛಾಯಾ(ನೆರಳು)ದಿಗಳಂತೆ ಕಾರಣವನ್ನು ಕಲ್ಪಿಸಬೇಕು, ಪ್ರತಿಬಿಂಬವು ಕ್ಲುಪ್ತ ದ್ರವ್ಯದಲ್ಲಿ ಅಂತರ್ಭಾವ ಆಗದ ಪಕ್ಷದಲ್ಲಿ ತಮಸ್ಸಿನಂತೆ ಮತ್ತೊಂದು ದ್ರವ್ಯವಾಗಿ ಪರಿಗಣಿಸಬೇಕು. ನಮಗೆ ತಾರ್ಕಿಕರಂತೆ ಒಂಭತ್ತೇ ದ್ರವ್ಯವೆಂಬ ನಿಯಮವು ಇಲ್ಲ. ನೆರಳಿಗೆ ಅಚೇತನತೆ ಇರುವುದರಿಂದ, ವಿಷ್ಣುವಿಗೆ ರಮಾದೇವಿಯು ಛಾಯೆ ಎಂಬುದು ಹೇಗೆ ? ಚೇತನದಲ್ಲಿ ಛಾಯಾಶಬ್ದ ಪ್ರಯೋಗ

ಹೇಗೆ ಎಂದರೆ, ಕೆಲವೆಡೆಯಲ್ಲಿ ಪ್ರತಿಬಿಂಬದಲ್ಲೂ ಛಾಯಾಶಬ್ದ ಪ್ರಯೋಗವಿದ್ದ, ನೆರಳಿಗೂ ಪ್ರತಿಬಿಂಬಕ್ಕೂ ಸಾಮ್ಯತೆ ಇರುವುದರಿಂದ ಎಂದು ತಿಳಿಯಬೇಕು.

ಹೀಗೆ ದ್ರವ್ಯದಲ್ಲಿ ಇಪ್ಪತ್ತನೆಯದಾದ ಬಿಂಬಪ್ರಬಿಂಬ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

❋ ❋ ❋ ❋ ❋ ❋ ❋ ❋

॥ ಶ್ರೀ ಗುರುಭ್ಯೋನಮಃ ॥

## ಗುಣನಿರೂಪಣ ಪ್ರಾರಂಭಃ

# ೧೧.ರೂಪ ಪ್ರಕರಣ

**ತತ್ರಾದೌ ಗುಣಸಾಮಾನ್ಯ ಲಕ್ಷಣ ಮಾಹ ।**

**ಪ.ಸಂ. ದೋಷಭಿನ್ನತ್ವಂ ಗುಣತ್ವಂ ।**

**ನಚೈವಂ ಗುಣಭಿನ್ನತ್ವ ದೋಷತ್ವಮಿತಿ ಪರಸ್ಪರ ಸಾಪೇಕ್ಷತ್ವಾದನ್ಯೋನ್ಯಾಶ್ರಯಃ ಇತಿ ವಾಚ್ಯಂ । ದುಷ್ಟವ್ಯವಹಾರ ಜನಕತ್ವಂ ದೋಷತ್ವಮಿತ್ಯಂಗೀಕಾರಾದಿತಿಭಾವಃ । ಪ್ರಥಮೋದ್ದಿಷ್ಟಸ್ಯರೂಪಸ್ಯ ಲಕ್ಷಣಮಾಹ । ಶುಕ್ಲಾದೀತಿ ।**

**ಪ.ಸಂ. ಶುಕ್ಲಾದಿವ್ಯ ವ್ಯವಹಾರ ಹೇತುರ್ಗುಣೋರೂಪಂ । ತಚ್ಚ ಶುಕ್ಲನೀಲಪೀತ ರಕ್ತಹರಿತ, ಕಪಿಲಚಿತ್ರ, ಭೇದಾತ್ಸಪ್ತವಿಧಂ ೧ ಪುನರ್ದ್ವಿವಿಧಂ । ನಿತ್ಯ ಮನಿತ್ಯಂಚ । ಪುನರ್ದ್ವಿವಿಧಂ । ಉದ್ಭೂತಮನುದ್ಭೂತಂ ಚ ।**

**ತದ್ವಿಭ ಜತಿ । ತಚ್ಚೇತಿ । ನಿತ್ಯಾನಾಂ ರೂಪಾಣಾಂ ಆಶ್ರಯ ಮಾಹ । ತತ್ರೇತಿ । ತದುಕ್ತಂ ಛಾಂದೋಗ್ಯಭಾಷ್ಯೇ ।**

ಮೊದಲು ಗುಣ ಸಾಮಾನ್ಯ ಲಕ್ಷಣವನ್ನು ಹೇಳುತ್ತಾರೆ. ದೋಷ ಭಿನ್ನತೆಯೇ ಗುಣಲಕ್ಷಣವು, ಹಾಗಾದರೆ ಗುಣ ಭಿನ್ನತೆ ದೋಷವು ಹೀಗಾಗಿ ಗುಣದೋಷಗಳ ಲಕ್ಷಣವು ಪರಸ್ಪರ ಸಾಪೇಕ್ಷಗಳಾಗಿ ಅನ್ಯೋನ್ಯಾಶ್ರಯ ದೋಷ ಬರುವುದಿಲ್ಲವೇ? ಎಂದರೆ, ಇಲ್ಲಾ ದುಷ್ಟ ವ್ಯವಹಾರೋತ್ಪಾದಕತೆಯೇ ದೋಷವೆಂದು ಅಂಗೀಕರಿಸಿರುವುದರಿಂದ. ಪ್ರಥಮದಲ್ಲಿ ಉದ್ದಿಶ್ಯವಾದ ರೂಪಲಕ್ಷಣವನ್ನು ಹೇಳುತ್ತಾರೆ. ಬಿಳುಪೇ ಮೊದಲಾದ ಬಣ್ಣ ವ್ಯವಹಾರ ಕಾರಣ, ರೂಪಲಕ್ಷಣವು. ಆರೂಪವು ಬಿಳಿ, ಕಪ್ಪು, ನೀಲಿ, ಕೆಂಪು, ಹಳದಿ, ಹಸಿರು, ಚಿತ್ರ (ಎಲ್ಲಾ ಮಿಶ್ರವಾದುದು) ಹೀಗೆ ಏಳುವಿಧವಾಗಿರುತ್ತದೆ. ಮತ್ತೂ ಎರಡು ವಿಧವು ನಿತ್ಯವೆಂದೂ ಅನಿತ್ಯವೆಂದೂ, ಮತ್ತು ಎರಡು ವಿಧವು ಕಣ್ಣಿಗೆ ಕಾಣುವುದು, ಹಾಗೂ ಕಾಣಿಸದಿರುವುದು ಎಂದು ನಿತ್ಯರೂಪಗಳ ಆಶ್ರಯವನ್ನು ತಿಳಿಸುತ್ತಾರೆ.

**ಪ.ಸಂ. ತತ್ರಶುಕ್ಲಪೀತರಕ್ತಾದಿ ಸಪ್ತಾನ್ಯಪಿ ನಿತ್ಯಾನಿರೂಪಾಣಿ ಪರಮಾತ್ಮನಃ ।**

ನಿತ್ಯಗಳಾದ ಏಳೂರೂಪಗಳೂ ಪರಮಾತ್ಮನಲ್ಲಿ ಇದನ್ನು ಛಾಂದೋಗ್ಯ ಭಾಷ್ಯದಲ್ಲಿ ಹೇಳಿರುತ್ತಾರೆ.

**ಶುಕ್ಲೋಽಕ್ತೋಽಲೋಹಿತಾಕಾರೋ ವಾಸುದೇವಃ ಪರಃ ಪುಮಾನ್ । ಸಏವ**

**ಸೂರ್ಯಲೋಹಿತ್ಯೇ ಪ್ರಾಚ್ಯರಶ್ಮಿಷು ಸಂಸ್ಥಿತಃ । ಸಂಕರ್ಷಣಃ ಶುಕ್ಲವರ್ಣೋಯಜುರ್ವೇದೋದಿತಃ ಪ್ರಭುಃ । ಶುಕ್ಲವರ್ಣೇಚ ಸೂರ್ಯಸ್ಯ ದಕ್ಷರಶ್ಮಿಷು ಸಂಸ್ಥಿತಃ । ಪ್ರದ್ಯುಮ್ನಃ ಶಾಮವರ್ಣಸ್ತು ಸಾಮವೇದೋದಿತಃ ಪ್ರಭುಃ । ಪ್ರತ್ಯಗ್ರಶ್ಮಿಷು ಸೂರ್ಯಸ್ಯ ಶ್ಯಾಮವರ್ಣೋಽಪಿ ಚಸ್ಥಿತಃ । ಅನಿರುದ್ಧಃ ಸುನೀಲಶ್ಚ ಇತಿಹಾಸ ಪುರಾಣಯೋಃ । ಅಥರ್ವವೇದೇಚೋಕ್ತಃ ಸನ್ನುದಗ್ರಶ್ಮಿಷು ಸಂಸ್ಥಿತಃ । ಸಂಕೃಷ್ಣೇ ಸೂರ್ಯರೂಪೇಚ ಮಧ್ಯೇ ನಾರಾಯಣ ಪ್ರಭುಃ । ಊರ್ಧ್ವ ರಶ್ಮಿಷು ಸಂಸ್ಥಶ್ಚ ಪ್ರೋದ್ಯದಾದಿತ್ಯಸಪ್ರಭ ಇತಿ ।**

ಕೆಂಪಾಕಾರನಾದ ವಾಸುದೇವನು ಸರ್ವ ಪುರುಷೋತ್ತಮನೆಂದು ಋಗ್ವೇದಪ್ರತಿಪಾದ್ಯನೆಂದು, ಅವನೇ ಸೂರ್ಯನ ಕೆಂಪಾದ ರಶ್ಮಿಗಳಲ್ಲಿ ಸನ್ನಿಹಿತನಾಗಿ ಪೂರ್ವ ಕಿರಣಗಳಲ್ಲಿದ್ದಾನೆ. ಯಜುರ್ವೇದ ಪ್ರತಿಪಾದ್ಯನಾದ ಸಂಕರ್ಷಣನು ಸೂರ್ಯನ ಬಿಳೀ ಕಿರಣಗಳಲ್ಲಿದ್ದು ದಕ್ಷಿಣರಶ್ಮಿಗಳಲ್ಲಿದ್ದಾನೆ. ಸಾಮವೇದ ಪ್ರತಿಪಾದ್ಯನಾದ ಪ್ರದ್ಯುಮ್ನನು ಶಾಮವರ್ಣನಾಗಿ ಸೂರ್ಯನ ಪಶ್ಚಿಮ ಕಿರಣಗಳಲ್ಲಿದ್ದಾನೆ. ಇತಿಹಾಸ ಪುರಾಣ ಪ್ರತಿಪಾದ್ಯನಾದ ಅನಿರುದ್ಧನು ನೀಲವರ್ಣನಾಗಿದ್ದಾನೆ. ಅಥರ್ವಣ ಪ್ರತಿಪಾದ್ಯನಾದ ಅದೇ ಅನಿರುದ್ಧನು ಉತ್ತರ ಕಿರಣಗಳಲ್ಲಿರುತ್ತಾನೆ. ಸೂರ್ಯನ ಕಪ್ಪಾದ ಮೇಲಿನ ಕಿರಣಗಳ ಮಧ್ಯದಲ್ಲಿ ನಾರಾಯಣ ರೂಪಿಯಾಗಿ ಉದಯಿಸುವ ಸೂರ್ಯನಂತೆ ಪ್ರಕಾಶಿಸುತ್ತಾನೆ. ಹೀಗೆ ಸೂರ್ಯಕಿರಣಗಳಲ್ಲಿ ಪರಮಾತ್ಮನು ಐದು ವರ್ಣಗಳಲ್ಲಿ ವಾಸುದೇವಾದಿ ಐದು ರೂಪಗಳನ್ನೇ ಹೇಳಿರುತ್ತಾರೆ.

**ನಾರಾಯಣಾಖ್ಯಂ ಸೌಷುಮ್ನಂ ಮಧ್ಯಸ್ಥಂ ರಕ್ತವರ್ಣಕಂ । ಶುಕ್ಲಂತು ವಾಸುದೇವಾಖ್ಯಂ ನಾದಿನ್ಯಾಮಗ್ರತಸ್ಥಿತಂ । ಪಿಂಗಳಾಖ್ಯಂ ಪಿಂಗಲಂಚ ರೂಪಂ ಸಂಕರ್ಷಣಾಭಿಧಂ । ಪಶ್ಚಿಮೇ ವಜ್ರಿಕಾಯಾಂಚ ಪೀತಂ ಪ್ರದ್ಯುಮ್ನ ನಾಮಕಂ। ಇಡಾಯಾಮನಿರುದ್ಧಾಖ್ಯಂ ನೀಲಂ ರೂಪಂ ವ್ಯವಸ್ಥಿತಮಿತಿ । ಬೃಹದ್ಭಾಷ್ಯೇಽಪಿ । ಶುಕ್ಲಂತು ವಾಸುದೇವಾಖ್ಯಂ ಅನಿರುದ್ಧಂ ಸುನೀಲಕಂ। ಸಂಕರ್ಷಣಂ ಪಿಂಗಳಂ ಚ ಪ್ರದ್ಯುಮ್ನಂ ಹರಿತಂಮತಂ । ನಾರಾಯಣಂ ಲೋಹಿತಂಸ್ಯಾತ್ ಪಂಚರೂಪಾಣ್ಯಜೇಹರಾವಿತಿ ।**

ದೇಹದಲ್ಲಿರುವ ವಾಸುದೇವಾದಿ ಪಂಚರೂಪಗಳ ರೂಪಸ್ಥಾನಗಳನ್ನು ಹೇಳುತ್ತಾರೆ. ನಾರಾಯಣನು ಕೆಂಪು ಬಣ್ಣದವನಾಗಿ ಸುಷುಮ್ನ (ಬ್ರಹ್ಮರಂಧ್ರ)ದಲ್ಲಿರುತ್ತಾನೆ. ಬಿಳಿ ಬಣ್ಣದ ವಾಸುದೇವನು ನಾಲಾ(ಕಿರುನಾಲಿಗೆ)ಗ್ರದಲ್ಲಿರುತ್ತಾನೆ. ಸಂಕರ್ಷಣನು ಬಂಗಾರವರ್ಣದಿಂದ ಪಿಂಗಳನಾಡಿಯಲ್ಲಿರುತ್ತಾನೆ. ಪ್ರದ್ಯುಮ್ನು ಪೀತ (ಹಸಿರು) ವರ್ಣದವನಾಗಿ

ಪಶ್ಚಿಮದ ವಜ್ರಿಕಾನಾಡಿಯಲ್ಲಿರುತ್ತಾನೆ. ಇಡಾನಾಡಿಯಲ್ಲಿ ನೀಲವರ್ಣನಾದ ಅನಿರುದ್ಧನಿರುತ್ತಾನೆ. ಎಂದು ಹೇಳಿದೆ. ನಾರಾಯಣಾದಿ ಐದುರೂಪಗಳನ್ನು ಐದುಬಣ್ಣಉಳ್ಳವನಾಗಿ ಐದುಸ್ಥಾನಗಳಲ್ಲಿ ಚಿಂತನೆಮಾಡಬೇಕು ಮತ್ತು ವಾಸುದೇವ ಬಿಳಿ, ಅನಿರುದ್ಧ ನೀಲಿ, ಸಂಕರ್ಷಣ ಪಿಂಗಳ (ಹಳದಿ) ಪ್ರದ್ಯುಮ್ನ ಹರಿತ (ಎಲೆ ಹಸಿರು) ನಾರಾಯಣ ಕೆಂಪು ಹೀಗೆ ಹರಿಯಲ್ಲಿ ಐದುರೂಪಗಳನ್ನು ಧ್ಯಾನಿಸಬೇಕು.

**ತಂತ್ರಸಾರೇಪಿ । ಯುಕ್ತಾಃ ಪ್ರದೀಪವರ್ಣಾಶ್ಚ ಸರ್ವಾಭರಣ ಭೂಷಿತಾಃ। ತಾದೃಗ್ರೂಪಾಶ್ಚ ಪಂಚಾಶತ್ ಜ್ಞಾನಮುದ್ರಾಭಯೋದ್ಯತಾಃ। ಮೂಲರೂಪ ಸವರ್ಣಾನಿ ಕೃಷ್ಣವರ್ಣಾ ಶಿಖೋಚ್ಯತೇ । ಚತುರ್ವಿಂಶನ್ಮೂರ್ತಯಶ್ಚ ಮೂಲರೂಪ ಸವರ್ಣಕಾಃ । ಉದ್ಯದಾದಿತ್ಯ ವರ್ಣಾಶ್ಚ ಜ್ಞಾನಮುದ್ರಾಭಯೋದ್ಯತಾಃ ।**

ತಂತ್ರಸಾರದಲ್ಲಿಯೂ ಅಜಾದಿ ಐವತ್ತೈದು ರೂಪಗಳು ಪ್ರಕಾಶಮಾನವಾದ ದೀಪದಂತೆ ಪ್ರಕಾಶವುಳ್ಳವುಗಳು, ಸರ್ವ ಆಭರಣಗಳಿಂದ ಯುಕ್ತವಾದವುಗಳು. ಮೂಲರೂಪದಿಂದ ಸಮಾನ ಬಣ್ಣ ಉಳ್ಳವುಗಳು. ಎಲ್ಲಾ ಮೂರ್ತಿಗಳ ಶಿಖೆಯು ಕಪ್ಪಾದುದು, ಕೇಶವಾದಿ ಇಪ್ಪತ್ನಾಲ್ಕು ರೂಪಗಳೂ ಸಹ ಮೂಲರೂಪ ಸಮಾನ ವರ್ಣದವುಗಳು. ಇವುಗಳು ಸಹ ಸೂರ್ಯಕಾಂತಿಯುಳ್ಳವುಗಳು. ಇನ್ನು ವರಾಹ, ಹಂಸ, ದಧಿವಾಮನ, ಪರಶುರಾಮ, ಕೃಷ್ಣ, ವೇದವ್ಯಾಸ, ಹಯಗ್ರೀವ, ಕಪಿಲ, ದತ್ತಾತ್ರೇಯ, ಧನ್ವಂತರೀ ಈ ರೂಪಗಳ ವರ್ಣಗಳನ್ನು ಹೇಳುತ್ತಾರೆ.

**ವರಾಹಸ್ತು । ಶ್ಯಾಮಃ ಸುದರ್ಶನದರಾಭಯ ಸದ್ವರೇತಃ। ಹಂಸಸ್ತು । ಅಂತ್ಯಸ್ತು ರಕ್ತವರ್ಣೋವಾ ಧ್ಯೇಯೋ ವಿಷ್ಣುಃ ಸನಾತನಃ । ವಿದ್ಯುದ್ವರ್ಣೋಥ-ವಾಧ್ಯೇಯಃ । ದಧಿವಾಮನಃ । ಧ್ಯಾಯೇತ್ ಸುಶುಕ್ಲಮರವಿಂದ ದಳಾಯತಾಕ್ಷಂ। ಪರಶುರಾಮಃ। ಅಂಗಾರವರ್ಣಮಭಿತೋಂಡ ಬಹಿಃ ಪ್ರಭಾಭಿಃ ವ್ಯಾಪ್ತಂ । ಕೃಷ್ಣಃ । ಧ್ಯಾಯೇದ್ಧರಿನ್ಮಣಿ ನಿಭಂ । ವೇದವ್ಯಾಸಃ । ವಿಜ್ಞಾನರೋಚಿಃ ಪರಿಪೂರಿತಾಂತರ್ಬಾಹ್ಯಾಂಡಕೋಶಂ ಹರಿತೋಪಲಾಭಂ। ಹಯಗ್ರೀವಃ। ವಂದೇ ತುರಂಗವದನಂ ಶಶಿಬಿಂಬ ಸಂಸ್ಥಂ ಚಂದ್ರಾವದಾತಂ । ಕಪಿಲದತ್ತಾತ್ರೇಯೌ । ಪ್ರೋದ್ಯದ್ದಿವಾಕರಸಮಾನ ತನುಂ । ಧನ್ವಂತರಿಃ । ಚಂದ್ರೌಘಕಾಂತಿಂ । ಹರಿಃ ನೀಲಃ ಸಿತಃ ಪಿಂಗಲೋಹಿತಶ್ಚಾತ್ರ ಕೇಶವಃ । ಪ್ರದ್ಯುಮ್ನಾದಿ ಸ್ವರೂಪೇಣ ಧ್ಯೇಯಃಸಿದ್ಧಿ ಮಭೀಪ್ಸತೇತಿ ।**

ವರಾಹ ರೂಪಿ ಪರಮಾತ್ಮನು ಚಕ್ರ, ಶಂಖ, ವರಮುದ್ರಾ, ಅಭಯಮುದ್ರ ಹಸ್ತಗಳಿಂದ ಶ್ಯಾಮ (ಕಪ್ಪು) ವರ್ಣಉಳ್ಳವನಾಗಿದ್ದಾನೆ. ಹಂಸನಾದರೂ ಕೆಂಪು ಬಣ್ಣದವನು ಅಥವ ವಿದ್ಯುತ್ (ಮಿಂಚಿನ) ಬಣ್ಣ ಉಳ್ಳವನು. ಹೌದು, ದಧಿವಾಮನು

ಕಮಲದಳ ನೇತ್ರನಾಗಿ ಶುಕ್ಲ (ಬಿಳುಪಾದ) ಬಣ್ಣದವನು, ಶ್ರೀಕೃಷ್ಣನು ಇಂದ್ರನೀಲಿ ಮಣಿ ವರ್ಣನು. ವೇದವ್ಯಾಸದೇವರು ಹಸಿರು ಚಿಗರಿನಂತೆ ಬಣ್ಣ ಉಳ್ಳವನಾಗಿ ಬ್ರಹ್ಮಾಂಡದ ಒಳಗೂ ಹೊರಗೂ ವಿಜ್ಞಾನ ಕಿರಣಗಳಿಂದ ಪ್ರಕಾಶಮಾನನು. ಚಂದ್ರ ಮಂಡಲ ಮಧ್ಯದಲ್ಲಿರುವನಾಗಿ ಕೋಟಿ ಚಂದ್ರ ಕಾಂತಿಯುಳ್ಳವನು, ಕಪಿಲ, ದತ್ತಾತ್ರೇಯರು ತತ್ಕಾಲದಲ್ಲಿ ಉದಯಿಸಿರುವ ಸೂರ್ಯನಂತಿರುವವರು, ಧನ್ವಂತರಿಯೂ ಕೋಟಿಚಂದ್ರ ಕಾಂತಿಯುಳ್ಳವನು. ಸಕಲ ಪಾಪ ಪರಿಹಾರಕನು. ಸಕಲಾಭೀಷ್ಟದಾಯಕನೂ ಆದ ಪರಮಾತ್ಮನು ಅನಿರುದ್ಧ, ಪ್ರದ್ಯುಮ್ನ ರೂಪಗಳಿಂದ, ನೀಲಿ, ಬಿಳಿ, ಕಪ್ಪು, ಸುವರ್ಣ ಕೆಂಪು ಬಣ್ಣಗಳಿಂದ ಉಳ್ಳವನು.ಭಗವಂತನ ಆ ಆ ರೂಪಗಳನ್ನು ಆಯಾ ವರ್ಣಗಳಿಂದ ಧ್ಯಾನಿಸಬೇಕೆಂದು ತಂತ್ರಸಾರದಲ್ಲಿ ಹೇಳಿರುತ್ತಾರೆ.

**ಋಗ್ಭಾಷ್ಯೇಪಿ । ಹಿತತ್ವಾತ್ ರಮಣೀಯತ್ವಾ ಹಿರಣ್ಯಂ ವರ್ಣತೋಪಿಚ। ಹಿರಣ್ಯಾಕ್ಷೋನರಸಿಂಹಾತ್ಮನಾ ಸವಾರ್ಯಾಣೀಯ ದ್ವರಣಿಯಂ ಸುವಿತ್ತಂ। ದಧಾನೋಸೌ ಸ್ವರ್ಣ ವರ್ಣಶ್ಚತೇನ ಸ್ವರ್ಣಪಾಣಿಃ ಸ್ವರ್ಣ ಹಸ್ತಶ್ಚದೇವಃ ಇತಿ । ಸೂತ್ರಭಾಷ್ಯೇ ಚ । ಓಂ ರೂಪೋಪನ್ಯಾಸಾಚ್ಚ ಓಂ । ಯದಾಪಶ್ಯಃ ಪಶ್ಯತೇರುಕ್ಮವರ್ಣಂ । ತಸ್ಯ ಹ್ಯೇತಸ್ಯ ಪರಮಸ್ಯ ನಾರಾಯಣಸ್ಯ ಚತ್ವಾರಿರೂಪಾಣಿ ಶುಕ್ಲಂ ರಕ್ತಂ ರೌಕ್ಮಂಕೃಷ್ಣ ಮಿತಿ । ಶುದ್ಧಸ್ಫಟಿಕಸಂಕಾಶಂ ವಾಸುದೇವಂ ನಿರಂಜನಮಿತಿ ।**

ಋಗ್ಭಾಷ್ಯದಲ್ಲಿಯೂ ಎಲ್ಲಾ ರೂಪಗಳು ಹಿತಸಾಧಕವಾದ್ದರಿಂದ ರಮಣೀಯತೆ ಪ್ರಸಿದ್ಧವಾದ್ದರಿಂದ ಹಿರಣ್ಯವರ್ಣಗಳೂ ಹೌದು ಹಿರಣ್ಯ ರೂಪಗಳೂ ಹೌದು ನರಸಿಂಹ ರೂಪದಿಂದ ಹಿರಣ್ಯ ನೇತ್ರಗಳುಳ್ಳವನೂ ಆಗಿದ್ದಾನೆ. ಬಂಗಾರದ ವರ್ಣನಾಗಿ ಸುವರ್ಣವನ್ನು ಧರಿಸಿಯೂ ಸುವರ್ಣಹಸ್ತ ಸ್ವರ್ಣಪಾಣಿಯಾದವನು. ಓಂ ರೂಪೋಪನ್ಯಾಸಾಚ್ಚ ಓಂ ಎಂಬ ಸೂತ್ರಭಾಷ್ಯದಲ್ಲಿ ಸುವರ್ಣ ವರ್ಣನಾದ ಹರಿಯನ್ನು ನೋಡೇ ನೋಡುತ್ತಾರೆ. ಆ ನಾರಾಯಣನಿಗೆ, ಬಿಳಿ, ಕೆಂಪು, ಹಳದಿ, ಕಪ್ಪೆಂದು ನಾಲ್ಕು ರೂಪಗಳೆಂದು ಹೇಳಿದೆ ಮತ್ತು ಶುದ್ಧ ಸ್ಫಟಿಕ ಸಮ ವರ್ಣನಾದ ನಿರ್ದೋಷಿಯಾದ ವಾಸುದೇವನು ಎಂದು ಹೇಳಿರುತ್ತದೆ.

**ಚಿತ್ರರೂಪಮಪಿ ಪರಮಾತ್ಮನಃ ಛಾಂದೋಗ್ಯೋಪನಿಷದಿ ತದ್ಭಾಷ್ಯೇಚ ಉಕ್ತಂ । ಶ್ಯಾಮಾಚ್ಛಬಲಂ ಪ್ರಪದ್ಯೇಶಬಲಾತ್ ಶ್ಯಾಮಂಪ್ರಪದ್ಯೇ ಇತಿ। ಶ್ಯಾಮೋ ಹೃದಿಸ್ಥೋ ವಿಷ್ಣುಃ ಶಬಲೋವಿಶ್ವರೂಪವಾನಿತಿ। ಷಷ್ಠಸ್ಕಂಧ ತಾತ್ಪರ್ಯೇಽಪಿ । ನಾನಾವರ್ಣೋ ಹರಿಸ್ತ್ವೇಕೋ ಬಹುಶೀರ್ಷ ಶಿರೋರುಪಾತ್। ನಿರ್ಣಯೇಪಿ ವೇದವ್ಯಾಸಸ್ಯ ಚಿತ್ರರೂಪಮುಕ್ತಂ । ಶುಭಮರಕತವರ್ಣೋ ರಕ್ತಪಾದಾಬ್ಜನೇತ್ರಾಽಧರಕರ ನಖರಾಗ್ರಶ್ಚ**

**ಕ್ರಶಂಖಾಬ್ಜರೇಖಃ । ರವಿಕರವರಗೌರಂ ಚರ್ಮಚೈಣಂ ವಸಾನಸ್ತಟಿದ ಮಲಜಟಾಸಂದೀಪ್ತಚೂಡಂದಧಾನಃ ಇತಿ । ಅತ್ರೈಕಸ್ಮಿನ್ನೇವ ಶರೀರೇ ರೂಪತ್ರಯೋಕ್ತೇಃ ।**

ಹೀಗೆ ಬೇರೇ ಬೇರೇ ರೂಪಗಳೇ ಅಲ್ಲದೆ ಚಿತ್ರರೂಪವೂ ಪರಮಾತ್ಮನಲ್ಲಿ ಹೇಳಿರುತ್ತದೆ. ಛಾಂದೋಗ್ಯ ಭಾಷ್ಯದಲ್ಲಿ ಹೃದಯ ಮಧ್ಯಸ್ಥನಾದ ಕಪ್ಪಾದ ನಾರಾಯಣನು ವಿಶ್ವರೂಪನಾಗಿ ಶಬಲ(ಹೆಸರು)ರೂಪವನ್ನು ಹೊಂದಿರುತ್ತಾನೆ ಎಂದು, ಷಷ್ಠಸ್ಕಂಧತಾತ್ಪರ್ಯದಲ್ಲಿಯೂ, ಅನಂತ ಮುಖಗಳು ಅನಂತ ಕೈಕಾಲುಗಳು ಅನಂತ ಬಣ್ಣಗಳುಳ್ಳವನು ಶ್ರೀಹರಿ ಒಬ್ಬನೇ ಎಂದು ನಿರ್ಣಯದಲ್ಲಿ ವೇದವ್ಯಾಸದೇವರಿಗೆ ಚಿತ್ರರೂಪ ಹೇಳಿದೆ. ಶುಭ್ರವಾದ ಮರಕತ ಮಣಿಯವರ್ಣನು ಅಂಗಾಲುಗಳು, ಕಣ್ಣುಗಳು, ತುಟಿ, ಉಗುರುಗಳು, ಶಂಖ ಚಕ್ರಗಳು, ಇವೆಲ್ಲವು ಕೆಂಪಾದವನು. ಸೂರ್ಯ ಕಿರಣಗಳಂತಿರುವ ಜಿಂಕೆಚರ್ಮವನ್ನು ಧರಿಸಿರುವವನು. ಸಿಡಿಲಿನಂತಿರುವ ಜಟೆಯೊಂದಿಗೆ ಪ್ರಕಾಶಮಾನನು. ಹೀಗೆ ಒಂದು ರೂಪದಲ್ಲಿ ಮೂರು ಬಣ್ಣಗಳನ್ನು ಹೇಳಿರುತ್ತಾರೆ.

**ಗೀತಾಯಾಂ ವಿಶ್ವರೂಪಾಧ್ಯಾಯೇಽಪಿ । ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚೇತಿ । ನಭಸ್ಪೃಶಂದೀಪ್ತಮನೇಕವರ್ಣಂವ್ಯಾತ್ತಾನನಂ ದೀಪ್ತವಿಶಾಲನೇತ್ರಂ । ದ್ಯಾವಾಪೃಥಿವ್ಯೋರಿದಮಂತರಂ ಹಿ ವ್ಯಾಪ್ತಂತ್ವಯೈಕೇನದಿಶಶ್ಚ ಸರ್ವಾಃ ಇತಿ । ಅತ್ರೈಕಸ್ಯೈವ ವಿಶ್ವರೂಪಸ್ಯನಾನಾವರ್ಣತ್ವಮುಚ್ಯತೇ ಇತಿ । ನನು ಚಿತ್ರರೂಪಸದ್ಭಾವೇ ಮಾನಾಭಾವಃ । ನಚ ಚಿತ್ರಃ ಪಟ ಇತಿ ಪ್ರತೀತಿರೇವಮಾನಂ ಇತಿ ವಾಚ್ಯಂ । ಅವಯವರೂಪಾಣಾಮೇವ ಪಟೇಭಾನೋಪಪತ್ತಿಃ ಇತಿ ಚೇನ್ನ । ಚಿತ್ರಪಟೇ ಯದಿ ಚಿತ್ರರೂಪಂ ನಸ್ಯಾತ್ತರ್ಹಿ ತಸ್ಯಾಪ್ರತ್ಯಕ್ಷತ್ವಾಪತ್ತೇಃ ।**

ಗೀತೆಯಲ್ಲಿಯೂ ವಿಶ್ವರೂಪಾಧ್ಯಾಯದಲ್ಲಿ ಅರ್ಜುನನು ಕೃಷ್ಣನ ವಿಶ್ವರೂಪದ ದಿವ್ಯವಾದ ಆಶ್ಚರ್ಯಕರಗಳಾದ ಅನೇಕ ಬಣ್ಣಗಳು ಅನೇಕಾನೇಕ ಆಕಾರಗಳು ಮತ್ತು ಮುಗುಲು ಮುಟ್ಟುವ ಆಗಾಧದೇಹ ಅನೇಕ ಬಣ್ಣಗಳ ತೆಗೆಯಲ್ಪಟ್ಟ ವಿಶಾಲವಾದ ಬಾಯಿಕಣ್ಣುಗಳನ್ನು ನೋಡಿ, ಹೇ ಕೃಷ್ಣ ಸ್ವರ್ಗ ಪೃಥಿವಿಗ ಅಂತರವೇ ಇಲ್ಲ ನಿನ್ನ ದೇಹವೇ ವ್ಯಾಪ್ತವಾಗಿ ಎಲ್ಲಾ ದಿಕ್ಕುಗಳನ್ನೂ ಆವರಿಸಿದೆ ಹೀಗೆ ಒಂದು ವಿಶ್ವರೂಪಕ್ಕೆ ಅನೇಕ ವರ್ಣಗಳು ಹೇಳಿವೆ. ಚಿತ್ರರೂಪವಿದೆ ಎಂಬುದಕ್ಕೆ ಪ್ರಮಾಣವೇನು? ಚಿತ್ರವಾದ ಬಟ್ಟೆ ಎಂಬ ವ್ಯವಹಾರವೇ ಪ್ರಮಾಣವೆಂದರೆ ತಪ್ಪು. ತಂತುಗಳಲ್ಲಿರುವ ಬಣ್ಣವೇ ಬಟ್ಟೆಯಲ್ಲಿ ತೋರುವುದರಿಂದ ಆ ವ್ಯವಹಾರವು ಅವಯವ ರೂಪಗಳಿಂದಲೇ ವ್ಯವಹಾರ ಚಿತ್ರರೂಪವಿರುವಲ್ಲಿ ಪ್ರಮಾಣವಿಲ್ಲಾ ಹಾಗೆನಬಾರದು. ಚಿತ್ರವಿರುವ ಬಟ್ಟೆಯಲ್ಲಿ ಬಣ್ಣವಿಲ್ಲವಾದರೆ ಬಟ್ಟೆ ಕಾಣದೇ

ಹೋಗಬೇಕಾದೀತು.

**ಅನ್ಯಗತರೂಪಸ್ಯ ಅನ್ಯತ್ರ ಪ್ರತ್ಯಕ್ಷತ್ವಾಪ್ರಯೋಜಕತ್ವಾತ್ । ನಚ ಅವಯವಾವಯವಿನೋಃ ಅಭೇದಾತ್ ಪ್ರತ್ಯಕ್ಷತ್ವೋಪಪತ್ತಿರಿತಿ ವಾಚ್ಯಂ । ರೂಪಿದ್ರವ್ಯಸ್ಯ ನಿರೂಪ ದ್ರವ್ಯೇಣ ಅಭೇದಾನುಪಪತ್ತೇಃ । ನಚೈಕಸ್ಮಿನ್ನೇವ ಪಟೇ ನಾನಾರೂಪಾಣಿ ಸಂತ್ವಿತಿವಾಚ್ಯಂ । ಸಂಯೋಗವದ್ರೂಪಸ್ಯ ಪ್ರದೇಶವೃತ್ತಿತ್ವಾಭಾವಾತ್ ಅಹ । ವಿರೋಧೇನೈಕತ್ರನಾನಾರೂಪಾಣಾಂ ಅವಸ್ಥಾನಸ್ಯ ತತ್ತದವಯವಾಭೇದಸ್ಯ ಚಾಯೋಗಾತ್ । ಅತಃ ಚಿತ್ರರೂಪಸಿದ್ಧಿಃ ।**

ಒಂದೆಡೆ ಇರುವ ರೂಪ ಮತ್ತೊಂದೆಡೆ ತೋರಲು ಅಪ್ರಯೋಜಕವೇ ಆಗಿರುತ್ತದೆ. ಅವಯವ ಅವಯವಿಗಳಿಗೆ ಅಭೇದ ಇರುವುದರಿಂದ ಅವಯವದಲ್ಲಿರುವ ರೂಪ ಅವಯವಿಯಲ್ಲಿ ತೋರುತ್ತದೆ ಎಂದೆನಬಾರದು. ರೂಪವುಳ್ಳ ದ್ರವ್ಯದೊಂದಿಗೆ ರೂಪವಿಲ್ಲದ ದ್ರವ್ಯದಿಂದ ಅಭೇದವೂ ಅಸಂಭಾವಿತವು ಹಾಗಾದರೆ ಒಂದೇ ಪಟದಲ್ಲಿ ಅನೇಕ ರೂಪಗಳಿವೆ ಎಂಬೋಣವೆ ಎಂದರೆ ಅದೂ ತಪ್ಪಾಗುತ್ತದೆ ಸಂಯೋಗವುಳ್ಳ ರೂಪಗಳಿಗೆ ಏಕ ಪ್ರನೇಶದಲ್ಲಿರುವಿಕೆ ಇಲ್ಲದಿರುವುದರಿಂದ, ವಿರೋಧದಿಂದ ಒಂದೇ ಸ್ಥಳದಲ್ಲಿ ಅನೇಕ ರೂಪಗಳು ಇರುವಿಕೆ, ಯುಕ್ತವೇ ಆಗಿರುತ್ತದೆ. ಆದುದರಿಂದ ಚಿತ್ರರೂಪಸಿದ್ಧಿಯು

**ತದುಕ್ತಂ ಜಿಜ್ಞಾಸಾಧಿಕರಣ ಸುಧಾಯಾಂ । ಏಕಮೇವ ಹಿ ಚಿತ್ರಂ ನಾಮರೂಪಮಾಶ್ರಯಂ ವ್ಯಾಪ್ಯವರ್ತೀತಿ ಪದಾರ್ಥವಿದ ಇತಿ । ಲಕ್ಷ್ಮ್ಯಾಮಪಿ ರೂಪಾಣ್ಯತಿ ದಿಶತಿ ।**

**ಪ.ಸಂ. ತದ್ವಲ್ಲಕ್ಷ್ಮ್ಯಾ ಅಪಿರೂಪಾಣಿ । ಸರ್ವಾಣ್ಯದ್ಭುತರೂಪಾಣಿ ನಿತ್ಯಾನಿ ಸರ್ವ ಜೀವಾನಾಂ ।**

**ತದುಕ್ತಂ ಛಾಂದೋಗ್ಯಭಾಷ್ಯೇ । ಚಿತ್ಸುವರ್ಣ ಮಯಂದಿವ್ಯಂ ಲಕ್ಷ್ಮೀಸ್ತತ್ತತ್ಸ್ವರೂಪಿಣೀ ಇತಿ । ವೈಕುಂಠ ಲೋಕಗತ ನಾನಾವರ್ಣ ನವರತ್ನಾತ್ಮಕತ್ವಾನ್ನಾನಾವರ್ಣತ್ವಂ ಲಕ್ಷ್ಮ್ಯಾಃ । ತಂತ್ರಸಾರೇಪಿ ।**

**ಕೌಶೇಯಪೀತವಸನಾಂ ಅರವಿಂದನೇತ್ರಾಂ ಪದ್ಮದ್ವಯಾಭಯ-ವರೋದ್ಯತಪದ್ಮಹಸ್ತಾಂ । ಉದ್ಯಚ್ಛತಾರ್ಕಸದೃಶೀಂ ಪರಮಾಂಕಸಂಸ್ಥಾಂ ಧ್ಯಾಯೇದ್ವಿಧೀಶನುತ ಪಾದಯುಗಾಂ ಜನಿತ್ರೀಮಿತಿ। ದುರ್ಗಾಯಾ ಅಪಿ । ವರ್ಣಃ ಶ್ಯಾಮೋ ವಿಶೇಷೋಽತ್ರತಾಂಬೂಲಂ । ಇತಿ ।**

ಜಿಜ್ಞಾಸಾಧಿಕರಣ ಸುಧಾದಲ್ಲಿ ಒಂದೇ ಚಿತ್ರವು ನಾನಾರೂಪ

(ಬಣ್ಣ)ಗಳನ್ನಾಶ್ರಯಿಸಿರುತ್ತದೆ. ಅನೇಕ ಬಣ್ಣಗಳು ವ್ಯಾಪಿಸಿರುತ್ತದೆ ಎಂದು ಪದಾರ್ಥಜ್ಞರು ತಿಳಿಯುತ್ತಾರೆ. ಹೀಗೆಂದು ಹೇಳಿರುತ್ತದೆ. ಲಕ್ಷ್ಮೀದೇವಿಯಲ್ಲೂ ಎಲ್ಲಾರೂಪಗಳಿವೆಯೆಂದು ತಿಳಿಸುತ್ತಾರೆ. ಪರಮಾತ್ಮನಂತೇ ಲಕ್ಷ್ಮೀ ದೇವಿಯಲ್ಲಿಯೂ ಅನಂತರೂಪಗಳಿರುತ್ತವೆ. ಯಾವತ್ತೂ ಉದ್ಭೂತರೂಪಗಳು ಜೀವನಲ್ಲಿ ನಿತ್ಯಗಳೇ ಆಗಿರುತ್ತವೆ. ಛಾಂದೋಗ್ಯದಲ್ಲಿ ಹೇಳಿರುತ್ತದೆ. ಜ್ಞಾನಾತ್ಮಕ ಸುವರ್ಣಮಯವಾದ ದಿವ್ಯರೂಪವು ಲಕ್ಷ್ಮೀದೇವಿಗೆ ಎಂದು, ವೈಕುಂಠದಲ್ಲಿರುವ ಅನೇಕ ಬಣ್ಣಗಳ ರತ್ನಗಳೆಲ್ಲವೂ ಲಕ್ಷ್ಮೀ ಸ್ವರೂಪಗಳೇ ಆಗಿರುವುದರಿಂದ ಲಕ್ಷ್ಮೀದೇವಿಗೂ ಅನಂತ ವರ್ಣಗಳಿರುತ್ತದೆ. ತಂತ್ರಸಾರದಲ್ಲಿಯೂ ಎಲೆಹಸಿರು ಸೀರೆಯುಳ್ಳ ಕಮಲದಂತೆ ನೇತ್ರಗಳುಳ್ಳ ಮೇಲೆರಡು ಕೈಗಳಲ್ಲಿ ಎರಡು ಕಮಲಗಳನ್ನು ಹಿಡಿದು ಕೆಳ ಎರಡು ಅಭಯ ವರಮುದ್ರಗಳುಳ್ಳ ಲೋಕಜನನಿಯಾದ ಬ್ರಹ್ಮರುದ್ರಾದಿಗಳಿಂದ ಸ್ತುತ್ಯವಾದ ಪಾದ ದ್ವಂದ್ವವುಳ್ಳ, ಉದಯಿಸುತ್ತಿರುವ ನೂರು ಸೂರ್ಯಕಾಂತಿಯುಳ್ಳ ಲಕ್ಷ್ಮಿಯನ್ನು ಧ್ಯಾನಿಸಬೇಕೆಂದು ಹೇಳಿರುತ್ತದೆ. ಹಾಗೆ ದುರ್ಗಾದೇವಿಯ ರೂಪವಾದರೂ, ದುರ್ಗಾದೇವಿಯಲ್ಲಿ ಶ್ಯಾಮ (ಕಪ್ಪು) ವರ್ಣವು ದೇಹದಲ್ಲಿ ತಾಂಬೂಲ ವಿಶೇಷವು, ನೀಲಿತಾವರೆಯ ಮುಖವು ಹೀಗೆ ಹೇಳಿದೆ.

**ತಥಾನಿರ್ಣಯೇಽಪಿ ಸತ್ಯಭಾಮಾಯಾ ರೂಪಮುಕ್ತಂ । ಅನಂತಶಕ್ತಿ: ಸಹಸತ್ಯಭಾಮಯಾ ವಿವೇಶರಂತುಂ ಪ್ರಿಯಯಾಖಿಲೇಶ್ವರ: । ತಯಾಚ್ಯುತೋಽಸೌ ಕನಕಾವದಾತಯಾಸುಕುಂಕುಮಾಸ್ನಿಗ್ಧಪಿಶಂಗವಾಸಸೇತಿ। ಏವಂ ಜೀವಾನಾಮಪಿ ನಾನಾವರ್ಣಾ: ಸ್ವರೂಪಭೂತಾ: ಸಂತ್ಯೇವ । ತದುಕ್ತಂ ಛಾಂದೋಗ್ಯಭಾಷ್ಯೇ । ಜೀವವರ್ಣೋ ಜೀವಗತೋಲೋಹಿತಶ್ಚಕ್ಷುಷಿಸ್ಥಿತ ಇತಿ। ದ್ವಿತೀಯಸ್ಕಂಧಭಾಗವತೇಽಪಿ। ಶ್ಯಾಮಾವದಾತಾ: ಶತಪತ್ರಲೋಚನಾ: ಪಿಶಂಗವಸ್ತ್ರಾ: ಸುರುಚಸ್ಸುಪೇಶಸ: । ಸರ್ವೇ ಚತುರ್ಬಾಹವ ಉನ್ಮಿಷನ್ಮಣಿ ಪ್ರವೇಕನಿಷ್ಕಾಭರಣಾ: ಸುವರ್ಚಸ: ।**

ಹಾಗೆ ನಿರ್ಣಯದಲ್ಲಿಯೂ ಸತ್ಯಭಾಮಾದೇವಿಯ ರೂಪವನ್ನು ಹೇಳಿದೆ. ಅನಂತ ಶಕ್ತನಾದ ಅಖಿಲೇಶ್ವರನಾದ ಶ್ರೀಕೃಷ್ಣನು ಸುವರ್ಣಕಾಂತಿ ಯುಕ್ತಳಾದ ಹಸಿರುವಸ್ತ್ರದಿಂದ ಅಲಂಕೃತಳಾದ ಸತ್ಯಭಾಮೆಯೊಂದಿಗೆ ವಿಹರಿಸಲು ಪ್ರವೇಶಿಸಿದನು ಎಂದಿದೆ. ಜೀವರುಗಳಿಗೂ ಸ್ವರೂಪಭೂತಗಳಾದ ವರ್ಣಗಳಿವೆ ಎಂದೂ ಹೇಳಿದೆ. ಛಾಂದೋಗ್ಯ ಭಾಷ್ಯದಲ್ಲಿ ಜೀವನಲ್ಲಿರುವ ಜೀವನ ವರ್ಣವು ಕೆಂಪು ಅದೇ ಕಣ್ಣಿನಲ್ಲೂ ಇರುತ್ತದೆಂದು ಹೇಳಿದೆ. ಭಾಗವತ ದ್ವಿತೀಯ ಸ್ಕಂಧದಲ್ಲಿ ತಿಳಿಕಪ್ಪಾದ ದೇಹಗಳುಳ್ಳವರು ಕಮಲನೇತ್ರರು ಹಸಿರು ವರ್ಚಸ್ವಿಗಳು ಅಂಗಸೌಷ್ಟವವುಳ್ಳವರು ನಾಲ್ಕು ಭುಜಗಳುಳ್ಳವರು, ಹೊಳೆಯುವ ರತ್ನಗಳ

ಆಭರಣಗಳುಳ್ಳವರು. ಇನ್ನೂ

**ಪ್ರವಾಲವೈಡೂರ್ಯಮೃಣಾಲವರ್ಚಸಾಂ ಪರಿಸ್ಫುರತ್ ಕುಂಡಲ ಮೌಲಿಮಾನಾಂ । ಭ್ರಾಜಿಷ್ಣುಭಿರ್ಯಃ ಪರಿತೋವಿರಾಜತೇ ಲಸದ್ವಿಮಾನಾವಲಿಭಿರ್ಮಹಾತ್ಮನಾಂ ಇತಿ । ಏತೇ ಚ ಭಾಗವತ ಶ್ಲೋಕಾಃ ಅನುವ್ಯಾಖ್ಯಾನ ಛಾಂದೋಗ್ಯಾದಿಷು ಉಕ್ತ ಪರತ್ವೇನೈವ ಉದಾಹೃತಾಃ । ಸುಮಧ್ವವಿಜಯೇಽಪಿ । ಅರುಣಾಶ್ಮವರ್ಣತನವಃ ತನವಃ ಶುಭಹಾರ ಸನ್ನಿಭರುಚೋತ್ರಪರಾಃ । ಹರಿ ನೀಲ ನೀಲರುಚಯೋಽಪ್ಯಪರಾಃ ಪ್ರಕಟೀಭವಂತಿ ವಿವಿಧಾಭರಣಾಃ ಇತಿ ।**

ಹವಳ ಮತ್ತು ಪ್ರಕಾಶಮಾನವಾದ ಕುಂಡಲಗಳು ಶಿರೋಭೂಷಣ ಮೊದಲಾದವುಗಳಿಂದಲೂ ಪ್ರಕಾಶಮಾನರಾದ ಸ್ತ್ರೀಯರಿಂದಲೂ ವಿಹರಿಸಿಕೊಂಡವರಾಗಿ ವಿಮಾನಗಳ ಸೊಬಗಿನಿಂದಲೂ ಸಂಚರಿಸುತ್ತಿರುತ್ತಾರೆ. ಹೀಗೆ ಹೇಳಿದೆ. ಈ ಭಾಗವತ ಶ್ಲೋಕಗಳನ್ನು ಅನುವ್ಯಾಖ್ಯಾನದಲ್ಲೂ, ಛಾಂದೋಗ್ಯಭಾಷ್ಯಗಳಲ್ಲೂ ಮುಕ್ತರ ಪರವಾಗಿ ವ್ಯಾಖ್ಯಾನಿಸಿರುತ್ತಾರೆ. ಸುಮಧ್ವ ವಿಜಯದಲ್ಲಿಯೂ ಅರುಣಕಿರಣಗಳ ಕಾಂತಿಯಿಂದ ಮೃದುವಾದ ದೇಹಗಳುಳ್ಳವರು ಶ್ರೇಷ್ಠಹಾರಗಳಿಂದಲೂ ಶ್ರೇಷ್ಠರಾದವರು, ಮತ್ತು ಕೆಲವರು ಇಂದ್ರನೀಲ ಮಣಿಯಂತೆ ಪ್ರಕಾಶಿತರಾಗಿ ವಿವಿಧಾಭರಣಗಳಿಂದ ಸಂಚರಿಸುವವರು. ಹೀಗೆ ವರ್ಣಿತರಾಗಿ ಮುಕ್ತ ಜೀವರಲ್ಲೂ ವರ್ಣಗಳು ಹೇಳಿರುತ್ತದೆ.

**ಮೂಲಪ್ರಕೃತೇಃ ನಿತ್ಯರೂಪಾಣ್ಯಾಹ ।**

**ಪ.ಸಂ. ಪ್ರಕೃತೇ ಶುಕ್ಲರತ್ನನೀಲಾನಿ ನಿತ್ಯಾನಿತ್ರೀಣಿ ।**

**ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾಮಿತಿ ಶ್ರುತೇಃ । ನನ್ವೇವಂರೂಪಾದಿಮತ್ವಾಚ್ಚ ವಿಪರ್ಯಯೋ ದರ್ಶನಾದಿತಿ ಸೂತ್ರಕಾರೇಣೋಕ್ತೇಃ ಪರಮಾತ್ಮಾದೀನಾಂ ಅನಿತ್ಯತ್ವಂ ಸ್ಯಾದಿತಿಚೇನ್ನ । ಭೌತಿಕ ರೂಪಸ್ಯೈವ ವಿನಾಶವ್ಯಾಪ್ತತ್ವೇನ ಅಭೌತಿಕಸ್ಯ ತದಭಾವಾತ್ । ಪರಮಾತ್ಮಾದೀನಾಂಚ ಅಪ್ರಾಕೃತ ರೂಪತ್ವಾತ್ । ತದುಕ್ತಂ ವೈಶೇಷಿಕಾಧಿಕರಣ ಅನುವ್ಯಾಖ್ಯಾನೇ । ಭೌತಿಕಂತ್ವೇವ ರೂಪಾದಿ ವ್ಯಾಪ್ತಂನಾಶೇನ ನೋಮತಃ ಇತಿ। ತತ್ಸುಧಾಯಾಂ ಅಪಿ । ಭೌತಿಕಮೇವ ರೂಪಂ ವಿನಾಶ ವ್ಯಾಪ್ತಮಿತಿ ।**

ಮೂಲ ಪ್ರಕೃತಿಗೆ ನಿತ್ಯವಾದ ರೂಪಗಳನ್ನು ಹೇಳುತ್ತಾರೆ. ಈ ವಿಷಯದಲ್ಲಿ ಬಿಳಿ, ಕೆಂಪು, ಕಪ್ಪು ಮೂರು ಬಣ್ಣಗಳುಳ್ಳ ಅಜಾದಿ ಮೂಲ ಪ್ರಕೃತಿಯು ಹೀಗೆ ಹೇಳುವ ವೇದವು ಎಲ್ಲವೂ ಹೀಗೆ ರೂಪವುಳ್ಳವುಗಳಾದ್ದರಿಂದ, ಎಲ್ಲವೂ

ವಿಪರೀತಗಳಾಗುವವುಗಳೇ ಕಂಡು ಬರುವುದರಿಂದ ಎಂಬ ಸೂತ್ರದಿಂದ ಸಕಲರೂಪಗಳಿಗೆ ಅನಿತ್ಯತೆ ಹೇಳುವುದರಿಂದ ಪರಮಾತ್ಮಾದಿ ರೂಪಗಳಿಗೂ ಅನಿತ್ಯತೆ ಬಂತಲ್ಲಾ ಎಂದರೆ, ಸೂತ್ರಕಾರರು ಭೌತಿಕ ರೂಪಗಳಿಗೆ ಅನಿತ್ಯತೆ ಹೇಳುವುದರಿಂದ ಭಗವದ್ರೂಪಗಳು ಅಪ್ರಾಕೃತಗಳಾದ್ದರಿಂದ ನಾಶ ಪ್ರಸಕ್ತಿ ಇರುವುದಿಲ್ಲ. ಇದನ್ನು ವೈಶೇಷಿಕಾಧಿಕರಣ ಸುಧಾದಲ್ಲಿ ಹೇಳಿರುತ್ತದೆ. ಅನುವ್ಯಾಖ್ಯಾನದಲ್ಲೂ ರೂಪಗಳು ಭೌತಿಕಗಳಾಗಿದ್ದರೆ ನಾಶ್ಯಗಳೇ ಎಂದು ನಮ್ಮ ಮತವು ಮತ್ತು ಪ್ರಾಕೃತ ರೂಪಗಳೇ ನಾಶ್ಯವಾದವುಗಳು ಎಂದು ಹೇಳಿದೆ.

**ಅನಿತ್ಯರೂಪಸ್ಯೋದಾಹರಣ ಮಾಹ**

**ಮ.ಸಂ. ತದ್ವತ್ ಗುಣತ್ರಯ ಸ್ಯಾಪಿ । ಮಹತ್ತತ್ವಸ್ಯಹೇಮವದ್ರೂಪಂ । ಅಹಂಕಾರಾದೌತು ರೂಪವದ್ದ್ರವ್ಯಾರಬ್ಧತ್ವಾದ್ರೂಪಂ ಸಂಭಾವಿತಂ ।**

**ತದುಕ್ತ ತೃತೀಯಸ್ಕಂಧ ಭಾಗವತೇ । ದೈವಾತ್‌ಕ್ಷುಭಿತಧರ್ಮಿಣ್ಯಾಂ ಸ್ವಸ್ಯಾಂ ಯೋನೌಪರಃ ಪುಮಾನ್ । ಆಧತ್ತವೀರ್ಯಂ ಸಾಸೂತ ಮಹತ್ತತ್ವಂ ಹಿರಣ್ಮಯಮಿತಿ ।**

ಅನಿತ್ಯರೂಪಗಳಿಗೆ ಉದಾಹರಣವನ್ನು ಹೇಳುತ್ತಾರೆ. ಗುಣತ್ರಯಕ್ಕೂ ಪ್ರಕೃತಿಯಂತೇ ಮೂರುರೂಪಗಳು ಸತ್ವ ಬಿಳಿ, ರಜಸ್ಸು ಕೆಂಪು, ತಮಸ್ಸು ಕಪ್ಪು, ಮಹತ್ತತ್ವವು ಸುವರ್ಣ ವರ್ಣವು. ಅಹಂಕಾರ ತತ್ವಾದಿಗಳಲ್ಲಿ ರೂಪವಿಶಿಷ್ಟ ಪದಾರ್ಥಗಳ ಉತ್ಪಾದನೆಯಿಂದ ರೂಪವು ಸಂಭಾವಿತವೇ ಆಗಿದೆ. ಇದನ್ನು ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿರುತ್ತದೆ. ಪರಮ ಪುರುಷನಾದ ಪರಮಾತ್ಮನು ತನ್ನ ಇಚ್ಛೆಯಿಂದಲೇ ಹಿಗ್ಗುವ ಧರ್ಮಉಳ್ಳ ತನ್ನ ಯೋನಿಯಲ್ಲಿ ಲಕ್ಷ್ಮಿ ಅಭಿಮನ್ಯ ಪ್ರಕೃತಿಯಲ್ಲಿ ವೀರ್ಯವನ್ನು ತನ್ನ ಇಚ್ಛಾಶಕ್ತಿಯನ್ನು ಹಾಕಿದನು. ಆ ಪ್ರಕೃತಿಯು ಸುವರ್ಣ ವರ್ಣಾತ್ಮಕವಾದ ಮಹತ್ತತ್ವವನ್ನು ಪ್ರಸವಿಸಿತು ಎಂದು.

**ಮ.ಸಂ. ಭೂತೇಷುತೇಜೋಜಲಪೃಥಿವೀಷು ಅನಿತ್ಯಾನಿರೂಪಾಣಿ ಉದ್ಭೂತಾನಿ । ಆಕಾಶೇತ್ವನುದ್ಭೂತಂ । ತತ್ರಪೃಥಿವ್ಯಾಂ ಸಪ್ತವಿಧಂ । ಜಲೇ ಶುಕ್ಲಂ । ಶುಕ್ಲಭಾಸ್ವರಂತೇಜಸಿ ನೀಲಂ ಆಕಾಶತಮಸೋಃ ।**

**ಆಕಾಶೋನೀಲಿಮೋದೇತಿ ನ ಪ್ರದೇಶಃ ಕಥಂಚನೇತಿ ನ್ಯಾಯ ವಿವರಣೋಕ್ತೇ ಭೂತಾಕಾಶಸ್ಯ ನೀಲರೂಪಮಿತ್ಯರ್ಥಃ । ನಚೈವಂ ಭೂತಾಕಾಶಸ್ಯ ಪ್ರತ್ಯಕ್ಷತ್ವಾಪತ್ತಿರಿತಿ ವಾಚ್ಯಂ । ಅನುದ್ಭೂತ ರೂಪವತ್ವೇನ ಅಪ್ರತ್ಯಕ್ಷತ್ವೋಪಪತ್ತೇಃ ।**

ಭೂತಗಳೆನಿಸಿದ ತೇಜಸ್ಸು ಜಲ ಪೃಥವಿಗಳಲ್ಲಿ ಅನಿತ್ಯಗಳಾದ ಉದ್ಭೂತರೂಪಗಳಿವೆ. ಆಕಾಶದಲ್ಲಿ ಅನುದ್ಭೂತ ರೂಪವು. ಪೃಥಿವಿಯಲ್ಲಿ ಏಳು

ವಿಧಗಳಾದರೂ ರೂಪಗಳು ಇವೆ ನೀರಿನಲ್ಲಿ ಬಿಳುಪು ಅಗ್ನಿಯಲ್ಲಿ ಪ್ರಕಾಶಕ ಬಿಳಿಪು, ಆಕಾಶ ತಮಸ್ಸಿನಲ್ಲಿ ನೀಲಿ ಹೀಗೆ ಬಣ್ಣಗಳಿರುತ್ತವೆ. ಆಕಾಶದಲ್ಲಿ ನೀಲಿ ಹುಟ್ಟುತ್ತದೆ ಎಂದಿಗೂ ಪ್ರದೇಶವಿಲ್ಲಾ ಎಂದು ನ್ಯಾಯವಿವರಣದಲ್ಲಿ ಹೇಳಿದೆ. ಭೂತಾಕಾಶಕ್ಕೆ ನೀಲರೂಪವೆಂದರ್ಥವು. ಭೂತಾಕಾಶಕ್ಕೆ ಬಣ್ಣವಿದ್ದರೆ ಕಾಣಿಸಬೇಕಲ್ಲಾ ಎಂದು ಇಲ್ಲವು. ಅನುದ್ಭೂತ ರೂಪವಾದ್ದರಿಂದ ಆಕ್ಷೇಪಾವಕಾಶವಿಲ್ಲವು.

**ತದುಕ್ತಮನುವ್ಯಾಖ್ಯಾನೇ । ಭೂತಮಪ್ಯಸಿತಂ ದಿವ್ಯದೃಷ್ಟಿಗೋಚರ ಮೇವತು। ಉತ್ಪದ್ಯತೇ ಅವ್ಯಾಕೃತಂಹಿ ಗಗನಂ ಸಾಕ್ಷಿಗೋಚರಮಿತಿ । ಪೃಥಿವ್ಯಾದೌ ರೂಪಾಣಾಂಪ್ರತ್ಯಕ್ಷ ಸಿದ್ಧಾತ್ವಾತ್ ನಪ್ರಮಾಣಾಂತರಾಪೇಕ್ಷಾ ಅತ್ರತಮಃ ಶಬ್ದೇನ ಅವಿದ್ಯಾಪಿವಿವಿಕ್ಷಿತಾ । ತಸ್ಯನೀಲರೂಪತ್ವಾತ್ । ತದುಕ್ತಂ ತೃತೀಯ ತಾತ್ಪರ್ಯೇ । ಕೇವಲಸ್ತಮಸೋಯೋಂಶಃ ಸಾವಿದ್ಯಾಪಂಚಪರ್ವಿಕಾ । ಜಾತಾತಿ ಕೃಷ್ಣಾತದ್ದೇಹಾ ದೈತ್ಯರಕ್ಷಃ ಪಿಶಾಚಕಾ ಇತಿ ।**

**ಪ.ಸು. ಸರ್ವಾಣ್ಯಪಿ ರೂಪಾಣಿ ವಾಸನಾ ಪ್ರತಿಬಿಂಬಯೋಶ್ಚ ।**

**ಸ್ವಪ್ನಾನಾಂ ವಾಸನೋಪಾದಾನಕ ಪದಾರ್ಥಾನಾಂ ನಾನಾರೂಪವತ್ವಂ ದರ್ಪಣಾದಿ ಗತಪ್ರತಿಬಿಂಬಸ್ಯಚ ನಾನಾರೂಪವತ್ವಂ ಪ್ರತ್ಯಕ್ಷ ಸಿದ್ಧಂ ಇತಿ ಭಾವಃ ।**

## ॥ ಇತಿ ರೂಪ ಪ್ರಕರಣಂ ॥

ಇದನ್ನು ಅನುವ್ಯಾಖ್ಯಾನದಲ್ಲಿ ಹೇಳಿದೆ. ಪ್ರಕೃತವಾದರೂ ಕಪ್ಪಾದ ಬಣ್ಣವು ಆಕಾಶದಲ್ಲಿ ದಿವ್ಯ ದೃಷ್ಟಿಗೆ ಗೋಚರವಾದುದೇ ಅವ್ಯಾಕೃತಾಕಾಶವು ಹುಟ್ಟುತ್ತದೆ. ಅದು ಸಾಕ್ಷಿಗೋಚರವು ಎಂದು ಹೇಳಿದೆ. ಪೃಥಿವಿಯಲ್ಲಿ ರೂಪ ಪ್ರತ್ಯಕ್ಷ ಸಿದ್ಧವಾದ್ದರಿಂದ ಪ್ರತ್ಯೇಕ ಪ್ರಮಾಣಾಪೇಕ್ಷೆಯೇ ಇರುವುದಿಲ್ಲ. ಇಲ್ಲಿ ತಮ ಶ್ಶಬ್ದದಿಂದ ಅವಿದ್ಯೆಯನ್ನು ತಿಳಿಯಬೇಕು. ಅದೂ ನೀಲರೂಪವುಳ್ಳದ್ದೇ ಆಗಿರುತ್ತದೆ. ತೃತೀಯ ತಾತ್ಪರ್ಯದಲ್ಲಿ ಹೇಳಿರುತ್ತದೆ. ಕೇವಲ ತಮಸ್ಸಿನ ಅಂಶದಿಂದಲೇ ಅವಿದ್ಯಾ ಹುಟ್ಟಿತು. ಬಲು ಕಪ್ಪಾದ ಅವಿದ್ಯೆಯಿಂದಲೇ ದೈತ್ಯರು, ರಾಕ್ಷಸರು, ಪಿಶಾಚಾದಿಗಳು ಹುಟ್ಟಿದರು ಎಂದು ಹೇಳಿದೆ. ಮತ್ತೂ ಎಲ್ಲಾ ಬಣ್ಣಗಳೂ (ಸ್ವಪ್ನದಲ್ಲಿ) ವಾಸನಾದಲ್ಲಿ ಪ್ರತಿಬಿಂಬಗಳಲ್ಲಿ ಇರುತ್ತದೆ. ವಾಸನೋಪಾದಾನವಾದ ಸ್ವಪ್ನದಲ್ಲಿ ಕನ್ನಡಿ ಮೊದಲಾದವುಗಳಲ್ಲಿ ಕಾಣುವ ಪ್ರತಿಬಿಂಬಗಳಲ್ಲಿ ರೂಪಗಳು ಬಣ್ಣಗಳು ಪ್ರತ್ಯಕ್ಷಸಿದ್ಧವಾಗಿರುತ್ತದೆ.

ಹೀಗೆ ಗುಣದಲ್ಲಿ ಮೊದಲನೆಯದಾದ ರೂಪಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

* * * * * * * *

# ೩೪.ರಸ ಪ್ರಕರಣ

ರಸಂ ನಿರೂಪಯತಿ ।

ಪ.ಸಂ. ಮಾಧುರ್ಯಾದಿ ವ್ಯವಹಾರ ಹೇತುಃ ಗುಣೋರಸಃ । ಸಚ ಷಡ್ವಿಧಃ ಮಧುರಾಮ್ಲಲವಣಕಟುಕಷಾಯತಿಕ್ತಭೇದಾತ್ । ರೂಪವನ್ನಿತ್ಯಾನಿತ್ಯ ವಿಭಾಗವಾನ್ ।

ನಿತ್ಯ ಮಧುರರಸಸ್ಯ ಆಶ್ರಯಮಾಹ ।

ಪ.ಸಂ. ಈಶ ಲಕ್ಷ್ಮ್ಯೋಃ ಮಧುರ ರಸಃ ।

ಈಶಸ್ಯತಾವದಧರಾಮೃತಮಸ್ತಿ। ತಚ್ಚ ಮಧುರಂ ಈಶಾತ್ಮಕಮೇವ। ನಚೇಶಸ್ಯ ಅಧರಾಮೃತಮೇವ ನಾಸ್ತೀತಿ ವಾಚ್ಯಂ । ದಶಮಸ್ಕಂಧಭಾಗವತ ವಿರೋಧಾತ್। ತಥಾ ಹಿ। ಸಕೃದಧರಸುಧಾಂ ಸ್ವಾಂಮೋಹಿನೀಂ ಪಾಯಯಿತ್ವಾ ಸುಮನಸ ಇವ ಸದ್ಯಃ ಕಸ್ತ್ಯಜೇನ್ನಾಂ ಭವಾದೃಗಿತಿ । ರಂಧ್ರಾನ್ವೇಣೋರಧರಸುಧಯಾ ಪೂರಯನ್ ಗೋಪವೃಂದೈಃ ಇತಿ। ವಿಕ್ಷ್ಯಾಲಕಾವೃತಮುಖಂ ತವಕುಂಡಲಶ್ರೀ ಗಂಡಸ್ಥಳಾಧರಸುಧಂಹಸಿತಾವಲೋಕಂ ಇತಿ । ನಚ ತದಾನೀ ಮೇವ ಕೃಷ್ಣೇನ ಸೃಷ್ಟಿಂ ಅಧರಾಮೃತಂ ನತುತತ್ಸ್ವರೂಪಮಿತಿ ವಾಚ್ಯಂ । ಲಕ್ಷ್ಮೀ ಸಂಭೋಗಾದೌ ತದಭಾವ ಪ್ರಸಂಗಾತ್ । ಏವಂ ಛಾಂದೋಗ್ಯೋಪನಿಷದಿ।

ಮಾಧುರ್ಯಾದಿ ವ್ಯವಹಾರ ಕಾರಣವಾಗಿ ಗುಣವಾಗಿರುವುದೇ ರಸವು. ಇದು ಆರು ವಿಧವು. ಸಿಹಿ, ಹುಳಿ, ಉಪ್ಪು, ಕಹಿ, ಒಗರು ಮತ್ತು ಖಾರ ಹೀಗೆ. ರೂಪದಂತೆ ನಿತ್ಯ, ಅನಿತ್ಯ ಹೀಗೆ ವಿಭಾಗ ಉಳ್ಳದ್ದಾಗಿದೆ. ನಿತ್ಯ ಮಧುರಕ್ಕೆ ಆಶ್ರಯವನ್ನು ಹೇಳುತ್ತಾರೆ. ಈಶ ಲಕ್ಷ್ಮೀ ಇವರೀರ್ವರಲ್ಲಿ ನಿತ್ಯವಾದ ಮಧುರ ರಸವು. ಈಶಗೆ ಅಧರಾಮೃತವಿದೆ. ಆ ಮಧುರವು ಭಗವಂತನ ರೂಪವೇ ಆಗಿದೆ. ಪರಮಾತ್ಮಗೆ ಅಧರಾಮೃತವೇಇಲ್ಲ ಎನ್ನುತ್ತೇನೆ ಎಂದರೆ ಹಾಗೆನಬಾರದು. ಭಾಗವತ ದಶಮಸ್ಕಂಧ ವಿರೋಧ ಬರುತ್ತದೆ. ಗೋಪಿಕಾಸ್ತ್ರೀಯರು ಹೇ ಕೃಷ್ಣ ಜಗನ್ಮೋಹಕವಾದ ಅಧರಾಮೃತವನ್ನು ಒಮ್ಮೆ ಪಾನಮಾಡಿದ ಮೇಲೆ ಯಾರಾದರು ಬಿಡಲು ಶಕ್ತರಾಗುತ್ತಾರೆಯೇ ನೀನು ಅಂತಹವನು ಎಂದು ಸ್ತುತಿಸಿದ್ದಾರೆ. ಕೊಳಲಿನ ರಂಧ್ರವನ್ನು ಅಧರಾಮೃತದಿಂದ ತುಂಬಿ ಗೋಪಾಲಕರ ವೃಂದದೊಂದಿಗೆ ಕ್ರೀಡಿಸಿದನೆಂದು ಹೇಳಿದೆ. ಮತ್ತೂ ಹೇ ಕೃಷ್ಣ ಕಪ್ಪಾಗಿ ಉಂಗುರುಂಗುರುಗಳಾದ ಕೂದಲುಗಳಿಂದಲಕೃತವಾದ ನಿನ್ನ ಮುಖವು ಕುಂಡಲಗಳಿಂದ ಶೋಭಿತ

ಗಂಡಸ್ಥಳದಿಂದಲೂ ಅಧರಸುಧೆಯಿಂದಲೂ ಮುಗುಳುನಗೆಯಿಂದಲೂ ನೋಡಲು ಅರ್ಹವಾದುದೇ ಎಂದಿದೆ. ಆದುದರಿಂದ ಪರಮಾತ್ಮಾಭಿನ್ನ ಮಧುರವಿದೆ. ಹಾಗೆ ಆ ಅಧರಾಮೃತವನ್ನು ಸೃಜಿಸಿ ತೋರಿಸಿದನೆನಬಾರದೇಕೆಂದರೆ ಹಾಗೆನಬಾರದು. ಲಕ್ಷ್ಮೀ ಸಂಭೋಗಾದಿಗಳಲ್ಲಿ ಅದು ಯುಕ್ತವಲ್ಲವಾದ್ದರಿಂದ ಹೀಗೆ ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ.

**ಸರ್ವಕರ್ಮಾ ಸರ್ವಗಂಧಃ ಸರ್ವರಸಃ ಸರ್ವಮಿದಂ ಅಭ್ಯಾತ್ತೋ ಅವಾಕ್ಯನಾದರಮಿತಿ ದ್ವಿವಾರಮುಕ್ತಂ । ತತ್ರೈಕತ್ರ ಸರ್ವಗಂಧಃ ಅಸಾದ್ಯಾತ್ಮಕತ್ವಂ ಅಪರತ್ರ ಸರ್ವಗಂಧರಸಾದ್ಯನುಭವವತ್ತ್ವಂ ವಿವಕ್ಷಿತಂ। ತದುಕ್ತಂ ಛಾಂದೋಗ್ಯಭಾಷ್ಯೇ । ಏಕತ್ರ ಸರ್ವಗಂಧಾದಿನಾ ಚಿದಾನಂದಾದ್ಯಾತ್ಮಕಗಂಧಾದಿ ರೂಪತ್ವಮಿತ್ಯಾದಿ । ಗೀತಾ ಭಾಷ್ಯೇಽಪಿ । ಸರ್ವಕರ್ಮಾಸರ್ವಧರ್ಮಃ ಸರ್ವಗಂಧಃ ಸರ್ವರಸಃ ಇತ್ಯುದಾಹೃತಂ । ಲಕ್ಷ್ಮ್ಯಾ ಅಪ್ಯರಣ್ಯಾಖ್ಯಸುಧಾಸಮುದ್ರಾತ್ಮಕತ್ವಾತ್ ಸ್ವರೂಪಭೂತೋ ಮಧುರರಸಃ ಸಿದ್ಧ ಏವ ।**

ಸರ್ವಕಾರ್ಯಮಾಡುವವನು ಸರ್ವರಸರೂಪನು ಸರ್ವಗಂಧರೂಪನು ಎಲ್ಲವು ಅವನನ್ನೇ ಸುತ್ತುವರಿಸಿಕೊಂಡಿವೆ. ಸರ್ವ ವಾಕ್ಯಗಳಿಂದಲೂ ಮೀರಿರುವವನಾಗಿದ್ದಾನೆ ಹೀಗೆ ಎರಡು ಸಲ ಹೇಳಿರುತ್ತದೆ. ಅದೇ ಇನ್ನೊಂದೆಡೆಯಲ್ಲಿ ಸರ್ವಗಂಧನು ಸರ್ವರಸಾದ್ಯಾತ್ಮಕನು ಎಂದು ಮತ್ತೊಂದು ಕೊನೆಯಲ್ಲಿ ಸರ್ವಗಂಧರಸಾದ್ಯನುಭವ ರೂಪನು ಎಂದು ಹೇಳಿದೆ. ಗೀತಾಭಾಷ್ಯದಲ್ಲಿಯೂ ಅದೇ ರೀತಿಯೇ ಸರ್ವಕರ್ಮನು (ಸರ್ವಕರ್ಮನಿಯಾಮಕನು) ಸರ್ವಧರ್ಮನು ಸರ್ವರಸನು ಸರ್ವಗಂಧನು ಇತ್ಯಾದಿ ಹೇಳಿದೆ., ಲಕ್ಷ್ಮೀದೇವಿಯು ಮೋಕ್ಷದಲ್ಲಿ ಅರಣ್ಯಗಳೆಂಬ ಸುಧಾಸಮುದ್ರ ರೂಪಳೇ ಆಗಿರುವುದರಿಂದ, ಅವಳ ಸ್ವರೂಪವಾದ ಮಧುರ ರಸವು ಸ್ವತಃ ಸಿದ್ಧವೇ ಆಗಿದೆ.

**ಕೇಚಿತ್ ಈಶಲಕ್ಷ್ಮ್ಯೋಃ ಷಡ್ರಸಾಃ ಸಂತ್ಯೇವ । ಕಾಮರೂಪತ್ವಾದಚಿಂತ್ಯ ಶಕ್ತಿತ್ವಾಚ್ಚೇತ್ಯಾಹುಃ । ಮುಕ್ತಾನಾಮಪ್ಯಧರಾಮೃತತ್ವಾತ್ ಸ್ವರೂಪರಸೋ ಅಸ್ತ್ಯೇವ । ತದುಕ್ತಂ ಸುಮಧ್ವವಿಜಯೇ । ಉಪರಮ್ಯತೇನತರುಣೇನ ಚಿರಂ ಮಧುರಾಮೃತರಸಂ ಪಿಬತಿ । ಏವಂ ಮೂಲಪ್ರಕೃತಾವಪಿ ನಿತ್ಯಾರಸಾದ್ರಷ್ಟವ್ಯಾಃ । ಅನಿತ್ಯರಸಸ್ಯ ಆಶ್ರಯಮಾಹ ।**

**ಪ.ಸಂ. ಪೃಥಿವ್ಯಾಂ ವಾಸನಾಯಾಂ ಚ ಷಡ್ರಸಾಃ । ಜಲೇತುಮಧುರಏವ ।**

**ಪೃಥಿವ್ಯಾಂ ರಸಾಃ ಪ್ರತ್ಯಕ್ಷಸಿದ್ಧಾಃ । ವಾಸನಾಮಯ ಸ್ವಪ್ನಪದಾರ್ಥೇಷ್ವಪಿ ಅನುಭವಸಿದ್ಧಾಃ । ಜಲೇಮಧುರ ಏವ ।**

ಕೆಲವರು ಈಶಗೂ ಲಕ್ಷ್ಮೀದೇವಿಗೂ ಷಡ್ರಸಗಳೂ ಇವೆ. ಅವರೀರ್ವರಿಗೂ ಸ್ವೇಚ್ಛಾರೂಪತ್ವ ಅಚಿಂತ್ಯಶಕ್ತಿ ಇರುವುದರಿಂದ ಎನ್ನುತ್ತಾರೆ. ಮುಕ್ತರಿಗೂ ಅಧರಾಮೃತವಿರುವುದರಿಂದ ಸ್ವರೂಪರಸವಿದ್ದೇ ಇದೆ. ಸುಮಧ್ವವಿಜಯದಲ್ಲಿ ಹೇಳಿದೆ. ಮೋಕ್ಷದಲ್ಲಿ ತರುಣಿಯರು ತರುಣರಿಂದ ಕೂಡಿ ಅಧರಾಮೃತವನ್ನು ಪಾನಮಾಡುತ್ತಾ ವಿಹರಿಸುತ್ತಾರೆ. ಹೀಗೆ ಮೂಲ ಪ್ರಕೃತಿಯಲ್ಲೂ ನಿತ್ಯರಸಗಳುಂಟೆಂದು ತಿಳಿಯಬೇಕು. ಅನಿತ್ಯ ರಸಾಶ್ರಯವನ್ನೂ ಹೇಳುತ್ತಾರೆ. ಪೃಥಿವಿಯಲ್ಲಿಯ ವಾಸನೆಯಲ್ಲಿಯೂ ಆ ರಸಗಳಿರುತ್ತವೆ. ಪೃಥಿವಿಯಲ್ಲಿ ಪ್ರತ್ಯಕ್ಷಸಿದ್ಧ ವಾಸನಾಮಯ ಸ್ವಪ್ನ ಪದಾರ್ಥಗಳಲ್ಲಿಯೂ ಅನುಭವಸಿದ್ಧವು. ಜಲದಲ್ಲಿ ಮಧುರವೇ.

**ನನು ಲವಣಸಮುದ್ರೇ ಲವಣರಸಸ್ಯೈವಾನುಭವಸಿದ್ಧತ್ವಾತ್ ಕಥಂ ಜಲೇ ಮಧುರ ಏವ ಇತಿ ಚೇನ್ನ । ಸ್ವತಯೇವ ಮಧುರರಸಸ್ಯ ಸಮುದ್ರಸ್ಯ ಅಗಸ್ತ್ಯಪಾನೇನ ಪುನರ್ಮೂತ್ರಾತ್ಮನಾತದ್ದೇಹಾನ್ನಿಸೃತತ್ವಾತ್ ಲವಣರಸಃ ಔಪಾಧಿಕ ಏವ । ನನು ಚಿತ್ರರೂಪವತ್ ಚಿತ್ರರಸೋಽಪ್ಯಂಗೀಕಾರ್ಯಃ । ದೂರತರ ತೋಽಪಾಸ್ತಂ ರಸೋಽಯೋಽಷ್ಟಮಃ ಇತಿ ನರಸಿಂಹನಖಸ್ತುತಾವಷ್ಟಮರಸಸ್ಯೈವ ನಿಷೇಧಾದಿತಿ ಚೇನ್ನ । ಸಪ್ತಮರಸವದಷ್ಟಮರಸಸ್ಯಾಪ್ಯಲೀಕತ್ವೇನೈವೋಕ್ತತ್ವಾತ್ । ಸಪ್ತಮರಸೇ ತುಮಂದಾನಾಂ ಸಂದೇಹಃ ಸ್ಯಾದತೋನಿಸ್ಸಂದಿಗ್ಧಸ್ಥಲಮುಕ್ತಂ ಆಚಾರ್ಯೈಃ।**

ಉಪ್ಪಿನ ಸಮುದ್ರದಲ್ಲಿ ಉಪ್ಪುನೀರೇ ಪ್ರಸಿದ್ಧವಾಗಿರಲು, ನೀರಿನಲ್ಲಿ ಸಿಹಿಯೇ ಎಂಬುದು ಹೇಗೆ? ಅಂದರೆ ಉಪ್ಪು ನೀರಿನಲ್ಲಿ ಸಿಹಿಯೇ ಆದರೆ ಸಮುದ್ರವನ್ನು 'ಅಗಸ್ತ್ಯರು ಪಾನಮಾಡಿ ತಮ್ಮ ದೇಹದಿಂದಬಿಟ್ಟ ಪ್ರಯುಕ್ತ ಮೂತ್ರಸ್ಥಾನೀಯವಾಗಿ ಉಪ್ಪಾಗಿರುವುದು. ಔಪಾಧಿಕ (ಅನ್ಯನಿಯಮಿತ)ವು. ನೀರಿನಲ್ಲಿಯ ಮಧುರವೇ ಚಿತ್ರರೂಪದಂತೆ ಚಿತ್ರರಸವನ್ನು ಏಕೆ ಒಪ್ಪಬಾರದು ಎಂದರೆ, "ಅಪಾಸ್ತಂ ರಸೋಽಯೋಽಷ್ಟಮಃ" ಎಂದು ನಖಸ್ತುತಿಯಲ್ಲಿ ನಿಷೇಧಿಸಿದ್ದಾರೆ. ಅಂದರೆ ಹಾಗಲ್ಲ. ಆಚಾರ್ಯರು ಅಜ್ಞರಿಗೆ ಏಳನೇ ರಸ ಇದೆಯೇನೋ? ಎಂದು ಸಂಶಯವಿರಬಹುದು, ಎಂದು ನಿಸ್ಸಂದಿಗ್ಧತೆ ತೋರಿಸಲು ಎಂಟನೇ ರಸವೆಂದು ಎಂದಿರುತ್ತಾರೆ.

**ವಸ್ತುತಸ್ತು ಸಪ್ತಮರಸೋಽಪ್ಯಪ್ರಾಮಾಣಿಕಃ । ತದುಕ್ತಂ ವೈಶೇಷಿಕಾಧಿಕರಣಾನುವ್ಯಾಖ್ಯಾನೇ । ಅನ್ಯಥಾ ಸಪ್ತಮರಸಭಾವೋಽಪ್ಯನುಮಯಾಪತೇದಿತಿ ಬೌದ್ಧಾಧಿಕರಣೇಽಪಿ । ಯದ್ಯೇವಂ ಸಪ್ತಮರಸಾನ್ಮಧುರಾದಿವಹೀನತಾ। ಭವೇಜ್ಜನಸ್ಯ ಮಾರ್ಜಾರ ಶೃಂಗಂಗೋರಿವಘಾತುಕಮಿತಿ । ಶಾಸ್ತ್ರಯೋನಿತ್ವಾಧಿಕರಣಾನು ವ್ಯಾಖ್ಯಾನೇಽಪಿ । ವಸ್ತುತ್ವಾತ್ತುರಾಗಃ**

**ಶೃಂಗೀಪುಷ್ಪವತ್ ಖಿಂಸುತ್ಯೆರ್ಯುರ್ಕ್ತಾ । ಚಿತ್ರಿಣೀಚರಸಃ ಷಷ್ಠೋರಸತ್ವಾತ್ ಸೋತ್ತರೋಭವೇದಿತಿ ।**

॥ ಇತಿ ರಸಪ್ರಕರಣಂ ॥

ವಿಚಾರಪೂರ್ವಕವಾದರೆ ಏಳನೇ ರಸವೇ ಅಪ್ರಮಾಣಿಕವು. ವೈಶೇಷಿಕಾಧಿಕರಣ ಸುಧೆಯಲ್ಲಿ ಹೇಳಿದೆ. ವಿಪರೀತಗಳನ್ನು ಒಪ್ಪುವದಾದರೆ ಏಳನೇ ರಸವೂ ಅನುಮಾನದಿಂದ ಒದಗಬೇಕಾದೀತು ಎಂದು ಬೌದ್ಧಾಧಿಕರಣದಲ್ಲೂ, ಒಂದು ವೇಳೆ ಮಧುರದಂತೆ ಏಳನೇ ರಸವನ್ನು ಸಾಧಿಸುವುದಾದರೆ ಜನರಲ್ಲಿ ಪೀನತ್ವ, ಬೆಕ್ಕಿಗೆ ಶೃಂಗಿತ್ವ ಇವುಗಳೂ ಸಿದ್ಧವಾಗಲಿ ಎಂದು ಶಾಸ್ತ್ರಯೋನಿತ್ವಾಧಿಕರಣ ಅನುವ್ಯಾಖ್ಯಾನದಲ್ಲಿ ವಸ್ತುತ್ವ ಹೇತುವಿನಿಂದ ಕುದುರೆಗೆ ಕೊಂಬು, ಪುಷ್ಪತ್ವ ಹೇತುವಿನಿಂದ ಆಕಾಶಾಶ್ರಯತೆ ರಸತ್ವ ಹೇತುವಿನಿಂದ ಅಷ್ಟಮರಸ ಇವುಗಳಾಗಬೇಕಾದೀತು ಎಂದಿರುತ್ತಾರೆ.

ಹೀಗೆ ಗುಣದಲ್ಲಿ ಎರಡನೆಯದಾದ, ರಸಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

❋ ❋ ❋ ❋ ❋ ❋ ❋ ❋

# ೩೫. ಗಂಧ ಪ್ರಕರಣ

**ಗಂಧಂ ನಿರೂಪಯತಿ**

**ಪ.ಸು. ಸುರಭ್ಯಾದಿ ವ್ಯವಹಾರ ಹೇತುಃ ಗಂಧಃ ಸಚ ದ್ವಿವಿಧಃ । ಸುರಭಿರಸುರಭಿಶ್ಚೇತಿ । ಪೂರ್ವವತ್ ನಿತ್ಯಾನಿತ್ಯ ವಿಭಾಗವಾನ್ ।**

**ನಿತ್ಯಸುಗಂಧಸ್ಯ ಆಶ್ರಯಮಾಹ ।**

**ಪ.ಸು. ಈಶ ಲಕ್ಷ್ಮೀಮುಕ್ತಾನಾಂ ಸುಗಂಧ ಏವ ।**

**ತದುಕ್ತಂ ಬೃಹದ್ಭಾಷ್ಯೇ । ಆಹಾರ್ಥಿವೋ ಹರೇರ್ಗಂಧೋನ ತೃಪ್ತಿಶ್ಚಾಪ್ಯಬಾತ್ಮಿಕಾ । ಸರ್ವಾಧಾರ ಸುಗಂಧತ್ವಾತ್ ಪೃಥಿವೀಮಯ ಈರಿತಃ । ಭಾಷ್ಯಗೀತಾಭಾಷ್ಯಾದಾವಪಿ । ಸದ್ದೇಹಃ ಸುಖಿಗಂಧಶ್ಚ ಜ್ಞಾನಭಾಃ ಸತ್ಪರಾಕ್ರಮಃ ಇತಿ । ಛಾಂದೋಗ್ಯಭಾಷ್ಯೇಪಿ । ಸರ್ವಗಂಧಾದಿ ರೂಪಶ್ಚ ಭೋಕ್ತಾ ಚೈಷಾಂಸದ್ಭೈವಹಿ । ಏಕತ್ರ ಸರ್ವಗಂಧಾದಿನಾ ಚಿದಾನಂದಾತ್ಮಕ ಸರ್ವಗಂಧಾದಿ ರೂಪತ್ವಮುಚ್ಯತೇ ಇತಿ । ದಶಮತಾತ್ಪರ್ಯೇಪಿ ।**

ಗುಣನಿರೂಪಣೆಯಲ್ಲಿ ಕ್ರಮಪ್ರಾಪ್ತ ಗಂಧವನ್ನು ನಿರೂಪಿಸುತ್ತಾರೆ. ಸುರಭಿ ಆದಿ (ಸುವಾಸನೆ ಮೊದಲಾದ) ವ್ಯವಹಾರ ಕಾರಣವೇ ಗಂಧವು ಇದು ಸುಗಂಧ ದುರ್ಗಂಧವೆಂದು ಎರಡು ವಿಧವು. ರಸದಂತೇ ನಿತ್ಯವೆಂದೂ, ಅನಿತ್ಯವೆಂದೂ ಎರಡು ವಿಧವು. ನಿತ್ಯಗಂಧಕ್ಕೆ ಆಶ್ರಯರು ಈಶ, ಲಕ್ಷ್ಮಿ, ಮುಕ್ತರುಗಳೇ, ಬೃಹದ್ಭಾಷ್ಯದಲ್ಲಿ ಶ್ರೀಹರಿಯ ಗಂಧವು (ಲಕ್ಷ್ಮೀ ಮುಕ್ತಂ) ಅಪಾರ್ಥಿವವಾದುದು. ಪ್ರಕೃತ ಗಂಧವು ತೃಪ್ತಿಕರವಾಗುವುದಿಲ್ಲ. ಗಂಧವು ಸರ್ವಾಧಾರವಾದ್ದರಿಂದ, ಪೃಥವೀ ಗಂಧಮಯವೇ ಆಗಿರುತ್ತದೆ. ಭಾಷ್ಯದಲ್ಲಿಯೂ ಗೀತಾಭಾಷ್ಯದಲ್ಲೂ ಸಹ ಶ್ರೇಷ್ಠದೇಹಗಳು ರೂಪಗಳು ಸುಗಂಧ ಸಜ್ಞಾನ ಪ್ರಕಾಶವು ಒಳ್ಳೆಯ ಪರಾಕ್ರಮಿಗಳಿಗೇ ಪಾತ್ರವಾಗಿರುತ್ತದೆ ಎಂದು ಹೇಳಿದೆ. ಛಾಂದೋಗ್ಯ ಭಾಷ್ಯದಲ್ಲಿಯೂ, ಸರ್ವಸುಗಂಧಮಯನು, ಸರ್ವ ಅಪ್ರಾಕೃತ ವಿಷಯ ಭೋಕ್ತನು, ಚಿದಾನಂದಾತ್ಮಕನು ಶ್ರೀಹರಿಯೇ ಆದ್ದರಿಂದ ಅವನನ್ನು ಸರ್ವಗಂಧಮಯ ರೂಪಮಯ ಜ್ಞಾನಮಯ ಆನಂದಮಯ ಹೀಗೆ ಹೇಳಿರುತ್ತದೆ. ದಶಮತಾತ್ಪರ್ಯದಲ್ಲಿಯೂ.

**ಅನಂತನಾಮಾ ಪರಮಃ ಸುಸುಖಜ್ಞಾನರೂಪವಾನ್ । ತಾನಿಚಾಸ್ಯ ಸುದಿವ್ಯಾನಿ ಸುಗಂಧಾನಿ ಸುಭಾಂತಿ ಚ ಇತಿ । ಲಕ್ಷ್ಮ್ಯಾ ಅಪಿ ಸ್ವರೂಪಭೂತಃ ಸುಗಂಧಃ । ಸುಗಂಧಾತ್ಮಕಾಮೃತ ಸಮುದ್ರರೂಪತ್ವಾತ್ । ಮುಕ್ತಾನಾಮಪಿ ಸ್ವರೂಪಭೂತಃ ಸುಗಂಧೋ ಅಸ್ತ್ಯೇವ । ತದುಕ್ತಂ ಬೃಹದ್ಭಾಷ್ಯೇ। ಅನಿಂದ್ರಿಯಾ ಅನಾಹಾರಾಃ ಅನಿಷ್ಪಂದಾಃ ಸುಗಂಧಿನಃ ಇತಿ । ಸುಮಧ್ವವಿಜಯೇಽಪಿ। ಸುಖಸಂವಿದಾತ್ಮಕತಯಾ ವಪುಷಾಂ ಸುರಭಿತ್ವಮೇವ ಬಹಿರಂತರಪಿ ಇತಿ ।**

ಪರಮಾತ್ಮನು ಅನಂತ ಹೆಸರುಳ್ಳವನು, ಸುಖಜ್ಞಾನಗಳೇ ಸ್ವರೂಪವಾಗಿ ಉಳ್ಳವನು. ಇವನಲ್ಲಿ ಗುಣಗಳೆಲ್ಲ ದಿವ್ಯಗಳೇ. ಸುಗಂಧರೂಪನು ಆಗಿ ಪ್ರಕಾಶಿಸುತ್ತಾನೆ. ಲಕ್ಷ್ಮೀದೇವಿಯೂ ಸುಗಂಧರೂಪಳೇ ಸುಗಂಧಾತ್ಮಕ ಅಮೃತ ಸಮುದ್ರರೂಪಳಾದ್ದರಿಂದಲೂ, ಮುಕ್ತರಿಗೂ ಸ್ವರೂಪಭೂತವಾದ ಸುಗಂಧವಿದೆ. ಬೃಹದ್ಭಾಷ್ಯದಲ್ಲಿ ಪ್ರತ್ಯೇಕ ಭೌತಿಕ ಇಂದ್ರಿಯ ರಹಿತರು, ಆಹಾರರಹಿತರು, ಪ್ರಯತ್ನ ರಹಿತರು ಸುಗಂಧ ಸ್ವರೂಪರು ಹೀಗೆಂದು ಸುಮಧ್ವವಿಜಯದಲ್ಲಿಯೂ ಮುಕ್ತರ ದೇಹಗಳು ಸುಖಜ್ಞಾನರೂಪಗಳೇ ಆದ್ದರಿಂದ ದೇಹದ ಹೊರಗೂ ಒಳಗೂ ಸುಗಂಧವೆಂದು ಹೇಳಿರುತ್ತಾರೆ.

**ನನು ಅಂಧೇತಮಸಿ ದೈತ್ಯಾನಾಂ ದುರ್ಗಂಧಾನುಭವಾತ್ತತ್ರ ಕಥಂ ದುರ್ಗಂಧ ಇತಿ ಚೇನ್ನ । ದೈತ್ಯಾನಾಂ ದುರ್ಗಂಧಾತ್ಮಕತ್ವೇನ ತದನುಭವ ಸಂಭವಾತ್ । ಏಕೇತು ಜಡಪ್ರಕೃತ್ಯಾತ್ಮಕ ಏವ ದುರ್ಗಂಧಃ ತದನುಭವ**

**ಏವತೇಷಾಮಿತ್ಯಾಹುಃ । ನಚಾಂಧೇತಮಸಿ ದುರ್ಗಂಧೇವ ನಾಸ್ತೀತಿ ವಾಚ್ಯಂ । ಪೂಯಾಸೃಂಗ್ಮೂತ್ರವಿಷ್ಠಾಕೃಮಿಕುಲಕಲಿಲೇ ತತ್ಷಣಕ್ಷಿಪ್ತ ಶಕ್ತೀತಿ ಪಂಚಕಷ್ಟಾಬ್ಧೇ ತಮಸಿ ದುರ್ಗಂಧ ದ್ರವ್ಯೋಕ್ತೇಃ । ತಥಾ ಅನಿತ್ಯ ನರಕೇ ದುರ್ಗಂಧಸ್ಯ ಸತ್ವೇನ ತದಪೇಕ್ಷಯಾತಿನಿಕೃಷ್ಟೇತಮಸ್ಯತಿದುರ್ಗಂಧಸ್ಯ ಅವಶ್ಯಕತ್ವಾತ್ । ಅನಿತ್ಯ ನರಕೇ ದುರ್ಗಂಧಶ್ಚ ನಿರ್ಣಯೇ ಏವ ಉಕ್ತ:। ದುರ್ಗಂಧೇನ ಸಕೃಚ್ಛ್ರೇಣ ತಮಸಾ ಪ್ರಾವೃತೇ ನಚ । ಗತ್ವೈವಕಿಯತೀಂ ಭೂಮಿಂ ದುರ್ಗಂಧಾಸಹೋನ್ನೃಪಃ । ಇಚ್ಛನ್ನಿವರ್ತನಂ ತತ್ರ ಸ್ವಾನಾಂ ವಾಚ ಇವಾ ಶೃಣೋತ್ ಇತಿ । ಅನಿತ್ಯ ಗಂಧಸ್ಯ ಆಶ್ರಯಮಾಹ ।**

ಪ.ಸಂ. ಪೃಥಿವ್ಯಾವಾಸನಾಯಾಂ ದ್ವಿವಿಧಂ ।

**ಪೃಥಿವ್ಯಾಂ ಪ್ರತ್ಯಕ್ಷಸಿದ್ಧಃ । ವಾಸನಾಯಾಂತು ಸ್ವಪ್ನಪದಾರ್ಥೇಷು ಉಭಯವಿಧ ಗಂಧಾನುಭವಾತ್ ।**

## ॥ ಇತಿ ಗಂಧ ನಿರೂಪಣಂ ॥

ಅಂಧನ್ತಮಸ್ಸಿನಲ್ಲಿ ದೈತ್ಯರಿಗೆ ದುರ್ಗಂಧಾನುಭವವು ಹೇಗೆ ಎನಬಾರದು. ದೈತ್ಯರ ದೇಹವೇ ದುರ್ಗಂಧ ಸ್ವರೂಪವಾದ್ದರಿಂದ ದುರ್ಗಂಧ ಸಂಭವವೇ ಆಗಿದೆ. ಕೆಲವರು ದುರ್ಗಂಧವು ಜಡಪ್ರಕೃತಿ ಸ್ವರೂಪವು. ಆದ್ದರಿಂದ ಅದರನುಭವವೇ ಅವರಿಗೆ ಹೀಗೆ ಹೇಳುತ್ತಾರೆ. ಅಂಧನ್ತಮಸ್ಸಿನಲ್ಲಿ ದುರ್ಗಂಧವಿಲ್ಲಾ ಎನಕೂಡದು. ತಮಸ್ಸಿನಲ್ಲಿ ಕೀವು ರಕ್ತ ಮಲ ಮೂತ್ರ ಮಾಂಸ ಕ್ರಿಮಿಗಳಿಂದ ಏಕಾಕಾರವಾದ ಐದು ಕಷ್ಟಾತ್ಮಕ ದುಃಖ ಎಂಬಲ್ಲಿ ದುರ್ಗಂಧವು ಸಹಜವೇ ಆಗಿರುತ್ತದೆ. ಅನಿತ್ಯ ನರಕದಿಂದಲೇ ದುರ್ಗಂಧ ಹೇಳುತ್ತಿರಲು, ಅದಕ್ಕಿಂತಲೂ ನಿಕೃಷ್ಟವಾದ ತಮಸ್ಸಿನಲ್ಲಿ ಹೇಳುವದೇನು ದುರ್ಗಂಧಮಯವೇ ಎಂದು ಅನಿತ್ಯನರಕದಲ್ಲಿ ದುರ್ಗಂಧವನ್ನು ನಿರ್ಣಯದಲ್ಲಿಯೇ ಹೇಳಿರುತ್ತದೆ. ಬಹುವಾದ ದುರ್ಗಂಧದಿಂದ ಅತಿ ಕತ್ತಲೆಯಿಂದ ಕೂಡಿದ ದಾರಿಯಲ್ಲಿ ಬಹುದೂರ ಹೋಗುತ್ತಾ ಹೋಗುತ್ತಾ ಸಹನಾ ಅಶಕ್ಯವಾಗಿ ಹಿಂತಿರುಗಲು ಸಿದ್ಧನಾಗಲು, ದುಶ್ಶಬ್ಧಗಳನ್ನು ಕೇಳುತ್ತಾನೆ.

ಅನಿತ್ಯ ಗಂಧಾಶ್ರಯವನ್ನು ಹೇಳುತ್ತಾರೆ. ಪೃಥಿವಿಯಲ್ಲಿ ವಾಸನದಲ್ಲಿ ಎರಡು ವಿಧವಾದ ಗಂಧಗಳಿರುತ್ತವೆ. ಪೃಥಿವಿಯಲ್ಲಿ ಪ್ರತ್ಯಕ್ಷ ಸಿದ್ಧ ವಾಸನಾದಲ್ಲಿ ಆದರೂ ಸ್ವಪ್ನಪದಾರ್ಥಗಳಲ್ಲಿ ಎರಡೂ ಗಂಧಗಳ ಅನುಭವವೇ ಇರುತ್ತದೆ. ಎಂದು ಅನುಭವಸಿದ್ಧವು.

ಹೀಗೆ ಗುಣದಲ್ಲಿ ಮೂರನೆಯದಾದ ಗಂಧ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

# ೩೬.ಸ್ಪರ್ಶ ಪ್ರಕರಣ

**ಸ್ಪರ್ಶಂ ನಿರೂಪಯತಿ**

**ಪ.ಸಂ. ಶೀತಾದಿ ವ್ಯವಹಾರಹೇತುಃ ಗುಣಃಸ್ಪರ್ಶಃ । ಸ ತ್ರಿವಿಧಃ ।**
**ಶೀತೋಷ್ಣಅನುಷ್ಣಶೀತಸ್ಪರ್ಶಭೇದಾತ್ । ಪೂರ್ವೋಕ್ತ ವಿಭಾಗಯುಕ್ತಃ ।**

**ನಿತ್ಯ ಸ್ಪರ್ಶಸ್ಯ ಆಶ್ರಯ ಮಾಹ ।**

**ಪ.ಸಂ. ತತ್ರ ಹರೌ ಲಕ್ಷ್ಮ್ಯಾಂ ಚ ತ್ರಿವಿಧೋಪಿನಿತ್ಯಶ್ಚ । ಶೀತಂತೇಜಸಿ ।**

**ಪರಮಾತ್ಮನೋ ಲಕ್ಷ್ಮ್ಯಾಲಿಂಗನ ಗೋಪಿಕಾಲಿಂಗನ ಕಂಸಕೇಶಾಭಿಮರ್ಶನ ಕಾಲಿಯಮರ್ದನ ಪಾದಪ್ರಹಾರ ಮುಷ್ಟಿಪ್ರಹಾರಾದಿಭಿಃ ಸ್ಪರ್ಶಾವಗತೇಃ । ಗಜೇಂದ್ರೋಭಗವತ್ಸ್ಪರ್ಶಾನ್ಮೋಚಿತೋ ಅಜ್ಞಾನಬಂಧನಾದಿತಿ ಭಾಗವತೋಕ್ತೇಃ । ರಾಮ ಕರಸ್ಪರ್ಶೇನಲಕ್ಷ್ಮಣಸ್ಯ ಶ್ರಮಪರಿಹಾರೋಕ್ತೇಃ ನಿರ್ಣಯೇ । ದೈತ್ಯಾನ್ಪ್ರತ್ಯುಷ್ಣ ಸ್ಪರ್ಶಸ್ಯ ಪೂರ್ವಮುಕ್ತೇಃ ।**

ಗುಣನಿರೂಪಣೆಯಲ್ಲಿ ಕ್ರಮಪ್ರಾಪ್ತ ಸ್ಪರ್ಶವನ್ನು ನಿರೂಪಿಸುತ್ತಾರೆ. ತಣ್ಣಗೆ, ಬಿಸಿ, ಇತ್ಯಾದಿ ವ್ಯವಹಾರ ಕಾರಣವಾಗಿ ಗುಣವಾಗಿರುವುದೇ ಸ್ಪರ್ಶವು. ಅದು ಮೂರುವಿಧ ಶೀತಸ್ಪರ್ಶ, ಬಿಸಿಸ್ಪರ್ಶ, ಬಿಸಿತಣ್ಣಗಿಲ್ಲದ ಸ್ಪರ್ಶ ಹೀಗೆ ರಸದಂತೇ ನಿತ್ಯಾನಿತ್ಯಗಳೆಂದು ಎರಡು ವಿಧವಾಗಿದೆ. ನಿತ್ಯ ಸ್ಪರ್ಶಕ್ಕೆ ಆಶ್ರಯವೆಂದರೆ ಈಶನಲ್ಲಿ ಲಕುಮಿಯಲ್ಲಿ ತ್ರಿವಿಧ ಸ್ಪರ್ಶಗಳೂ ನಿತ್ಯವಾಗಿರುತ್ತದೆ. ಶೀತ ಸ್ಪರ್ಶವು ನೀರಿನಲ್ಲಿಯು, ಉಷ್ಣ ಸ್ಪರ್ಶವು ಅಗ್ನಿಯಲ್ಲಿಯು, ಪರಮಾತ್ಮಗೆ ಲಕ್ಷ್ಮೀ ಆಲಿಂಗನ, ಗೋಪಿಕಾಸ್ತ್ರೀಯರ ಆಲಿಂಗನ, ಕಂಸಕೇಶಾದಿಗಳ ಮರ್ಶನ (ಯುದ್ಧ) ಕಾಲಿಂಗ ಮರ್ದನ, ಪಾದದಿಂದ ಒದೆಯುವಿಕೆ, ಹಾಗೂ ಮುಷ್ಟಿಯಿಂದ ಹೊಡೆಯುವಿಕೆ ಇತ್ಯಾದಿಗಳಿಂದ ಸ್ಪರ್ಶವು ತಿಳಿದು ಬರುತ್ತದೆ. ಗಜರಾಜನು ಭಗವಂತನ ಸ್ಪರ್ಶದಿಂದ ಅಜ್ಞಾನಬಂಧದಿಂದ ಬಿಡುಗಡೆ ಹೊಂದಿದನೆಂದು ಭಾಗವತದಲ್ಲಿ ಹೇಳಿದೆ. ಶ್ರೀ ರಾಮನ ಕರಸ್ಪರ್ಶದಿಂದ ಲಕ್ಷ್ಮಣನ ಶ್ರಮಪರಿಹಾರವಾಯಿತೆಂದು ನಿರ್ಣಯದಲ್ಲಿ ಹೇಳಿದೆ. ದೈತ್ಯರಲ್ಲಿ ತನ್ನ ಹಸ್ತ ಸ್ಪರ್ಶದಿಂದ ಉರಿ ತೋರಿಸಿರುವುದು ಉಕ್ತವಾಗಿದೆ.

**ಮುಕ್ತಾನಾಮಪಿ ಆಲಿಂಗನಾದಿನಾ ಸ್ಪರ್ಶಸಿದ್ಧಃ । ಅನಿತ್ಯೋಷ್ಣ ಸ್ಪರ್ಶಸ್ಯ ಆಶ್ರಯಮಾಹ ।**

**ಪ.ಸಂ. ಉಷ್ಣಂತೇಜಸಿಕಾಲಕೂಟವಿಷೇ ಅಪರೋಕ್ಷಜ್ಞಾನೇಚ ।**

**ಕಾಲಕೂಟವಿಷ ಉಷ್ಣಸ್ಪರ್ಶಶ್ಚ ನಿರ್ಣಯಉಕ್ತಃ । ತದಾ ಜಗದ್ವ್ಯಾಪಿವಿಷಂ**

**ಸಮುತ್ಥಿತಂ ತ್ವದಾಜ್ಞಯಾ ವಾಯುರಧಾತ್ಕರೇ ನಿಜೇ । ಕಲೇಃ ಸ್ವರೂಪಂ ತದತೀವದುಃಸಹಂವರಾದ್ವಿಧಾತುಃ ಸಕಲೈಶ್ಚದುಃಸ್ಪೃಶಂ ಇತಿ ।**

ಮುಕ್ತರಿಗೆ ಆಲಿಂಗನಾದಿಗಳಿಂದ ಸ್ಪರ್ಶವು ಸಿದ್ಧವು. ಅನಿತ್ಯ ಉಷ್ಣ ಸ್ಪರ್ಶವು ತೇಜಸ್ಸಿನಲ್ಲಿ(ಅಗ್ನಿಯಲ್ಲಿ) ಕಾಲ ಕೂಟ ವಿಷಯದಲ್ಲಿ, ಅಪರೋಕ್ಷ ಜ್ಞಾನದಲ್ಲಿಯೂ, ಕಾಲಕೂಟ ವಿಷಯು ಅಗ್ನಿಯಂತೇ ಅತಿ ಬಿಸಿಯಾದುದು ಎಂಬಲ್ಲಿ ನಿರ್ಣಯದಲ್ಲಿ ಸಮುದ್ರಮಥನಕಾಲದಲ್ಲಿ ಜಗತ್ತನ್ನೇ ಸುಡುವ ಕಾಲಕೂಟವಿಷವು ಹುಟ್ಟಿತು. ಹೇ ಹರೇ ನಿನ್ನ ಆಜ್ಞೆಯಿಂದ ಅದನ್ನು ವಾಯುದೇವರು ಕೈಯಲ್ಲಿತೆಗೆದುಕೊಂಡರು ಎಂದು ಹೇಳಿದೆ. ಅದು ಕಲಿಸ್ವರೂಪವಾದ್ದರಿಂದ ಬ್ರಹ್ಮದೇವರ ವರದಿಂದ ಯಾರಿಗೂ ಮುಟ್ಟಲು ಶಕ್ಯವಿಲ್ಲದಂತೆ ಸುಡುತ್ತಿತ್ತೆಂದೂ ಹೇಳಿದೆ.

**ಅಷ್ಟಮಸ್ಕಂಧ ಭಾಗವತೇಪಿ । ನಿರ್ಮಥ್ಯಮಾನಾದುದಧೇಃ ಅಭೂದ್ವಿಷಂ ಮಹೋಲ್ಬಣಂ ಹಾಲಹಲಾಹ್ವಮಗ್ರತಃ । ತದುಗ್ರವೇಗಂ ದಿಶಿದಿಶ್ಯು ಪರ್ಯಧೋ ವಿಸರ್ಪದುತ್ ಸರ್ಪದಸಹ್ಯವೀರ್ಯಂ । ಭೀತಾಃ ಪ್ರಜಾದುದ್ರುವುರಂಗಸೇಶ್ವರಾ ಅರಕ್ಷಮಾಣಾಃ ಶರಣಂ ಸದಾಶಿವಂ । ದೇವದೇವಮಹಾದೇವ ಭೂತಾತ್ಮನ್ ಭೂತಭಾವನ । ತ್ರಾಹಿನಃ ಶರಣಾಪನ್ನಾಂ ತ್ರೈಲೋಕ್ಯ ದಹನಾದ್ವಿಷಾದಿತಿ । ತಥಾ ತಕ್ಷಕ ವಿಷಸ್ಯ ವೃಕ್ಷಭಸ್ಮೀಭಾವ ಜನಕತ್ವಮುಕ್ತಮಾದಿಪರ್ವಣಿ ಶ್ರೀಮನ್ಮಹಾಭಾರತೇ ।**

ಅಷ್ಟಮಸ್ಕಂಧ ಭಾಗವತದಲ್ಲಿ, ಮಥನ ಮಾಡುತ್ತಿರಲು ಕ್ಷೀರ ಸಮುದ್ರದಿಂದ ಹಾಲಾಹಲವೆಂಬ ಅತಿಕ್ರೂರವಾದ ವಿಷವು ಹುಟ್ಟಿತು. ದಿಕ್ಕು ದಿಕ್ಕುಗಳಲ್ಲಿ ಮೇಲೆ ಕೆಳಗೆ ಅಸಹ್ಯ ವೇಗದಿಂದ ಹರಿಯುತ್ತಿರಲು ಎಲ್ಲರೂ ಭಯಗ್ರಸ್ತರಾಗಿ ಅನ್ಯ ರಕ್ಷಕರನ್ನು ಅರಿಯದೇ ಮಹಾಶಿವನನ್ನು ಮೊರೆಹೊಕ್ಕರು. ದೇವಾದಿ ದೇವನಾದ ಮಹಾದೇವನೆ ಸಕಲ ಭೂತ ನಿಯಾಮಕನೇ ಶರಣಾಗತರಾದ ನಮ್ಮನ್ನು ರಕ್ಷಿಸೆಂದು ಪ್ರಾರ್ಥಿಸಿದರು. ಮೂರು ಲೋಕ ಸುಡುವ ವಿಷದಿಂದ ನಮ್ಮನ್ನು ರಕ್ಷಿಸೆಂದು ಮತ್ತೂ ಮಹಾಭಾರತದ ಆದಿಪರ್ವದಲ್ಲಿ ತಕ್ಷಕನೆಂಬ ಸರ್ಪದ ವಿಷಕ್ಕೆ ಸುಟ್ಟು ಬೂದಿ ಮಾಡುವ ಶಕ್ತಿಯನ್ನು ಹೇಳಿರುತ್ತಾರೆ.

**ಏವಮುಕ್ತಃ ಸನಾಗೇಂದ್ರಃ ಕಾಶ್ಯಪೇನ ಮಹಾತ್ಮನಾ । ಅದಶತ್ ವೃಕ್ಷಮಭ್ಯೇತ್ಯನ್ಯಗ್ರೋಧಂ ಪನ್ನಗೋತ್ತಮಃ । ಸವೃಕ್ಷಸ್ತೇನ ದಷ್ಟಸ್ತು ಪನ್ನಗೇನ ಮಹಾತ್ಮನಾ । ಆಶೀ ವಿಷ ವಿಷೋಪೇತಃ ಪ್ರಜಜ್ವಾಲ ಸಮಂತತಃ। ಭಸ್ಮೀಭೂತಂತತೋ ವೃಕ್ಷಂ ಪನ್ನಗೇಂದ್ರಸ್ಯ ತೇಜಸಾ । ಭಸ್ಮ ಸರ್ವಂ ಸಮಾಹೃತ್ಯ ಕಾಶ್ಯಪೋ ವಾಕ್ಯಮಬ್ರವೀತ್ । ವಿದ್ಯಾಬಲಂ ಪನ್ನಗೇಂದ್ರ ಪಶ್ಯಮೇಸ್ಮಿನ್ವನಸ್ಪತೌ । ಅಹಂಸಂಜೀವಯಾಮ್ಯೇನಂ ಪಶ್ಯತಸ್ತೇಭುಜಂಗಮ। ತತಸ್ಸಭಗವಾನ್ ವಿದ್ವಾನ್ ಕಾಶ್ಯಪೋ ದ್ವಿಜಸತ್ತಮಃ । ಭಸ್ಮರಾಶೀ ಕೃತಂ**

**ವೃಕ್ಷಂ ವಿದ್ಯಯಾ ಸಮಜೀವಯದಿತ್ಯಾದಿ ।**

ಮಹನೀಯರಾದ ಕಾಶ್ಯಪರಿಂದ ಹೇಳಿಸಿಕೊಂಡ ತಕ್ಷಕನು ಒಂದು ಆಲದ ಮರವನ್ನು ಕಚ್ಚಿದನು ಆ ವಿಷದ ಪ್ರಭಾವದಿಂದ ಆಮರವು ಸುತ್ತಲೂ ಹತ್ತಿ ವಿಷಾಗ್ನಿಯಿಂದ ಬೂದಿರಾಶಿ ಆಯಿತು ಆಗ ಕಾಶ್ಯಪರು ನೋಡು ನನ್ನ ಮಂತ್ರದ ಮಹಿಮೆ ಎಂದು ಬೂದಿಯಾದ ಮರವನ್ನು ಪೂರ್ವದಂತೇ ಮರವನ್ನಾಗಿ ಮಾಡಿದರು ಎಂದು ಹೇಳಿದೆ.

**ಅಪರೋಕ್ಷಜ್ಞಾನಸ್ಯಾಪಿ ಉಷ್ಣಸ್ಪರ್ಶೋಽಂಗೀಕರ್ತವ್ಯಃ । ತದ್ಯಥೈಷೀಕಾತೂಲಮಗ್ನೌ ಪ್ರೋತಂ ಪ್ರದೂಯತೇ ಏವಂ ಹ್ಯೇವಾಸ್ಯ ಪಾಪ್ಮಾನಃ ಸರ್ವೇ ಪ್ರದೂಯಂತೇ ಇತಿ ಶ್ರುತೇಃ । ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇತಥೇತಿ ಗೀತಾಯಾಂಚ । ಪ್ರಥಮ ಸ್ಕಂಧ ತಾತ್ಪರ್ಯೇಽಪಿ ಪ್ರಕೃತಿಂ ಸ್ವಾತ್ಮಸಂಶ್ಲಿಷ್ಟಾಂ ಗುಣಾನ್ಸತ್ವಾದಿಕಾನಪಿ । ಕರ್ಮಾಣಿ ಸೂಕ್ಷ್ಮ ದೇಹಂ ಚ ಜಾಯಮಾನಾಹರೇದೃಶಿಃ । ದಹೇತ್ತಥಾಪಿ ಸಾದಗ್ಧೇಂಧನವಚ್ಚ ಪುನಃ ಪುನಃ । ಯಾವದಾರಬ್ಧ ಕರ್ಮಸ್ಯಾದಾವಿರ್ಭಾಪಿತಿರೋ ಪ್ರಜೇದಿತಿ।**

ಅಪರೋಕ್ಷ ಜ್ಞಾನಕ್ಕೂ ಬಿಸಿಸ್ಪರ್ಶ (ಸುಡುವಿಕೆ)ವನ್ನು ಒಪ್ಪಬೇಕು. ಅಪರೋಕ್ಷ ಜ್ಞಾನಿ ಆದವನ ಜ್ಞಾನವು ಹೇಗೆ ಹತ್ತಿಯನ್ನು ಬೆಂಕಿಯಲ್ಲಿ ಹಾಕಿದರೆ ಸುಟ್ಟು ಹೋಗುವುದೋ ಹಾಗೆ ಅವನ ಪಾಪಗಳನ್ನು ಸುಟ್ಟುಬಿಡುತ್ತದೆ. ಎಂದು ಶ್ರುತಿಯು ಹೇಳುತ್ತದೆ. ಗೀತಾದಲ್ಲಿಯೂ ಅರ್ಜುನನಿಗೆ ಜ್ಞಾನಾಗ್ನಿಯು ಸರ್ವಕರ್ಮಗಳನ್ನು (ದುಷ್ಕರ್ಮಜ ಪಾಪಗಳನ್ನು) ಸುಡುತ್ತದೆ ಎಂದು ಶ್ರೀ ಕೃಷ್ಣನು ಹೇಳಿರುತ್ತಾನೆ. ಪ್ರಥಮಸ್ಕಂಧ ತಾತ್ಪರ್ಯದಲ್ಲಿಯೂ ಶ್ರೀಹರಿ ವಿಷಯಕ ಜ್ಞಾನವು ಸತ್ವಾದಿ ಗುಣಗಳಿಂದ ಕೂಡಿದ ಜೀವಿಗೆ ಅಂಟಿಕೊಂಡಿರುವ ಪ್ರಕೃತಿಯನ್ನು (ಪುನರ್ಜನ್ಮ ಕಾರಣವಾದ ಆಗಾಮಿ ಸಂಚಿತ ಕರ್ಮಗಳನ್ನು) ಸುಡುತ್ತದೆ. ಆದರೆ ಇರುವ ಪ್ರಾರಬ್ಧ ಕರ್ಮಮಾತ್ರ ಪುನಃ ಜೀವನನ್ನಾವರಿಸಿ ಕರ್ಮಗಳನ್ನು ಮಾಡಿಸುತ್ತದೆ. ಹೇಗೆ ಧನವನ್ನು ವ್ಯಯಮಾಡಿದರೂ ಪುನಃ ಪುನಃ ಆರ್ಜನೆಯಲ್ಲೇ ವಿಶ್ವತೋಮುಖಿ ಪ್ರಯತ್ನದಿಂದ ಮಾಡುತ್ತಾನೋ ಹಾಗೆಯೇ ಪ್ರಾರಬ್ಧ ಕರ್ಮಗಳನ್ನು ಮಾಡಿಸುತ್ತದೆ. ಹೀಗೆ ಹೇಳಿರುವುದರಿಂದ ಭಗವಂತನ ಪರೋಕ್ಷಜ್ಞಾನಕ್ಕೂ ದಾಹಕತೆ (ಉಷ್ಣಸ್ಪರ್ಶ)ಇರುವುದು.

**ಛಾಂದೋಗ್ಯೋಪನಿಷದ್ಯಪಿ । ಜೌತ್ರಾಯಣ ರೈಕ್ವಯೋಃ ಅಪರೋಕ್ಷಜ್ಞಾನ ಪ್ರಕಾಶಸ್ಯ ಬಹಿರ್ನಿರ್ಗತಸ್ಯ ದಾಹಕತ್ವ ಭಯಾತ್ ಹಂಸಾನಾಂ ಪರಸ್ಪರಂ ವಚನಮುದಾಹೃತಂ । ಹೋ ಹೋಯಿ ಭಲ್ಲಾಕ್ಷ ಭಾಲಾಕ್ಷ ಜ್ಞಾನ ಶ್ರುತೇಃ ಜೌತ್ರಾಯಣಸ್ಯ ಸಮಂ ದಿವಾಜ್ಯೋತಿಃ ಆತತಂ ತನ್ಮಾಪ್ರಸಾಂಕ್ಷೀಃ ತತ್ವಾಮಾಪ್ರಧಾಂಕ್ಷೀರಿತಿ । ತಮುಹಪರಃ ಪ್ರತ್ಯುವಾಚ । ಕಂಬರ**

**ಏನಮೇತತ್ಸಂತಂಸಯುಗ್ವಾನಮಿವ ರೈಕ್ವಮಾತ್ಥೇತಿ । ನಚೈತೇ ಔಪಚಾರಿಕ ಪ್ರಯೋಗಾ ಇತಿ ವಾಚ್ಯಂ ।**

ಛಾಂದೋಗ್ಯೋಪನಿಷತ್ತಿನಲ್ಲಿ ಪೌತ್ರಾಯಣ ರೈಕ್ವರ ಅಪರೋಕ್ಷ ಜ್ಞಾನದಿಂದ ಸುಡುವ ಭಯದಿಂದ ಎರಡು ಹಂಸಗಳು ಮಾತಾಡಿದುದು ಹೇಳಿರುತ್ತದೆ. (ಹಂಸಗಳ ಸಂಭಾಷಣೆ) ಎಲವೋ ಭಲ್ಲಾಕ್ಷ ಪೌತ್ರಾಯಣನ ಜ್ಞಾನಜ್ಯೋತಿಯು ಹೊರ ಚಿಮ್ಮಿ ವ್ಯಾಪಿಸಿದೆ. ಅಲ್ಲಿ ನೀನು ಹಾರಬೇಡ ಅದು ನಿನ್ನನ್ನು ಸುಟ್ಟೀತು, ಇನ್ನೊಂದು ಹಂಸ ಹೇಳಿತು, ಎಲವೋ ಇವುಗಳು ಬರೇ ಹೊಗಳುವಿಕೆ ಮಾತ್ರಾ ಎಂದು ಏಕೆ ಎನಬಾರದು ಎಂದರೆ, ಹಾಗೆನಬಾರದು. ಬಹು ಪ್ರಮಾಣ ವಿರೋಧ ಬರುವುದರಿಂದ ಜ್ಞಾನದಾಹಕತೆ ಒಪ್ಪುವುದೇ ಉತ್ತಮವು.

**ಬಹುಪ್ರಮಾಣ ವಿರೋಧಾಪೇಕ್ಷಯೋಷ್ಣಸ್ಪರ್ಶ ಕಲ್ಪನಸ್ಯ ಲಘುತ್ವಾತ್। ಏವಂ ಶೋಕಾದೇರಪ್ಯುಷ್ಣ ಸ್ಪರ್ಶಃ । ಶರೀರ ಶೋಷಕತ್ವ ದರ್ಶನಾತ್ । ಏವಂ ಋಷಿಶಾಪೇನ ವೇನಸ್ಯ ಭಸ್ಮೀ ಭಾವಃ । ವರೇಣ ಭಸ್ಮಾಸುರಸ್ಯ ಕರಸ್ಪರ್ಶೇನ ಭಸ್ಮೀಭಾವಶ್ಚ ತೇಷಾಂ ಅಪರೋಕ್ಷಜ್ಞಾನ ಸಾಮರ್ಥ್ಯೇನ ತದ್ವ್ಯಾಗ್ನಿಸ್ಸ್ಯತಾಗ್ನಿರೂಪೇಣವಾ ದ್ರಷ್ಟವ್ಯಃ ।**

॥ ಇತಿ ಸ್ಪರ್ಶಪ್ರಕರಣಂ ॥

ಹೀಗೆ ದುಃಖಕ್ಕೂ ಸುಡುವ ಶಕ್ತಿಯಿದೆ ದುಃಖದಿಂದ ದೇಹ ಒಣಗುವುದು ಪ್ರತ್ಯಕ್ಷವಾಗಿದೆ. ಹೀಗೆ ಋಷಿ ಶಾಪದಿಂದ ವೇನನು ಬೂದಿಯಾಗಿರುವಿಕೆ ವರದಿಂದ ಭಸ್ಮಾಸುರನ ಕೈಯಿಂದಲೇ ಸುಡುವಿಕೆ ಇತ್ಯಾದಿಗಳು ಜ್ಞಾನಿಗಳ ಅಪರೋಕ್ಷ ಸಾಮರ್ಥ್ಯವು ವ್ಯಕ್ತರೂಪವಾಗಿ ಹೊರಬಂದ ದಾಹಕ ಶಕ್ತಿಯಾಗಿ ತಿಳಿಯಬೇಕು.

ಹೀಗೆ ಗುಣದಲ್ಲಿ ನಾಲ್ಕನೆಯದಾದ ಸ್ಪರ್ಶಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

❋ ❋ ❋ ❋ ❋ ❋ ❋ ❋

# ೩೭. ಸಂಖ್ಯಾ ಪ್ರಕರಣ

**ಸಂಖ್ಯಾಂ ನಿರೂಪಯತಿ ।**

**ಪ.ಸಂ. ಏಕತ್ವಾದಿ ವ್ಯವಹಾರ ಹೇತುಃ ಸಂಖ್ಯಾ । ಏಕತ್ವಂ ದ್ವಿವಿಧಂ । ನಿತ್ಯಮನಿತ್ಯಂ ಚೇತಿ । ನಿತ್ಯಗತಂ ನಿತ್ಯಂ ಅನಿತ್ಯಗತಂ ಅನಿತ್ಯಂ ।**

**ಏಕತ್ವವದ್ದ್ವಿತ್ವಾದಿಕಮಪಿ ಸನಿತ್ಯಾನಿತ್ಯ ವಿಭಾಗಯುಕ್ತಮಿತ್ಯಾಹ ।**

**ಪ.ಸಂ. ದ್ವಿತ್ವತ್ರಿತ್ವಾದಿಕಂಚ ಸರ್ವತ್ರ ಅಪೇಕ್ಷಾ ಬುದ್ಧಿಜನ್ಯಂ ಅನಿತ್ಯಮೇವ । ಅಯಂ ಘಟಃ ಏಕೋಽಯಂ ಪಟಃ ಏಕ ಆಹತ್ಯ ಘಟಪಟೌದ್ವಾವಿತಿ ಇಚ್ಛಾಪೂರ್ವಕ ಬುದ್ಧಿಜನ್ಯತ್ವಾತ್ ದ್ವಿತ್ವಾದೇಃ। ತನ್ನಾಶೇ ತನ್ನಾಶಾದಿತ್ಯರ್ಥಃ। ತದುಕ್ತಂ ವೈಶೇಷಿಕಾಧಿಕರಣ ಸುಧಾಯಾಂ ।**

ಸಂಖ್ಯೆ ಎಂಬುದನ್ನು ನಿರೂಪಿಸುತ್ತಾರೆ. ಒಂದೇ ಮೊದಲಾದ ವ್ಯವಹಾರ ಕಾರಣವಾದುದೇ ಸಂಖ್ಯೆ. ಏಕತೆಯು ಎರಡು ವಿಧ ನಿತ್ಯದಲ್ಲಿರುವನಿತ್ಯವು ಅನಿತ್ಯ ಪದಾರ್ಥಗಳಲ್ಲಿರುವುದು ಅನಿತ್ಯವೆಂದು. ಎರಡು ಮೂರುಗಳೆಂಬುದು ಒಂದರಂತೇ ನಿತ್ಯಾನಿತ್ಯ ಭೇದವುಳ್ಳದಲ್ಲವು. ಏಕಂದರೆ ಎರಡು ಮೂರು ಎಂಬುದು ಅಪೇಕ್ಷೆಯಿಂದ ಹುಟ್ಟಿದವುಗಳಾದ್ದರಿಂದ ಅನಿತ್ಯಗಳೇ ಆಗಿರುತ್ತದೆ. ಇದು ಘಟವು ಇದು ಬಟ್ಟೆಯೂ ಇವೆರಡು ಕಲೆತು ಆದುದು. ಎರಡು ಹೀಗೆ ಇಚ್ಛಾಮೂಲಕವಾಗಿ ಬುದ್ಧಿಯಿಂದ ಹುಟ್ಟಿದವುಗಳು. ಬುದ್ಧಿನಾಶವಾದರೆ ಅವೂ ನಾಶವಾಗುವವುಗಳೇ ಇದನ್ನು ವಿಶೇಷಾಧಿಕರಣ ಸುಧೆಯಲ್ಲಿ ಹೇಳಿದೆ.

**ಅನೇಕತ್ವ ಸಂಖ್ಯಾ ಅನೇಕಾಶ್ರಿತಾ । ಸಾಚ ಅಪೇಕ್ಷಾ ಬುದ್ಧಿಜನ್ಯತ್ವಾದಯಾವದ್ರವ್ಯಭಾವಿನೀತಿ । ದ್ವಿತ್ವಾದಿಕಂ ಸಂಯೋಗಾದಿವನ್ನೈಕಾಧಿಕರಣ ವಿಶ್ರಾಂತಂ । ಕಿಂತ್ವನೇಕಾಧಿಕರಣಕಂ । ಘಟ ಪಟೋಭಯವೃತ್ತಿದ್ವಿತ್ವಂ ಉಭಯಾನುಗತಮೇವೇತಿಯಾವತ್ । ನಚೈವಂ ಭಿನ್ನಾಶ್ಚ ಭಿನ್ನಧರ್ಮಾಶ್ಚೇತಿ ಪ್ರಮಾಣ ವಿರೋಧ ಇತಿ ವಾಚ್ಯಂ । ತಸ್ಯ ಸಮುದಾಯವ್ಯತಿರಿಕ್ತ ಧರ್ಮ ವಿಷಯತ್ವಾತ್ ।**

ಅನೇಕಗಳೆಂಬ ಸಂಖ್ಯೆ ಅನೇಕಗಳೇ ಅನೇಕ ಪದಾರ್ಥಗಳನ್ನು ಆಶ್ರಯಿಸಿರುವವುಗಳೇ. ಅದು ಅಪೇಕ್ಷೆಯಿಂದ ಹುಟ್ಟಿದ್ದಾದ್ದರಿಂದ ಪದಾರ್ಥವಿರುವವರೆಗೂ ಇರುವುದಿಲ್ಲ. ಸಂಯೋಗಾದಿಗಳು ಹೇಗೆ ಒಂದೆಡೆ ಇರುವುದೋ ಹಾಗೆ ದ್ವಿತ್ವ (ಎರಡೆಂಬುದು) ಒಂದೆಡೆ ಇರುವುದಿಲ್ಲಾ ಆದರೆ ಅನೇಕ ಕಡೆ ಇರುವುದು. ಘಟ ಪಟ ಇವೆರಡರಲ್ಲಿರುವ ಎರಡೆಂಬುದು ಎರಡರಲ್ಲೂ

ಅನುಗತ (ಕಲೆತಿರುವುದು) ಅಂದು ಒಂದೇ ಆಗಿರುತ್ತದೆ. ಶಾಸ್ತ್ರದಲ್ಲಿ ಪದಾರ್ಥಗಳೆಲ್ಲವೂ ಬೇರೆ ಬೇರೆಗಳೇ ಎಂದು ಹೇಳಿದೆ. ಎರಡರಲ್ಲಿರುವ ಎರಡು ಎಂಬುದು. ಒಂದೇ ಹೇಗೆ ಎಂದರೆ ಶಾಸ್ತ್ರದಲ್ಲಿ ಹೇಳಿದುದು. ಗುಂಪು ಬಿಟ್ಟು ಒಂದೊಂದೇ ಇರುವ ಸ್ಥಳದಲ್ಲಿ ಆದ್ದರಿಂದ ಬಾಧ ಬರುವುದಿಲ್ಲ - ಇದನ್ನು ವೈಶೇಷಿಕಾಧಿಕರಣ ಅನುವ್ಯಾಖ್ಯಾನ ಸುಧಾದಲ್ಲಿ ಹೇಳಿರುತ್ತದೆ.

**ತದುಕ್ತಂ ವೈಶೇಷಿಕಾಧಿಕರಣ ಅನುವ್ಯಾಖ್ಯಾನೇ । ನ ಸರ್ವಧರ್ಮ ಏಕೋಸ್ತಿ ಸಮುದಾಯಸ್ತುಭಿನ್ನಗಃ ಇತಿ । ಭಿನ್ನಗೋ ಅನೇಕಾಶ್ರಿತ ಇತಿ ಸುಧಾ । ನ ಚೈವಂ ಈಶ್ವರ ಘಟೋಭಯವೃತ್ತಿ ದ್ವಿತ್ವಸ್ಯ ಜನ್ಯತ್ವ ಉಪಾದಾನಾಭಾವ ಇತಿ ವಾಚ್ಯಂ। ಘಟಸ್ಯೈವ ಉಪಾದಾನತ್ವಾತ್ । ನ ಚೋಪಾದೇಯಸ್ಯ ಉಪಾದಾನಾತಿರಿಕ್ತ ವೃತ್ತಿತ್ವಾಭಾವಾದೀಶ್ವರೇ ದ್ವಿತ್ವಾಭಾವ ಪ್ರಸಂಗ ಇತಿ ವಾಚ್ಯಂ । ದೀಪೋಪಾದಾನಕಸ್ಯಾಪ್ಯಾಲೋಕಗುಣಸ್ಯ ಭೂತಲಾದಿ ವೃತ್ತಿತ್ವವದುಪಪತ್ತೇಃ ।**

ಎಲ್ಲಾದರಲ್ಲಿಯೂ ಇರುವ ಒಂದು ಧರ್ಮವಿಲ್ಲಾ, ಸಮುದಾಯವೂ ಬೇರೆ ಬೇರೆಗಳೇ ಆಗಿರುತ್ತದೆ. ಭಿನ್ನಗಳಾಗಿ ಅನೇಕಗಳಲ್ಲಿರುತ್ತದೆ ಎಂದು ಸುಧೆಯಲ್ಲಿ ಹೇಳಿರುತ್ತದೆ. ಈಶ್ವರ ಘಟ ಇವರೀರ್ವರಲ್ಲಿ ದ್ವಿತ್ವ (ಎರಡು ಎಂಬುದು) ಜನ್ಯವಲ್ಲ ಉಪಾದಾನವೂ ಇಲ್ಲವಲ್ಲವೇ ಎಂದರೆ, ಅಲ್ಲ, ಘಟವೇ ಉಪಾದಾನವಾದುದಾಗಿರುತ್ತದೆ. ಉಪಾದಾನ (ಪರಿಣಾಮ ಕಾರಣ) ಉಪಾದೇಯ(ಕಾರ್ಯ) ಇವುಗಳಿಗೆ ಬೇರೆ ಬೇರೆ ಇರುವಿಕೆ ಇಲ್ಲವಾದ್ದರಿಂದ ಈಶ್ವರನಲ್ಲಿ ದ್ವಿತ್ವಾದಿಗಳಿಲ್ಲವಾಗಲಿ, ಎಂದರೆ ಹಾಗೆನಬಾರದು. ದೀಪೋಪಾದಾನಕವಾದ ಬೆಳಕು ಇವೆರಡಕ್ಕೂ ಭೂತಲ, ಆಕಾಶಗಳಲ್ಲಿರುವಂತೇ ಈಶ್ವರನಿಗೂ ದ್ವಿತ್ವಾದಿಗಳಿಗೂ ಆಶ್ರಯಯುಕ್ತವಾಗುತ್ತದೆ.

**ತಂತ್ವಾದ್ಯುಪಾದಾನಕಸ್ಯಾಪಿ ಪಟಾದೇರಭೇದ ಸಂಬಂಧೇನ ತಂತು ವೃತ್ತಿತ್ವೇಪಿ ಸಂಬಂಧಾಂತರೇಣ ಭೂತಲಾದಿ ವೃತ್ತಿತ್ವವದುಪಪತ್ತೇಃ । ನಚೈವಂ ಪರಮಾತ್ಮರೂಪಯೋಃ ಲಕ್ಷ್ಮೀಪರಮಾತ್ಮನೋಃ ಜೀವೇಶಯೋಃ ಈಶಾವ್ಯಾಕೃತಾಕಾಶಯೋಃ ದ್ವಿತ್ವಂನಸ್ಯಾತ್ತೇಷಾಂ ನಿರ್ವಿಕಾರತ್ವಾದಿತಿ ವಾಚ್ಯಂ । ನಿತ್ಯಗತಾನಾಂ ದ್ವಿತ್ವಾನಾಮಪಿ ಅನನ್ಯಗತ್ಯಾ ಅಚಿಂತ್ಯೇಶ್ವರಶಕ್ತ್ಯಾ ಅನಿತ್ಯ ದ್ರವ್ಯವಿಕಾರತ್ವಸ್ಯ ವಕ್ತವ್ಯತ್ವಾತ್ ।**

ಮತ್ತೂ ತಂತು ಉಪಾದಾನಕವಾದ ಪಟವು ಅಭೇದ ಸಂಬಂಧದಿಂದ ತಂತುವಿನಲ್ಲಿದ್ದರೂ ಸಂಬಂಧಾಂತರದಿಂದ ಭೂಮಿಯಲ್ಲೂ ಇರುವಂತೇ ಈಶ್ವರ ದ್ವಿತ್ವಾದಿಗಳಿಗೆ ಆಶ್ರಯವು ಉಕ್ತವಾಗುತ್ತದೆ. ಪರಮಾತ್ಮ, ಅವನ ರೂಪಕ್ಕೂ ಲಕ್ಷ್ಮೀನಾರಾಯಣರಿಗೂ, ಜೀವೇಶ್ವರರಿಗೂ, ಈಶಾವ್ಯಾಕೃತಾಕಾಶಗಳಿಗೂ

ವಿಕಾರವಿಲ್ಲವಾದ್ದರಿಂದಲೇ ಅವುಗಳಲ್ಲಿ ದ್ವಿತ್ವವಿಲ್ಲವಾಗಲಿ, ಹಾಗೆನಬಾರದು. ನಿತ್ಯ ವಸ್ತುಗಳಲ್ಲಿರುವ ದ್ವಿತ್ವಾದಿಗಳಿಗೆ ಅನನ್ಯಗತಿಯಿಂದ (ಬೇರೆಗತಿ ಇಲ್ಲವಾದ್ದರಿಂದ)ಅಚಿಂತ್ಯೇಶ್ವರ ಶಕ್ತಿಯಿಂದಲೂ ಅನಿತ್ಯದ್ರವ್ಯದಂತೇ ವಿಕಾರವನ್ನು ಹೇಳಬೇಕು. ಅವಿಕಾರಿತೆ ಶ್ರುತಿಗೆ ದ್ವಿತ್ವಾತಿರಿಕ್ತ ವಿಷಯತೆಯಿಂದ ಕೂಡಿಸಬೇಕು. ಆದ್ದರಿಂದ ದ್ವಿತ್ವಾದಿಗಳು ಸರ್ವತ್ರ ಅನಿತ್ಯಗಳೇ ಆಗಿರುತ್ತದೆ.

**ಅವಿಕಾರ ಶ್ರುತೇಶ್ಚ ದ್ವಿತ್ವಾತಿರಿಕ್ತ ವಿಷಯತ್ವೋಪಪತ್ತೇಃ। ಯದ್ವಾನಿತ್ಯ ದ್ರವ್ಯಗತಾನಾಂ ದ್ವಿತ್ವತ್ರಿತ್ವಾದೀನಾಂ ನಿತ್ಯತ್ವಮೇವಾಸ್ತು। ಅಪೇಕ್ಷಾಬುದ್ಧೇಶ್ಚ ದ್ವಿತ್ವಾಭಿವ್ಯಂಜಕತ್ವಮೇವನತುತಜ್ಜನಕತ್ವಂ। ತದುಕ್ತಂ ಉಪಾಸನಾಪಾದೀಯ ಸುಧಾಯಾಂ। ದಶತ್ವಾದಿ ಸಂಖ್ಯಾ ಖಲ್ವಪೇಕ್ಷಾಬುದ್ಧಿ ಜನ್ಯಾ ತದ್ವ್ಯಂಗ್ಯಾವೇತಿ। ನನು ಜೀವೇಶ್ವರದ್ವಿತ್ವಸ್ಯ ನಿತ್ಯತ್ವೇ ತತ್ಕಿಂ ಜೀವೇಶ್ವರಾಭ್ಯಾಂ ಭಿನ್ನಂ ಭಿನ್ನಾಭಿನ್ನಂ ಅಭಿನ್ನಂ ವಾ। ನಾದ್ಯಃ ಯಾವದ್ವಸ್ತು ನ ಭೇದವದಿತಿ ತತ್ವವಿವೇಕ ವಿರೋಧಾತ್। ನಿತ್ಯಾಧರ್ಮಾಸ್ತದೀಯಾಸ್ತು ಸರ್ವೇಸ್ಯಾನ್ನೈವಭೇದಿನಃ। ಇತ್ಯನುವ್ಯಾಖ್ಯಾನ ವಿರೋಧ ಪ್ರಸಂಗಾಚ್ಚ। ನ ದ್ವಿತೀಯಃ। ಖಂಡಿತೇ ಭೇದ ಐಕ್ಯಂ ಚೇತ್ಯುಕ್ತತ್ವೇನ ಯಾವದ್ವಸ್ತುಭಾವಿನಃ ಭೇದಾಭೇದ ಅಯೋಗಾತ್। ನ ತೃತೀಯಃ । ಜೀವೇಶ್ವರಯೋರಭೇದ ಪ್ರಸಂಗಾತ್ ।**

ಇನ್ನೂ ಅನಿತ್ಯ ದ್ರವ್ಯಗಳಲ್ಲಿರುವ ದ್ವಿತ್ವಾದಿಗಳಿಗೆ ಅನಿತ್ಯತೆ, ನಿತ್ಯದ್ರವ್ಯಗಳಲ್ಲಿರುವ ದ್ವಿತ್ವತ್ರಿತ್ವಾದಿಗಳಿಗೆ ನಿತ್ಯತೆಯೇ ಇರಲಿ. ಅಪೇಕ್ಷಾ ಬುದ್ಧಿಯಿಂದ ಹುಟ್ಟಿದ ದ್ವಿತ್ವಾದಿಗಳಿಗೆ ಅಭಿವ್ಯಂಜಕತೆಯೇ ಇರಲಿ. ಅದರಿಂದ ಹುಟ್ಟುವಿಕೆ ಬೇಡ. ಹೀಗೆ ಉಪಾಸನಾಪಾದೀಯ ಸುಧಾದಲ್ಲಿ ಹೇಳಿದೆ. ದ್ವಿತ್ವ ದಶತ್ವಾದಿ ಸಂಖ್ಯೆಯು ಅಪೇಕ್ಷಾ ಬುದ್ಧಿಯಿಂದ ಹುಟ್ಟಿದ್ದು ಹೌದು. ಆದುದರಿಂದ ವ್ಯಂಗ್ಯವೂ (ತಿಳಿದುರುವುದೂ) ಹೌದು ಎಂದು. ಜೀವೇಶ್ವರರಲ್ಲಿರುವ ದ್ವಿತ್ವ ನಿತ್ಯ ಎನ್ನುವುದಾದರೆ ಅದು ಜೀವೇಶರಿಂದ ಭಿನ್ನವೇ? ಭಿನ್ನಾಭಿನ್ನವೇ? ಅಭಿನ್ನವೇ? ಭಿನ್ನವೆಂಬ ಮೊದಲ ಪಕ್ಷವು ಕೂಡುವುದಿಲ್ಲ. ಎಲ್ಲಾ ವಸ್ತುಗಳೂ ಭೇದ ಉಳ್ಳದ್ದಲ್ಲಾ ಎಂಬ ತತ್ವವಿವೇಕ ವಿರೋಧ ಬರುತ್ತದೆ. ಮತ್ತೂ ನಿತ್ಯ ಧರ್ಮಗಳು ಅದರ ಸಂಬಂಧವುಳ್ಳ ಎಲ್ಲಾ ಧರ್ಮಗಳು ಅದರಿಂದ ಭೇದ ಉಳ್ಳವುಗಳಲ್ಲಾ ಎಂಬ ಅನುವ್ಯಾಖ್ಯಾನ ವಿರೋಧ ಪ್ರಸಂಗ ಬರುತ್ತದೆ. ಭಿನ್ನಾಭಿನ್ನವೆಂಬ ಎರಡನೆ ಪಕ್ಷವೂ ಸರಿಯಾಗುವುದಿಲ್ಲವು. ಖಂಡಿತವಾದರೆ ಭೇದ ಇಲ್ಲವಾದರೆ ಐಕ್ಯವೇ ಹೀಗೆ ಹೇಳುವುದರಿಂದ ಯಾವದ್ವಸ್ತುಭಾವೀ (ವಸ್ತು ಇರುವವರೆಗೂ ಇರುವುದು)ಗಳಿಗೆ ಭೇದಾಭೇದವು ಯುಕ್ತವಾಗುವುದಿಲ್ಲವು. ಮೂರನೇ ಪಕ್ಷ ಜೀವೇಶ್ವರರು ಬೇಕಾಗುತ್ತದೆ. ಏಕೆಂದರೆ -

**ಯೋಯದತ್ವಂತಾಭಿನ್ನಾಭಿನ್ನಃ ಸ ತದತ್ಯಂತಾ ಭಿನ್ನಃ ಇತಿ ವ್ಯಾಪ್ತೇಃ। ಯಥಾ**

**ಮೂಲ ರೂಪಾತ್ಯಂತಾಭಿನ್ನಯೋಃ ರಾಮಕೃಷ್ಣಯೋಃ ಅತ್ಯಂತಾಭಿನ್ನತ್ವಮಿತಿ ಚೇನ್ನ । ಜೀವೇಶ್ವರ ದ್ವಿತ್ವಸ್ಯ ಜೀವೇಶ್ವರಾಭ್ಯಾಂ ಭೇದಾಭೇದಸ್ವೀಕಾರಾತ್।**

ಯಾವುದು ಯಾವುದರಿಂದ ಅತ್ಯಂತಾಭಿನ್ನಾಭಿನ್ನವೋ ಅದು ಅದರಿಂದ ಅತ್ಯಂತಾ ಅಭಿನ್ನವೇ ಹೀಗೆ ವ್ಯಾಪ್ತಿಯಲ್ಲಿ ಕಂಡಿದೆ ಎಂದರೆ ಮೂಲರೂಪದಿಂದ ರಾಮಕೃಷ್ಣರೂಪಗಳಿಗೆ ಅತ್ಯಂತ ಅಭಿನ್ನವೂ ಹೌದು ಭಿನ್ನವೂ ಹೌದು. ಹಾಗೆ ಎನ್ನುತ್ತೇವೆ. ಮೂರು ಕಲ್ಪವು ಕೂಡುವುದಿಲ್ಲಾ ಎಂದರೆ ತಪ್ಪು ಹಾಗೆನಬಾರದು. ಜೀವೇಶ್ವರರಲ್ಲಿರುವ ದ್ವಿತ್ವಕ್ಕೆ ಭೇದಾಭೇದವನ್ನೇ ಹೇಳುತ್ತೇವೆ.

**ನಚ ಯಾವದ್ವಸ್ತು ಭಾವಿತ್ವೇನ ಖಂಡಿತತ್ವಾಭಾವಾತ್ ಕಥಂ ಭೇದಾಭೇದ ಇತಿ ವಾಚ್ಯಂ । ಖಂಡಿತೇ ಭೇದ ಐಕ್ಯಂ ಚೇತಿ ವಚನಸ್ಯ ದ್ವಿತ್ವಾತಿರಿಕ್ತ ಧರ್ಮವಿಷಯತ್ವಾತ್ । ಅನ್ಯಥಾ ಭಗವತೋ ದ್ವಿತ್ವಾದಿ ಸಂಖ್ಯಾವ್ಯತಿರಿಕ್ತಾ। ನ್ನೈವ ಭೇದಿನಃ ಇತಿ ವೈಶೇಷಿಕಾಧಿಕರಣ ಸುಧಾ ವಿರೋಧ ಪ್ರಸಂಗಾತ್ । ತಥಾ ಚಯೋಯದತ್ಯಂತಾಭಿನ್ನಾಭಿನ್ನ ಇತಿ ವ್ಯಾಪ್ತೇಃ ಅತ್ಯಂತಾಭೇದ ಸ್ಥಲ ಏವ ಪ್ರವೃತ್ತತ್ವೇನ ಪ್ರಕೃತೇ ತದವಕಾಶಾಭಾವಾತ್ ।**

ಯಾವದ್ವಸ್ತುಭಾವಿ (ವಸ್ತು ಇರುವತನಕ ಇರುವುದು) ಆಗಿರುವುದರಿಂದ ಖಂಡಿತವಾಗದೇ ಇರುವುದರಿಂದ ಭೇದಾಭೇದವುಹೇಗೆ? ಹಾಗೆನಬಾರದು "ಖಂಡಿತೇ ಭೇದ ಐಕ್ಯಂಚ" ಎಂಬ ಪಂಕ್ತಿಗೆ ದ್ವಿತ್ವಾತಿರಿಕ್ತ ಧರ್ಮ ವಿಷಯತೆ ಇರುವುದರಿಂದ, ಹಾಗಿಲ್ಲವಾದರೆ ಭಗವಂತನಿಗೆ ದ್ವಿತ್ವಾದಿ ಸಂಖ್ಯಾತಿರಿಕ್ತವಾದುದಿಲ್ಲಾ ಎಂಬ ವೈಶೇಷಿಕಾಧಿಕರಣ ಸುಧಾ ವಿರೋಧ ಪ್ರಸಂಗ ಬರುತ್ತದೆ. ಒಟ್ಟಿನಲ್ಲಿ ಯಾವುದು ಯಾವುದರಿಂದ ಅತ್ಯಂತ ಭಿನ್ನಾಭಿನ್ನವೊ ಅದರಿಂದ ಅಭಿನ್ನವೇ ಎಂಬ ವ್ಯಾಪ್ತಿಯು ಅತ್ಯಂತಾಭೇದ ಸ್ಥಳದಲ್ಲೇ ಪ್ರವೃತ್ತವಾಗಿರುವುದರಿಂದ ಪ್ರಕೃತ ಅವ್ಯಾಪ್ತಿಗೆ ಅವಕಾಶವಿರುವುದಿಲ್ಲ.

**ನನ್ವೇವಮಸ್ಮದಾದ್ಯಪೇಕ್ಷಾಬುದ್ಧಿಜನ್ಯ ದ್ವಿತ್ವಸ್ಯ ವಿನಾಶೇಪಿ । ಈಶ್ವರಾಪೇಕ್ಷಾ ಬುದ್ಧಿಜನ್ಯ ಘಟಾದ್ಯನಿತ್ಯಗತದ್ವಿತ್ವಸ್ಯ ಕಥಂ ವಿನಾಶೋಽಪಿ । ಈಶ್ವರಾಪೇಕ್ಷಾ ಬುದ್ಧೇರ್ನಿತ್ಯತ್ವಾತ್ । ನಚ ತಸ್ಯಾಪಿ ನಿತ್ಯತ್ವಮೇವಾಸ್ತ್ವಿತಿ ವಾಚ್ಯಂ । ಆಶ್ರಯಸ್ಯ ಘಟಾದೇಃ ಅನಿತ್ಯತ್ವೇನ ತದ್ಧರ್ಮಸ್ಯ ನಿತ್ಯತ್ವಾಯೋಗಾದಿತಿ ಚೇನ್ನ ।**

ನಮ್ಮಗಳ ಅಪೇಕ್ಷಾ ಬುದ್ಧಿಯಿಂದ ದ್ವಿತ್ವಾದಿಗಳಿಗೆ ನಾಶವಿದ್ದರೂ ಈಶ್ವರನ ಆಪೇಕ್ಷಾ ಬುದ್ಧಿಯಿಂದ ಹುಟ್ಟಿದ ಘಟಾದಿ ಅನಿತ್ಯ ವಸ್ತುಗಳಲ್ಲಿರುವ ದ್ವಿತ್ವಾದಿಗಳಿಗೆ ಹೇಗೆ ನಾಶವೊ, ಈಶ್ವರನ ಆಪೇಕ್ಷಾ ಬುದ್ಧಿಗೆ ನಿತ್ಯತೆ ಇರುವುದರಿಂದ, ಅದಕ್ಕೂ ನಿತ್ಯತೆ ಇರಲಿ ಎನಬಾರದು. ಆಶ್ರಯವಾದ ಘಟಾದಿಗಳಿಗೆ ಅನಿತ್ಯತೆ ಇರುವುದರಿಂದ

ಅದರ ಧರ್ಮ ನಿತ್ಯತೇ ಬರಲು ಶಕ್ಯವಿಲ್ಲವಾದ್ದರಿಂದ ಎಂದರೆ ಹೀಗೂ ಎನಬಾರದು. ಆಪೇಕ್ಷಾ ಬುದ್ಧಿ ಆದರೂ ಇಚ್ಛಾ ಪೂರ್ವಕವೇ ಆಗಿರುವುದರಿಂದ ಈಶ್ವರೇಚ್ಛಗೆ ಶಕ್ಯತೆ, ವ್ಯಕ್ತ್ಯತೆ ಒಪ್ಪಿರುವುದರಿಂದ ಘಟಾದಿಗಳಲ್ಲಿರುವ ದ್ವಿತ್ವಾದಿಗಳಿಗೆ ನಾಶಯುಕ್ತವೇ ಆಗಿರುತ್ತದೆ.

**ಕೇಚಿತ್ತು । ದ್ವಿತ್ವಂ ನೈಕಂ ಕಿಂತು ಸಂಯೋಗಾದಿವತ್ ಭಿನ್ನಭಿನ್ನ ಮೇವ । ಘಟಃ ಪಟಾದ್ದ್ವಿತೀಯಃ ಪಟಃ ಘಟಾದ್ದ್ವಿತೀಯಃ ಇತಿ ಪ್ರತ್ಯೇಕಂ ವಿಶ್ರಾಂತತಯಾ ಪ್ರತೀತೇಃ । ಘಟ ಸಂಯುಕ್ತಃ ಪಟಃ ಪಟಸಂಯುಕ್ತೋ ಘಟಃ ಇತಿವತ್ । ಏವಂ ಚ ಪರಮಾತ್ಮಾದಿ ನಿತ್ಯಪದಾರ್ಥಗತ ದ್ವಿತ್ವಾನಾಮ ನಿತ್ಯಗತ ದ್ವಿತ್ವಾನಾಂ ಚ ತತ್ತತ್ಸ್ವರೂಪತ್ವಮೇವ ।**

ಕೆಲವರು ಹೇಳುತ್ತಾರೆ, ದ್ವಿತ್ವರು ಒಂದಲ್ಲಾ ಸಂಯೋಗದಂತೇ ಬೇರೆ ಬೇರೆಗಳೇ ಘಟವು ಪಟದಿಂದ ಎರಡನೆಯದು ಪಟವು ಘಟದಿಂದ ಎರಡನೆಯದು ಎಂಬಂತೇ ಪ್ರತ್ಯೇಕವಾಗಿ ಉಳಿದಿರುವ ಪ್ರಸಿದ್ಧಿಯಿರುವುದರಿಂದ, ಹೇಗೆಂದರೆ ಘಟದಿಂದ ಸಂಯುಕ್ತ ಪಟ ಪಟದಿಂದ ಸಂಯುಕ್ತ ಘಟ ಎಂಬಂತೇ, ಒಟ್ಟಿನಲ್ಲಿ ಪರಮಾತ್ಮನೇ ಮೊದಲಾದ ನಿತ್ಯ ಪದಾರ್ಥದಲ್ಲಿರುವ ದ್ವಿತ್ವಾದಿಗಳಿಗೆ ಅನಿತ್ಯ ಘಟಾದಿಗಳಲ್ಲಿರುವ ದ್ವಿತ್ವಾದಿಗಳಿಗೆ ಆಯಾ ಆಶ್ರಯ ಸ್ವರೂಪತಯೇ ಹೇಳೋಣ.

**ತೇನ ನಿತ್ಯ ದ್ವಿತ್ವಸ್ಯ ಉಪಾದಾನ ಕಲ್ಪನಾಪ್ರಯಾಸಃ ಅವಿಕಾರತ್ವೇನ ಶ್ರುತ್ಯಾದಿ ಸಿದ್ಧಸ್ಯ ಭಗವತೋ ವಿಕಾರ ಕಲ್ಪನಾದೋಷಃ ಪರಮಾತ್ಮನಾ ಭೇದಾಭೇದ ಪರಿಕಲ್ಪನಾದೋಷಶ್ಚ ಪರಾಸ್ತಃ ಇತ್ಯಾಹುಃ । ತದಸಾರಂ ।**

ಹೀಗೆ ಹೇಳುವುದರಿಂದ ನಿತ್ಯ ದ್ವಿತ್ವಾದಿಗಳಿಗೆ ಉಪಾದಾನ ಕಲ್ಪನೆಮಾಡುವ ಪ್ರಯಾಸವಿಲ್ಲ. ಅವಿಕಾರಿಯೆಂದು ಸಿದ್ಧನಾದ ಭಗವಂತನಿಗೆ ವಿಕಾರತೆ ಕಲ್ಪನಾ ದೋಷವಿಲ್ಲ. ಪರಮಾತ್ಮನಿಂದ ಭೇದಾಭೇದ ಕಲ್ಪನಾ ದೋಷವೂ ಹೋಗುತ್ತದೆ. ಹೀಗೆ ಹೇಳುತ್ತಾರೆ. ಅದು ಅತ್ಯಂತಾಽಯುಕ್ತವು ಏಕೆಂದರೆ,

**ದ್ವಿತೀಯತ್ವಸ್ಯ ದ್ವಿತ್ವಾತಿರಿಕ್ತತ್ವಾತ್ । ಚತುರ್ಥತ್ವ ಪಂಚಮತ್ವಾದಿವತ್ಪೂರಣಪ್ರತ್ಯಯ ಅರ್ಥಕತ್ವಾತ್ । ನಹಿ ಪಂಚಮ ಇತ್ಯುಕ್ತೇ ಪಂಚೇತ್ಯರ್ಥಃ । ನವಾ ಚತುರ್ಥ ಇತ್ಯುಕ್ತೇ ಚತ್ವಾರ ಇತ್ಯರ್ಥಃ । ಕಿಂತು ಪಂಚಮತ್ವಂ ಪಂಚತ್ವ ಸಂಖ್ಯಾನ್ಯದೇವ ।**

ಎರಡನೆಯದು ಎಂಬುದು. ಎರಡರಿಂದ ಬೇರೆಯೇ ಆಗಿದೆ. ನಾಲ್ಕು ಐದು ಎಂಬುವುದು ಸಂಖ್ಯಾ ತುಂಬುವ ಅರ್ಥಕವಾದುದು ಆದ್ದರಿಂದ ಐದನೆಯವನು ಎಂದರೆ ಐದೆಂದು ಅರ್ಥವಾಗುವುದಿಲ್ಲವು. ನಾಲ್ಕನೆಯವನು ಎಂದರೆ ನಾಲ್ಕೆಂದು ಅರ್ಥವಲ್ಲ. ಐದನೆಯವನೂ ಎಂಬುವುದು ಬೇರೆ. ಐದು ಎಂಬ ಸಂಖ್ಯೆಯೇ

ಬೇರೆ. ಆದರಂತೇ ಇಲ್ಲ.

**ತದ್ವದತ್ರಾಪಿ ದ್ವಿತೀಯ ಇತ್ಯುಕ್ತೇ ದ್ವಾವಿತಿನಾರ್ಥ: । ಕಿಂತು ದ್ವಿತ್ವಸಂಖ್ಯಾಪೂರಕ ಇತ್ಯೇವಾರ್ಥ: । ಯಥಾ ಚ ಏಕತ್ರ ದ್ವಾವಿತಿ ಪ್ರತೀತೇ: ಅಭಾವಾತ್ ದ್ವಿತ್ವಮುಭಯಾನುಗತಮೇವ । ಅನ್ಯಥಾ ಪೂರ್ವೋಕ್ತ ಅನುವ್ಯಾಖ್ಯಾನ ಸುಧಾ ಪ್ರಸಂಗ: ಇತ್ಯಲಂ ।**

ಎರಡನೆಯವನು ಎಂದರೆ ಎರಡೆಂದು (ಇಬ್ಬರೆಂದು) ಅರ್ಥವಲ್ಲವು. ಆದರೆ ಎರಡರ ಸಂಖ್ಯಾ ಎಂದರ್ಥವು. ಹೀಗಿರುವುದರಿಂದ ಒಂದೆಂಬುದು ಎರಡೆಂಬುದಲ್ಲವಾದ್ದರಿಂದ, ಎರಡೆಂಬುದು ಎರಡರಲ್ಲೂ ಅನುಗತ (ಕಲೆತೆ ಇರುವ ಧರ್ಮವು) ಹೀಗಿಲ್ಲವಾದರೆ ಹಿಂದೆ ಹೇಳಿದ ಅನುವ್ಯಾಖ್ಯಾನ ಸುಧಾ ಗ್ರಂಥಗಳ ವಿರೋಧವೇ ಬರುತ್ತದೆ.

**ಏಕತ್ವಾದಿ ಪರಾರ್ಧಪರ್ಯಂತಾ ಸಂಖ್ಯೇತಿ ತಾರ್ಕಿಕಾ: । ತಾನ್ ದೂಷಯತಿ ।**

**ಪ.ಸಂ. ಏಕತ್ವಾದ್ಯನಂತಪರ್ಯಂತಾ ।**

**ಪರಾರ್ಧಾಖ್ಯಸಂಖ್ಯಾತೋಽಧಿಕ ಸಂಖ್ಯಾಯಾ: ಶಾಸ್ತ್ರೇಽಸತ್ವಾದಿತಿ ಸುಧೋಕ್ತೇ: । ಸಂಖ್ಯಾಯಾ: ಆಶ್ರಯಮಾಹ ।**

**ಪ.ಸಂ. ಸರ್ವಪದಾರ್ಥವೃತ್ತಿ: ।**

**ನಚ ಗುಣಕರ್ಮಾದೌ ನ ಸಂಖ್ಯೇತಿವಾಚ್ಯಂ । ಚತುರ್ವಿಂಶತಿ ಗುಣಾ: । ಪಂಚಕರ್ಮಾಣಿ । ಸಾಮಾನ್ಯಂ ದ್ವಿವಿಧಂ । ಅಭಾವಶ್ಚತುರ್ವಿಧ: ಇತ್ಯಾದಿತ್ವದೀಯ ವ್ಯವಾಹಾರೋನಸ್ಯಾತ್ ।**

ತಾರ್ಕಿಕರು ಒಂದು ಆರಂಭಿಸಿ ಪರಾರ್ಧಪರ್ಯಂತವಾದ ಸಂಖ್ಯೇ ಎಂಬುವುದು ತಪ್ಪು. ಸಂಖ್ಯೆಗಳು ಅನಂತವಾದವುಗಳೇ. ಪರಾರ್ಧದಕ್ಕಿಂತಲೂ ಹೆಚ್ಚಿನ ಸಂಖ್ಯೆ ಉಂಟೆಂದು ಸುಧಾದಲ್ಲಿ ಹೇಳಿರುತ್ತದೆ. ಸಂಖ್ಯೆಗೆ ಆಶ್ರಯವೆಂದರೆ, ಸರ್ವಪದಾರ್ಥಗಳೂ ಸಂಖ್ಯಾಶ್ರಯಗಳೇ ಗುಣ ಕರ್ಮಾದಿಗಳಲ್ಲಿ ಸಂಖ್ಯಾ ಇಲ್ಲವೆಂದು ತಾರ್ಕಿಕರೆನ್ನುತ್ತಾರೆ. (ಗುಣೇಗುಣಾನಂಗೀಕಾರ:) ಅದು ಸ್ವವ್ಯಾಹತಿಯು. ಅವರ ಮಾತೇ ಇಪ್ಪತ್ನಾಲ್ಕು ಗುಣಗಳು ಐದು ಕರ್ಮಗಳು ಎರಡು ಸಾಮಾನ್ಯಗಳು ನಾಲ್ಕು ಅಭಾವಗಳು ಇವೇ ಮೊದಲಾದ ತನ್ನ ಮಾತಿಗೆ ವಿರೋಧವಾಗಿರುವುದರಿಂದ ತಪ್ಪಾಗುತ್ತದೆ.

**ನಚ ದ್ರವ್ಯಗತ್ಯೈವ ಸಂಖ್ಯಾಗುಣಾದೌ ಭಾಸತ ಇತಿ ವಾಚ್ಯಂ । ದ್ರವ್ಯಾಣಾಂ ಚತುರ್ವಿಂಶತಿ ತತ್ವಾದಿನಿಯಮಾಭಾವಾತ್ । ಗುಣಾದಿಗತ ಸಂಖ್ಯೈವ ದ್ರವ್ಯೇ ಭಾಸತ ಇತ್ಯಪಿವಕ್ತುಂ ಶಕ್ಯತ್ವಾಚ್ಚ । ನಚ ಗುಣಾದೌ ಗುಣಾಂಗೀಕಾರೇ**

**ದ್ರವ್ಯತ್ವಾಪತ್ತಿರಿತಿ ವಾಚ್ಯಂ । ಗುಣಾದಿವ್ಯಾವೃತ್ತಲಕ್ಷಣಾಂತರಸ್ಯೈವ ಕರ್ತುಮುಚಿತತ್ವಾತ್ ಇತಿ ಸಂಕ್ಷೇಪಃ ।**

॥ ಇತಿ ಸಂಖ್ಯಾಪ್ರಕರಣಂ ॥

ದ್ರವ್ಯದಲ್ಲಿದ್ದು ಸಂಖ್ಯೆಯೇ ಗುಣಾದಿಗಳಲ್ಲಿ ತೋರುತ್ತದೆ ಎಂದರೆ ಇಪ್ಪತ್ತು ನಾಲ್ಕೇ ಗುಣಗಳೆಂಬ ನಿಯಮವಿರುವುದಿಲ್ಲ. ಇನ್ನೂ ಗುಣಾದಿಗಳಲ್ಲಿರುವುದೇ ದ್ರವ್ಯದಲ್ಲಿ ತೋರುತ್ತಿದೆ ಎಂಬುದು ಸರಿಯಾಗಿರುತ್ತದೆ. ಗುಣದಲ್ಲಿ ಗುಣವನ್ನು ಒಪ್ಪಿದರೆ ಗುಣಗಳಿಗೆ ದ್ರವ್ಯತೆ ಬರಬೇಕಾಗುತ್ತದೆ. ಎಂದರೆ ದ್ರವ್ಯಗತವಾದ ಗುಣಲಕ್ಷಣವನ್ನು ಬೇರೇ ಮಾಡಬೇಕು.

ಸಂಖ್ಯಾ ಪ್ರಕರಣವು ಕನ್ನಡಾನುದೊಂದಿಗೆ ಸಮಾಪ್ತವಾಯಿತು.

* * * * * * * *

# ೩೮. ಪರಿಮಾಣ ಪ್ರಕರಣ

**ಪರಿಮಾಣ ಸ್ವರೂಪಮಾಹ ।**

**ಪ.ಸಂ. ಅಣುತ್ವಾದಿ ಹೇತುಃ ಗುಣಃ ಪರಿಮಾಣಂ ।**

**ತದ್ವಿಭಾಗ ಮಾಹ ।**

**ಪ.ಸಂ. ತತ್ರಿವಿಧಂ ಅಣುಮಹತ್ ಮಧ್ಯಮಂ ಚೇತಿ ।**

**ದೀರ್ಘತ್ವ ಹ್ರಸ್ವತ್ವಯೋಃ ಮಧ್ಯಮಪರಿಮಾಣ ಏವ ಅಂತರ್ಭಾವಃ । ಇತ್ಯರ್ಥಃ । ನಿತ್ಯ ಪರಿಮಾಣಾನಾಮಾಶ್ರಯಮಾಹ ।**

**ಪ.ಸಂ. ನಿತ್ಯಂ ತ್ರಿವಿಧಮಪಿ ಪರಿಮಾಣಂ ಈಶಲಕ್ಷ್ಮ್ಯೋಃ ಯುಗಪದೇವ ।**

**ತ್ರಿವಿಧಮಪಿ ಪರಿಮಾಣಂ ಪರಮಾತ್ಮನ ಉಕ್ತಂ ತೃತೀಯ ತಾತ್ಪರ್ಯೇ। ತಥಾಪಿ ದೇಶತಸ್ತಸ್ಯ ಪರಿಚ್ಛೇದೋಽಪಿವಿದ್ಯತೇ । ಪರಿಚ್ಛೇದಃ ತಥಾವ್ಯಾಪ್ತಿರೇಕರೂಪೇಽಪಿ ಯುಜ್ಯತೇ । ತಥಾ ಅಚಿಂತ್ಯಾದ್ಭುತೈಶ್ವರ್ಯಾದಿತಿ।**

ಪರಿಮಾಣ ಸ್ವರೂಪವನ್ನು ನಿರೂಪಿಸುತ್ತಾರೆ. ಪರಿಮಾಣವೆಂದರೆ ಪರಿಮಿತಿ ಇದು ಸಣ್ಣ ದೊಡ್ಡ ಎಂಬ ವ್ಯವಹಾರಕ್ಕೆ ಕಾರಣವಾದುದು. ಗುಣವು ಅದು ಮೂರು ವಿಧವಾದುದು. ಸಣ್ಣದು ದೊಡ್ಡದು ಮಧ್ಯಮ ಎಂದು. ಉದ್ದ, ಗಿಡ್ಡ ಇವುಗಳೆಲ್ಲವು ಮಧ್ಯಮ ಪರಿಮಿತಿಯಲ್ಲಿ ಅಂತರ್ಗತಗಳಾಗುತ್ತವೆ. ಇದೂ ನಿತ್ಯ ಪರಿಮಾಣ ಅನಿತ್ಯಪರಿಮಾಣವೆಂದು ಪೂರ್ವದಂತೆ ಭಿನ್ನವಾದವುಗಳು. ನಿತ್ಯ

ಪರಿಮಾಣಾಶ್ರಯಗಳೆಂದರೆ ನಿತ್ಯ ಪದಾರ್ಥಗಳು ತ್ರಿವಿಧವಾದ ತ್ರಿವಿಧ ಪರಿಮಾಣವು ಪರಮಾತ್ಮ ಲಕ್ಷ್ಮಿಯರಿಗೆ ಏಕಕಾಲದಲ್ಲಿಯೇ, ಪರಮಾತ್ಮನಲ್ಲಿ ಮೂರು ವಿಧ ಪರಿಮಿತಿಯನ್ನು ತೃತೀಯ ತಾತ್ಪರ್ಯದಲ್ಲಿ ಹೇಳಿರುತ್ತದೆ. ಪರಮಾತ್ಮ ವ್ಯಾಪ್ತನೇ ಆದರೂ ದೇಶಕಾಲಗಳಿಂದ ಪರಿಚ್ಛೇದವು (ಮಿತಿಯೂ) ಇದೂ ಇದೆ. ಅವನಿಗೆ ಒಂದೇ ರೂಪದಲ್ಲಿಯೇ ವ್ಯಾಪ್ತಿಯೂ ಪರಿಚ್ಛೇದವೂ ಎರಡೂ ಯುಕ್ತವೇ ಆಗುತ್ತದೆ. ಅವನ ಅಚಿಂತ್ಯಾದ್ಭುತ ಐಶ್ವರ್ಯದಿಂದ ಹೀಗೆ ಹೇಳಿದೆ.

**ವೈಶೇಷಿಕಾಧಿಕರಣ ಅನುವ್ಯಾಖ್ಯಾನೇಪಿ । ತಚ್ಚ ಬ್ರಹ್ಮಪರಂ ಸಾಕ್ಷಾತ್ಸರ್ವಾನಂತ್ಯಯುತಂ ಸದೇತಿ । ರಾಮಕೃಷ್ಣಾದಿ ರೂಪೇಷು ಮಧ್ಯಮ ಪರಿಮಾಣಂ ಪ್ರತ್ಯಕ್ಷಸಿದ್ಧಂ । ಲಕ್ಷ್ಮ್ಯಾಃ ಪರಮಹತ್ಪರಿಮಾಣಂ ಚ ಲಕ್ಷ್ಮೀ ಪ್ರಕರಣೇ ಏವ ಉಕ್ತಂ । ಮಧ್ಯಮ ಪರಿಮಾಣಂತು ರುಕ್ಮಿಣೀ ಸೀತಾದಿ ರೂಪೇಷು ಪ್ರತ್ಯಕ್ಷ ಸಿದ್ಧಂ । ನಿತ್ಯಾಣು ಪರಿಮಾಣಸ್ಯ ಆಶ್ರಯ ಮಾಹ।**

**ಪ.ಸಂ. ನಿತ್ಯಮಣುಪರಿಮಾಣಂ ಸರ್ವಜೀವೇಷು । ಅನಿತ್ಯಂ ಅಣುಪರಿಮಾಣಂ ಅನಿತ್ಯಗತಂ ।**

ವೈಶೇಷಿಕಾಧಿಕರಣ ಅನುವ್ಯಾಖ್ಯಾನದಲ್ಲಿ ಪರಬ್ರಹ್ಮನು ಸಾಕ್ಷಾತ್ತಾಗಿ ಸರ್ವದಾ ಸರ್ವಾನಂತ್ಯದಿಂದ ಯುಕ್ತನೇ ಎಂದು ಹೇಳಿದೆ. ರಾಮಕೃಷ್ಣಾದಿ ರೂಪಗಳಲ್ಲಿ ಮಧ್ಯಮ ಪರಿಮಾಣವು ಪ್ರತ್ಯಕ್ಷ ಸಿದ್ಧವು. ಲಕ್ಷ್ಮೀದೇವಿಯ ಪರಮಮಹತ್ಪರಿಣಾಮವನ್ನು ಲಕ್ಷ್ಮೀಪ್ರಕರಣದಲ್ಲಿ ಹೇಳಿದೆ. ರುಕ್ಮಿಣೀ ಸೀತಾದ್ಯವತಾರಗಳಲ್ಲಿ ಮಧ್ಯಮ ಪರಿಮಾಣವು ಪ್ರಸಿದ್ಧವೇ ಆಗಿರುತ್ತದೆ. ನಿತ್ಯ ಅಣು ಪರಿಮಾಣಾಶ್ರಯರು ಸರ್ವಜೀವರು. ಅನಿತ್ಯ ಪದಾರ್ಥದಲ್ಲಿರುವ ಅಣುಪರಿಮಾಣವು ಅನಿತ್ಯವು.

**ತದುಕ್ತಂ ಮಾಂಡೂಕ ಭಾಷ್ಯೇ । ಅಣೂನಾಮಪಿ ಜೀವಾನಾಂ ಪ್ರಕಾಶೋ ವ್ಯಾಪಕೋಭವೇತ್ ದಿತಿ । ಸೂತ್ರಭಾಷ್ಯೇಪಿ ।**

ಮಂಡೂಕ ಭಾಷ್ಯದಲ್ಲಿ ಜೀವರು ಅಣುಗಳಾದರೂ ಪ್ರಕಾಶವು ವ್ಯಾಪಕವೇ ಆಗಿರುತ್ತದೆ ಎಂದು ಹೇಳಿದೆ. ಸೂತ್ರ ಭಾಷ್ಯದಲ್ಲಿಯೂ,

**ಉತ್ಕ್ರಾಂತಿ ಗತ್ಯಾಗತೀನಾಂ ಮಿತಿ । ಹೇತೂನಾಂ ಸಕಾಶಾದಣುರೇವ । ಅಣುರ್ಹ್ಯೇಷ ಆತ್ಮಾ । ಅಣುಮಾತ್ರೋಽಪ್ಯಯಂ ಜೀವಃ ಸ್ವದೇಹಂ ವ್ಯಾಪ್ಯತಿಷ್ಟತಿ । ಚಿದ್ಗುಣೇನ ವ್ಯಾಪ್ತಿಃ ಜೀವರೂಪೇಣಾಽವ್ಯಾಪ್ತಿಃ । ಇತಿ । ಗೀತಾತಾತ್ಪರ್ಯೇಽಪಿ । ನಿತ್ಯಂ ಸರ್ವಗತೇಽಸ್ಥಿತೋ ಅಣುಶ್ಚಾಯಮಿತಿ ಸರ್ವಗತಸ್ಥಾಣುಃ । ಸರ್ವಗತೋ ವಿಷ್ಣುಃ । ತದಧೀನಸ್ತ್ವಾದಿಕಂ ತತ್‌ಸ್ಥತ್ವಂ।ನಿತ್ಯಂ ಸರ್ವಗತೇ ವಿಷ್ಣಾವಣು ಜೀವೋ ವ್ಯವಸ್ಥಿತಃ । ಇತಿ।**

**ತಾರ್ಕಿಕಾಸ್ತು । ಜೀವಾಽವ್ಯಾಪ್ತಾ: ದೇಹಾದೌ ಸರ್ವತ್ರ ಸುಖದುಃಖಚೇಷ್ಟಾದಿ ಕಾರ್ಯದರ್ಶನಾತ್ । ನ ಚ ಮಧ್ಯಮ ಪರಿಮಾಣತ್ವಂ ವಕ್ತುಂಯುಕ್ತಂ । ಅನಿತ್ಯತ್ವ ಪ್ರಸಂಗಾತ್ ಅತೋಮಹತ್ ಪರಿಮಾಣಮೇವೇತ್ಯಾಹುಃ । ತನ್ನ।**

ದೇಹದಿಂದ ಜೀವ ಹೋಗುವಿಕೆ ಉತ್ಕ್ರಾಂತಿಯಿಂದ (ಶಿರಾದಿಗಳಿಂದ) ಎಂದಿರುವುದರಿಂದ ಜೀವನು ಅಣುವೇ ಆಗಿರುತ್ತಾನೆ. ಮತ್ತೂ ಅನೇಕ ಕಾರಣಗಳಿಂಧಲೂ ಜೀವನು ಅಣುವೇ ಎಂದಿರುತ್ತದೆ. ಈ ಜೀವನು ಅಣುವೇ ಎಂದು ಶೃತಿ ಹೇಳುತ್ತದೆ. ಈ ಜೀವನ ಅಣುಮಾತ್ರವೇ ತನ್ನ ದೇಹವನ್ನು ವ್ಯಾಪಿಸಿರುತ್ತಾನೆ. ಚಿದ್ರೂಪದಿಂದ ವ್ಯಾಪ್ತನು ಜೀವರೂಪದಿಂದ ಅಣುವು ಹೀಗೆ ಹೇಳಿದೆ. ಗೀತಾ ತಾತ್ಪರ್ಯದಲ್ಲಿಯೂ, ಜೀವನು ನಿತ್ಯನು ದೇಹದಲ್ಲಿ ಎಲ್ಲಾಡಿಯಲ್ಲೂ ಇರುವವನು. ಅಣುವು ಎಂದಿದೇ ಸರ್ವಗತನೆಂದರೆ ವಿಷ್ಣುವೇ ಅವನಧೀನವಾದವುಗಳಲ್ಲ ಅವನಧಿಷ್ಠಾನವೇ ನಿತ್ಯದಲ್ಲೂ ಸರ್ವಗತನು ವಿಷ್ಣುವು. ಜೀವನು ಅಣುವೇ ಎಂದು ವ್ಯವಸ್ಥಿತವೇ ಎಂದಿರುತ್ತದೆ. ತಾರ್ಕಿಕರು ಜೀವರು ವ್ಯಾಪ್ತರು ದೇಹದ ಆದ್ಯಂತವಾಗಿ ಸುಖ ದುಃಖ ಚೇಷ್ಟಾದಿಗಳು ಕಾಣುವುದರಿಂದ, ಮಧ್ಯಮ ಪರಿಮಾಣ ಹೇಳುವುದು ಯುಕ್ತವಲ್ಲವು. ಅನಿತ್ಯತೆ ಬರಬೇಕಾಗುತ್ತದೆ. ಆದ್ದರಿಂದ ಜೀವನು ಮಹತ್ಪರಿಮಾಣ ಉಳ್ಳವನೇ ಎನ್ನುತ್ತಾರೆ. ಅದು ತಪ್ಪು ಏಕೆಂದರೆ,

**ದೇಹೋತ್ಕ್ರಮಣ ದೇಹ ಪ್ರವೇಶ, ಸ್ವರ್ಗ, ನರಕಾದಿ ಗಮನಾಗಮನಾದೀನಾಂ ಶ್ರುತಿ ಸಿದ್ಧಾನಾಂ ಅಭಾವ ಪ್ರಸಂಗಾತ್ । ನ ಚ ವ್ಯಾಪ್ತತ್ವೇ ಗಮನಾಧಿಕಂ ಯುಕ್ತಂ । ಆಕಾಶಾದಾವದರ್ಶನಾತ್ । ಸರ್ವತ್ರ ಸುಖಾಧಿಕಾರ್ಯೋಪಲಂಭಶ್ಚ ಪ್ರಕಾಶ ವ್ಯಾಪ್ತ್ಯಾಯುಜ್ಯತ ಏವ । ವ್ಯಾಪ್ತಾಹ್ಯಾತ್ಮಾನಃ ಇತ್ಯಾದಿ ಶ್ರುತಯಃ ಪರಮಾತ್ಮ ಪರಾಃ ಇತಿ ಭಾಷ್ಯ ಟೀಕಯೋಃ ಸ್ಪಷ್ಟಂ ।**

ದೇಹದಿಂದ ಹೊರ ಹೊರಡುವಿಕೆ, ದೇಹ ಪ್ರವೇಶ ಸ್ವರ್ಗ ನರಕಾದಿಗಳಲ್ಲಿ ಹೋಗಿ ಬರುವಿಕೆ, ಇವುಗಳೆಲ್ಲವೂ ಶ್ರುತಿ ಸಿದ್ಧವು. ಜೀವಿಗೆ ವ್ಯಾಪ್ತತೆ ಇದ್ದರೆ ಗಮನಾದಿಗಳು ಯುಕ್ತವಾಗುವುದಿಲ್ಲ. ಮಹತ್ಪರಿಮಾಣವುಳ್ಳ ಆಕಾಶಾದಿಗಳಲ್ಲಿ ಗಮನಾಗಮನಾದಿಗಳು ಕಂಡಿರುವುದಿಲ್ಲವಾದ್ದರಿಂದ, ಎಲ್ಲೆಡೆಯಲ್ಲೂ ಸುಖಾದಿ ಕಾರ್ಯವು ಪ್ರಕಾಶದ ವ್ಯಾಪ್ತಿಯಿಂದಲೂ ಕೊಡುತ್ತದೆ. ಆತ್ಮರೆಲ್ಲರೂ ವ್ಯಾಪ್ತರೆ ಯೆಂಬ ಶ್ರುತಿಯು ಪರಮಾತ್ಮಪರವೆಂದು ಭಾಷ್ಯ ಟೀಕಾದಿಗಳಲ್ಲಿ ಸ್ಪಷ್ಟವು.

**ಅನಿತ್ಯಮಣುಪರಿಮಾಣಮಿತಿ । ತಾರ್ಕಿಕಾಂಗೀಕೃತ ಪರಮಾಣುನಾಂ ಅನಿತ್ಯತ್ವೇನ ತತ್ಪರಿಮಾಣಸ್ಯಾಪ್ಯನಿತ್ಯತ್ವಾದಿತಿಭಾವಃ । ನಚ ಪರಮಾಣೂನಾಂ ಅನಿತ್ಯತ್ವೇ ಮಾನಾಭಾವ ಇತಿ ವಾಚ್ಯಂ । ರೂಪಾದಿ ಮತ್ವಾಚ್ಚ-**

**ವಿಪರ್ಯಯೋದರ್ಶನಾದಿತಿ ಸೂತ್ರಕಾರೇಣೈವ ಉಕ್ತತ್ವಾತ್ ಅವ್ಯಾಕೃತಾಕಾಶಾದೀನಾಂ ಪರಿಮಾಣ ಮಾಹ ।**

**ಪ.ಸಂ. ನಿತ್ಯಂ ಮಹತ್ಪರಿಮಾಣಮವ್ಯಾಕೃತಾಕಾಶ ಪ್ರಕೃತಿವರ್ಣಗತಂ ।**

**ಅತ್ರ ಪ್ರಮಾಣಾನಿತು ಪೂರ್ವಮೇವ ತತ್ಪ್ರಕರಣೇಷೂಕ್ತಾನಿ । ಕಾಲ ಪರಿಮಾಣ ಮಾಹ ।**

**ಪ.ಸಂ. ಕಾಲೇ ಕ್ಷಣಲವಾದಿ ರೂಪೇ ಅನಿತ್ಯಂ ಮಹತ್ಪರಿಮಾಣಂ ।**

ಅಣು ಪರಿಮಾಣವು ಅನಿತ್ಯವೇ ಆಗಿರುತ್ತದೆ. ತಾರ್ಕಿಕರು ಒಪ್ಪಿರುವ ಪರಮಾಣುಗಳಿಗೆ ಅನಿತ್ಯತೆ ಇರುವುದರಿಂದ, ಆ ಪರಿಮಾಣಕ್ಕೂ ಅನಿತ್ಯತೆಯೇ ಪರಮಾಣುಗಳಿಗೆ ಅನಿತ್ಯತೆ ವಿಷಯದಲ್ಲಿ ಪ್ರಮಾಣವಿಲ್ಲ ಎನಬಾರದು. ಸೂತ್ರಕಾರರೇ ಅವರು ಒಪ್ಪುವ ಪರಮಾಣುವಿನಲ್ಲಿ ರೂಪ. ಎಂಟೂ ದಿಕ್ಕಿನ ಸಂಬಂಧವಿದ್ದು ವಿಪರೀತವೇ ತೋರುತ್ತಿರಲು ಪರಮಾಣು ಹೇಗಾಗುತ್ತಿದೆ ಎಂದಿರುತ್ತಾರೆ. ಅವ್ಯಾಕೃತಾಕಾಶಾದಿ ಪರಿಮಾಣವನ್ನು ಹೇಳುತ್ತಾರೆ. ಅವ್ಯಾಕೃತಾಕಾಶ ಪ್ರಕೃತಿ ವರ್ಣಗಳಲ್ಲಿ ನಿತ್ಯವಾದ ಮಹತ್ಪರಿಮಾಣವಿದೆ. ಈ ವಿಷಯದಲ್ಲಿ ಪ್ರಮಾಣಗಳನ್ನು ಆ ಆ ಪ್ರಕರಣಗಳಲ್ಲಿ ತೋರಿಸಿರುತ್ತದೆ. ಕಾಲದ ಪರಿಮಾಣವಾದರೂ ಕಾಲದಲ್ಲಿ ಕ್ಷಣ, ಲವ ಇತ್ಯಾದಿಗಳಲ್ಲಿ ಮಹತ್ಪರಿಮಾಣವಿದೆ, ಅದು ಅನಿತ್ಯಗಳೇ ಆಗಿರುತ್ತದೆ.

**ಕ್ಷಣಸ್ಯವ್ಯಾಪ್ತತ್ವಂ ತಾವತ್ಸಿದ್ಧಂ । ಅಯಂ ಕ್ಷಣೋ ದೇಶಾಂತರೇ ನಾಸ್ತೀತ್ಯಸ್ಯ ಸಾಕ್ಷಿಪ್ರಮಾಣ ವಿರುದ್ಧತ್ವಾತ್ । ತಸ್ಯಚಾನಿತ್ಯತ್ವಾತ್ತದ್ಗತಂ ಪರಿಮಾಣಮಪ್ಯನಿತ್ಯಮೇವೇತಿ ಭಾವಃ । ತದುಕ್ತಂ ಸುಧಾಯಾಂ । ಕ್ಷಣ ಲವಾದಯೋಽಪಿ ಪ್ರತ್ಯೇಕಂ ವ್ಯಾಪ್ತಾಃ ಇತಿ । ಅನಿತ್ಯ ಮಧ್ಯಮ ಪರಿಮಾಣಸ್ಯ ಆಶ್ರಯ ಮಾಹ ।**

**ಪ.ಸಂ. ಕಾರ್ಯದ್ರವ್ಯೇಷು ಸರ್ವತ್ರ ಮಧ್ಯಮ ಪರಿಮಾಣಮನಿತ್ಯಮೇವ ।**

**ನನು ನ ಜೀವಾನಾಂ ಅಣು ಪರಿಮಾಣಂ ಯುಕ್ತಂ । ತಥಾತ್ವೇ ಸ್ವಾಪ್ಯಾದಿ ಭೋಗಾಭಾವ ಪ್ರಸಂಗಾತ್ ।**

ಕ್ಷಣಕ್ಕೆ ವ್ಯಾಪ್ತತೆ ಸಿದ್ಧವೇ ಆಗಿರುತ್ತದೆ. ಈ ಕ್ಷಣವು ದೇಶಾಂತರದಲ್ಲಿಲ್ಲವೆಂಬುದು ಸಾಕ್ಷಿ ವಿರುದ್ಧವೇ ಆಗಿರುವುದರಿಂದ ಇಲ್ಲಿರುವ ಕ್ಷಣವೇ ಎಲ್ಲಾಡಿಯಲ್ಲೂ ಇದೇ ಎಂದೇ ಸಾಕ್ಷಿ ಸಿದ್ಧವಾಗಿರುವುದರಿಂದ ಇದು ಅನಿತ್ಯವಾಗಿರುವುದರಿಂದ, ಇದರಲ್ಲಿರುವ ಮಹತ್ಪರಿಮಾಣವೂ ಅನಿತ್ಯವೇ ಆಗಿರುತ್ತದೆ. ಇದನ್ನು ಸುಧಾದಲ್ಲಿ ಕ್ಷಣ ಲವಾದಿಗಳೂ ಪ್ರತ್ಯೇಕವಾಗಿ ವ್ಯಾಪ್ತಗಳೇ

ಆಗಿರುತ್ತದೆ. ಎಂದು ಹೇಳಿರುತ್ತದೆ. ಅನಿತ್ಯ ಪರಿಮಾಣದ ಆಶ್ರಯವು ಕಾರ್ಯ ದ್ರವ್ಯಗಳು. ಇವುಗಳಲ್ಲಿ ಎಲ್ಲವುಗಳಲ್ಲಿಯೂ ಮಧ್ಯಮ ಪರಿಮಾಣವೇ, ಅವುಗಳು ಅನಿತ್ಯಗಳೇ ಆಗಿರುತ್ತದೆ. ಜೀವರುಗಳಿಗೆ ಅಣು ಪರಿಮಾಣತೇ ಯುಕ್ತವಲ್ಲವು ಏಕೆಂದರೆ, ಅಣುಗಳಾದರೆ ಸ್ತ್ರೀಯಾದಿ ಭೋಗವೇ ಇಲ್ಲವಾಗಬೇಕಾದೀತು. ಸಂಸಾರಾವಸ್ಥಾದಲ್ಲಿ ಅಣುತೆ ಹೇಳಿ ಮುಕ್ತಿ ಅವಸ್ತೆಯಲ್ಲಿ ಮಧ್ಯಮ ಪರಿಮಾಣ ಹೇಳಿದರೆ ಅನಿತ್ಯರಾಗಲೆಂಬ ಪ್ರಸಂಗ ಬರುತ್ತದೆ ಎಂದರೆ ಹೇಳುತ್ತಾರೆ.

**ಸಂಸಾರಾವಸ್ಥಾಯಾಂ ಅಣು ಪರಿಮಾಣವತಾಂ, ಮುಕ್ತೌ ಮಧ್ಯಮಪರಿಮಾಣಾಂಗೀಕಾರೇ ಅನಿತ್ಯತ್ವ ಪ್ರಸಂಗಾತ್ ಇತ್ಯತ ಆಹ ।**

**ಪ.ಸಂ. ಮುಕ್ತಾನಾಂ ಮಹತ್ತ್ವಾದಿಕಂ ಅಣಿಮಾದಿ ಅಷ್ಟೈಶ್ವರ್ಯರೂಪಂ ।**

**ಪರಮೇಶ್ವರೇಚ್ಛಯಾ ಅಣುರೂಪಮೇವ ಮುಕ್ತೌ ಮಹತ್ವೇನಾಭಿವ್ಯಜ್ಯತೇ। ತೇಷಾಂ ಮಣಿಮಾದ್ಯಷ್ಟೈಶ್ವರ್ಯರೂಪತ್ವಾತ್ । ಯಥಾಲ್ಪ ಪರಿಮಾಣಮೇವ ಕ್ಷೀರಂ ಪಾತ್ರಸ್ಥಮಧಃ ಸಂತಪನಾದಿನಾ ಉನ್ನಾಹವತ್ ಉಪಲಭ್ಯತೇ ತದ್ವತ್। ಏತಚ್ಚ ಉತ್ತರತ್ರ ಮುಕ್ತಭೋಗ ಪ್ರಕರಣೇ ವಕ್ಷ್ಯತ ಇತಿ ಭಾವಃ ।**

## ॥ ಇತಿ ಪರಿಮಾಣ ಪ್ರಕರಣಂ ॥

ಸಂಸಾರಾವಸ್ಥೆಯಲ್ಲಿ ಅಣು ಪರಿಮಾಣವುಳ್ಳವರಿಗೆ ಮುಕ್ತಿಯಲ್ಲಿ ಮಧ್ಯಮ ಪರಿಮಾಣಾ ಅಂಗೀಕರಿಸಿದರೆ, ಅನಿತ್ಯರಾಗಲಿ ಎಂಬ ಪ್ರಸಂಗ ಬರುತ್ತದೆ ಎಂದರೆ ಹೇಳುತ್ತಾರೆ. ಮುಕ್ತರಿಗೆ ಮಹತ್ಪರಿಮಾಣವಿದೆ ಅದು ಅಣಿಮಾದಿ ಅಷ್ಟ ಐಶ್ವರ್ಯರೂಪವೇ ಆಗಿರುತ್ತದೆ. ಅಣು ರೂಪವೇ ಈಶ್ವರೇಚ್ಛೆಯಿಂದ ಮಹತ್ಪರಿಮಾಣವಾಗಿ ಅಭಿವ್ಯಕ್ತವಾಗುತ್ತದೆ. ಹೇಗೆ ಸ್ವಲ್ಪವಾದ ಹಾಲು ಕಾವಿನಿಂದ ಹೆಚ್ಚಾಗಿ ಉಕ್ಕುತ್ತದೆ ಹಾಗೆ ಅಣು ಪರಿಮಾಣರಾದ ಜೀವರು ಮಹಾಪರಿಮಾಣ ರೂಪರಾಗಿ ಅಷ್ಟೈಶ್ವರ್ಯ ಭಾಗಿಗಳಾಗಿ ಭೋಗಿಸುತ್ತಾರೆ. ಈ ವಿಷಯವನ್ನು ಮುಕ್ತ ಭೋಗ ಪ್ರಕರಣಾದಿಗಳಲ್ಲಿ ವಿಶದವಾಗಿ ಹೇಳಿರುತ್ತದೆ.

ಹೀಗೆ ಗುಣನಿರೂಪಣೆಯಲ್ಲಿ ಪರಿಮಾಣ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೩೯.ಸಂಯೋಗ ಪ್ರಕರಣ

**ಸಂಯೋಗಂ ನಿರೂಪಯತಿ ।**

**ಪ.ಸಂ. ಸಂಯುಕ್ತ ವ್ಯವಹಾರ ಹೇತುಃ ಗುಣಃ ಸಂಯೋಗ । ಸದ್ವಿವಿಧಃ ನಿತ್ಯೋಽನಿತ್ಯಶ್ಚ ।**

**ನಿತ್ಯಸಂಯೋಗಸ್ಥಾನ ಮಾಹ ।**

**ಪ.ಸಂ. ಈಶಲಕ್ಷ್ಮ್ಯೋಃ ಈಶಜೀವಯೋಃ ವರ್ಣ ಅವ್ಯಾಕೃತಾಕಾಶಯೋಃ ವರ್ಣಾನಾಂ ಚ ಪರಸ್ಪರಂ ಸಂಯೋಗೋ ನಿತ್ಯ ಏವ ।**

**ನಿತ್ಯಾಽವಿಯೋಗಿತ್ವಾತ್ ವ್ಯಾಪ್ತತ್ವಾತ್‌ಚ ಲಕ್ಷ್ಮ್ಯಾಃ ಪರಮಾತ್ಮನಾ ಸಂಯೋಗೋ ನಿತ್ಯಃ । ಪರಮಾತ್ಮನೋಽಪಿ ವ್ಯಾಪ್ತತ್ವಾತ್ ಶ್ರೀವತ್ಸಲಾಂಛನತ್ವಾಚ್ಚ ಲಕ್ಷ್ಮ್ಯಾಃ ಸಂಯೋಗೋನಿತ್ಯಃ । ಈಶಜೀವಯೋರಪಿ। ದ್ವಾಸುಪರ್ಣಾ ಸಯುಜಾ ಸಖಾಯೇತಿ ಶ್ರುತೇರಿತಿ ಭಾವಃ । ವರ್ಣಾವ್ಯಾಕೃತಾಕಾಶಯೋರಿತ್ಯಾದಿ । ಉಭಯೋರ್ವ್ಯಾಪ್ತತ್ವಾದಿತಿ ಭಾವಃ । ಅನಿತ್ಯ ಸಂಯೋಗಸ್ಯ ಉದಾಹರಣ ಮಾಹ ।**

**ಪ.ಸಂ. ಅನಿತ್ಯನಿತ್ಯ ದ್ರವ್ಯಯೋಃ ಅನಿತ್ಯಾನಾಂ ಚ ಪರಸ್ಪರಂ ಸಂಯೋಗೋ ಅನಿತ್ಯ ಏವ ।**

**ಘಟಾಕಾಶ ಸಂಯೋಗಾದಿರಿತ್ಯರ್ಥಃ ।**

ಸಂಯೋಗವನ್ನು ನಿರೂಪಿಸುತ್ತಾರೆ. ಘಟಪಟಗಳೆರಡೂ ಕಲೆತಿರುವವು (ತಗಲಿರುವವು) ಎಂಬ ವ್ಯವಹಾರ ಕಾರಣವಾಗಿ ಗುಣವಾಗಿರುವುದೇ ಸಂಯೋಗವು. ಅದು ಎರಡು ವಿಧವು. ನಿತ್ಯವೆಂದೂ ಹಾಗೂ ಅನಿತ್ಯವೆಂದು. ನಿತ್ಯ ಸಂಯೋಗವೆಲ್ಲಿ ಎಂದರೆ, ಈಶ ಲಕ್ಷ್ಮಿಯರಿಗೆ, ಈ ಜೀವರಿಗೆ ವರ್ಣಗಳು. ಅವ್ಯಾಕೃತಾಕಾಶಗಳಿಗೆ ಪರಸ್ಪರವಾಗಿ ವರ್ಣಗಳಿಗೆ (ಅಕ್ಷರಗಳಿಗೆ) ಈ ನಾಲ್ಕರಲ್ಲೂ ಇರುವ ಸಂಯೋಗ ಸಂಬಂಧಗಳೂ ನಿತ್ಯವಾದವುಗಳೇ, ನಿತ್ಯಾ ಅವಿಯೋಗಿ (ಎಡ ಬಿಡದೇ ಇರುವಿಕೆ)ಯೂ ವ್ಯಾಪ್ತಗಳಾಗಿಯೂ ಇರುವುದರಿಂದ ಲಕ್ಷ್ಮೀದೇವಿಗೂ ಪರಮಾತ್ಮಗೂ ಇರುವ ಸಂಬಂಧವು ನಿತ್ಯವು. ಹಾಗೆ ಪರಮಾತ್ಮ ವ್ಯಾಪ್ತನಾಗಿ ಶ್ರೀವತ್ಸಾಂಕಿತನೂ ಆಗಿರುವುದರಿಂದ ಪರಮಾತ್ಮಗೂ ಲಕ್ಷ್ಮಿದೇವಿಗೂ ಇರುವ ಸಂಬಂಧವು ನಿತ್ಯವಾದುದೇ ಇದರಂತೇ ಈಶಜೀವರಿಗೂ "ದ್ವಾಸುಪರ್ಣಾ" ಇತ್ಯಾದಿ ಶೃತಿಗಳಲ್ಲಿ ಎರಡು ಪಕ್ಷಿಗಳು ಜೀವಾತ್ಮ ಪರಮಾತ್ಮರು ಬಿಂಬ ಪ್ರತಿಬಿಂಬ

ಭಾವದಿಂದ ಎಡಬಿಡದೇ ಇರುವವರು ಎಂಬ ವೇದ ಪ್ರಮಾಣದಿಂದ ಸಂಯೋಗವೂ ನಿಯತವಾದುದೇ ನಿತ್ಯರಾಗಿ ವ್ಯಾಪ್ತರಾಗಿರುವುದರಿಂದ ನಿತ್ಯಸಂಗವು. ಅನಿತ್ಯ ದ್ರವ್ಯಗಳಿಗೆ, ಪರಸ್ಪರ ಘಟ ಪಟಾದಿ ಅನಿತ್ಯ ದ್ರವ್ಯಗಳಲ್ಲಿರುವ ಸಂಯೋಗಗಳು ಅನಿತ್ಯಗಳೇ, ಘಟ ಆಕಾಶಾದಿಗಳೂ ನಿತ್ಯ ಅನಿತ್ಯ ಎರಡರ ಸಂಯೋಗ ಅನಿತ್ಯವೇ ಆಗಿದೆ.

**ಅನಿತ್ಯಾನಾಮಪಿ ಘಟಪಟಾದೀನಾಂ ಸಂಯೋಗೋ ಅನಿತ್ಯ ಇತಿ ಚ ಬೋಧ್ಯಂ। ನನು ಸಂಯೋಗಮಾತ್ರಂ ಕ್ರಿಯಾದಿಜನ್ಯಂ। ತತ್ಕಥಮುಚ್ಯತೇ ಅಜಸಂಯೋಗಃ ಇತಿ ಚೇನ್ನ । ಕ್ರಿಯಾರಹಿತಾನಾಂ ಅವ್ಯಾಕೃತಾಕಾಶ ವರ್ಣಾದೀನಾಂ ಸಂಯೋಗಾಂಗೀಕಾರೇ ಬಾಧಕಾಭಾವಾತ್ ।**

ಅನಿತ್ಯಗಳಾದ ಘಟ ಪಟಾದಿಗಳ ಸಂಯೋಗವು ಹೀಗಿರಲು ಕ್ರಿಯೆ ಇಲ್ಲದ ಅವ್ಯಾಕೃತಾಕಾಶ ವರ್ಣಗಳಿಗೆ ಸಂಯೋಗ ಹೇಗೆ ? ಹಾಗೆನಬಾರದು. ಕ್ರಿಯೆ ಇಲ್ಲದಿದ್ದರೂ ಅವುಗಳಿಗೆ ಸಂಯೋಗ ಒಪ್ಪಿದರೆ ಬಾಧಕವಿಲ್ಲವು.

**ಅನ್ಯಥಾ ವ್ಯಾಪ್ತತ್ವಂ ನಸ್ಯಾತ್ । ನ ಚ ಸಕಲ ಮೂರ್ತ ದ್ರವ್ಯಸಂಯೋಗಿತ್ವಂ ವ್ಯಾಪ್ತತ್ವಮಿತಿ ವಾಚ್ಯಂ। ಮುಖ್ಯ ವ್ಯಾಪ್ತತ್ವೇ ಸಂಭವತಿ ವೈವಕ್ಷ್ಯ ವ್ಯಾಪ್ತತ್ವಸ್ಯ ಅಯುಕ್ತತ್ವಾತ್ । ಕಿಂಚ ಈಶ್ವರಾದಿ ವ್ಯಾಪ್ತಾನಾಂ ದಿಗ್ರೂಪ ಅವ್ಯಾಕೃತಾಕಾಶ ಸಂಯೋಗಾಭಾವೇ ಅತ್ಯಂತಾಸತ್ವಮೇವಸ್ಯಾತ್ । ದೇಶಕಾಲ ಸಂಬಂಧಾತಿರಿಕ್ತ ಸತ್ವೇಮಾನಾಭಾವಾತ್ । ಕ್ಲುಪ್ತ ಸಂಯೋಗೇ ನೈವೋಪಪತ್ತೌ ಸಾರ್ವಕಾಲಿಕ ಸಂಬಂಧಾಂತರ ಕಲ್ಪನೇ ಮಾನಾಭಾವಾತ್ ।**

ಹಾಗೆ ಒಪ್ಪದಿದ್ದರೆ ವ್ಯಾಪ್ತತೆಯೇ ಅವುಗಳಿಗಿಲ್ಲವಾಗಬೇಕಾದೀತು. ಸಕಲ ಮೂರ್ತ ದ್ರವ್ಯ (ಪೃಥಿವೀ, ಜಲ. ತೇಜಸ್ಸು) ಸಂಯೋಗ ವರ್ಣಗಳಿಗಿಲ್ಲವಾದ್ದರಿಂದ ವ್ಯಾಪ್ತತೇ ಇಲ್ಲ ಎನಬಾರದು. ಮುಖ್ಯತೆ ಕೂಡುತ್ತಿರಲು ವಿವಕ್ಷಿತವೇ ಆದ ವ್ಯಾಪ್ತತೆಗಳು ಅಯುಕ್ತಗಳೇ ಆಗಿರುತ್ತದೆ. ಮತ್ತೂ ಈಶ್ವರ, ದಿಗ್ರೂಪ ಅವ್ಯಾಕೃತಾಕಾಶಗಳಿಗೆ ಸಂಯೋಗವಿಲ್ಲವಾದರೆ ಅವುಗಳಿಗೆ ಅಸತ್ವತೆ ಬರಬೇಕಾಗುತ್ತದೆ. ಏಕೆಂದರೆ ದೇಶ ಕಾಲ ಸಂಬಂಧವೇ ಸತ್ವವು. ಇದರತಿರಿಕ್ತ ಸತ್ವ ವಿಷಯದಲ್ಲಿ ಪ್ರಮಾಣವಿರುವದಿಲ್ಲವು. ಕ್ಲುಪ್ತ ಸಂಯೋಗದಿಂದಲೇ ವ್ಯಾಪ್ತತ್ವಾದಿಗಳು ಯುಕ್ತವಾಗುತ್ತಿರಲು ಬೇರೆ ಸಾರ್ವಕಾಲಿಕ ಸಂಬಂಧಾಂತರ ಕಲ್ಪನೆಯ ಪ್ರಮಾಣವಿರುವುದಿಲ್ಲ.

**ನನ್ವೀಶ್ವರ ಸಂಯೋಗೋಽನನಿತ್ಯ ಈಶ್ವರ ಕ್ರಿಯಾಜನ್ಯತ್ವಾಚ್ಚೇವಾದಿ ಕ್ರಿಯಾಜನ್ಯತ್ವಾಚ್ಚೇತ್ಯತಸ್ತತ್ಸಂಯೋಗಸ್ಯ ನಿತ್ಯತ್ವಂ ವಕ್ತುಂ ಸಂಯೋಗಸ್ಯತಾವದೇಕತ್ವಂ ನಿರಾಕರೋತಿ । ಉಭಯೋರಿತಿ ।**

**ಷ.ಸಂ. ಉಭಯೋಸಂಯೋಗಸ್ತ್ವನೈಕಃ । ಕಿಂತು ಭಿನ್ನಭಿನ್ನ ಏವ ।**

**ಘಟಪಟಯೋಃ ಸಂಯೋಗೋನೈಕಃ ಕಿಂತು ಘಟ ನಿರೂಪಿತ ಸಂಯೋಗಃ ಪಟೇ ಪಟ ನಿರೂಪಿತ ಸಂಯೋಗಃ ಘಟ ಇತಿ ಸಂಯೋಗ ದ್ವಯಮಿತ್ಯರ್ಥಃ। ತದುಕ್ತಂ ವೈಶೇಷಿಕಾಧಿಕರಣಾನುವ್ಯಾಖ್ಯಾನೇ ।**

ಜೀವೇಶ್ವರ ಸಂಯೋಗದಲ್ಲಿ ಈಶ್ವರ ಸಂಯೋಗವು ನಿತ್ಯ ಈಶ್ವರ ಕ್ರಿಯಾಜನ್ಯವಲ್ಲಾ. ಜೀವಾದಿ ಕ್ರಿಯಾಜನ್ಯವಾದುದು. ಆದ್ದರಿಂದ ಈಶ್ವರ ಕ್ರಿಯಾಗೆ ನಿತ್ಯತೆ ಹೇಳುವದಕ್ಕೋಸ್ಕರ ಜೀವೇಶ ಸಂಯೋಗವು ಒಂದಿರುವುದಿಲ್ಲ. ಎರಡೂ ಸಂಯೋಗಗಳೂ ಭಿನ್ನಾಭಿನ್ನಗಳೇ. ಘಟ ಪಟಗಳ ಸಂಯೋಗವೂ ಒಂದಿಲ್ಲ ಆದರೆ ಘಟ ನಿರೂಪಿತ ಸಂಯೋಗ ಪಟದಲ್ಲಿ ಪಟನಿರೂಪಿತ ಸಂಯೋಗ ಘಟದಲ್ಲಿ, ಹೀಗೆ ಎಲ್ಲಾ ಕಡೆಯಲ್ಲೂ ಸಂಯೋಗಗಳು ಎರಡಿರುತ್ತವೆ. ಇದನ್ನು ವೈಶೇಷಿಕಾಧಿಕರಣ ಅನುವ್ಯಾಖ್ಯಾನದಲ್ಲಿ ಹೇಳಿರುತ್ತದೆ.

**ಸಂಯೋಗಶ್ಚ ವಿಭಾಗಶ್ಚ ಭೇದಶ್ಚೈವ ಪೃಥಕ್ ಪೃಥಕ್ ಇತಿ । ಕಿಂಚ ಘಟ ಸಂಯುಕ್ತ: ಪಟಃ ಪಟಸಂಯುಕ್ತಶ್ಚ ಘಟಃ ಇತ್ಯನ್ಯೋನ್ಯ ಪ್ರತಿಯೋಗಿತ್ವೇನ ಸಂಯೋಗೋ ಅನುಭೂಯತೇ । ನಚೈಕಸ್ಯೈವ ಸಂಯೋಗಸ್ಯ ಏಕ ನಿರೂಪಿತ ಪ್ರತಿಯೋಗಿತ್ವಂ ಅನುಯೋಗಿತ್ವಂ ಚ ಯುಕ್ತಂ। ವಿರೋಧಾತ್ । ಅತಃ ಸಂಯೋಗದ್ವಯಮೇವ ಘಟಪಟಯೋಃ । ಏತದಪ್ಯುಕ್ತಂ ಅನುವ್ಯಾಖ್ಯಾನೇ । ಅನ್ಯೋನ್ಯ ಪ್ರತಿಯೋಗಿತ್ವಂ ಉಭಯೋರಪಿ ದೃಶ್ಯತ ಇತಿ ।**

ಸಂಯೋಗ ವಿಭಾಗ ಭೇದ ಇವುಗಳೆಲ್ಲವೂ ಬೇರೇ ಬೇರೇಗಳೇ ಆಗಿರುತ್ತದೆ. ಎಂದು ಹೇಳಿದೆ. ಮತ್ತು ಘಟಸಂಯುಕ್ತವಾದ ಪಟವು ಪಟ ಸಂಯುಕ್ತ ಘಟವು ಹೀಗೆ ಅನ್ಯೋನ್ಯ ಪ್ರತಿಯೋಗಿಗಳಾಗಿ ಅನುಭವವೂ ಬಂದಿರುತ್ತದೆ. ಒಂದೇ ಸಂಯೋಗಕ್ಕೆ ಒಂದರದೇ ಪ್ರತಿಯೋಗಿತೆಯೂ ಯುಕ್ತವಲ್ಲವು, ಪರಸ್ಪರ ವಿರೋಧಿಗಳಾದ್ದರಿಂದ. ಆದ್ದರಿಂದ ಘಟ ಪಟಗಳಿಗೆ ಸಂಯೋಗ ದ್ವಯವನ್ನೇ ಹೇಳಬೇಕು. ಇದನ್ನು ಅನುವ್ಯಾಖ್ಯಾನದಲ್ಲಿ ಹೇಳಿರುತ್ತದೆ. ಪರಸ್ಪರ ಪ್ರತಿಯೋಗಿತೆ ಎರಡರಲ್ಲೂ ಸ್ಪಷ್ಟವೇ ಆಗಿರುತ್ತದೆ.

**ತಥಾ ಚ ಈಶ್ವರ ಕ್ರಿಯಯಾ ಈಶ್ವರ ನಿರೂಪಿತೋ ಘಟಾಧಿಕರಣಕಃ ಸಂಯೋಗೋ ಜಾಯತೇ । ಸ ಚ ಘಟನಾಶೇನ ನಶ್ಯತಿ । ಘಟ ನಿರೂಪಿತ ಈಶ್ವರಾಧಿಕರಣಕ ಸಂಯೋಗಸ್ತು ನಿತ್ಯಏವ ನಘಟಕ್ರಿಯಾಜನ್ಯಃ । ಘಟನಾಶೇಪಿ ತನ್ನಿರೂಪಿತತ್ವಾದನಾಶಾತ್ । ಘಟಧ್ವಂಸಾದಿವತ್ । ನ ಚ ಘಟ ಕ್ರಿಯಾಯಾಃ ಕುತ್ರೋಪಯೋಗ ಇತಿ ವಾಚ್ಯಂ । ಈಶ್ವರಾಧಿಕರಣಕ ಸಂಯೋಗಾಭಿವ್ಯಂಜಕತ್ವಾತ್ । ಈಶ್ವರೇ ಜಗದಾಧಾರತ್ವ ಅಭಿವ್ಯಂಜಕ**

**ಜಗದ್ವತ್ ।**

ಹೀಗೆಂದ ಮೇಲೆ ಈಶ್ವರನ ಕ್ರಿಯೆಯಿಂದ ಈಶ್ವರ ನಿರೂಪಿತವಾದ ಘಟಾದಿಕರಣ ಸಂಯೋಗವು ಹುಟ್ಟುತ್ತದೆ., ಅದು ಘಟನಾಶವಾದರೆ ನಾಶವಾಗುತ್ತದೆ. ಘಟ ನಿರೂಪಿತ ಈಶ್ವರಾಧಿಕರಣಕ ಸಂಯೋಗವು ನಿತ್ಯವೇ ಏಕೆಂದರೆ ಘಟ ಕ್ರಿಯಾ ಜನ್ಯವಲ್ಲವಾದ್ದರಿಂದ ಘಟನಾಶವಾದರೂ ಘಟನಿರೂಪಿತತೆಗೆ ನಾಶವಿಲ್ಲವು. ಘಟ ಧ್ವಂಸದಂತೇ. ಹಾಗಾದರೆ ಘಟ ಕ್ರಿಯೆಗೆ ಎಲ್ಲಿ ಪ್ರಯೋಜನವು? ಹಾಗೆನಬಾರದು. ಈಶ್ವರಾಧಿಕರಕ ಸಂಯೋಗಾಭಿ ವ್ಯಂಜಕತೆ ಇರುವುದರಿಂದ.

**ಈಶ್ವರ ಜೀವ ಕ್ರಿಯಯೋಶ್ಚನ ಪರಸ್ಪರಂ ಸಂಯೋಗ ಜನಕತ್ವಂ । ಕಿಂತು ಅಭಿವ್ಯಂಜಕತ್ವಮಾತ್ರಂ । ಅನ್ಯಥಾ ಉಪಾದಾನಾಭಾವೇನ ಸ್ವರೂಪಸ್ಯೈವ ಪರಿಣಾಮಪ್ರಸಂಗಾತ್ । ಜೀವಸ್ಯ ಪ್ರತಿದಿನಂ ವಿಶ್ವತೈಜಸ ಪ್ರಾಜ್ಞೈಃ ಸಂಶ್ಲೇಷ ವಿಶ್ಲೇಷೌ ಚ ವಿಶೇಷಶಕ್ತ್ಯಾ ಘಟನೀಯೌ । ತಾರ್ಕಿಕಾಸ್ತು । ಅನ್ಯತರ ಕರ್ಮಜ ಉಭಯ ಕರ್ಮಜಃ ಸಂಯೋಗಜ ಸಂಯೋಗಶ್ಚೇತಿ ಸಂಯೋಗ ತ್ರೈವಿಧ್ಯಮಾಹುಃ । ತನ್ನಿರಾಸಾಯಾಹ ।**

**ಪ.ಸು. ಅನಿತ್ಯ ಸಂಯೋಗಃ ಏಕ ವಿಧ ಏವ । ಅನ್ಯತರ ಕರ್ಮಜಃ ।**

ಜೀವೇಶ್ವರರ ಕ್ರಿಯೆಗಳಿಗೆ ಪರಸ್ಪರ ಸಂಯೋಗಜನಕತೆ ಇಲ್ಲವು. ಆದರೆ ಅಭಿವ್ಯಂಜಕತೆ ಮಾತ್ರವೇ ಹಾಗಿಲ್ಲವಾದರೆ ಉಪಾದಾನವಿಲ್ಲದೆ ಸ್ವರೂಪಕ್ಕೆ ಪರಿಣಾಮವನ್ನು ಒಪ್ಪಬೇಕಾದೀತು(ಬರಬೇಕಾದೀತು). ಜೀವಗೆ ಪ್ರತಿದಿನ ಪ್ರತಿಕ್ಷಣ ವಿಶ್ವ, ತೇಜಸ, ಪ್ರಾಜ್ಞ, ಸಂಶ್ಲೇಷ ವಿಶ್ಲೇಷಗಳನ್ನು ಶ್ರೀಶನ ವಿಶೇಷ ಶಕ್ತಿಯಿಂದ ಘಟನೆಯಾದುದೆಂದು ತಿಳಿಯಬೇಕು. ತಾರ್ಕಿಕರು ಅನ್ಯತರ ಕರ್ಮಜ ಸಂಯೋಗ ಉಭಯ ಕರ್ಮಜ ಸಂಯೋಗ, ಸಂಯೋಗಜ ಸಂಯೋಗ ಹೀಗೆ ಸಂಯೋಗವು ಮೂರು ವಿಧವೆಂದು ಹೇಳುತ್ತಾರೆ. ಅದನ್ನು ನಿರಾಕರಿಸುತ್ತಾರೆ. ಅನಿತ್ಯವಾದ ಸಂಯೋಗವು ಒಂದೇ ಅನ್ಯತರ ಕರ್ಮಜವು (ಇಬ್ಬರ ಪೈಕಿ ಅಥವ ಎರಡರ ಪೈಕಿ) ಒಂದರಿಂದ ಹುಟ್ಟಿದುದು.

**ಏಕವಿಧತ್ವಮೇವೋಪಪಾದಯತಿ । ಅನ್ಯತರ ಕರ್ಮಜ ಇತಿ । ನನು ಮಲಯೋಃ ಸಂಯೋಗಃ ಉಭಯ ಕರ್ಮಜೋದೃಶ್ಯತೇ । ತಥಾ ಮೇಷಯೋರಪಿ । ತತ್ಕಥಮುಚ್ಯತೇ ಅನ್ಯತರ ಕರ್ಮಜ ಏವ ಸಂಯೋಗ ಇತ್ಯತ ಆಹ ।**

**ಪ.ಸು. ಮಲ್ಲಯೋಸ್ಸಂಯೋಗಸ್ತು ನೈಕಃ । ಕಿಂತು ದ್ವೌ । ಅತೋ ಅನ್ಯತರ ಕರ್ಮಜೌ ।**

**ತತ್ರ ಸಂಯೋಗದ್ವಯಸ್ವೀಕಾರೇಣ ತಯೋಃ ಪರಸ್ಪರಂ ಅನ್ಯತರ**

**ಕರ್ಮಜತ್ವಾದಿತ್ಯರ್ಥಃ । ಅತ್ರಾನುರೂಪಂ ದೃಷ್ಟಾಂತಂವದನ್ನೇವಾನ್ಯತರ ಕರ್ಮಜ ಸಂಯೋಗಸ್ಯ ಉದಾಹರಣಮಾಹ ।**

**ಪ.ಸೂ. ಸ್ಥಾಣುಶ್ಯೇನಸಂಯೋಗವತ್ ।**

ಒಂದೇ ವಿಧವಾದುದೇ ಸಂಯೋಗ ಎಂಬುದನ್ನು ಉಪಪಾದಿಸುತ್ತಾರೆ. ಎಲ್ಲಾ ಸಂಯೋಗಗಳೂ ಅನ್ಯತರ ಕರ್ಮಜ ಸಂಯೋಗ ಒಂದೇ ಆಗಿರುತ್ತದೆ. ಎಲ್ಲರಲ್ಲಿ ಪರಸ್ಪರ ಸಂಯೋಗವು ಇಬ್ಬರ ಕರ್ಮದಿಂದ ಹುಟ್ಟಿದ್ದಾಗಿ ಕಾಣುತ್ತದೆ. ಹಾಗೇ ಎರಡು ಕುರಿಗಳ ಸಂಯೋಗವು ಹೀಗೆ, ಎರಡರಲ್ಲಿತೋರುವ ಸಂಯೋಗವು ಎರಡರಲ್ಲೊಂದೆಂದು ಹೇಳುತ್ತೀರಿ ಎಂದರೆ ಎಲ್ಲರ ಸಂಯೋಗವು ಒಂದೇ ಅಲ್ಲಾ ಆದರೆ ಎರಡು ಆದ್ದರಿಂದಲೇ ಆ ಎರಡು ಸಂಯೋಗಗಳು. ಅನ್ಯತರ ಕರ್ಮಜಗಳೇ ಅಲ್ಲಿ ಸಂಯೋಗದ ಎರಡನ್ನು ಒಪ್ಪುವುದರಿಂದ ಪರಸ್ಪರವಾಗಿ ಅನ್ಯತರ (ಇಬ್ಬರ ಪೈಕಿ ಒಬ್ಬರ) ಕರ್ಮದಿಂದಲೇ ಹುಟ್ಟಿದ್ದಾಗಿರುತ್ತದೆ. ಇಲ್ಲಿ ಅನ್ಯತರ ಕರ್ಮಜ ಸಂಯೋಗಕ್ಕೆ ಅನುಗುಣವಾದ ದೃಷ್ಟಾಂತವನ್ನು ತೋರುತ್ತಾರೆ. ಸ್ಥಾಣುಶ್ಯೇನಗಳೆಂದು ಸ್ಥಂಬದ ಮೇಲೆ ಪಕ್ಷಿ ಬಂದು ಕೂತು ಸಂಯೋಗ ಹುಟ್ಟಿ ಅದು ಅನ್ಯತರ (ಎರಡರಲ್ಲಿ ಒಂದು) ಕರ್ಮದಿಂದ ಹುಟ್ಟಿದ ಸಂಯೋಗವು.

**ನನು ಹಸ್ತ ಪುಸ್ತಕ ಸಂಯೋಗಾತ್ ಕಾಯ ಪುಸ್ತಕ ಸಂಯೋಗೋಜನ್ಯತೇ। ತಥಾ ಚ ಸಂಯೋಗಜ ಸಂಯೋಗೋಽಪ್ಯಸ್ತಿ ತತ್ಕಥಮೇಕವಿಧ ಏವ ಸಂಯೋಗಃ ಇತ್ಯತ ಆಹ । ಸಂಯೋಗಜೇತಿ ।**

**ಪ.ಸೂ. ಸಂಯೋಗಜ ಸಂಯೋಗಸ್ತುನಾಸ್ತ್ಯೇವ ।**

**ಕುತೋಽನೇತ್ಯತ ಆಹ ।**

**ಪ.ಸೂ. ಹಸ್ತಶರೀರಯೋರಭೇದೇನ ಹಸ್ತ ಪುಸ್ತಕ ಸಂಯೋಗೇನ ಸಂಯೋಗಾಂತರೋತ್ಪತ್ತೇರಯೋಗಾತ್ ।**

**ನನು ಸ್ಥಾಣುಶ್ಯೇನ ಸಂಯೋಗೌ ದ್ವಾವಿತ್ಯಂಗೀಕಾರೇ ಶ್ಯೇನಕರ್ಮಣಾ ಸ್ಥಾಣಾವೇಕಃ ಸಂಯೋಗಃ ತೇನ ಚ ಸಂಯೋಗೇನ ಸ್ಥಾಣೌ ಸಂಯೋಗಃ ಜಾಯತ ಇತಿ ವಕ್ತವ್ಯಂ । ಸ್ಥಾಣೌ ಕರ್ಮಾಭಾವೇ ನ ಶ್ಯೇನ ನಿಷ್ಠ ಸಂಯೋಗಜನಕಸ್ಯ ಅನ್ಯಸ್ಯಾಭಾವಾತ್ ।**

ಕೈ ಪುಸ್ತಕ ಸಂಯೋಗದಿಂದ ದೇಹ ಪುಸ್ತಕಯೋಗ ಹುಟ್ಟುತ್ತದೆ. ಅಂದಮೇಲೆ ಸಂಯೋಗದಿಂದ ಹುಟ್ಟಿದ ಸಂಯೋಗವೂ ಒಂದು ಬೇರೆ ಇರಲು ಒಂದೇ ಸಂಯೋಗವೆಂದು ಹೇಗೆ ಹೇಳುವಿರಿ ಎಂದರೆ ಹೇಳುತ್ತಾರೆ. ಸಂಯೋಗದಿಂದ ಹುಟ್ಟುವ ಸಂಯೋಗವೇ ಇಲ್ಲವೇ ಇಲ್ಲ. ಏಕೆ ಇಲ್ಲವೆಂದರೆ, ಕೈ ದೇಹಗಳಿಗೆ

ಭೇದವಿಲ್ಲದಿರುವುದರಿಂದ ಹಸ್ತ ಪುಸ್ತಕ ಸಂಯೋಗದಿಂದ, ಬೇರೆ ಸಂಯೋಗ ಹುಟ್ಟುತ್ತದೆಂಬುದು ಅಯುಕ್ತವೇ ಆಗಿರುತ್ತದೆ. ಸ್ಥಂಬಶ್ಯೇನ ಪಕ್ಷಿ ಸಂಯೋಗಗಳು ಎರಡೂ ಎಂದರೆ ಶ್ಯೇನ ಪಕ್ಷಿ ಕರ್ಮದಿಂದ ಸ್ಥಾಣುವಿನಲ್ಲಿ ಒಂದು ಸಂಯೋಗ, ಅಸಂಯೋಗದಿಂದ ಸ್ಥಾಣುವಿನಲ್ಲಿ ಒಂದು ಸಂಯೋಗವೆಂದು ಒಪ್ಪಬೇಕು. ಆದರೆ ಸ್ಥಂಬದಲ್ಲಿ ಕರ್ಮವಿಲ್ಲವಾದ್ದರಿಂದ ಶ್ಯೇನದಲ್ಲಿರುವ ಸಂಯೋಗ ಹುಟ್ಟಿಸುವುದರ ಇನ್ನೊಂದು ಇಲ್ಲದಿರುವುದರಿಂದ,

**ತಥಾ ಚ ಸಂಯೋಗಜ ಸಂಯೋಗೋ ಅವರ್ಜನೀಯಃ। ನಚ ಶ್ಯೇನ ಸಂಯೋಗ ಏವಸಾಸ್ತೀತಿ ವಾಚ್ಯಂ । ಸ್ಥಾಣು ಸಂಯುಕ್ತಃ ಶ್ಯೇನ ಇತಿ ಪ್ರತ್ಯಯಾಪಲಾಪಾಯೋಗಾತ್ । ಇತಿ ಚೇನ್ನ । ಶ್ಯೇನ ಕರ್ಮಣೈವ ಸಂಯೋಗದ್ವಯ ಜನನೋಪಪತ್ತೇಃ । ಏಕೇನೈವ ಘಟಾಗ್ನಿ ಸಂಯೋಗೇನ ಯುಗಪದೇವ ಘಟೇರೂಪರಸಗಂಧಾದ್ಯನೇಕ ಗುಣೋತ್ಪತ್ತಿವತ್ । ಚೂತ ಫಲಾದೌ ಪತನ ಕ್ರಿಯಯಾ ಯುಗಪತ್ ಚತುರ್ದಿಗ್‌ಜನಿರೂಪಿತ ಸಂಯೋಗವಚ್ಚ। ಏತತ್ಸರ್ವಂ ವೈಶೇಷಿಕಾಧಿಕರಣ ಸುಧಾಯಾಮೇವೋಕ್ತಂ।**

## ॥ ಇತಿ ಸಂಯೋಗ ಪ್ರಕರಣಂ ॥

ಒಟ್ಟಿನಲ್ಲಿ ಸಂಯೋಗದಿಂದ ಸಂಯೋಗ ಎಂಬುದು ಬಿಡಲಾಗದ ಪ್ರಸಂಗವು ಶ್ಯೆನದ ಸಂಯೋಗವೇ ಇಲ್ಲ ಎನಲು ಬರುವುದಿಲ್ಲ. ಸ್ಥಾಂಬ ಪಕ್ಷಿಯ ಸಂಬಂಧವೆಂಬುದು ಇಲ್ಲವೆನಲು ಬರುವುದಿಲ್ಲ. ಪ್ರತ್ಯಕ್ಷವಾದ್ದರಿಂದ, ಹೀಗೆನಬಾರದು, ಶ್ಯ್ಯನಕ್ರಿಯೆಯಿಂದಲೇ ಎರಡು ಸಂಯೋಗ ಹುಟ್ಟುವುದರಿಂದ ಯುಕ್ತವೂ ಆಗಿರುವುದರಿಂದ, ಹೇಗೆಂದರೆ ಒಂದೇ ಘಟಾಗ್ನಿ ಸಂಯೋಗದಿಂದ ಏಕಕಾಲದಲ್ಲಿ ರೂಪ ರಸಗಂಧಾದಿ ಗುಣೋತ್ಪತ್ತಿ ಉತ್ಪತ್ತಿಯಂತೇ ಮತ್ತೂ ಮಾವಿನಹಣ್ಣು ಮೊದಲಾದವುಗಳಲ್ಲಿ ಪತನ ಕ್ರಿಯೆಯಿಂದ ಏಕಕಾಲದಲ್ಲಿ ನಾಲ್ಕು ದಿಕ್ಕಿನ ಸಂಬಂಧದಂತೇ ಇವೆಲ್ಲವು ವೈಶೇಷಿಕಾಧಿಕರಣ ಸುಧಾದಲ್ಲಿ ವಿಶದವಾಗಿ ಹೇಳಿರುತ್ತದೆ.

ಹೀಗೆ ಗುಣದಲ್ಲಿ ಏಳನೆಯದಾದ ಸಂಯೋಗ ಪ್ರಕರಣವು ಕನ್ನಡಾನುವಾದದಿಂದ ಸಮಾಪ್ತಿಗೊಂಡಿತು

* * * * * * * *

# ೪೦.ವಿಭಾಗ ಪ್ರಕರಣ

**ವಿಭಾಗ ಸ್ವರೂಪಂ ನಿರೂಪಯತಿ । ವಿಭಕ್ತೇತಿ ।**

**ಪ.ಸಂ. ವಿಭಕ್ತ ವ್ಯವಹಾರ ಹೇತುಃ ಗುಣೋ ವಿಭಾಗಃ । ಸದ್ವಿವಿಧಃ । ನಿತ್ಯೋಽನಿತ್ಯಶ್ಚ ।**

**ಅನಿತ್ಯವಿಭಾಗಸ್ಯೋದಾಹರಣ ಮಾಹ ।**

**ಪ.ಸಂ. ಅನಿತ್ಯದ್ರವ್ಯಗತೋ ಅನಿತ್ಯಃ ।**

**ಉಪಲಕ್ಷಣಮೇತತ್ । ಘಟಾದಿ ನಿರೂಪಿತ ಆಕಾಶಾದಿನಿಷ್ಠೋವಿ-ಭಾಗೋಽಪ್ಯನಿತ್ಯ ಇತಿಬೋಧ್ಯಂ । ನಿತ್ಯ ವಿಭಾಗಸ್ಯೋದಾಹರಣ ಮಾಹ ।**

**ಪ.ಸಂ. ಭಗವದ್ರೂಪಾಣಾಂ ಪರಸ್ಪರಂ ಮೂಲರೂಪೇಣ ಚ ವಿಶ್ಲೇಷ ಶಬ್ದವಾಚ್ಯೋ ವಿಭಾಗೋಽನಿತ್ಯಃ । ಸಂಶ್ಲೇಷವದಚಿಂತ್ಯಶಕ್ತ್ಯಾ ಘಟನೀಯಃ ।**

**ನನು ವಿಭಾಗೇನ ಗುಣಃ ಭೇದೇನೈವ ವಿಭಕ್ತವ್ಯವಹಾರೋಪಪತ್ತೇರಿತಿ ಚೇನ್ನ। ಘಟಾದೌ ಕಥಂಚಿತ್ ಸಂಭವೇಽಪಿ ಭಗವದ್ರೂಪೇಷು ಮೂಲರೂಪಾದನ್ಯೋನ್ಯಾಭಾವಸ್ಯ ವಿದಾರಣರೂಪಭೇದಸ್ಯ ಚ ಶ್ರುತ್ಯಾದಿ ನಿಷಿದ್ಧತ್ವೇನ ವಿಭಾಗ ರೂಪ ಗುಣಸ್ಯೈವ ವಕ್ತವ್ಯತ್ವಾತ್ । ನ ಚ ಭಗವದ್ರೂಪೇಷು ವಿಭಾಗ ಏವನಾಸ್ತೀತಿ ವಾಚ್ಯಂ ।**

ಗುಣವಾದ ವಿಭಾಗ ಸ್ವರೂಪವನ್ನು ನಿರೂಪಿಸುತ್ತಾರೆ. ಇದು ಅದರಲ್ಲಿ ಒಂದಾಗಿದೆ ಹೀಗೆ ಏಕಾಂಶ ವ್ಯವಹಾರ ಕಾರಣವಾದುದೇ ವಿಭಾಗವು. ಅದು ಎರಡು ವಿಧವು ನಿತ್ಯವೆಂದೂ ಅನಿತ್ಯವೆಂದೂ, ನಿತ್ಯದ್ರವ್ಯದಲ್ಲಿರುವುದು ನಿತ್ಯವು ಅನಿತ್ಯ ದ್ರವ್ಯದಲ್ಲಿರುವುದು ಅನಿತ್ಯವು. ಘಟಾದಿಗಳಲ್ಲಿರುವ ಅವ್ಯಾಕೃತಾಕಾಶದ ವ್ಯಾಕೃತಾಕಾಶದ ವಿಭಾಗವೂ ಅನಿತ್ಯವೆಂದು ಉಪಲಕ್ಷಣವಾಗಿ (ಅನುಗುಣವಾಗಿ) ತಿಳಿಯಬೇಕು. ನಿತ್ಯ ವಿಭಾಗದ ದೃಷ್ಟಾಂತವನ್ನು ತಿಳಿಸುತ್ತಾರೆ. ಭಗವದ್ರೂಪಗಳಿಗೆ ಪರಸ್ಪರವಾಗಿ ಮೂಲರೂಪದಿಂದ ವಿಶ್ಲೇಷ (ಬೇರೆಯಾದ) ನಾಮವಾಚ್ಯವಾದ ವಿಭಾಗವು ನಿತ್ಯವಾದುದು. ಸಂಶ್ಲೇಷದಂತೆ ವಿಶ್ಲೇಷವೂ ಅಚಿಂತ್ಯ ಶಕ್ತಿಯಿಂದ ಯುಕ್ತವಾಗಿರುತ್ತದೆ. (ಸಂಶ್ಲೇಷ ವಿಶ್ಲೇಷಗಳೆಂದರೆ ವಿಭಾಗ ಅವಿಭಾಗವು) ವಿಭಾಗವೆಂಬ ಗುಣವನ್ನು ಏಕೆ ಒಪ್ಪಬೇಕು. ಭೇದದಿಂದಲೇ ವಿಭಾಗ. ವ್ಯವಹಾರ ಕೂಡುತ್ತಿರಲು ಎನಬಾರದು. ಏಕೆಂದರೆ ಘಟಾದಿಗಳಲ್ಲಿ ಕಥಂಚಿತ್ (ಒಂದು ವೇಳೆ) ಭೇದದಿಂದಲೇ ವಿಭಾಗ ವ್ಯವಹಾರವಾದರೂ ಭಗವದ್ರೂಪಗಳಲ್ಲಿ

ಮೂಲರೂಪದಿಂದ ಭೇದವನ್ನೂ ಅಂಶರೂಪದಿಂದ ಭೇದವನ್ನೂ ಶ್ರುತಿಗಳು ನಿಷೇಧಿಸಿರುವುದರಿಂದ ವಿಭಾಗರೂಪ ಗುಣದ ಅಗತ್ಯತೆ ಹೇಳಲೇ ಬೇಕಾಗಿರುತ್ತದೆ. ಭಗವದ್ರೂಪಗಳಲ್ಲಿ ವಿಭಾಗವೇ ಇಲ್ಲವೆನ್ನುತ್ತೇವೆ ಎಂದರೆ ಹಾಗೆನಬಾರದು.

**ಪೂರ್ಣಾತ್ ಪೂರ್ಣಮುದಚ್ಯತ ಇತ್ಯುದ್ಗಮನರೂಪ ವಿಭಾಗೋಕ್ತೇ:। ಅನ್ಯಥಾ ಭಗವದ್ರೂಪಾಣಾಂ ಐಕ್ಯಸ್ವಭಾವತಃ ಸಿದ್ಧತ್ವೇನ ಕದಾಚಿದೀಶಃ ಸಕಲಾವತಾರಾನೇಕಂ ವಿಧಾಯ ಅಹಿಪತೌಹಿಶೇತ ಇತಿ ಪುನರೇಕೀಕರಣ ವಿಧಾನಾನುಪಪತ್ತೇ: ।**

ಪೂರ್ಣ ಮೂಲರೂಪದಿಂದ ಪೂರ್ಣಗಳೇ ಆದ ರೂಪಗಳು ಉಕ್ಕಿ ಬರುತ್ತದೆ ಹೀಗೆ ಶ್ರುತಿಯು ಹೇಳಿರುವುದರಿಂದ, ಇಲ್ಲವಾದರೆ ಭಗವದ್ರೂಪಗಳಿಗೆ ಐಕ್ಯ ಸ್ವಭಾವ ಇರುವುದರಿಂದ ಪರಮಾತ್ಮನು ಅನೇಕಾವತಾರಗಳನ್ನು ಒಂದೇ ಮಾಡಿ ಶೇಷ ಪರ್ಯಂಕ ಶಾಯಿಯಾಗುತ್ತಾನೆಂಬುದು ಅನುಪಪನ್ನವಾಗಬೇಕಾಗುತ್ತದೆ.

**ಅತಃ ಪ್ರಾಗ್ವಿಭಕ್ತಾನಾಂ ಸ್ವರೂಪಾಣಾಂ ಸಂಶ್ಲೇಷ ಏವೇತ್ಯಂಗೀಕರ್ತವ್ಯಂ। ತದುಕ್ತಮಾಥರ್ವಣ ಭಾಷ್ಯೇ । ಹರೇರಪಿ ಸ್ವರೂಪಾಣಾಂ ಏಕೀಭಾವೋಯದೋಚ್ಯತೇ । ಸಂಶ್ಲೇಷ ಏವ ಸಿದ್ಧತ್ವಾತ್ ಸ್ವರೂಪೈಕ್ಯಸ್ಯನೋಭವಃ ಇತಿ । ನನು ಸಂಯೋಗ ವಿಭಾಗಯೋಃ ಪರಸ್ಪರ ವಿರುದ್ಧತ್ವಾತ್ಕಥಂ ಪರಮಾತ್ಮನಿತೌ ನಿತ್ಯಾಸ್ತ: ಇತಿ ಚೇನ್ನ । ಪರಮಾತ್ಮಗುಣಾನಾಂ ಲೋಕ ವಿರುದ್ಧಾನಾಂ ಏವ ಈಶ್ವರ ಶಕ್ತ್ಯಾಯುಗಪದಣುತ್ವಮಹತ್ವಾದಿವತ್ ಸ್ವೀಕಾರಾತ್ । ತದುಕ್ತಂ ಭಾಗವತೇ। ಯಸ್ಮಿನ್ವಿರುದ್ಧಗತಯೋಹ್ಯನಿಶಂ ಪತಂತೀತಿ । ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವ ಇತಿ ಶ್ರುತೇಃ ।**

ಆದುದರಿಂದ ಮೊದಲು ವಿಭಕ್ತ ಸ್ವರೂಪಗಳಿಗೆ ಸಂಶ್ಲೇಷವೇ ಎಂದು ಅಂಗೀಕರಿಸಬೇಕು. ಅಥರ್ವಣ ಭಾಷ್ಯದಲ್ಲಿ ಪರಮಾತ್ಮ ಅನೇಕ ರೂಪಗಳಿಗೆ ಏಕೀ ಭಾವವೆಂದು ಹೇಳುತ್ತದೆ. ಸಂಶ್ಲೇಷವೇ (ಒಂದೆಡೆ ಸೇರೋಣವೇ) ಎಂದು ಸಿದ್ಧವಾಗಿರುವುದರಿಂದ ಐಕ್ಯವೆಂದರೆ ಪ್ರತ್ಯೇಕ ಸ್ಥಿತಿಯಿಲ್ಲ ಎಂದು ಹೇಳಿದೆ. ಸಂಯೋಗ ವಿಭಾಗಗಳಿಗೆ ಪರಸ್ಪರ ವಿರೋಧವೇ ಇರುವುದರಿಂದ ಪರಮಾತ್ಮನಲ್ಲಿ ನಿತ್ಯವಾಗಿ ಹೇಗೆ ಇರುತ್ತದೆ ಎಂದರೆ, ಪರಮಾತ್ಮನ ಗುಣಗಳೆಲ್ಲವೂ ಲೋಕ ವಿರುದ್ಧಗಳೇ ಆಗಿ ಈಶ್ವರನ ಶಕ್ತಿಯಿಂದ ಏಕಕಾಲದಲ್ಲೇ ಅತಿ ಅಣುತೆ, ಅತಿ ಮಹತ್ವತೆ, ಇರುವುದಾಗಿ ಒಪ್ಪಿರುವುದರಿಂದ, ಭಾಗವತದಲ್ಲಿ ಸ್ತೋತ್ರ ಭಾಗದಲ್ಲಿ ನಿನ್ನಲ್ಲಿ ಪರಸ್ಪರ ವಿರುದ್ಧತೆಗಳು ನಿನ್ನಲ್ಲಿ ಯುಕ್ತಗಳೇ ಆಗಿರುತ್ತದೆ ಎಂದು ಹೇಳಿದೆ. ಪರಸ್ಪರ ವಿರುದ್ಧಗಳೆಂದು ಶೃತವಾಗಿರುವ ಗುಣಗಳೆಲ್ಲವೂ ಶ್ರೀಹರಿಯಲ್ಲೇ ಎಂದು ಶೃತಿಯು ಇರುವುದರಿಂದ ಶ್ರೀಹರಿ ರೂಪಗಳಲ್ಲಿ ಸಂಯೋಗ ವಿಭಾಗಗಳು

ಸಂಶ್ಲೇಷಗಳೂ ಎಲ್ಲವೂ ಅವಿರುದ್ಧಗಳೇ ಆಗಿರುತ್ತವೆ.

**ನನು ಆಕಾಶಾದೌ ಘಟಾದಿ ನಿರೂಪಿತ ಸಂಯೋಗ ವಿಭಾಗಯೋಃ ನಿತ್ಯತ್ವಂ ಉತ ಅನಿತ್ಯತ್ವಂ । ನಾದ್ಯಃ । ವಿರುದ್ಧಯೋಃ ಸದಾ ಏಕತ್ರ ಸತ್ವಾನುಪಪತ್ತೇಃ। ಘಟನಾಶೇಪಿ ಸತ್ವಾಪತ್ತೇಃ । ನ ದ್ವಿತೀಯಃ । ಉಪಾದಾನಕಾರಣಾಭಾವಾದಿತಿಚೇನ್ನ । ಆಕಾಶಾದಿನಾಮೇವ ಉಪಾದಾನತ್ವ ಸಂಭವಾತ್ । ಸ್ವಗತದ್ವಿತ್ವಾದಿವತ್ । ತದುಕ್ತಂ ವಿಯತ್ತ್ವಾದೀಯ ಅನುವ್ಯಾಖ್ಯಾನೇ । ತಥಾಪಿ ಮೂರ್ತ ಸಂಬಂಧ ಪರತಂತ್ರ ವಿಶೇಷಯುಕ್ । ಖಮೇ ವ ಉತ್ಪತ್ತಿಮನ್ನಾಮ ಶ್ರುತಿ ಶಬ್ದ ವಿವಕ್ಷಿತಂ ಇತಿ । ಅನ್ಯಥಾ ಪ್ರಕಾರಾಂತರೇಣ ಘಟನಾಸಂಭವಾತ್।**

॥ ಇತಿ ವಿಭಾಗ ನಿರೂಪಣಂ ॥

ಆಕಾಶಾದಿಗಳಲ್ಲಿ ಘಟ ನಿರೂಪಿತ (ನಿಮಿತ್ತಕ) ಸಂಯೋಗ ವಿಭಾಗಗಳು ನಿತ್ಯವೇ ಅನಿತ್ಯವೇ, ನಿತ್ಯವೆನಲಾಗುವುದಿಲ್ಲ. ವಿರುದ್ಧ ಪದಾರ್ಥಗಳೂ ಸದಾ ಒಂದೆಡೆ ಇರಲು ಅಸಂಭವವಾದುದರಿಂದ ಅನಿತ್ಯವೂ ಅಲ್ಲ ಉಪಾದಾನವಲ್ಲದುದರಿಂದ, ಹಾಗೆನಬಾರದು, ಆಕಾಶವೇ ಉಪಾದಾನವಾಗಿರುತ್ತದೆ. ತನ್ನಲ್ಲಿರುವ ದ್ವಿತ್ವಾದಿಗಳಂತೇ ವಿಯತ್ವಾದ ಅನುವ್ಯಾಖ್ಯಾನದಲ್ಲಿ, ಮೂರ್ತ ಸಂಬಂಧದಿಂದ ಪರತಂತ್ರ ವಿಶೇಷಯುಕ್ತವಾಗಿ ಆಕಾಶವು. ಹುಟ್ಟುವುಳ್ಳದ್ದೆನಿಸಿಕೊಳ್ಳುತ್ತದೆ. ಶ್ರುತಿಯಿಂದ ಸಿದ್ಧವೂ ಹೀಗೆ ಹೇಳಿರುತ್ತದೆ. ಹೀಗೆ ಒಪ್ಪದಿದ್ದರೆ ಬೇರೆ ಘಟನಾ ಅಸಂಭವವೇ ಆಗುತ್ತದೆ.

ಹೀಗೆ ಗುಣದಲ್ಲಿ ಎಂಟನೆಯದಾದ ವಿಭಾಗ ಪ್ರಕರಣವು ಕನ್ನಡಾನುವಾದದಲ್ಲಿ ಸಮಾಪ್ತಿಯಾಯಿತು.

* * * * * * * *

# ೪೧. ಪರತ್ವಾಪರತ್ವ ಪ್ರಕರಣ

**ಪರತ್ವಾಪರತ್ವೇ ನಿರೂಪಯತಿ ।**

**ಪ.ಸಂ. ಪರಾಪರವ್ಯವಹಾರಕಾರಣೇ ಪರತ್ವಾಪರತ್ವೇ । ಪ್ರತ್ಯೇಕಂ ದ್ವಿವಿಧೇ । ಕಾಲಪರತ್ವಾಽಪರತ್ವೇ ದೇಶಪರತ್ವಾಽಪರತ್ವೇಚೇತಿ । ಪುನರ್ದ್ವಿವಿಧೇ । ನಿತ್ಯೇಽನಿತ್ಯೇ ಚೇತಿ ।**

**ನಿತ್ಯಯೋಃ ದೇಶಕಾಲ ಪರತ್ವಯೋಃ ಆಶ್ರಯಮಾಹ ।**

**ಪ.ಸಂ. ನಿತ್ಯೇದೇಶಕಾಲಪರತ್ವೇ ಉಭೇಽಪಿ ಈಶಲಕ್ಷ್ಮೀಜೀವೇಷು ।**

**ದೂರದೇಶ ವೃತ್ತಿತ್ವಂ ದೇಶಪರತ್ವಂ ಬಹುಕಾಲ ಸಂಬಂಧಿತ್ವಂ ಕಾಲಪರತ್ವಂ ಈಶಲಕ್ಷ್ಮ್ಯೋಃ ಬಹುದೂರ ವೃತ್ತಿತ್ವಾತ್ ಬ್ರಹ್ಮಾದ್ಯಪೇಕ್ಷಯಾ ಪೂರ್ವಕಾಲೀನತ್ವೇನ ಜ್ಯೇಷ್ಠತ್ವಾಚ್ಚಯುಕ್ತಂ ।**

ಪರತೆ ಅಪರತೆ ಎಂಬ ಗುಣಗಳನ್ನು ನಿರೂಪಿಸುತ್ತಾರೆ. ಪರ (ದಡ, ದೂರ) ಅಪರ (ಚಿಕ್ಕ, ಹತ್ತಿರ) ವ್ಯವಹಾರ ಕಾರಣವಾದವುಗಳು, ಕಾಲ ಪರತೆ (ದೊಡ್ಡದು, ದೊಡ್ಡವನು) ಕಾಲಪರತೆ (ಸಣ್ಣದು, ಸಣ್ಣವನು) ದೇಶಪರತೆ (ದೂರವಾದುದು) ದೇಶಪರತೆ (ಸಮೀಪದ್ದು) ಹೀಗೆ ಎರಡು ವಿಧಗಳು. ಮತ್ತೂ ಎರಡು ವಿಧಗಳಾದವುಗಳು ನಿತ್ಯಗಳೆಂದೂ ಅನಿತ್ಯಗಳೆಂದೂ, ನಿತ್ಯಗಳಾದ ದೇಶ ಪರತೆ, ಕಾಲ ಪರತೆಗಳಿಗೆ ಆಶ್ರಯವಾದವುಗಳೆಂದರೆ, ಶ್ರೀಲಕ್ಷ್ಮೀ, ಜೀವರು, ಬಹುದೂರ ದೇಶದಲ್ಲಿರುವಿಕೆ ದೇಶಪರತೆ, ಬಹುಕಾಲ ಮೊದಲಿರುವವಿಕೇ ಕಾಲಪರತೆ ಈಶ ಲಕ್ಷ್ಮೀದೇವಿಯರು ಬಹುವ್ಯಾಪ್ತರಾಗಿ ಬಹುದೂರದಲ್ಲಿ ಬ್ರಹ್ಮಾದಿಗಳಿಗಿಂತಲೂ ಬಹುಕಾಲೀನರಾಗಿಯೂ ಜ್ಯೇಷ್ಠರಾಗಿಯೂ ಇರುವುದರಿಂದ, ಅವರೀರ್ವರಲ್ಲಿ ಕಾಲದೇಶಗಳಿಂದ ನಿತ್ಯ ಪರತೇ ಯುಕ್ತವೇ ಆಗಿರುತ್ತದೆ.

**ತದುಕ್ತಂ ಐತರೇಯಭಾಷ್ಯೇ । ಆತ್ಮಬ್ರಹ್ಮಾಗ್ರ ಇತ್ಯಾದಿ ಗುಣಾಗ್ರ್ಯತ್ವಂ ಹರೇರ್ವದೇತ್ । ಕಾಲಜ್ಯೇಷ್ಠ್ಯಂತು ಯಸ್ಮಾತ್ತತ್ಸ್ರಷ್ಟೃತ್ವೇರೇವ ಸಿದ್ಧ್ಯತೀತಿ। ಮುಕ್ತಾನಾಮಪಿ ಜೀವಾನಾಂ ದೂರದೇಶಸ್ಥತ್ವಸ್ಯ ನಿತ್ಯತ್ವೇನ ಕಾಲಜ್ಯೇಷ್ಠತ್ವಸ್ಯ ಚ ಸತ್ವಾತ್ ತದುಭಯಂ ಯುಕ್ತಂ । ಅವ್ಯಾಕೃತಾಕಾಶಾದೌ ನಿತ್ಯಂ ಕಾಲಪರತ್ವಮಸ್ತೀತ್ಯಾಹ ।**

**ಪ.ಸಂ. ನಿತ್ಯಂ ಕಾಲ ಪರತ್ವಂ ಅವ್ಯಾಕೃತಾಕಾಶಾದಿ ನಿತ್ಯ ದ್ರವ್ಯೇಷು ।**

ಐತರೇಯ ಭಾಷ್ಯದಲ್ಲಿ ಆತ್ಮ ಬ್ರಹ್ಮಾಗ್ರ ಇತ್ಯಾದಿಗಳೆಲ್ಲ ಪರಮಾತ್ಮಗೆ ಗುಣ ಜ್ಯೇಷ್ಠತೆಯನ್ನು ಹೇಳುತ್ತದೆ. ಬ್ರಹ್ಮಾದಿ ಸೃಜಕ ಎನ್ನುವುದರಿಂದ ಕಾಲ ಜೇಷ್ಠತೆ ಸ್ವತಃ ಸಿದ್ಧಿಸುತ್ತದೆ. ಮುಕ್ತ ಜೀವರಲ್ಲೂ ದೂರದಲ್ಲಿರುವಿಕೆ ನಿತ್ಯತೆಗಳಿಂದ ಕಾಲ ಜ್ಯೇಷ್ಠತೆ, ಇರುವುದರಿಂದ ನಿತ್ಯ ಕಾಲ ಪರತೆ ನಿತ್ಯ ದೇಶಪರತೆ ಇದ್ದೇ ಇದೆ ಎಂದು ಹೇಳುತ್ತಾರೆ. ನಿತ್ಯತೆ ಕಾಲಪರತೆ, ಅವ್ಯಾಕೃತಾಕಾಶಾದಿ ನಿತ್ಯ ದ್ರವ್ಯಗಳಲ್ಲಿ ಇರುತ್ತದೆ.

**ಮಹದಾದಿ ಜಗದುತ್ಪತ್ತೇಃ ಪೂರ್ವಮಪಿ ಸತ್ವಾಜ್ಜ್ಯೇಷ್ಠತ್ವಮಿತ್ಯರ್ಥಃ**

**ಪ.ಸಂ. ಅನಿತ್ಯಂ ಕಾಲ ಪರತ್ವಂ ಜ್ಯೇಷ್ಠೇ । ಅನಿತ್ಯಂ ಕಾಲಾಪರತ್ವಂ ಕನಿಷ್ಠೇ । ಅನಿತ್ಯಂ ದೇಶ ಪರತ್ವಞ್ಚ ದೂರಸ್ಥೇ ಅನಿತ್ಯ ದ್ರವ್ಯೇ ।**

**ಜ್ಯೇಷ್ಠಾದಿನಾಶೇಪರತ್ವಾದೀನಾಮಪಿ ನಾಶಾದಿತ್ಯರ್ಥಃ । ನಿತ್ಯ ದೇಶಾಪರತ್ವಸ್ಯೋದಾಹರಣ ಮಾಹ ।**

**ಪ.ಸಂ. ನಿತ್ಯಂ ದೇಶಾಪರತ್ವಂ ಈಶಲಕ್ಷ್ಮ್ಯೋಃ । ಅನಿತ್ಯಂ ದೇಶಾಪರತ್ವಂ ಸಮೀಪಸ್ಥೇವಸ್ತುನಿ ।**

**ನ ಚ ಸಮೀಪಸ್ಥತ್ವದೂರಸ್ಥತ್ವಯೋಃ ಪರಮಾತ್ಮನಿ ವಿರೋಧ ಇತಿ ವಾಚ್ಯಂ । ಅಚಿಂತ್ಯ ಶಕ್ತ್ಯೋಪಪತ್ತೇಃ ।**

ಅವ್ಯಾಕೃತಾಕಾಶಕ್ಕೆ ಮಹತ್ತತ್ವಾದಿಗಳಿಗಿಂತಲೂ ಮೊದಲೇ ಇದ್ದುದರಿಂದ ಜೇಷ್ಟತೆ, (ಕಾಲ ಪರತೆ) ಉಂಟೆಂದರ್ಥವು. ಜೇಷ್ಟನಲ್ಲಿ ಅನಿತ್ಯವಾದ ಕಾಲ ಪರತ್ವ, ಕನಿಷ್ಟ (ಸಣ್ಣ)ನಲ್ಲಿ ಅನಿತ್ಯ ಕಾಲಾಪರತ್ವವು, ದೂರದಲ್ಲಿರುವ ಅನಿತ್ಯ ದ್ರವ್ಯಗಳಲ್ಲಿ ದೇಶಾಽಪರತೆಯು. ಜೇಷ್ಟನಾಶವಾದರೆ ಪರತೆಗಳೂ ನಾಶವೇ ಆಗುತ್ತದೆ. ನಿತ್ಯ ದೇಶಾಪರತೆಗೆ ಆಶ್ರಯವು ಯಾವುದೆಂದರೆ, ಈಶ, ಲಕ್ಷ್ಮೀದೇವಿಯು ಅನಿತ್ಯವಾದ ಅಪರತೆಯು ಸಮೀಪದಲ್ಲಿರುವ ವಸ್ತುಗಳಲ್ಲಿ ಸಮೀಪತೆ, ದೂರತೆ ಎರಡು ವಿರುದ್ಧವಾದವುಗಳು ಪರಮಾತ್ಮನಲ್ಲಿ ಹೇಗೆ ಎಂದರೆ, ಪರಮಾತ್ಮನ ಅಚಿಂತ್ಯ ಶಕ್ತಿಯಿಂದ ಯುಕ್ತಗಳಾಗುತ್ತವೆ.

**ಆಸೀನೋ ದೂರಂ ವ್ರಜತೀತ್ಯಾದಿಶ್ರುತೇಃ । ದ್ವಾದಶಸ್ತೋತ್ರೇಽಪಿ । ದೂರಾದ್ದೂರತರಂಯತ್ತು ತದೇವಾಂತಿಕಮಂತಿಕಾದಿತಿ । ನನ್ವೀಶ್ವರೇದೇಶಾಪರತ್ವವತ್ ಕಾಲಾಪರತ್ವಮಪ್ಯಸ್ತ್ಯೇವ । ಜ್ಯೇಷ್ಠತ್ವವತ್ ಕನಿಷ್ಠತ್ವಸ್ಯಾಪ್ಯುಕ್ತೇಃ । ತಥಾಹಿ । ವ್ಯಾಸಃ ಷಟ್‌ಶತ ವರ್ಷೀಯಃ ಧೃತರಾಷ್ಟ್ರಮಜೀಜನತ್ ಇತಿ ಭಾಗವತ ತಾತ್ಪರ್ಯೇ । ನಿರ್ಣಯೇಽಪಿ । ಪೂರ್ವಂ ಸುಮಿತ್ರಾತನಯಶ್ಚ ಶೇಷಃ ಸಲಕ್ಷ್ಮಣೋನಾಮ ರಘೂತ್ತಮಾದನ್ವಿತಿ ರಾಮಸ್ಯ ಜ್ಯೇಷ್ಠತ್ವೋಕ್ತೇಃ ।**

ಕೂತವನೇ ದೂರಲ್ಲಿ ಹೋಗುತ್ತಿರುತ್ತಾನೆ ಹೀಗೆ ಹೇಳುವುದರಿಂದ ದ್ವಾದಶಸ್ತೋತ್ರದಲ್ಲಿಯೂ, ದೂರಕ್ಕಿಂತಲೂ ದೂರ ಯಾವುದೋ ಅದೇ ಹತ್ತಿರಕ್ಕಿಂತಲೂ ಹತ್ತಿರವೆಂದು ಹೇಳಿರುತ್ತದೆ. ಹೀಗೆ ಪರಮಾತ್ಮನಲ್ಲಿ ದೇಶಾಪರತೆ (ಸಮೀಪತೆ)ಯಂತೇ ಕಾಲಾಪರತೆ ಸಮೀಪತೆಯೂ ಇದ್ದೇ ಇದೆ. ದೊಡ್ಡತನದಂತೆ ಚಿಕ್ಕತನವೂ ಅವನಿಗೆ ಯುಕ್ತವೇ ಆಗಿರುತ್ತದೆ. ಹೇಗೆಂದರೆ, ಆರುನೂರು ವರ್ಷದ ವ್ಯಾಸರು ಧೃತರಾಷ್ಟ್ರನನ್ನು ಹುಟ್ಟಿಸಿದರು ಎಂದು ಭಾಗವತ ತಾತ್ಪರ್ಯದಲ್ಲಿ ಹೇಳಿದೆ. ನಿರ್ಣಯದಲ್ಲಿ ಮೊದಲು ಸುಮಿತ್ರಾ ಮಗನಾದ ಶೇಷನು, ಅವನೇ ಲಕ್ಷ್ಮಣನಾಗಿ ರಾಮನ ತಮ್ಮನಾಗಿ ಹುಟ್ಟಿದನು ಎಂದು ರಾಮನಿಗೆ ಅಣ್ಣತನವನ್ನು ಹೇಳಿದೆ.

**ತಥಾಲೇಭೇ ಪುತ್ರಂ ಗೋಕುಲೇ ಪೂರ್ಣಚಂದ್ರಕಾಂತಾನನಂ ಬಲ ಭದ್ರಂ ಸುಶುಭ್ರಂ । ಯದಾ ತ್ರಿಮಾಸಃ ಸಬಭೂವದೇವಃ ತದಾವಿರಾಸೀತ್ ಪುರುಷೋತ್ತಮೋಜಃ ಇತಿ ಕೃಷ್ಣಸ್ಯ ಕಾಲಾಪರತ್ವೋಕ್ತೇಃ ಇತಿ ಚೇನ್ನ ।**

**ತದಜ್ಞಜನ ದೃಷ್ಟಿವಿಷಯತ್ವೋಪಾಧಿಕತ್ವೇನ ಸ್ವಭಾವತಃ ಕನಿಷ್ಠತ್ವಾಭಾವಾತ್ । ತದುಕ್ತಂ ತೃತೀಯ ತಾತ್ಪರ್ಯೇ । ನಾಯುರ್ಮಾನಂ ಭಗವತಃ ಕಸ್ಮಿನ್ರೂಪೇಪಿವಿದ್ಯತೇ । ಅನಾದಿತ್ವಾದಮಧ್ಯತ್ವಾದ ನಂತತ್ವಾಚ್ಚಸೋವ್ಯಯಃ ಇತಿ । ಪ್ರಥಮ ತಾತ್ಪರ್ಯೇಪಿ ।**

ಹಾಗೆ ಗೋಕುಲದಲ್ಲಿ ಪೂರ್ಣಚಂದ್ರ ಕಾಂತಿ ಮುಖವುಳ್ಳ ಬಲರಾಮನೆಂಬ ಮಗನನ್ನು ರೋಹಿಣೀ ಪಡೆದಳು. ಅದಾದ ಮೂರು ತಿಂಗಳಿಗೆ ಶ್ರೀಶನು ದೇವಕೀ ದೆಸೆಯಿಂದ ಶ್ರೀಕೃಷ್ಣನಾಗಿ ಆವಿರ್ಭೂತನಾದನೆಂದು ಹೇಳಿದೆ. ಶೇಷನು ಲಕ್ಷ್ಮಣನಾದಾಗ ರಾಮನಾಗಿ ಅಣ್ಣನಾದನು, ಅದೇ ಶೇಷನು ಬಲರಾಮನಾದಾಗ ಕೃಷ್ಣನಾದನೆಂದು ಹೇಳಿದೆ. ಒಬ್ಬನಿಗೆ ಜ್ಯೇಷ್ಠತೆ ಕನಿಷ್ಠತೆಗಳು ಹೇಗೆ ಕೂಡುತ್ತದೆ ಎಂದರೇ, ಅದೆಲ್ಲವೂ ಅಜ್ಞ ದೃಷ್ಟಿಯಿಂದ ಪರಮಾತ್ಮನಿಗೆ ಜ್ಯೇಷ್ಠತೆಯೂ ಇಲ್ಲಾ ಕನಿಷ್ಠತೆಯೂ ಇರುವುದಿಲ್ಲ. ಇದನ್ನು ತೃತೀಯ ತಾತ್ಪರ್ಯದಲ್ಲಿ ತಿಳಿಸಿರುತ್ತಾರೆ. ಪರಮಾತ್ಮನಿಗೆ ಯಾವ ರೂಪದಲ್ಲಿಯೂ ಆಯುಷ್ಯದ ಸಂಖ್ಯೆ ಇರುವುದಿಲ್ಲ. ಆದಿ ಇಲ್ಲಾ ಮಧ್ಯತೆ ಇಲ್ಲ ಅಂತ್ಯವಂತೂ ಮೊದಲೇ ಇಲ್ಲ . ಆದ್ದರಿಂದಲೇ ಅವ್ಯಯನು. ಹೀಗೆ ಪ್ರಥಮ ತಾತ್ಪರ್ಯದಲ್ಲಿ ಹೇಳಿರುತ್ತದೆ.

**ಅಹೇಯಮನುಪಾದೇಯಂ ಯದ್ರೂಪಂ ನಿತ್ಯಮವ್ಯಯಂ । ಸವಿವಾಪೇಕ್ಷ್ಯರೂಪಾಣಾಂ ವ್ಯಕ್ತಿಮೇವ ಜನಾರ್ದನಃ । ಅಗೃಹ್ಣಾದ್ವ್ಯಸೃಜಚ್ಚೇತಿ ರಾಮಕೃಷ್ಣಾದಿಕಾಂತನುಂ । ಪಠ್ಯತೇ ಭಗವಾನೀಶೋ ಮೂಢಬುದ್ಧಿವ್ಯಪೇಕ್ಷಯಾ । ಕೃಷ್ಣರಾಮಾದಿ ರೂಪಾಣಾಂ ಲೋಕವ್ಯಕ್ತಿವ್ಯಪೇಕ್ಷಯೇತಿ ।**

ಭಗವಂತನ ರೂಪಗಳು ಹೇಯವು ಅಲ್ಲವು ಉಪೇಕ್ಷಾನರ್ಹವೂ ಅಲ್ಲಾ ನಿತ್ಯವಾದುದು ನಾಶರಹಿತವಾದುದು ಲೋಕನಟನಾರ್ಥವಾಗಿ ಕೃಷ್ಣ, ರಾಮಾದಿ ರೂಪಗಳಿಗೆ ಲೋಕ ಸೃಷ್ಟಿಯಿಂದಲೇ ಹೀಗೆ ಹೇಳಿರುತ್ತದೆ. ಅವನೇ ತನ್ನ ಇಚ್ಛಾನುಸಾರ ರೂಪಗಳನ್ನು ತಾಳುತ್ತಾನೆ. ರಾಮ ಕೃಷ್ಣಾದಿರೂಪಗಳು ತಾಳಿದಂತೇ ಬಿಟ್ಟಂತೇ ತೋರಿಸುತ್ತಾನೆ. ಮೂಢರ ದೃಷ್ಟಿಯಿಂದ ಗುರುಗಳಲ್ಲಿ ಓದಿದವನಂತೆ ತೋರಿಸುತ್ತಾನೆ.

**ನಚಯಚ್ಚಾನ್ಯತ್ರಿಕಾಲಾತೀತಂ ತದಪ್ಯೋಂಕಾರ ಏವೇತಿ ಮಾಂಡೂಕೋಪನಿಷದಿ ಪರಮಾತ್ಮನಃ ಸರ್ವಥಾಕಾಲಸಂಬಂಧ ನಿಷೇಧಾತ್ ಕಥಂ ಕಾಲ ಜ್ಯೇಷ್ಠತ್ವಾದಿಕಮಿತಿ ವಾಚ್ಯಂ । ತಸ್ಯ ಕಾಲಕೃತವಿಕಾರಾಭಾವ ಪರತ್ವಾತ್ । ಅತ ಏವ ದ್ವಿತೀಯ ಭಾಗವತೇ । ನವರ್ತತೇ ಯತ್ರ ರಜಸ್ತಮಸ್ತಯೋಃ ಸತ್ವಂಚಮಿಶ್ರಂ ನಚಕಾಲ ವಿಕ್ರಮಃ ಇತಿ ಕಾಲವಿಕಾರಾಭಾವ ಏವೋಕ್ತಃ ಅನ್ಯಥಾ ಪೂರ್ವೋದಾಹೃತ ಬಹುಸ್ರ ಮ...**

**ವಿರೋಧ ಪ್ರಸಂಗಾತ್ ।**

॥ ಇತಿ ಪರತ್ವಾಪರತ್ವ ಪ್ರಕರಣಂ ॥

ಯಾವ ತ್ರಿಕಾಲಾತೀತವೋ ಅದು ಓಂಕಾರವು ಎಂದು ಮಂಡೂಕೋಪನಿಷತ್ತಿನಲ್ಲಿ ಹೇಳಿದೆ. ಇದರಿಂದ ಪರಮಾತ್ಮನಿಗೆ ಸರ್ವಥಾ ಕಾಲ ಸಂಬಂಧವಿಲ್ಲೆಂದು ನಿಷೇಧಿಸಿದೆ, ಎಂದ ಮೇಲೆ ಹೇಗೆ ಕಾಲದಲ್ಲಿ ಜೇಷ್ಟತೆ ಕನಿಷ್ಟತೆಗಳೂ ಎಂದರೆ ಹೀಗೆನಬಾರದು. ಮಂಡೂಕೋಪನಿಷತ್ತಿಗೆ ಕಾಲ ವಿಕಾರ ರಹಿತನೆಂದರ್ಥವೇ ಆಗಲಿ, ಕಾಲ ನಿಮಿತ್ತಿಕ ಜೇಷ್ಟ, ಕನಿಷ್ಟಗಳಿಲ್ಲದವನೆಂದರ್ಥವಿಲ್ಲ. ಆದ್ದರಿಂದಲೇ ದ್ವಿತೀಯ ಭಾಗವತದಲ್ಲಿ ಯಾವ ಭಗವಂತನ ವಿಷಯದಲ್ಲಿ ರಜೋ, ತಮ, ಸತ್ವಾದಿಗಳಾಗಲಿ ಮಿಶ್ರವಾಗಲಿ ಕಾಲ ನಿಮಿತ್ತವಿಕಾರವಾಗಲಿ ಇರುವುದಿಲ್ಲ ಎಂದು ಹೇಳಿರುತ್ತದೆ. ಹೀಗೆ ಒಪ್ಪದಿದ್ದರೆ ಹಿಂದೆ ಹೇಳಿದ ಪ್ರಮಾಣಗಳಿಗೆ ವಿರೋಧ ಪ್ರಸಂಗ ಬರುತ್ತದೆ. ಮತ್ತೂ ಕಾಲ ಸಂಬಂಧ ದೇಶ ಸಂಬಂಧವಿಲ್ಲವಾದರೆ ಸತ್ವವೇ ಇಲ್ಲದೆ ಅಸತ್ವ ಬರಬೇಕಾಗುತ್ತದೆ. ಆದ್ದರಿಂದ ಕಾಲ ಸಂಬಂಧಿಯಾದರೋ ಕಾಲನಿಮಿತ್ತಿಕ ವಿಕಾರ ರಹಿತನೆಂದೇ ಅರ್ಥವು.

ಹೀಗೆ ಗುಣದಲ್ಲಿ ಒಂಭತ್ತನೆಯದಾದ ಪರತ್ವಾಪರತ್ವ ನಿರೂಪಣೆಯು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

❋ ❋ ❋ ❋ ❋ ❋ ❋ ❋

# ೪೨.ದ್ರವತ್ವ ಪ್ರಕರಣ

**ದ್ರವತ್ವಂ ನಿರೂಪಯತಿ ।**

**ಪ.ಸು. ದ್ರವಣ ಹೇತು ಗುಣೋದ್ರವತ್ವಂ । ತದ್ವಿವಿಧಂ । ನಿತ್ಯಮನಿತ್ಯಂ ಚ । ಪುನರ್ದ್ವಿವಿಧಂ।**

**ಸಾಂಸಿದ್ಧಿಕನಿತ್ಯದ್ರವತ್ವಸ್ಯೋದಾಹರಣಮಾಹ ।**

**ಪ.ಸು. ಸಾಂಸಿದ್ಧಿಕಂ ನೈಮಿತ್ತಿಕಂ ಚ । ಸಾಂಸಿದ್ಧಿಕಂ ನಿತ್ಯಂ ದ್ರವತ್ವಂ ಈಶಲಕ್ಷ್ಮ್ಯೋಃ ದೇವೇಷು ಜಲಾಂತರ್ಗತೇಷು । ಅನಿತ್ಯಂ ಸಾಂಸಿದ್ಧಿಕಂಜಲೇ ।**

ಗುಣವಾದ ದ್ರವತ್ವವೆಂಬ ಪದಾರ್ಥವನ್ನು ನಿರೂಪಿಸುತ್ತಾರೆ. (ದ್ರವಣವೆಂದರೆ) ಹರಿಯುವ ಗುಣಕ್ಕೆ ಕಾರಣವಾದ ಧರ್ಮವೇ ದ್ರವತೆ. ಇದು ಎರಡು ವಿಧ. ನಿತ್ಯವೆಂದೂ, ಅನಿತ್ಯವೆಂದೂ, ಇದು ಪುನಃ ಎರಡು ವಿಧವು.

ಸಾಂಸಿದ್ಧಿಕವು (ಸ್ವಾಭಾವಿಕವು) ನೈಮಿತ್ತಿಕ (ಕಾರಣದಿಂದಾಗುವ ದ್ರವತೆ)ವೆಂದೂ ಎರಡು ವಿಧವಾಗಿರುತ್ತದೆ. ಸಾಂಸಿದ್ಧಿ ನಿತ್ಯದ್ರವತೆ, ಈಶ ಲಕ್ಷ್ಮೀದೇವಿ, ಕೆಲ ದೇವತೆಗಳಲ್ಲಿ ಜಲಾಭಿಮಾನಿ ದೇವತೆಗಳಲ್ಲಿ ಕೆಲವು ಮುಕ್ತ ಜೀವರಲ್ಲಿ. ಅನಿತ್ಯವಾದ ಸಾಂಸಿದ್ಧಿಕ ದ್ರವತೆ ಜಲದಲ್ಲಿ, ಈಶ ಲಕ್ಷ್ಮ್ಯಾದಿಗಳಲ್ಲಿ ಏಕೆ ಒಪ್ಪಬೇಕು ಎಂದರೆ.

**ಸ ಏವ ದ್ರವರೂಪೇಣೇತಿ ಪುರಾಣಾದೌ ಪರಮಾತ್ಮನೋ ದ್ರವತ್ವಂ ಪ್ರಸಿದ್ಧಂ । ಲಕ್ಷ್ಮ್ಯಾ ಅಪಿ ಪ್ರಲಯಕಾಲೇನೋದಕ ಸುಧಾಸಮುದ್ರಾದಿ ರೂಪಾಯಾ ದ್ರವತ್ವಂ ಯುಕ್ತಂ । ಮುಕ್ತಾನಾಂತು ತೀರ್ಥದೇವಾನಾಂ ದ್ರವತ್ವಂ ಅನ್ಯೇಷಾಂ ಕಾಮರೂಪತ್ವಾತ್ ದ್ರವತ್ವಂಯುಕ್ತಮಿತಿ ಭಾವಃ ।**

**ಪ.ಸು. ನೈಮಿತ್ತಿಕಂ ದ್ರವತ್ವಂತ್ವತ್ರ ಸುವರ್ಣಾದೌ ।**

**ಅಗ್ನಿಸಂಯೋಗಾದಿ ನಿಮಿತ್ತಜನ್ಯಮಿತ್ಯರ್ಥಃ । ಸುವರ್ಣಂತು ಪಾರ್ಥಿವಂ। ತತ್ರ ತೇಜೋಭಾಗಃ ಪ್ರಚುರಃ । ಅತೋತ್ಯಂತಾನಲ ಸಂಯೋಗೇಪ್ಯನುಚ್ಛೇದಸ್ತ ದ್ರವತ್ವಸ್ಯೇತಿ ಧ್ಯೇಯಂ । ಅನ್ಯಥಾ ಮಹತ್ತತ್ವ ಬ್ರಹ್ಮಾಂಡಯೋಃ ಹೇಮರೂಪತ್ವಸ್ಯ ಉಕ್ತತ್ವೇನ ಶುದ್ಧತೇಜಸ್ತ್ವಾಪತ್ತೇಃ ।**

## ॥ ಇತಿ ದ್ರವತ್ವ ಪ್ರಕರಣಂ ॥

ಪರಮಾತ್ಮನೇ ದ್ರವರೂಪದಿಂದ ಗಂಗೆಯಲ್ಲಿರುತ್ತಾನೆ. ಇತ್ಯಾದಿ ಪುರಾಣಗಳ ಪ್ರಸಿದ್ಧಿಯಿಂದ ಲಕ್ಷ್ಮೀದೇವಿಯು ಪ್ರಳಯಕಾಲದಲ್ಲಿ ಘನೋದಕ ರೂಪಗಳಾಗುವುದರಿಂದ, ಸುಧಾ ಸಮುದ್ರರೂಪಳಾಗಿರುವುದರಿಂದಲೂ ಲಕ್ಷ್ಮೀದೇವಿಗೆ ದ್ರವತೆ ಸ್ಪಷ್ಟವು. ತೀರ್ಥಾಭಿಮಾನಿ ದೇವತೆಗಳಿಗೆ, ಮುಕ್ತರಿಗೆ ಸ್ವೇಚ್ಛಾರೂಪತೆ ಇರುವುದರಿಂದ ಹೀಗೆ ಕೆಲ ದೇವತೆಗಳಿಗೆ ದ್ರವತೆಯು. ನೈಮಿತ್ತಿಕ ದ್ರವತೆಯಾದರೋ ಸುವರ್ಣಾದಿಗಳಲ್ಲಿ ಅಗ್ನಿ ಸ್ಪರ್ಶಾದಿ ನಿಮಿತ್ತದಿಂದ ದ್ರವತೆ ಹೊಂದುವುದರಿಂದ, ಸುವರ್ಣ (ಬಂಗಾರ)ವು ಪಾರ್ಥಿವ ಪದಾರ್ಥವು. ಅದರಲ್ಲಿ ತೈಜಸ ಭಾಗವು ಹೆಚ್ಚಾಗಿರುತ್ತದೆ. ಆದ್ದರಿಂದಲೇ ಎಷ್ಟು ಕಾಯಿಸಿದರೂ ಸುವರ್ಣದ ನಾಶವಿಲ್ಲ. ಇದನ್ನು ಬಿಟ್ಟು ತಾರ್ಕಿಕರು ಹೇಳುವಂತೇ ಸುವರ್ಣವು ಪಾರ್ಥಿವವಲ್ಲ ತೈಜಸವೆಂದರೆ, ಮಹತ್ತತ್ವ ಬ್ರಹ್ಮಾಂಡಗಳಿಗೆ ಸುವರ್ಣ ರೂಪತೆ ಹೇಳಿರುವುದರಿಂದ ಅವುಗಳಿಗೆ ತೈಜಸತೆ ಬರಬೇಕಾಗಿರುತ್ತದೆ.

ಹೀಗೆ ಗುಣದಲ್ಲಿ ಹತ್ತನೆಯದಾಗಿ ದ್ರವತ್ವ ನಿರೂಪಣ(ಪ್ರಕರಣ)ವು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

❋ ❋ ❋ ❋ ❋ ❋ ❋ ❋

# ೪೩.ಗುರುತ್ವ ಪ್ರಕರಣ

**ಗುರುತ್ವಂ ನಿರೂಪಯತಿ ।**

**ಪ.ಸಂ. ಪತನಾಸಾಧಾರಣ ಕಾರಣಂ ಗುರುತ್ವಂ । ನಿತ್ಯಮನಿತ್ಯಂ ಚೇತಿ ದ್ವಿವಿಧಂ । ನಿತ್ಯಂ ಗುರುತ್ವಂ ಈಶ ಲಕ್ಷ್ಮ್ಯೋಃ ।**

**ಚೂತಫಲಾದೌ ಪತನ ಕ್ರಿಯಾಯಾಃ ಗುರುತ್ವಾನ್ವಯ ವ್ಯತಿರೇಕಾನುವಿಧಾಯಿತ್ವದರ್ಶನಾದಿತಿ ಭಾವಃ । ಈಶ್ವರೇ ನಿತ್ಯಗುರುತ್ವ ಸದ್ಭಾವೇ ಪ್ರಮಾಣಮಾಹ ।**

**ಪ.ಸಂ. ಕೃಷ್ಣೇ ಯಶೋದಾ ಪ್ರತ್ಯಕ್ಷಸಿದ್ಧಂ ।**

**ತದುಕ್ತಂ ದಶಮಸ್ಕಂಧ ಭಾಗವತೇ । ಏಕದಾರೋಹಮಾರೂಢಂ ಲಾಲಯಂತೀ ಸುತಂ ಸತೀ । ಗರಿಮಾಣಂ ಶಿಶೋರ್ವ್ಯೋಢುಂ ನ ಸೇಹೇಗಿರಿಕೂಟವತ್ ।**

ಗುಣವೆನಿಸಿದ ಗುರುತ್ವ(ಭಾರ)ವನ್ನು ನಿರೂಪಿಸುತ್ತಾರೆ. ಗಿಡದಿಂದ ಹಣ್ಣುಬೀಳಲು ಮುಖ್ಯ ಕಾರಣವಾದುದೇ ಗುರುತೆ (ಭಾರವು) ಅದು ನಿತ್ಯವು ಅನಿತ್ಯವು, ಹಾಗೆ ಎರಡು ವಿಧಗಳಾಗಿರುತ್ತದೆ. ನಿತ್ಯತ್ವ ಗುರುತೇ ಈಶ ಲಕ್ಷ್ಮಿಯರಲ್ಲಿ ಭಾಗವತದಲ್ಲಿ ಹೇಳಿದೆ. ಯಶೋದೆಯು ಶ್ರೀ ಕೃಷ್ಣನನ್ನು ತೊಡೆಯ ಮೇಲಿರಿಸಿಕೊಂಡಿರಲು ಬೆಟ್ಟದ ಕೊಡಗಲ್ಲಿನಂತೇ ಅತಿ ಭಾರವಾದನು.

**ಭೂಮೌ ನಿಧಾಯತಂ ಗೋಪೀವಿಸ್ಮಿತಾಭಾರಪೀಡಿತೇತಿ ತೃಣಾವರ್ತಃಶಾಂತರಯೋವಾತ್ಯಾರೂಪಧರೋಹರನ್ । ಕೃಷ್ಣಂ ನ ಭೋಗತಂ ಹಂತುಂನಾಶಕ್ನೋದ್ಭೂರಿಭಾರಬೃತ್ । ತಮಶ್ಮಾನಂ ಮನ್ಯಮಾನಃ ಆತ್ಮನೋ ಗುರುಮತ್ತಯಾ । ಗಲೇ ಗೃಹೀತ ಉತ್ಸ್ರಷ್ಟುಂ ನಾಶಕ್ನೋದದ್ಭುತಾರ್ಭಕಮಿತಿ। ಏವಂ ಲಕ್ಷ್ಮ್ಯಾಃ ಅಪಿ ಸೀತಾರುಕ್ಮಿಣ್ಯಾದಿ ರೂಪೇಷು ಗುರುತ್ವಂ ಬೋಧ್ಯಂ। ಯೋಗಿನಾಂಮುಕ್ತಾನಾಂ ಚ ಗುರುತ್ವಮಾಹ ।**

**ಪ.ಸಂ. ಯೋಗಿನಾಂ ಮುಕ್ತಾನಾಂ ಚ ಗುರುತ್ವಂ ಅಷ್ಟೈಶ್ವರ್ಯಾಂತರ್ಗತಂ । ಅನಿತ್ಯಂ ಗುರುತ್ವಂ ಪಾಷಾಣಾದೌ ಕಾರ್ಯದ್ರವ್ಯಮಾತ್ರೇ । ಪಂಚ ತನ್ಮಾತ್ರಾವಾಶ ತಮಸ್ಸು ನ ಗುರುತ್ವಂ । ತತ್ಕಾರ್ಯಸ್ಯ ಕ್ವಾಪ್ಯನುಕ್ತೇರಿತ್ಯರ್ಥಃ ।**

॥ ಇತಿ ಗುರುತ್ವಂ ಪ್ರಕರಣಂ ॥

ಅತಿ ಭಾರದಿಂದ ಭೂಮಿಯಲ್ಲಿಳಿಸಿ ಅತಿ ಆಶ್ಚರ್ಯಗೊಂಡಳು. ಆಗ ತೃಣಾವರ್ತನೆಂಬ ದೈತ್ಯನು ವಾಯು (ಗಾಳಿ) ರೂಪದಿಂದ ಶ್ರೀಕೃಷ್ಣನನ್ನು ಮೇಲೆ

ಎತ್ತಿಕೊಂಡು ಹೋಗಿ ಕೊಲ್ಲಲು ಅಶಕ್ತನಾಗಿ ಕಲ್ಲೆಂದು ತಿಳಿದು ಬಿಟ್ಟನು. ಕೃಷ್ಣನು ಅವನ ಕುತ್ತಿಗೆಯನ್ನು ಹಿಡಿದು ಒಗೆದನು. ಆಗ ದೈತ್ಯನು ಹತನಾದನೆಂದು ಹೇಳಿದೆ. ಹೀಗೆ ಹರಿಯಲ್ಲಿ ನಿತ್ಯ ಗುರುತೇ ಸಿದ್ಧವು ಲಕ್ಷ್ಮೀದೇವಿಯಲ್ಲಿ ರುಕ್ಮಿಣಿ ಸೀತಾದಿ ರೂಪದಳಲ್ಲಿ ಗುರುತೇ ತಿಳಿಯಬೇಕು ಯೋಗಿಗಳಿಗೂ, ಮುಕ್ತರಿಗೂ, ಅಷ್ಟೈಶ್ವರ್ಯ ಉಂಟೆಂದ ಕಾರಣ ಅದರಲ್ಲೊಂದಾದ ಭಾರವುಸಿದ್ಧವೇ. ಪಂಚತನ್ಮಾತ್ರಾಗಳು ರೂಪ, ರಸ, ಗಂಧ, ವಾಯು, ಆಕಾಶ ಶಬ್ದಾದಿಗಳಲ್ಲಿ ಗುರುತ್ವವಿರುವುದಿಲ್ಲ.

ಹೀಗೆ ಗುಣದಲ್ಲಿ ಹನ್ನೊಂದನೆಯದಾದ ಗುರುತ್ವ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

* * * * * * * *

# ೪೪. ಲಘುತ್ವ ಪ್ರಕರಣ

**ಲಘುತ್ವಂ ನಿರೂಪಯತಿ ।**

ಪ.ಸಂ. ವೇಗಹೇತುರ್ಗುಣೋ ಲಘುತ್ವಂ । ತದ್ವಿವಿಧಂ ನಿತ್ಯಮನಿತ್ಯಂ ಚ ।

**ಅನ್ವಯ ವ್ಯತಿರೇಕಾಭ್ಯಾಂ ತದ್ಧೇತುತ್ವಾವಧಾರಣಾತ್ ಇತಿ ಭಾವಃ । ಅವ್ಯಾಕೃತಾಕಾಶಾದೌ ವೇಗಾದರ್ಶನಾನ್ನಲಘುತ್ವಮಿತಿ ಭಾವಃ । ಇತ್ಯಾಹ ।**

ಪ.ಸಂ. ನಿತ್ಯಂ ಲಘುತ್ವಂ ಅವ್ಯಾಕೃತಾಕಾಶ ವರ್ಣ ವ್ಯತಿರಿಕ್ತ ಈಶಾದಿ ದ್ರವ್ಯವೃತ್ತಿ । ಅನಿತ್ಯಂ ಲಘುತ್ವಂ ಅನಿತ್ಯ ದ್ರವ್ಯ ವೃತ್ತಿ । ವೇಗಹೇತುತ್ವಂ ಚ ಲಘುತ್ವಸ್ಯ ಲಘೀಮತಿಶಯೇನ ವೇಗಾತಿಶಯ ದರ್ಶನಾತ್ತೇಜ ಆದೌ ಪ್ರತ್ಯಕ್ಷ ಸಿದ್ಧಂ ।

**ಕೃಷ್ಣಾದಿ ರೂಪೇಷುಧಾವನಾದೇಃ ದರ್ಶನಾದಿತಿ ಭಾವಃ । ಲಾಘವಾತಿಶಯೇನೇತಿ । ಅನೇಕಯೋಜನಸ್ಥ ಮಾರ್ತಾಂಡಮಂಡಲ ರಶ್ಮೀನಾಂ ಲಾಘವಾತಿಶಯೇನ ವೇಗಾತಿಶಯತ್ ಕ್ಷಿಪ್ರಂ ಭೂ ಪ್ರಸರಣಂ ಪ್ರತ್ಯಕ್ಷ ಸಿದ್ಧಂ ಇತಿ ಭಾವಃ । ನನು ಲಘುತ್ವಂ ನ ಗುಣಃ । ಗುರುತ್ವಾಭಾವ ರೂಪತ್ವಾದಿತ್ಯಾಶಂಕ್ಯ ನಿರಕರೋತಿ**

ಪ.ಸಂ. ಗುರುತ್ವಾಭಾವೋ ಲಘುತ್ವಂ ಇತಿ ಚ ವೈಪರೀತ್ಯಪರಮಹತಂ ।

**ವೈಪರೀತ್ಯೇತಿ । ತಥಾಚ ವಿನಿಗಮನಾ ವಿರಹಾದುಭಯೋಃ ಅಪಿಗುಣತ್ವಂ ಯುಕ್ತಮಿತ್ಯರ್ಥಃ ।**

ಪ.ಸಂ. ಪ್ರತಿಯೋಗ್ಯನಪೇಕ್ಷೇಣಾಚ್ಚ ।

**ಗುರುತ್ವಜ್ಞಾನಂ ವಿನಾಪೀದಂ ಲಘ್ವಿತಿಜ್ಞಾನಸ್ಯ ಸರ್ವಾನುಭವ ಸಿದ್ಧತ್ವಾದಿತಿ ಭಾವಃ ।**

## ॥ ಇತಿ ಲಘುತ್ವ ಪ್ರಕರಣಂ ॥

ಗುಣವಾದ ಲಘುತ್ವ (ಹಗುರ) ಎಂಬ ಪದಾರ್ಥವನ್ನು ನಿರೂಪಿಸುತ್ತಾರೆ. ವೇಗಕ್ಕೆ ಕಾರಣವಾದುದೇ ಲಘುತೆಯು. ಇದು ನಿತ್ಯವೆಂದೂ ಅನಿತ್ಯವೆಂದೂ ಎರಡು ವಿಧವು. ಹಗುರಿದ್ದರೆ ವೇಗವಿರುತ್ತದೆ. ಅದಿಲ್ಲವಾದರೆ ವೇಗವಿರುವುದಿಲ್ಲ. ಹೀಗೆ ಅನ್ವಯವು ಅದರ ಇರುವಿಕೆ ಇಲ್ಲದಿರುವಿಕೆಗಳಿಂದ ಊಹಿಸಲಾಗುತ್ತದೆ. ವೇಗ ಕಾರಣವೇ ಲಘುವೆಂದು, ಅವ್ಯಾಕೃತಾಕಾಶಾದಿಗಳಲ್ಲಿ ವೇಗವಿಲ್ಲವಾದ್ದರಿಂದ ಲಘುತ್ವವಿಲ್ಲವೆಂದರ್ಥವು. ನಿತ್ಯವಾದ ಲಘುತೆ ಅವ್ಯಾಕೃತಾಕಾಶ ವರ್ಣವ್ಯತಿರಿಕ್ತವಾದ ಈಶ್ವರಾದಿ ದ್ರವ್ಯಗಳಲ್ಲಿರುತ್ತದೆ. ಅನಿತ್ಯವಾದ ಲಘುತೇ ಅನಿತ್ಯ ದ್ರವ್ಯಗಳಿಗಿರುತ್ತದೆ. ಲಘುತೆ ವೇಗ ಕಾರಣವಾದ್ದರಿಂದ, ಲಘುವಾದ್ದರಿಂದ ತೇಜ ಆದಿಗಳಲ್ಲಿ ವೇಗ ಕಂಡಿರುತ್ತದೆ. ಶ್ರೀ ಕೃಷ್ಣಾದಿ ರೂಪಗಳಲ್ಲಿ ಅತಿ ಧಾವನ (ಓಡೋಣ) ಕಂಡಿರುವುದರಿಂದ ಶ್ರೀಶನಲ್ಲಿ ನಿತ್ಯ ಲಘುತೆ ಇರುತ್ತದೆ. ಸೂರ್ಯ ರಶ್ಮಿಯಲ್ಲಿ ಲಘುತೆ ಇರುವುದರಿಂದಲೇ ಅನೇಕ ಯೋಜನ ದೂರವಾದರೂ ಕ್ಷಣದಲ್ಲಿ ಭೂಮಂಡಲವೆಲ್ಲಾ ಪ್ರಸರಿಸುವುದು ಕಂಡಿರುತ್ತದೆ. ಲಘುತೆ ಗುಣವಲ್ಲವು. ಗುರುತ್ವಾಭಾವದಿಂದಲೇ ಕಾರ್ಯನಿರ್ವಾಹವಾಗುತ್ತಿರಲು ಲಘುವನ್ನು ಏಕೆ ಒಪ್ಪಬೇಕು? ಹಾಗೆನಬಾರದು. ಏಕೆಂದರೆ ಲಘುತೆ ಅಭಾವದಿಂದಲೇ ಗುರುತೆ, ವ್ಯವಹಾರ ನಿರ್ವಾಹವಾಗುತ್ತಿರಲು ಗುರುತೆ ಗುಣವನ್ನು ಏಕೆ ಒಪ್ಪಬೇಕು ಎಂದು ಬರುತ್ತದೆ ಆದ್ದರಿಂದ ಎರಡಕ್ಕೂ ಗುಣತೆ ಒಪ್ಪುವುದೇ ಯುಕ್ತವು. ಪ್ರತಿಯೋಗಿ ಗುರು ಸಾಪೇಕ್ಷಣೆ ಇಲ್ಲದೆ ಲಘುಜ್ಞಾನವಾಗುವುದರಿಂದಲೂ ಗುರು ಅಭಾವ, ಲಘು ಎನಬಾರದು.

ಹೀಗೆ ಹನ್ನೆರಡನೆಯ ಗುಣವಾದ ಲಘುತೆ ನಿರೂಪಣೆಯು ಕನ್ನಡಾನುವಾದದಲ್ಲಿ ಸಮಾಪ್ತವಾಯಿತು.

❋ ❋ ❋ ❋ ❋ ❋ ❋ ❋

# ೪೫. ಮೃದುತ್ವ ಪ್ರಕರಣ

ಮೃದುತ್ವಂ ನಿರೂಪಯತಿ ।

ಪ.ಸಂ. ಮಾರ್ದವ ವ್ಯವಹಾರ ಹೇತುಃ ಮೃದುತ್ವಂ । ನಿತ್ಯಾನಿತ್ಯ ಭೇದೇನ ದ್ವಿವಿಧಂ । ನಿತ್ಯಮೀಶಲಕ್ಷ್ಮೀಮುಕ್ತೇಷು । ಅನಿತ್ಯಂ ಮೃದುತ್ವಂ ಆಕಾಶಕಾಲಅವಿದ್ಯಾಅಂಧಕಾರತೇಜೋವಾಯು ವ್ಯತಿರಿಕ್ತೇಷು ಕಾರ್ಯ ದ್ರವ್ಯೇಷು ।

ಬದರ ಪಾಂಡು ವದನೋ ಮೃದುಗಂಡಂ ಮಂಡಯನ್ ಮಕರ ಕುಂಡಲ ಲಕ್ಷ್ಮ್ಯಾ ಇತಿ ದಶಮಸ್ಕಂಧ ಭಾಗವತೇ ಉಕ್ತೇಃ । ಲಕ್ಷ್ಮೀ ಶರೀರೇಪಿ ವನಿತಾಶರೀರತ್ವಾತ್ ಮೃದುತ್ವಂ ಸಿದ್ಧಮೇವ ।

॥ ಇತಿ ಮೃದುತ್ವ ಪ್ರಕರಣಂ ॥

ಗುಣಗಳಲ್ಲೊಂದಾದ ಮೃದುತ್ವ (ಮೆತ್ತಗಿರುವಿಕೆ)ವನ್ನು ತಿಳಿಸುತ್ತಾರೆ. ಅತಿ ಮೃದುವೆಂದು ವ್ಯವಹಾರ ಕಾರಣವೇ ಮೃದುತ್ವವು. ಇದು ನಿತ್ಯವೆಂದು ಅನಿತ್ಯಗಳೆಂದು ಎರಡು ವಿಧವು. ನಿತ್ಯ ಮೃದುತ್ವ ಈಶ, ಲಕ್ಷ್ಮೀ ಮುಕ್ತರುಗಳಲ್ಲಿ, ಅನಿತ್ಯಮೃದುತ್ವ, ಆಕಾಶ, ಕಾಲ, ಅವಿದ್ಯಾ, ಅಂಧಕಾರ, ತೇಜಸ್ಸುವಾಯು ವ್ಯತಿರಿಕ್ತ(ಬಿಟ್ಟು) ಮಿಕ್ಕ ದ್ರವ್ಯಗಳಲ್ಲಿ, ಭಾಗವತ ದಶಮಸ್ಕಂಧದಲ್ಲಿ ಬದರೀ ಹಣ್ಣಿನಂತೇ ಕೆಂಪಾದ ತುಟಿ ಮೃದುತರವಾದ ಕೆನ್ನೆಗಳು ಕರ್ಣಕುಂಡಲಗಳ ಸಂಪತ್ತಿನಿಂದ ಬಹುಸುಂದರ ಶ್ರೀಕೃಷ್ಣನೆಂದು ವರ್ಣಿಸುವಾಗ, ಶ್ರೀಹರಿಯಲ್ಲಿ ಮೃದುತ್ವವನ್ನು ಹೇಳಿದೆ, ಲಕ್ಷ್ಮೀದೇವಿ ಸುಂದರ ಹೆಣ್ಣಾದ್ದರಿಂದ ಮೃದುತ್ವವು ಸ್ವತಃ ಸಿದ್ಧವು.

ಹೀಗೆ ಗುಣದಲ್ಲಿ ಹದಿಮೂರನೆಯದಾದ, ಮೃದುತ್ವ ನಿರೂಪಣೆಯು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೪೭.ಕಾಠಿಣ್ಯ ಪ್ರಕರಣ

**ಕಾಠಿಣ್ಯಂ ವಿಭಜತಿ ।**

**ಪ.ಸಂ. ಕಾಠಿಣ್ಯಂ ದ್ವಿವಿಧಂ ನಿತ್ಯಮನಿತ್ಯಂ ಚೇತಿ । ನಿತ್ಯಮೀಶಲಕ್ಷ್ಮ್ಯೋಃ ।**

**ಈಶ ಲಕ್ಷ್ಮ್ಯೋರಿತಿ । ಕೃಷ್ಣಾದಿ ಭಗವದ್ರೂಪಾಣಾಂ ಶರೀರಾಣಾಂ ವಜ್ರಾದಪಿದಾಢ್ರ್ಯೋಕ್ತೇಃ । ತಥಾ ದಶಮ ಸ್ಕಂದ ಭಾಗವತೇ । ಭಗವದ್ಗಾತ್ರ ನಿಷ್ಪಾತೈಃ ವಜ್ರನಿಷ್ಪೇಷನಿಷ್ಠುರೈಃ ಚಾಣೂರೋಭಜ್ಯಮಾನಾಂಗಃ ಮುಹುಗ್ಲಾ೯ನಿಮವಾಪಹ । ಭಗವಂತಂ ವಾಸುದೇವಂ ಕೃದ್ಧೋವಕ್ಷಸ್ಯತಾಡವತ್ । ನಾಚಲತ್ ಪ್ರಹಾರೇಣ ವಜ್ರಾಹತ ಇವದ್ವಿಪಃ ಇತಿ ।**

ಇದು ಅತಿ ಘಟ್ಟಿಯು ಕಲ್ಲಿನಂತೇ ಎಂಬ ವ್ಯವಹಾರ ಕರಣವೇ ಕಠಿಣ್ಯತೆ ಎಂಬ ಗುಣವು. ಇದು ನಿತ್ಯವು ಅನಿತ್ಯಗಳೆಂದು ಎರಡು ವಿಧವು. ನಿತ್ಯ ಕಾಠಿಣ್ಯತೆ ಈಶ ಲಕ್ಷ್ಮಿಯರಲ್ಲಿ ಶ್ರೀಮದ್ಭಾಗವತ ದಶಮಸ್ಕಂಧಾದಿಗಳಲ್ಲಿ ಶ್ರೀಕೃಷ್ಣನ ದೇಹದಲ್ಲಿ (ಅತಿ ಘಟ್ಟಿ) ವಜ್ರಕ್ಕಿಂತಲೂ ಕಾಠಿಣ್ಯತೆ ಹೇಳಿರುತ್ತದೆ. ಮೇಲೆ ಬಿದ್ದ ಕೃಷ್ಣನದೇಹ ಕಾಠಿಣ್ಯವು ವಜ್ರಕ್ಕಿಂತಲೂ ಕಠಿಣವಾಗಿ ಚಾಣೂರನೆಂಬ ಮಲ್ಲನು ಒಡೆಯಲ್ಪಟ್ಟ ದೇಹವುಳ್ಳವನಾದನು ಮತ್ತು ಕೃಷ್ಣನೇ ಎದೆಯ ಮೇಲೆ ಮುಷ್ಟಿಯಿಂದ ಗುದ್ದಿದರೆ ಹೂವಿನಿಂದ ಹೊಡೆಸಿಕೊಂಡ ಆನೆಯಂತೇ ಚಲಿಸಲಿಲ್ಲವೆಂದೂ ಹೇಳಿರುತ್ತದೆ.

**ಏವಂ ತತ್ರ ತತ್ರಯುದ್ಧೇಷು ಭಗವತ್ಸ್ಯರಿ ಸಂಬಂಧೇನ ಶತ್ರು ಮುಕ್ತಾಯುಧಾನಾಂ ಚೂರ್ಣೀಭಾವಸ್ತತತ್ರತತ್ರೋಕ್ತಃ ಜ್ಞಾತವ್ಯಃ ।**

**ಪ.ಸಂ. ಅನಿತ್ಯಮನಿತ್ಯ ಮೂರ್ತ ದ್ರವ್ಯೇ ।**

**ಮಹದಾದಿ ದ್ರವ್ಯೇಷ್ವಿತ್ಯರ್ಥಃ ತಮಸ್ಯಪಿ ಕಾಠಿಣ್ಯಂಬೋಧ್ಯಂ । ತದುಕ್ತಂ ಬೃಹದ್ಭಾಷ್ಯೇ । ತಮೋಂಧಂ ದ್ವಿಗುಣಂ ತಸ್ಮಾತ್ ಕಾಠಿಣ್ಯಾತ್ ಪೃಥ್ವಿನಾಮಕಂ ಇತಿ ।**

॥ ಇತಿ ಕಾಠಿಣ್ಯ ಪ್ರಕರಣಂ ॥

ಹೀಗೆ ಅಲ್ಲಲ್ಲಿಯ ಯುದ್ಧಗಳಲ್ಲಿ ಭಗವಂತನ ಶರೀರಸಂಬಂಧದಿಂದ ಶತ್ರುಗಳ ಆಯುಧಗಳೂ ಪುಡಿಯಾದವೆಂದು ಹೇಳಿರುವುದರಿಂದ ನಿತ್ಯಕಠಿಣ್ಯತೆ ಶ್ರೀಶನಲ್ಲಿ ಎಂದು ತಿಳಿಯಬೇಕು. ಅನಿತ್ಯಕಾಠಿಣ್ಯತೆ ಅನಿತ್ಯದ್ರವ್ಯಗಳಲ್ಲಿ ಮಹದಾದಿದ್ರವ್ಯಗಳೆಂದರ್ಥವು. ಬೃಹದ್ಭಾಷ್ಯದಲ್ಲಿ ಹೇಳಿರುತ್ತಾರೆ. ಅಂಧನ್ತಮಸ್ಸಿನ

ಎರಡರಷ್ಟು ಪೃಥಿವಿಯಲ್ಲಿ ಎಂತಲೇ ಪೃಥ್ವೀ ಎಂಬ ಹೆಸರು. ಆದ್ದರಿಂದ ತಮಸ್ಸಿನಲ್ಲೂ ಕಾಠಿಣ್ಯವೆಂದು ತಿಳಿಯಬೇಕು.

**ಪ.ಸು. ನಚ ಕಾಠಿಣ್ಯಂ ನಿಬಿಡಾವಯವ ಸಂಯೋಗೋ ನ ಗುಣಾಂತರಮಿತಿ ವಾಚ್ಯಂ । ಸಂಬಂಧಿದ್ವಯಪ್ರತೀತಿಂವಿನಾಪಿ ಇದಂ ಕಠಿನಮಿತಿ ಪ್ರತೀತೇಃ । ಅನ್ಯಥಾ ಗುರುತ್ವಮಪಿ ಗುಣಾಂತರಂ ನಸ್ಯಾತ್ ।**

ಕಾಠಿಣ್ಯವೆಂದರೆ ಒತ್ತಾಗಿರುವ ಅವಯವ (ಭಾಗ)ಗಳ ನಿಕಟ ಸಂಬಂಧವೆ ಬೇರೆಗುಣ (ಧರ್ಮ)ವಲ್ಲ ಎಂದೆನಬಾರದು. ಎರಡು ಸಂಬಂಧಿಗಳ ಸಂಬಂಧಜ್ಞಾನವಿಲ್ಲದೆ ಕಾಠಿಣ್ಯದ ಜ್ಞಾನವಾಗುವುದರಿಂದ ಅವಯವಗಳ ಸಂಬಂಧವೇ ಕಾಠಿಣ್ಯತೆ ಎನ್ನಬಾರದು. ಇಲ್ಲವಾದರೆ ಗುರುತ್ವವೂ ಗುಣವಾಗದೇ ಹೋಗಲಿ ಎಂಬ ಆಪಾದನೆ ಬರುತ್ತದೆ. ಹೇಗೆ ಗುರುತ್ವವು ಅವಯವಗಳ ಸಂಬಂಧವಿಲ್ಲದೆ ಗುಣಾಂತರವೋ, ಹಾಗೆ ಕಾಠಿಣ್ಯತೆಯು.

ಹೀಗೆ ಕಾಠಿಣ್ಯ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

* * * * * * * *

# ೪೭. ಪೃಥಕ್ತ್ವಖಂಡನ ಪ್ರಕರಣ

**ನನು ಪೃಥಕ್ತ್ವಂನಾಮ ಗುಣಾಂತರಮಸ್ತಿ । ಘಟಃ ಪಟಾತ್ಪೃಥಗಿತಿ ತಾರ್ಕಿಕಾಃ । ತಾನ್ನಿರಾಕರೋತಿ ।**

**ಪ.ಸು. ಅನ್ಯೋನ್ಯಾಭಾವಾತಿರಿಕ್ತಂ ಪೃಥಕ್ತ್ವಂನಾಸ್ತ್ಯೇವ ।**

**ಘಟಃ ಪಟಾದನ್ಯೋ ಘಟಃ ಪಟಾತ್ಪೃಥಗಿತ್ಯನಯೋಃ ಪ್ರತೀತ್ಯೋರ್ವಿಶೇಷಾಭಾವೇನೋಭಯೋರೈಕ್ಯಾಧಿತ್ಯರ್ಥಃ । ಅನ್ಯಥಾ ಘಟಪಟಯೋಃ ಭೇದಜ್ಞಾನಾನಂತರಂ ಘಟಃ ಪಟಾತ್ಪೃಥಗ್ವಾನವೇತಿ ಕದಾಚಿತ್ ಸಂಶಯಾಪತ್ತೇಃ ।**

ಪೃಥಕ್‌ತ್ವ ಎಂಬುದು ಪ್ರತ್ಯೇಕವಾಗಿ ಗುಣದಲ್ಲಿ ಅಂತರ್ಭವಿಸಿದ ಪದಾರ್ಥವು ಎಂದು ನೈಯಾಯಿಕರು ಹೇಳುತ್ತಾರೆ. ಏಕೆಂದರೆ ಘಟವು ಪಟದ ದೆಸೆಯಿಂದ (ಪೃಥಕ್) ಪ್ರತ್ಯೇಕವು. ಎಂಬ ವ್ಯವಹಾರವಿರುವವರಿಂದ ಎಂದು ಇದನ್ನು ನಿರಾಕರಿಸುತ್ತಾರೆ.

ಅನ್ಯೋನ್ಯಾಭಾವದ ದೆಸೆಯಿಂದ ಬೇರೆಯಾದ ಅತಿರಿಕ್ತವೆಂಬ

ಗುಣಪದಾರ್ಥವು ಇರುವುದಿಲ್ಲ. ಘಟವು ಪಟದ ದೆಸೆಯಿಂದ ಅನ್ಯವು (ಬೇರೆಯು) ಪಟವು ಘಟದ ದೆಸೆಯಿಂದ (ಪೃಥಕ್) ಬೇರೆಯು. ಈ ಪ್ರತ್ಯಯಗಳಿಗೆ ವಿಶೇಷವಿಲ್ಲದೆ ಎರಡೂ ಒಂದೇ ಆಗಿರುವುದರಿಂದ ಅನ್ಯೋನ್ಯಾಭಾವದಿಂದ ಬೇರೆಯಾದ 'ಪೃಥಕ್' ಎಂಬ ಪದಾರ್ಥವು ಇರುವುದಿಲ್ಲವು. ಹೀಗಿಲ್ಲದೆ ಅನ್ಯೋನ್ಯಾಭಾವದಿಂದ ಬೇರೆಯಾದ ಪೃಥಕ್ತ್ವ ಧರ್ಮವು ಇರುವುದಾದರೆ ಘಟದಿಂದ ಪಟವು ಭಿನ್ನವು ಎಂಬ ಭಿನ್ನಜ್ಞಾನಾನಂತರವೂ ಘಟ ಪಟಗಳು ಬೇರೆಯೋ ಅಲ್ಲವೋ ಎಂಬ ಸಂಶಯವು ಬರಬೇಕಾದೀತು.

**ನನು ಭೇದಶಬ್ದವಾಚ್ಯ ಸ್ತ್ರಿವಿಧಃ । ಸ್ವರೂಪಭೇದಃ ಅನ್ಯೋನ್ಯಾಭಾವಃ ಪೃಥಕ್ತ್ವಂ ಚೇತಿ । ತತ್ರಸ್ವರೂಪಭೇದೋಽಭಾವಾದೌ ನತ್ವನ್ಯೋನ್ಯಾಭಾವಃ। ಅಭಾವಾಧಿಕರಣಕಾಭಾವಾನಂಗೀಕಾರಾತ್ । ನಾಪಿ ಪೃಥಕ್ತ್ವಂ । ಅಭಾವೇ ಗುಣಾಭಾವಾತ್ । ಅನ್ಯೋನ್ಯಾಭಾವ ಸ್ತ್ವಭಾವ ವ್ಯತಿರಿಕ್ತ ಪದಾರ್ಥಮಾತ್ರೇ। ದ್ರವ್ಯಾತ್‌ಭಿನ್ನೋಗುಣ ಇತ್ಯಾದಿ ಪ್ರತೀತೇಸ್ತತ್ರ ನಪೃಥಕ್ತ್ವಂ । ಗುಣಾದಿ ಪಂಚಕೇ ಗುಣಾನಂಗೀಕಾರಾತ್ । ಪೃಥಕ್ತ್ವಂತು ದ್ರವ್ಯಮಾತ್ರೇ । ಬಾಧಕಾಭಾವಾತ್ ।**

ಭೇದ ಶಬ್ದವಾಚ್ಯವಾದುದು ಮೂರು ವಿಧವು. ಸ್ವರೂಪಭೇದವು ಅನ್ಯೋನ್ಯಾಭಾವವು, ಪೃಥಕ್ತ್ವವು ಈ ರೀತಿಯಾಗಿ.

ಸ್ವರೂಪಭೇದವು ಅಭಾವದಲ್ಲಿಯೇ ಅಂತರ್ಭೂತವಾಗುತ್ತದೆ. ಅದು ಅನ್ಯೋನ್ಯಾಭಾವರೂಪವಲ್ಲ. ಏಕೆಂದರೆ ಅಭಾವದಲ್ಲಿ ಅಭಾವವನ್ನು ಅಂಗೀಕರಿಸುವುದಿಲ್ಲವಾದ್ದರಿಂದ. ಅನ್ಯೋನ್ಯಾಭಾವವು, ಪೃಥಕ್ತ್ವ ರೂಪವು ಆಗಿರುವುದಿಲ್ಲ. ಅಭಾವದಲ್ಲಿ ಗುಣವನ್ನು ಒಪ್ಪುವುದಿಲ್ಲವಾದ್ದರಿಂದ, ಅನ್ಯೋನ್ಯಾಭಾವವು ಅಭಾವದಿಂದ ವ್ಯತಿರಿಕ್ತವಾದ ಭಾವ ಪದಾರ್ಥವೇ ಆಗಿರುತ್ತದೆ. ಪ್ರತಿಯೋಗಿಪದಾರ್ಥಸ್ವರೂಪವೇ ಆಗಿರುವುದರಿಂದ ಗುಣವು ದ್ರವ್ಯದಿಂದ ಭಿನ್ನವು. ಎಂಬ ಪ್ರತೀತಿ ಸ್ಪಷ್ಟವಾದ್ದರಿಂದ ದ್ರವ್ಯರೂಪವಾದ ಅನ್ಯೋನ್ಯಾಭಾವವು ಪೃಥಕ್ ಸ್ವರೂಪವೂ ಆಗುವುದಿಲ್ಲ. ಗುಣಾದಿ ಐದು ಪದಾರ್ಥಗಳಲ್ಲಿ (ಗುಣ, ಕರ್ಮ, ಸಾಮಾನ್ಯ, ವಿಶೇಷ, ಅಭಾವ) ಇವುಗಳಲ್ಲಿ 'ಪೃಥಕ್ತ್ವ' ಗುಣವನ್ನು ಒಪ್ಪದೇ ದ್ರವ್ಯಮಾತ್ರದಲ್ಲಿ ಒಪ್ಪುವುದರಿಂದ ಯಾವ ಭಾದಕವು ಇರುವುದಿಲ್ಲ.

**ತಥಾ ಸ್ವರೂಪಭೇದಾನ್ಯೋನ್ಯಾಭಾವಾವಪಿ ದ್ರವ್ಯೇಸ್ತಃ । ಕಿಂಚಘಟಃ ಪಟಾತ್ಪೃಥಗಿತಿ ಪಂಚಮೀ ದೃಶ್ಯತೇ । ಸ ಚ "ಅನ್ಯಾರಾದಿತರರ್ತೇ ದಿಕ್ಶಬ್ದಾಂಚೂತ್ತರಪಾದಾಜಾಹಿ ಯುಕ್ತೇ" ಇತಿ ಸೂತ್ರೇಣೈವ ವಕ್ತವ್ಯಾ । ಸೂತ್ರಾಂತರಾಭಾವಾತ್ । ಅತ ಏವಅನ್ಯ ಇತ್ಯರ್ಥಗ್ರಹಣಮಿತಿ ಕಾಶಿಕಾವೃತ್ತಿಃ। ಕಿಂಚ ಪೃಥಗ್ವಿನಾ ನಾನಾಭಿಸ್ತತೀಯಾನ್ಯತರಸ್ಯಾಮಿತಿ**

**ಪೃಥಕ್ಶಬ್ದಯೋಗೇ ವಿಕಲ್ಪೇನ ಪಂಚಮೀ ವಿಹಿತಾ । ಸಾನರ್ಥಾಸ್ಯಾತ್ ।**

ಹಾಗೆಯೇ ಸ್ವರೂಪಭೇದವು ಅನ್ಯೋನ್ಯಾಭಾವವು ದ್ರವ್ಯದಲ್ಲಿಯೇ ಇರುತ್ತದೆ. ಮತ್ತು ಘಟವು ಪಟದ ದೆಸೆಯಿಂದ ಬೇರೆಯೇ ಎಂಬಲ್ಲಿ ಪಂಚಮೀವಿಭಕ್ತಿಯು ತೋರುತ್ತದೆ. ಆ "ಅನ್ಯಾರಾಧಿತರರ್ತೇದಿಕ್ಶಂಬ್ದಾಂಚೂತ್ತರ ಪಾದಾಜಾಹಿಯುಕ್ತೇ" ಎಂಬ ಸೂತ್ರದಿಂದಲೇ ಹೇಳತಕ್ಕದ್ದು. ಸೂತ್ರಾಂತರವಿಲ್ಲವಾದ್ದರಿಂದ ಆದುದರಿಂದಲೇ ಕಾಶೀಕಾವೃತ್ತಿಯಲ್ಲಿ 'ಪೃಥಕ್' ಶಬ್ದಕ್ಕೆ (ಅನ್ಯ) ಬೇರೆ ಎಂಬರ್ಥವನ್ನೇ ಗ್ರಹಿಸಿರುತ್ತಾರೆ.

ಮತ್ತು "ಪೃಥಕ್ವಿನಾನಾಭಿಸ್ತೃತೀಯಾನ್ಯಂತರಸ್ಯಾಂ" ಎಂಬಲ್ಲಿ 'ಪೃಥಕ್' ಶಬ್ದದ ಸಂಬಂಧದಲ್ಲಿ ವಿಕಲ್ಪವಾಗಿ ಪಂಚಮೀ ವಿಭಕ್ತಿಯೂ ಹೇಳಲ್ಪಟ್ಟಿದೆ. ಅದು ಅಯುಕ್ತವಾಗಬೇಕಾದೀತು.

**ಪೂರ್ವಂ ಸಾಮಾನ್ಯತೋಽನ್ಯಶಬ್ದೇನ ಗ್ರಹಣಾಂಗೀಕಾರಾತ್ । ಅತಃ ಪೃಥಕ್ತ್ವಂ ಅಪಿ ಅನ್ಯೋನ್ಯಾಭಾವಾತಿರಿಕ್ತಂ ಭೇದಾದಿಶಬ್ದ ವಾಚ್ಯಮಂಗೀಕರ್ತವ್ಯಮಿತಿ ಚೇದುಚ್ಯತೇ । ಅನ್ಯಾರಾದಿತರರ್ತೇ ಇತಿ ಸೂತ್ರೇಽನ್ಯಶಬ್ದಯೋಗ ಏವಂ ಪಂಚಮೀವಿಹಿತಾ । ನತು ಶಬ್ದಾಂತರಯೋಗೇಪಿ । ನಚೈವಂ ಘಟಾತ್ಪಟೋಽಭಿನ್ನ ಇತಿ ಆದೌ ಪಂಚಮೀನಸ್ಯಾದಿತಿವಾಚ್ಯಂ । ವಿಲಕ್ಷಣೋ ದೇವದತ್ತೋ ಯಜ್ಞದತ್ತಾದಿತ್ಯತ್ರೇವೋಪಪತ್ತೇಃ ।**

ಮೊದಲು ಸಾಮಾನ್ಯವಾಗಿ ಅನ್ಯಶಬ್ದದ ಸ್ವೀಕಾರವನ್ನೇ ಅಂಗೀಕರಿಸುವವರಿಂದ ಅನ್ಯೋನ್ಯಾಭಾವಾತಿರಿಕ್ತವಾದ ಭೇದಶಬ್ದ ವಾಚ್ಯವಾದ ಪೃಥಕ್ತ್ವವನ್ನು ಅಂಗೀಕರಿಸೋಣವೇ ಎಂದರೆ ಹೇಳುತ್ತೇವೆ "ಅನ್ಯಾರಾದಿತರರ್ತೇ" ಎಂಬ ಸೂತ್ರದಲ್ಲಿ ಅನ್ಯಶಬ್ದ ಸಂಬಂಧದಿಂದ ಪಂಚಮೀ ವಿಭಕ್ತಿಯೇ ವಿಹಿತವಾಗಿರುತ್ತದೆ. ಬೇರೆ ಶಬ್ದಾಂತರ ಸಂಬಂಧವಿರುವುದಿಲ್ಲ. ಆದ್ದರಿಂದ ಪ್ರತ್ಯೇಕ ಪೃಥಕ್ತ್ವವು ಯುಕ್ತವಾಗುವುದಿಲ್ಲ.

ಘಟದ ದೆಸೆಯಿಂದ ಪಟವು ಭಿನ್ನವು. ಇತ್ಯಾದಿ ಪ್ರಯೋಗಗಳಲ್ಲಿ ಪಂಚಮೀ ವಿಭಕ್ತಿಯು ಇಲ್ಲವಾಗಲಿ ಎನ್ನಬಾರದು. ದೇವದತ್ತನು ಯಜ್ಞದತ್ತನ ದೆಸೆಯಿಂದ ವಿಲಕ್ಷಣನು. ಎಂಬಲ್ಲಿ ಪ್ರಯೋಗವು ಉಪಪನ್ನ (ಯುಕ್ತ)ವಾಗಿರುವುದರಿಂದ ವೈಲಕ್ಷಣ್ಯಶಬ್ದವು ಭಿನ್ನ ಶಬ್ದದಿಂದ ಬೇರೆಯಾಗಿರುವುದರಿಂದ.

**ನಹಿ ವೈಲಕ್ಷಣ್ಯಮನ್ಯ ಶಬ್ದಾರ್ಥಃ । ನಚ ಅಪಾದಾನೇ ಪಂಚಮೀತಿ ಸೂತ್ರಾತ್ ವೈಲಕ್ಷಣ್ಯ ಪದಯೋಗೇ ಪಂಚಮಿತಿ ವಾಚ್ಯಂ । ತರ್ಹಿ ತೇನೈವ ಪೃಥಕ್ಶಬ್ದ ಯೋಗೇಽಪಿ ಪಂಚಮ್ಯುಪಪತ್ತೇಃ । ನಚೈವಮನ್ಯಾರಾದಿತರರ್ತೇ ಇತಿ ಸೂತ್ರಂ ವ್ಯರ್ಥಂ ಸ್ಯಾತ್ । ಅಪಾದಾನೇ ಪಂಚಮೀತ್ಯನೇನೈವ ಅನ್ಯಾದಿ ಶಬ್ದಯೋಗೇ**

**ಪಂಚಮ್ಯಾ ವಕ್ತುಂ ಶಕ್ಯತ್ವಾದಿತಿ ವಾಚ್ಯಂ। ಪ್ರಪಂಚಾರ್ಥತ್ವೇನೈವೋಪಪತ್ತೇಃ ಅತ ಏವ ಮಹಾಭಾಷ್ಯೇ ಪ್ರಪಂಚಾರ್ಥಮಿದಮುಕ್ತಂ ಇತ್ಯುಕ್ತಂ । ಯಚ್ಚೋಕ್ತಂ ಪೃಥಗ್ವಿನೇತಿ ಸೂತ್ರೇಣ ವೈಕಲ್ಪಿಕ ಪಂಚಮೀ ನ ಸ್ಯಾದಿತಿ। ತನ್ನ । ವಿಕಲ್ಪಾನಾಂ ಬಹೂನಾಂದರ್ಶನಾತ್ । ಅತೋಭೇದಾತಿರಿಕ್ತಂ ಪೃಥಕ್ತ್ವರೀನಾಸ್ತ್ಯೇವ । ತದುಕ್ತಂ ಲಿಂಗಪಾದೀಯಾನುವ್ಯಾಖ್ಯಾನೇ । ಪೃಥಕ್ತ್ವಾಭಾವ ತದ್ರೂಪಾನ್ಭೇದಾಂ ಸ್ತ್ರೀನ್ಕಲ್ಪಯಂತೀ ಚೇತ್ । ಕಲ್ಪನಾಗೌರವಾದ್ಯಾಸ್ತು ದೋಷಾಸ್ತತ್ರ ವಿರೋಧಿನಃ । ಪೃಥಕ್ತ್ವಾನ್ಯತ್ವಭೇದಾಸ್ತು ಪರ್ಯಾಯೇಣೈವ ಲೌಕಿಕೈಃ। ವ್ಯವಹ್ರೀಯಂತೇ ಸತತಂ ವೈದಿಕೈಃ ಅಪಿ ಸರ್ವಶ ಇತಿ ।**

॥ ಇತಿ ಪೃಥಕ್ತ್ವ ಖಂಡನಂ ॥

"ಅಪಾದಾನೇ ಪಂಚಮೀ" ಎಂಬ ಸೂತ್ರದಿಂದ ವೈಲಕ್ಷಣ್ಯ ಪದ ಸಂಬಂಧವಿರುವುದರಿಂದ ಪಂಚಮೀ ವಿಭಕ್ತಿಯು ಎಂದು ಎನ್ನಬಾರದು. ಹಾಗೆನ್ನುವುದಾದರೆ 'ಪೃಥಕ್' ಶಬ್ದದ ಸಂಬಂಧದಿಂದಲೂ ಪಂಚಮೀ ವಿಭಕ್ತಿಯು ಯುಕ್ತವೇ ಆಗುತ್ತದೆ. 'ಅನ್ಯಾರಾದಿತರರ್ತ' ಎಂಬ ಸೂತ್ರವು ವ್ಯರ್ಥವಾಗಲಿ, ಅಪಾದಾನೇ ಪಂಚಮೀ ಎನ್ನುವುದರಿಂದಲೇ ಅನ್ಯಾದಿಶಬ್ದಯೋಗದಿಂದ ಪಂಚಮೀವಿಭಕ್ತಿಯು ಹೇಳಲು ಶಕ್ಯವಾಗಿರುವುದರಿಂದ ಎನಬಾರದು. ಪ್ರಪಂಚಾರ್ಥದಿಂದಲೇ ಯುಕ್ತವಾಗುವುದರಿಂದ, ಆದುದರಿಂದಲೇ ಮಹಾಭಾಷ್ಯದಲ್ಲಿ ಪ್ರಪಂಚಾರ್ಥವಾಗಿಯೇ ಇದು ಹೇಳಿರುತ್ತದೆ ಎಂದಿರುತ್ತದೆ. ಮತ್ತು "ಪೃತಕ್ತ್ವೇನ" ಎಂಬ ಸೂತ್ರದಿಂದ ಪಂಚಮೀವಿಭಕ್ತಿಯು ವೈಕಲ್ಪಿಕವು ಎಂದು ಹೇಳಿದುದು ಇಲ್ಲವಾಗಲಿ ಎಂತಲೂ ಎನ್ನಬಾರದು. ಪ್ರಾಪ್ತವಾಗದ ವಿಕಲ್ಪಗಳೂ ಬಹುವಾಗಿ ಕಂಡಿರುವುದರಿಂದ.

ಈ ಕಾರಣಗಳಿಂದಲೇ ಭೇದಾತಿರಿಕ್ತವಾದ 'ಪೃಥಕ್ತ್ವ ' ಎಂಬ ವಸ್ತುವು ಇರುವುದೇ ಇಲ್ಲ.

ಇದನ್ನೇ ಲಿಂಗಪಾದೀ ಅನುವ್ಯಾಖ್ಯಾನದಲ್ಲಿ ಹೇಳಿದೆ. 'ಪೃಥಕ್ತ್ವ', ಅಭಾವ ತದ್ರೂಪವಾದ ಭೇದ ಈ ಮೂರರನ್ನು ಕಲ್ಪಿಸಿದ್ದೇ ಆದರೆ ಕಲ್ಪನಾಗೌರವಾದಿ ದೋಷಗಳು ಬರುತ್ತವೆ. ಆದುದರಿಂದ ಈ ವಿರೋಧಪರಿಹಾರಾರ್ಥವಾಗಿ ಪೃಥಕ್ತ್ವ, ಅನ್ಯತ್ವ, ಭೇದ ಇವುಗಳನ್ನು ಲೌಕಿಕರುಗಳಿಂದ ಪರ್ಯಾಯವಾಗಿಯೇ ವ್ಯವಹರಿಸಲ್ಪಡುತ್ತದೆ. ಯಾವತ್ತೂ ವೈದಿಕರಿಂದಲೂ ಪರ್ಯಾಯವಾಗಿಯೇ ವ್ಯವಹಾರವಾಗಿರುತ್ತದೆ. ಆದುದರಿಂದಲೇ ತಾರ್ಕಿಕರು ಒಪ್ಪುವ ಪೃಥಕ್ತ್ವವೆಂಬ ವಸ್ತುವು ಭೇದದಲ್ಲಿಯೇ ಪರ್ಯವಸನವಾಗಿ ಬೇರೆ ಪದಾರ್ಥವಾಗಿರುವುದಿಲ್ಲ.

ಹೀಗೆ ಪೃಥಕ್ತ್ವ ಖಂಡನದ ಕನ್ನಡಾನುವಾದವು ಸಮಾಪ್ತಿಯಾಯಿತು.

* * * * * * * *

# ಸ್ನೇಹ ಪ್ರಕರಣ

**ಸ್ನೇಹಂ ವಿಭಜತಿ ।**

**ಪ.ಸಂ. ಸ್ನೇಹೋ ದ್ವಿವಿಧಃ । ಮನಃ ಪ್ರಾವಣ್ಯಂ ಚೂರ್ಣಾದಿ ಪಿಂಡೀಭಾವ ಹೇತುಃ ಚ ಇತಿ । ಉಭಯಮಪಿ ನಿತ್ಯಾನಿತ್ಯ ಭೇದೇನ ದ್ವಿವಿಧಂ ।**

**ಮಾಹಾತ್ಮ್ಯಜ್ಞಾನ ಪೂರ್ವಕ ಸುದೃಢಸ್ನೇಹರೂಪಭಕ್ತ್ಯಂತರ್ಗತ ಮನೋಧರ್ಮ ಇತ್ಯರ್ಥಃ । ತತ್ರಾಪಿ ಸ್ನೇಹ ಶಬ್ದಸ್ಯ ವ್ಯವಹಾರಾತ್ ।**

**ಪ.ಸಂ. ಆದ್ಯಂ ಮನಃ ಪ್ರಾವಣ್ಯಂ ಚೈತನ್ಯಮಾತ್ರೇ ।**

**ಈಶ ಲಕ್ಷ್ಮೀ ಸಜ್ಜೀವಾನಾಂ ಪರಸ್ಪರಂ ಸ್ನೇಹ ಸದ್ಭಾವಾತ್ । ತಮೋಯೋಗ್ಯಾನಾಂ ಚಸ್ವಕಲತ್ರಪುತ್ರಾದ ಸ್ನೇಹಸ್ಯಸತ್ವಾತ್ ಇತಿ ಭಾವಃ।**

**ಪ.ಸಂ. ಅನಿತ್ಯಂ ಮನಃ ಪ್ರಾವಣ್ಯಂ ಸಂಸಾರಿಷು ।**

**ಯಸ್ಯ ಯತ್ರ ಸ್ನೇಹಃ ತತ್ರೈವ ಕದಾಚಿದ್ವೇಷೋತ್ಪತ್ತ್ಯಾ ಪೂರ್ವಸ್ನೇಹ ನಾಶಸ್ಯ ಅನುಭವ ಸಿದ್ಧತ್ವಾದಿತ್ಯರ್ಥಃ ।**

**ಪ.ಸಂ. ನಿತ್ಯಶ್ಚೂರ್ಣಾದಿ ಪಿಂಡೀಭಾವ ಹೇತುಃ ಈಶಲಕ್ಷ್ಮ್ಯೋಃ ।**

**ಜಲಾತ್ಮಕತ್ವೇನ ವಿದ್ಯಮಾನಯೋರಿತಿಶೇಷಃ ।**

**ಪ.ಸಂ. ಅನಿತ್ಯಸ್ತು ಜಲಮಾತ್ರವರ್ತೀ ।**

**ಅನಿತ್ಯಂ ಜಲಮಾತ್ರವರ್ತೀ । ತನ್ನಾಶೇತನ್ನಾಶಾದಿತಿ ಭಾವಃ ।**

## ॥ ಇತಿ ಸ್ನೇಹ ನಿರೂಪಣ ಪ್ರಕರಣಂ ॥

ಗುಣವಾದ ಸ್ನೇಹವನ್ನು ನಿರೂಪಿಸುತ್ತಾರೆ. ಸ್ನೇಹವನ್ನು ವಿಭಾಗಮಾಡುತ್ತಾರೆ. ಸ್ನೇಹವು ಎರಡು ವಿಧವು ಒಂದು ಮನಸ್ಸಿನ ಪ್ರಾವಣ್ಯತೆ (ನಮ್ರತೆ) ಎರಡನೇ ಸ್ನೇಹವೆಂದರೆ ಹಿಟ್ಟನ್ನು ಮುದ್ದೆ ಮಾಡಲು ಕಾರಣವಾದುದು. ಇವುಗಳು ಎರಡು ವಿಧಗಳಾದವುಗಳು. ನಿತ್ಯ ಹಾಗೂ ಅನಿತ್ಯಗಳೆಂದು, ಮಾಹತ್ಮ್ಯ ಜ್ಞಾನಪೂರ್ವಕವಾದ ಸ್ವದೃಢ ಸ್ನೇಹರೂಪವಾದ ಭಕ್ತಿ ಅಂತರ್ಗತ ಮನೋಧರ್ಮರೂಪವಾದುದು. ಇದಕ್ಕೆ ವ್ಯವಹಾರದಲ್ಲಿ ಸ್ನೇಹವೆಂದಿದೆ ಮೊದಲನೆ ಸ್ನೇಹವು ಚೇತನ ಸಾಮಾನ್ಯದ

ಮನಸ್ಸಿನಲ್ಲಿರುತ್ತದೆ. ಆದರಲ್ಲಿ ಈಶ ಲಕ್ಷ್ಮ್ಯಾದಿ ಸಚ್ಚೇತನರಲ್ಲಿ ಪರಸ್ಪರ ಸ್ನೇಹವು ತಮೋಯೋಗ್ಯರಿಗೆ ಕೇವಲ ತನ್ನ ಹೆಂಡತಿ ಮಕ್ಕಳಲ್ಲಿ ಅನಿತ್ಯವಾದ ಮನಃ ಪ್ರಾವಿಣ್ಯ ರೂಪ ಸ್ನೇಹವು, ಸಂಸಾರಿ ಜೀವರುಗಳಲ್ಲಿ ಯಾರಿಗೆ ಎಲ್ಲಿ ಸ್ನೇಹವೋ ಅವರಿಗೆ ಅಲ್ಲಿಯೇ ದ್ವೇಷವೂ ಹುಟ್ಟಬಹುದು, ಆದ್ದರಿಂದ ಅದು ಅನಿತ್ಯವಾದುದೇ. ಎರಡನೇ ಸ್ನೇಹವು ಪಿಂಡೀಭಾವ ಕಾರಣ ಸ್ನೇಹವು ನಿತ್ಯವಾದುದು ಈಶ ಲಕ್ಷ್ಮಿಯರಲ್ಲಿ, ಅವರಿಗೆ ಜಲಾತ್ಮಕತೆ ಇರುವುದರಿಂದ ಅನಿತ್ಯವಾದದ್ದು ಜಲಮಾತ್ರದಲ್ಲಿ ಜಲನಾಶವಾದರೆ ಅದು ನಾಶವಾಗುವುದರಿಂದ.

ಹೀಗೆ ಹದಿನೈದನೇ ಗುಣವಾದ ಸ್ನೇಹನಿರೂಪಣೆಯ ಕನ್ನಡಾನುವಾದವು ಸಮಾಪ್ತವಾಯಿತು.

* * * * * * * *